ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ ೪೪

ಗರ್ಗಮಹಾಮುನಿಪ್ರಣೀತಾ

ಗಾರ್ಗ್ಯಸಂಹಿತಾ

(ಸಂಸ್ಕೃತಮೂಲ, ಕನ್ನಡ ಅರ್ಥಾನುವಾದವಿವರಣೆಗಳೊಡನೆ)

ಭಾಗ ೨

ಗಿರಿರಾಜಖಂಡ ಮತ್ತು ಮಾಧುರ್ಯಖಂಡಗಳು

ಆಸ್ಥಾನ ವಿದ್ವಾನ್

ಹಾಸನ ಪಂಡಿತ ವೆಂಕಟರಾವ್

ಅನುವಾದಕ :

ಮೈಸೂರು :

ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್

1947

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ ೪೪

ಗರ್ಗಮಹಾಮುನಿಪ್ರಣೀತಾ

ಗಾರ್ಗ್ಯಸಂಹಿತಾ

(ಸಂಸ್ಕೃತಮೂಲ, ಕನ್ನಡ ಅರ್ಥಾನುವಾದವಿವರಣೆಗಳೊಡನೆ)

ಭಾಗ ೨

ಗಿರಿರಾಜಖಂಡ ಮತ್ತು ಮಾಧುರ್ಯಖಂಡಗಳು

ಆಸ್ಥಾನ ವಿದ್ವಾನ್

ಹಾಸನ ಪಂಡಿತ ವೆಂಕಟರಾವ್

ಅನುವಾದಕ:

ಮೈಸೂರು:

ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್

1947

ಮುನ್ನುಡಿ

ಗಾರ್ಗ್ಯಸಂಹಿತೆಯ ಎರಡನೆಯ ಭಾಗದಲ್ಲಿ ಗಿರಿರಾಜಖಂಡ, ಮಾಧುರ್ಯಖಂಡಗಳು ಸೇರಿವೆ. ಗಿರಿರಾಜಖಂಡದಲ್ಲಿ ಗೋವರ್ಧನಪರ್ವತದ ಉತ್ಪತ್ತಿ, ಅದರ ಮಹಾತ್ಮೆ ಮುಂತಾದ ವಿಷಯಗಳೂ, ಮಾಧುರ್ಯಖಂಡದಲ್ಲಿ ಗೋಪಿಕಾಸ್ತ್ರೀಯರ ಪೂರ್ವಜನ್ಮವೃತ್ತಾಂತಕಥನ, ಯಮುನಾಕವಚ, ಯಮುನಾಸ್ತೋತ್ರ, ಯಮುನಾಪಟಲ ಮತ್ತು ಪದ್ಧತಿ, ಯಮುನಾಸಹಸ್ರನಾಮಸ್ತೋತ್ರ, ಮೊದಲಾದ ವಿಷಯಗಳು ಅನೇಕ ಉಪಾಖ್ಯಾನಗಳೊಡನೆ ವರ್ಣಿತವಾಗಿವೆ. ವಾಚಕರ ಅನುಕೂಲಕ್ಕಾಗಿ ಚತುರ್ಥ್ಯಂತವಾದ ಯಮುನಾಸಹಸ್ರನಾಮಾವಳಿಯನ್ನು ಪ್ರತ್ಯೇಕವಾಗಿ ಕೊಟ್ಟಿದೆ.

ಇಂತಹ ಉತ್ತಮವಾದ ಗ್ರಂಥಗಳ ಪ್ರಕಾಶನಕ್ಕೆ ಸರ್ವವಿಧದಿಂದಲೂ ಪ್ರೋತ್ಸಾಹವಿತ್ತು ಸಕಲ ಸಜ್ಜನರ ರಾಜಭಕ್ತಿಪುರಸ್ಸರವಾದ ಗೌರವಾದರಗಳಿಗೆ ಪಾತ್ರರಾಗಿ ನಮ್ಮನ್ನಾಳುವ ಕರ್ನಾಟಕಸಿಂಹಾಸನಾಧೀಶ್ವರರಾದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ.** ಮಹಾಪ್ರಭುವರ್ಯರಿಗೂ ಅವರ ಕುಟುಂಬವರ್ಗಕ್ಕೂ, ಸಮಸ್ತ ಪ್ರಜೆಗಳಿಗೂ ಶ್ರೀಕೃಷ್ಣಪರಮಾತ್ಮನು ಆಯುರಾರೋಗ್ಯೈಶ್ವರ್ಯಾದಿ ಸಕಲಸಂಪತ್ತುಗಳನ್ನಿತ್ತು ಅನುಗ್ರಹಿಸಲೆಂದು ಬೇಡುತ್ತೇನೆ.

ಮೈಸೂರು.
ಸರ್ವಜಿನ್ನಾಮ ಸಂ॥ ಅ॥ ಕೃ॥ ಷಷ್ಠೀ
9—7—47

ಅನುವಾದಕ
ಹಾಸನ ಪಂಡಿತ **ವೆಂಕಟರಾವ್,**
ಆಸ್ಥಾನ ವಿದ್ವಾನ್.

ವಿಷಯಾನುಕ್ರಮಣಿಕೆ

ಗಿರಿರಾಜಖಂಡ

ಗಿರಿರಾಜಖಂಡವು ಮುಗಿದುದು.

ಮಾಧುರ್ಯಖಂಡ

ಅಧ್ಯಾಯ ಪುಟ

ಅಧ್ಯಾಯ ಪುಟ

ಮಾಧುರ್ಯಖಂಡವು ಮುಗಿದುದು.

—|| ಶ್ರೀಃ ||—

—|| ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ||—

ಅಥ ಗಾರ್ಗಸಂಹಿತಾಯಾಂ

ಗಿರಿರಾಜಖಂಡೇ

ಪ್ರಥಮೋಽಧ್ಯಾಯಃ

|| ಬಹುಲಾಶ್ವ ಉವಾಚ ||

ಕಥಂ ದಧಾರ ಭಗವಾನ್ಗಿರಿಂ ಗೋವರ್ಧನಂ ವರಂ |
ಉಚ್ಛಿಲೀಂಧ್ರಂ ಯಥಾ ಬಾಲೋ ಹಸ್ತೇನೈಕೇನ ಲೀಲಯಾ || ೧ ||

ಪರಿಪೂರ್ಣತಮಸ್ಯಾಸ್ಯ ಶ್ರೀಕೃಷ್ಣಸ್ಯ ಮಹಾತ್ಮನಃ |
ತದೇವ ಚರಿತಂ ದಿವ್ಯಮದ್ಭುತಂ ಮುನಿಸತ್ತಮ || ೨ ||

ಒಂದನೆಯ ಅಧ್ಯಾಯವು

೧. ಬಹುಲಾಶ್ವನು ನಾರದನನ್ನು ಪ್ರಶ್ನೆಮಾಡಿದನು :—ಮುನಿವರನೇ, ಭಗವಂತನಾದ ಶ್ರೀಹರಿಯು ಮಕ್ಕಳು ಆಟದ ಸಾಮಾನನ್ನು ಒಂದೇ ಕೈಯಿಂದ ಎತ್ತುವಂತೆ, ಗೋವರ್ಧನಪರ್ವತವನ್ನು ಅನಾಯಾಸವಾಗಿ ಒಂದೇ ಕೈಯಿಂದ ಹೇಗೆ ಎತ್ತಿದನು ?

೨. ಪರಿಪೂರ್ಣತಮನಾದ ಶ್ರೀಕೃಷ್ಣನ ಚರಿತ್ರೆಯು ಅತ್ಯದ್ಭುತವಾದುದು. ಹಾಗೂ ದಿವ್ಯವಾದುದು. ಅದನ್ನು ಹೇಳಬೇಕೆನಲು,

॥ ಶ್ರೀ ನಾರದ ಉವಾಚ ॥

ವಾರ್ಷಿಕಂ ಹಿ ಕರಂ ರಾಜ್ಞೇ ಯಥಾ ಶಕ್ರಾಯ ವೈ ತಥಾ ।
ಬಲಿಂ ದದುಃ ಪ್ರಾವೃಡಂತೇ ಗೋಪಾಃ ಸರ್ವೇ ಕೃಷೀವಲಾಃ ॥ ೩ ॥

ಮಹೇಂದ್ರಯಾಗಸಂಭಾರಚಯಂ ದೃಷ್ಟ್ವೈಕದಾ ಹರಿಃ ।
ನಂದಂ ಪಪ್ರಚ್ಛ ಸದಸಿ ವಲ್ಲಭಾನಾಂ ಚ ಶೃಣ್ವತಾಂ ॥ ೪ ॥

॥ ಶ್ರೀ ಭಗವಾನುವಾಚ ॥

ಶಕ್ರಸ್ಯ ಪೂಜನಂ ಹ್ಯೇತತ್ಕಿಂ ಫಲಂ ಚಾಸ್ಯ ವಿದ್ಯತೇ ।
ಲೌಕಿಕಂ ವಾ ವದಂತ್ಯೇತದಥವಾ ಪಾರಲೌಕಿಕಂ ॥ ೫ ॥

॥ ಶ್ರೀ ನಂದ ಉವಾಚ ॥

ಶಕ್ರಸ್ಯ ಪೂಜನಂ ಹ್ಯೇತದ್ಭುಕ್ತಿಮುಕ್ತಿಕರಂ ಪರಂ ।
ಏತದ್ವಿನಾ ನರೋ ಭೂಮೌ ಜಾಯತೇ ನ ಸುಖೀ ಕ್ವಚಿತ್ ॥ ೬ ॥

---

೩. ನಾರದನು ಹೇಳಲನುವಾದನು:—ಎಲೈ ಮೈಥಿಲ, ಕೇಳು, ರಾಜನಿಗೆ ಹೇಗೆ ವರ್ಷಕ್ಕೊಂದು ಸಾರಿ ವಾರ್ಷಿಕಕಪ್ಪವನ್ನು ಸಲ್ಲಿಸುವರೋ ಹಾಗೆ ಗೋಪರೆಲ್ಲರೂ ಮಳೆಗಾಲಸಮಯದಲ್ಲಿ ಪ್ರತಿ ವರ್ಷವೂ ಇಂದ್ರನಿಗೆ ಕಪ್ಪವನ್ನು ಸಲ್ಲಿಸುತ್ತಿದ್ದರು.

೪. ಅದೇ ರೀತಿ ಆ ವರ್ಷವೂ ಗೋಪರೆಲ್ಲರೂ ಮಹೇಂದ್ರನ ಪೂಜೆಗೆ ಅಣಿ ಮಾಡಲನುವಾದರು. ಅದನ್ನು ನೋಡಿ ಹರಿಯು ನಂದರಾಜನ ಸಭೆಗೆ ಬಂದು ಎಲ್ಲರಿಗೂ ಕೇಳುವಂತೆ

೫. ಇಂದ್ರನನ್ನು ಪೂಜಿಸಿದರೆ ಏನು ಫಲವುಂಟಾಗುವುದು ? ಆ ಫಲವು ಐಹಿಕವಾದುದೇ ಅಥವಾ ಆಮುಷ್ಮಿಕವಾದುದೇ ? ಹೇಳಿರಿ ಎಂದನು.

೬. ಅದನ್ನು ಕೇಳಿ ನಂದನಿಂತೆಂದನು :—ಇಂದ್ರನ ಪೂಜೆಯಿಂದ ಭುಕ್ತಿಯೂ ಮುಕ್ತಿಯೂ ಉಂಟಾಗುವುದು. ಅದಿಲ್ಲದಿದ್ದರೆ ಯಾವ ಮನುಷ್ಯನೂ ಲೋಕದಲ್ಲಿ ಸುಖಿಯಾಗಿರಲಾರನು ಎಂದರು.

|| ಶ್ರೀ ಭಗವಾನುವಾಚ ||

ಶಕ್ರಾದಯೋ ದೇವಗಣಾಶ್ಚ ಸರ್ವತೋ
ಭುಂಜಂತಿ ಯೇ ಸ್ವರ್ಗಸುಖಂ ಸ್ವಕರ್ಮಭಿಃ |
ನಿಶಂತಿ ತೇ ಮರ್ತ್ಯಪದಂ ಶುಭಕ್ಷಯೇ
ತತ್ಸೇವನಂ ವಿದ್ಧಿ ನ ಮುಕ್ತಿಕಾರಣಂ || ೭ ||

ಭಯಂ ಭವೇದ್ವೈ ಪರಮೇಷ್ಠಿನೇ ಯತೋ
ನಾರ್ತಾ ತು ಕಾ ಕೌ ಕಿಲ ತತ್ಕೃತಾತ್ಮನಾಂ |
ತಸ್ಮಾತ್ಪರಂ ಕಾಲಮನಂತಮೇವ ಹಿ
ಸರ್ವಂ ಬಲಿಷ್ಠಂ ಸುಬುಧಾ ವಿದುಃ ಪರೇ || ೮ ||

ತತಸ್ತಮಾಶ್ರಿತ್ಯ ಸುಕರ್ಮಭಿಃ ಪರಂ
ಭಜೇದ್ಧರಿಂ ಯಜ್ಞಪತಿಂ ಸುರೇಶ್ವರಂ |
ವಿಸೃಜ್ಯ ಸರ್ವಂ ಮನಸಾ ಕೃತೇಃ ಫಲಂ
ವ್ರಜೇತ್ಪರಂ ಮೋಕ್ಷಮಸೌ ನ ಚಾನ್ಯಥಾ || ೯ ||

---

೭. ಆಗ ಶ್ರೀಹರಿಯು ಹೇಳಿದನು :—ಇಂದ್ರನೇ ಮೊದಲಾದ ದೇವತೆಗಳು ಸ್ವರ್ಗಸುಖವನ್ನು ಪಡೆಯಲು ಅವರು ಮಾಡಿದ ಕರ್ಮವೇ ಕಾರಣ. ತಮ್ಮ ಕರ್ಮಗಳಿಗನುಸಾರವಾದ ಸ್ಥಾನವನ್ನು ಪಡೆಯುವರು. ತಾವು ಮಾಡಿದ ಪುಣ್ಯವು ನಾಶವಾಗಲು ಪುನಃ ಅವರು ಮನುಜರಾಗುವರು. ಈ ರೀತಿಯಾದ ಸ್ಥಾನವು ಪುಣ್ಯಶಾಲಿಗಳಾದ ಪ್ರತಿಯೊಬ್ಬ ಮಾನವರಿಗೂ ಸಮಾನವು. ಆದುದರಿಂದ ಅಂತಹ ಇಂದ್ರನನ್ನು ಪೂಜಿಸಿದರೆ ಮುಕ್ತಿ ಬರುತ್ತದೆ ಎಂಬುದು ಸುಳ್ಳು.

೮. ಬ್ರಹ್ಮನಿಗೂ ಸಹ ತನ್ನ ಸ್ಥಾನಕ್ಕೆ ಚ್ಯುತಿ ಬಂದೀತೆಂದು ಭಯವಿರುವುದು. ಇನ್ನು ಇಂದ್ರಾದಿಗಳ ಪಾಡೇನು ? ಆದುದರಿಂದ ಕಾಲವು ಅನಂತವಾದುದು. ಶ್ರೇಷ್ಠವಾದುದು, ಬಲಿಷ್ಠವಾದುದು, ಎಂದು ವಿದ್ವಾಂಸರು ಅಭಿಪ್ರಾಯಪಡುವರು.

೯. ಆದುದರಿಂದ ಆ ಕಾಲವನ್ನು ಆಶ್ರಯಿಸಿ ಪುಣ್ಯಪುರುಷರು ಯಜ್ಞಪತಿಯೂ ದೇವದೇವನೂ ಆದ ಹರಿಯನ್ನು ಭಜಿಸಬೇಕು. ಅದಕ್ಕೋಸ್ಕರ ಎಲ್ಲವನ್ನೂ ದೂರ ಮಾಡಿ ಮನಸ್ಸಿನಿಂದ ಯಾರು ಫಲಕಾಮಿಗಳಾಗಿ ಧ್ಯಾನಿಸುವರೋ ಅವರು ಮಾತ್ರ ಮೋಕ್ಷವನ್ನು ಪಡೆಯುವರು. ಅದನ್ನು ಬಿಟ್ಟರೆ ಬೇರೆ ಮಾರ್ಗವಿಲ್ಲ.

ಗೋವಿಪ್ರಸಾಧ್ವಗ್ನಿಸುರಾಃ ಶ್ರುತಿಸ್ತಥಾ
ಧರ್ಮಶ್ಚ ಯಜ್ಞಾಧಿಪತೇರ್ವಿಭೂತಯಃ ।
ಧಿಷ್ಣ್ಯೇಷು ಚೈತೇಷು ಹರಿಂ ಭಜಂತಿ ಯೇ
ಸದಾ ತ್ವಿಹಾಮುತ್ರ ಸುಖಂ ವ್ರಜಂತಿ ತೇ ॥ ೧೦ ॥

ಸಮುತ್ಥಿತೋಽಸೌ ಹರಿವಕ್ಷಸೋ ಗಿರಿಃ
ಗೋವರ್ಧನೋ ನಾಮ ಗಿರೀಂದ್ರರಾಜರಾಟ್ ।
ಸಮಾಗತೋ ಹ್ಯತ್ರ ಪುಲಸ್ತ್ಯತೇಜಸಾ
ಯದ್ದರ್ಶನಾಜ್ಜನ್ಮ ಪುನರ್ನ ವಿದ್ಯತೇ ॥ ೧೧ ॥

ಸಂಪೂಜ್ಯ ಗೋವಿಪ್ರಸುರಾನ್ಮಹಾದ್ರಯೇ
ದಾತವ್ಯಮುದ್ಯೈವ ಪರಂ ಹ್ಯುಪಾಯನಂ ।
ಏಷ ಪ್ರಿಯೋ ಮೇ ಮಖರಾಜ ಏವ ಹಿ
ನ ಚೇದ್ಯಥೇಚ್ಛಾಸ್ತಿ ತಥಾ ಕುರು ವ್ರಜ ॥ ೧೨ ॥

---

೧೦. ಹಸು, ಬ್ರಾಹ್ಮಣ, ಸಾಧು, ಅಗ್ನಿ, ದೇವತೆಗಳು, ಶ್ರುತಿ, ಧರ್ಮ, ಇವೆಲ್ಲವೂ ಯಜ್ಞಾಧಿಪತಿಯ ವಿಭೂತಿಗಳು. ಇವರುಗಳ ಮೂಲಕ ಹರಿಯನ್ನು ಭಜಿಸಿದರೆ ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖವನ್ನು ಹೊಂದುವರು.

೧೧. ಹರಿಯ ವಕ್ಷಪ್ರದೇಶದಿಂದ ಗಿರಿರಾಜನಾದ ಗೋವರ್ಧನಪರ್ವತವು ಹುಟ್ಟಿ ಇಲ್ಲಿಗೆ ಬಂದಿರುವುದು. ಸ್ವತೇಜಸ್ಸಿನಿಂದ ಪ್ರಕಾಶಮಯವಾಗಿರುವುದು. ಅದರ ದರ್ಶನಮಾತ್ರದಿಂದಲೇ ಪುನರ್ಜನ್ಮವು ಇರುವುದಿಲ್ಲ.

೧೨. ಗೋ, ವಿಪ್ರ, ಸುರ, ಮುಂತಾದವರನ್ನು ಪೂಜಿಸಿ ಗೋವರ್ಧನಪರ್ವತಕ್ಕೆ ಕಾಣಿಕೆಯನ್ನು ಅರ್ಪಿಸಬೇಕು. ಅದೇ ನನಗೆ ಪ್ರೀತಿಯಾದುದು. ಆ ಪರ್ವತವೇ ಯಜ್ಞರಾಜನು. ಇಷ್ಟೇ ನನ್ನ ಅಭಿಪ್ರಾಯ. ನಿಮ್ಮಿಷ್ಟವಿದ್ದರೆ ಈ ರೀತಿ ನಡೆಸಿ. ಇಲ್ಲದಿದ್ದರೆ ನಿಮ್ಮಿಷ್ಟಬಂದಂತೆ ಮಾಡಿರಿ ಎಂದನು.

॥ ಶ್ರೀ ನಾರದ ಉವಾಚ ॥

ತೇಷಾಂ ಮಧ್ಯೇಽಥ ಸನ್ನಂದೋ ಗೋಪವೃದ್ಧೋಽತಿನೀತಿವಿತ್ ।
ಅತಿಪ್ರಸನ್ನಃ ಶ್ರೀಕೃಷ್ಣಮಾಹ ನಂದಸ್ಯ ಶೃಣ್ವತಾಂ ॥ ೧೩ ॥

॥ ಸನ್ನಂದ ಉವಾಚ ॥

ಹೇ ನಂದಸೂನೋ ಹೇ ತಾತ ತ್ವಂ ಸಾಕ್ಷಾಜ್ಜ್ಞಾನಶೇವಧಿಃ ।
ಕರ್ತವ್ಯಾ ಕೇನ ವಿಧಿನಾ ಪೂಜಾಽದ್ರೇರ್ವದ ತತ್ತ್ವತಃ ॥ ೧೪ ॥

॥ ಶ್ರೀ ಭಗವಾನುವಾಚ ॥

ಆಲಿಪ್ಯ ಗೋಮಯೇನಾಪಿ ಗಿರಿರಾಜಭುವಂ ಹ್ಯಧಃ ।
ಧೃತ್ವಾಽಥ ಸರ್ವಸಂಭಾರಂ ಭಕ್ತಿಯುಕ್ತೋ ಜಿತೇಂದ್ರಿಯಃ ॥ ೧೫ ॥

ಸಹಸ್ರಶೀರ್ಷಾಮಂತ್ರೇಣಾದ್ರಯೇ ಸ್ನಾನಂ ಚ ಕಾರಯೇತ್ ।
ಗಂಗಾಜಲೇನ ಯಮುನಾಜಲೇನಾಪಿ ದ್ವಿಜೈಸ್ಸಹ ॥ ೧೬ ॥

---

೧೩. ಕೃಷ್ಣನು ಹೀಗೆ ಹೇಳಿದನಂತರ ಆ ಸಭೆಯ ಮಧ್ಯದಲ್ಲಿ ಕುಳಿತಿದ್ದ ಗೋಪವೃದ್ಧನೂ, ನೀತಿಜ್ಞನೂ ಆದ ಸನ್ನಂದನೆಂಬುವನು ಅತಿಪ್ರಸನ್ನನಾಗಿ ನಂದನಿಗೆ ತಿಳಿಸುವಂತೆ ಕೃಷ್ಣನನ್ನು ಕುರಿತು

೧೪. ನಂದಕುಮಾರ, ನೀನು ಜ್ಞಾನನಿಧಿಯು, ಗೋಪರಿಗೆ ಪ್ರೀತಿಪಾತ್ರನು, ಗೋವರ್ಧನನನ್ನು ಪೂಜಿಸುವುದು ಸರಿಯಷ್ಟೆ. ಯಾವ ವಿಧಿಯಿಂದ ಪೂಜಿಸಬೇಕು ? ಎಂಬುದನ್ನು ತಿಳಿಸು.

೧೫. ಎನ್ನಲು, ಭಗವಂತನು ಹೇಳಿದನು :—ಸಗಣಿಯಿಂದ ಗೋವರ್ಧನ ಪರ್ವತದ ಕೆಳಭಾಗವನ್ನು ಸಾರಿಸಿ ಅಲಂಕರಿಸಬೇಕು. ಪೂಜಾಸಾಮಗ್ರಿಗಳನ್ನೆಲ್ಲಾ ಸಾಗಿಸಿಕೊಂಡು ಅಲ್ಲಿಗೆ ಹೋಗಿ ಅಣಿಮಾಡಿಕೊಳ್ಳಬೇಕು.

೧೬. ಬ್ರಾಹ್ಮಣರೊಡನೆ ಪೂಜೆಗೆ ಸಿದ್ಧನಾಗಬೇಕು. ಜಿತೇಂದ್ರಿಯನಾಗಿ ಭಕ್ತಿಯಿಂದ "ಸಹಸ್ರಶೀರ್ಷಾಪುರುಷಃ" ಎಂಬ ಮಂತ್ರದಿಂದ ಪರ್ವತಕ್ಕೆ ಗಂಗಾ, ಯಮುನಾನದಿಗಳ ಜಲಗಳಿಂದ ಸ್ನಾನಮಾಡಿಸಬೇಕು.

ಶುಕ್ಲಗೋದುಗ್ಧಧಾರಾಭಿಸ್ತತಃ ಪಂಚಾಮೃತೈರ್ಗಿರಿಂ।
ಸ್ನಾಪಯಿತ್ವಾ ಗಂಧಪುಷ್ಪೈಃ ಪುನಃ ಕೃಷ್ಣಾಜಲೇನ ವೈ ॥ ೧೭ ॥

ವಸ್ತ್ರಂ ದಿವ್ಯಂ ಚ ನೈವೇದ್ಯಮಾಸನಂ ಸರ್ವತೋಽಧಿಕಂ।
ಮಾಲಾಲಂಕಾರನಿಚಯಂ ದತ್ವಾ ದೀಪಾವಲಿಂ ಪರಾಂ ॥ ೧೮ ॥

ತತಃ ಪ್ರದಕ್ಷಿಣಾಂ ಕುರ್ಯಾನ್ನಮಸ್ಕುರ್ಯಾತ್ತತಃ ಪರಂ।
ಕೃತಾಂಜಲಿಪುಟೋ ಭೂತ್ವಾ ತ್ವಿದಮೇವಮುದೀರಯೇತ್ ॥ ೧೯ ॥

ನಮೋ ಬೃಂದಾವನಾಂಕಾಯ ತುಭ್ಯಂ ಗೋಲೋಕಮೌಳಿನೇ।
ಪೂರ್ಣಬ್ರಹ್ಮಾತಪತ್ರಾಯ ನಮೋ ಗೋವರ್ಧನಾಯ ಚ ॥ ೨೦ ॥

ಪುಷ್ಪಾಂಜಲಿಂ ತತಃ ಕುರ್ಯಾನ್ನೀರಾಜನಮತಃಪರಂ।
ಘಂಟಾಕಾಂಸ್ಯಮೃದಂಗಾದ್ಯೈರ್ವಾದಿತ್ರೈರ್ಮಧುರಸ್ವನೈಃ ॥ ೨೧ ॥

---

೧೭. ಬಿಳಿಯ ಹಸುವಿನ ಹಾಲಿನಿಂದಲೂ, ಪಂಚಾಮೃತಗಳಿಂದಲೂ, ಗಂಧ ಪುಷ್ಪಗಳಿಂದಲೂ ಅಭಿಷೇಕಮಾಡಿಸಿ ಪುನಃ ಯಮುನೆಯ ಉದಕದಿಂದ ಸ್ನಾನ ಮಾಡಿಸಬೇಕು.

೧೮. ಅನಂತರ ವಸ್ತ್ರವನ್ನಿಟ್ಟು ದಿವ್ಯವಾದ ನೈವೇದ್ಯವನ್ನು ನಿವೇದಿಸಬೇಕು. ಅತಿಶ್ರೇಷ್ಠವಾದ ಆಸನವನ್ನು ಸಮರ್ಪಿಸಿ ಪುಷ್ಪಮಾಲಿಕೆಗಳಿಂದಲಂಕರಿಸಿ ದೀಪ ಗಳನ್ನು ಸಾಲಾಗಿಡಬೇಕು.

೧೯. ಆಮೇಲೆ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ ಅಂಜಲಿಬದ್ಧನಾಗಿ ನಿಂತು ಈ ರೀತಿಯಾಗಿ ಸ್ತುತಿಸಬೇಕು.

೨೦. ಬೃಂದಾವನಕ್ಕೆ ಅಂಕಸ್ವರೂಪನೂ, ಗೋಕುಲಕ್ಕೆ ಕಿರೀಟಸ್ವರೂಪನೂ ಆದ ನಿನಗೆ ನಮಸ್ಕಾರವು. ಪೂರ್ಣಬ್ರಹ್ಮಾತಪತ್ರನೂ, ಗೋವರ್ಧನನೂ ಆದ ನಿನಗೆ ನಮಸ್ಕಾರವು ಎಂಬರ್ಥವುಳ್ಳ ಈ ಶ್ಲೋಕವನ್ನು ಹೇಳಿ ಸ್ತೋತ್ರಮಾಡಬೇಕು.

೨೧. ಆಮೇಲೆ ಪುಷ್ಪಾಂಜಲಿಯನ್ನು ಸಮರ್ಪಿಸಿ ನೀರಾಜನಮಂಗಳಾರತಿ ಯನ್ನು ಬೆಳಗಬೇಕು. ಘಂಟೆ, ಕಾಂಸ್ಯ, ಮೃದಂಗ ಮುಂತಾದ ವಾದ್ಯಗಳಿಂದಲೂ, ನೃತ್ಯಗೀತಗಳಿಂದಲೂ ಸಂತೋಷಗೊಳಿಸಬೇಕು.

ವೇದಾಹಮೇತಂಮಂತ್ರೇಣ ಪರ್ಷಲಾಜೈಃ ಸಮಾಚರೇತ್ ।
ತತ್ಸಮೀಪೇ ಚಾನ್ನಕೂಟಂ ಕುರ್ಯಾಚ್ಛ್ರದ್ಧಾಸಮನ್ವಿತಃ ॥ ೨೨ ॥

ಕಚೋಲಾನಾಂ ಚತುಃಷಷ್ಟಿಪಂಚಪಂಕ್ತಿಸಮನ್ವಿತಂ ।
ತುಲಸೀದಳಮಿಶ್ರೈಶ್ಚ ಶ್ರೀಗಂಗಾಯಮುನಾಜಲೈಃ ॥ ೨೩ ॥

ಷಟ್ಪಂಚಾಶತ್ತಮೈರ್ಭೋಗೈಃ ಕುರ್ಯಾತ್ಸೇವಾಂ ಸಮಾಹಿತಃ ।
ತತೋಽಗ್ನೀನ್ಬ್ರಾಹ್ಮಣಾನ್ಸಂಪೂಜ್ಯ ಗಾಃ ಸುರಾನ್ಗಂಧಪುಷ್ಪಕೈಃ ॥ ೨೪ ॥

ಭೋಜಯಿತ್ವಾ ದ್ವಿಜವರಾನ್ಸೌಗಂಧೈರ್ಮೃಷ್ಟಭೋಜನೈಃ ।
ಅನ್ಯೇಭ್ಯಶ್ಚಾಶ್ವಪಾಕೇಭ್ಯೋ ದದ್ಯಾದ್ಭೋಜನಮುತ್ತಮಂ ॥ ೨೫ ॥

ಗೋಪೀಗೋಪಾಲವೃಂದೈಶ್ಚ ಗವಾಂ ನೃತ್ಯಂ ಚ ಕಾರಯೇತ್ ।
ಮಂಗಲೈರ್ಜಯಶಬ್ದೈಶ್ಚ ಕುರ್ಯಾದ್ಗೋವರ್ಧನೋತ್ಸವಂ ॥ ೨೬ ॥

---

೨೨. ವೇದಾಹಮೇತಂ ಪುರುಷಂ ಎಂಬ ಮಂತ್ರದಿಂದ ಅರಳುಪುಷ್ಪಗಳನ್ನು ಪೂಜಿಸಬೇಕು. ಅದರ ಸಮೀಪದಲ್ಲಿಯೇ ಅನ್ನದ ರಾಶಿಯೊಂದನ್ನು ಹಾಕಿರಬೇಕು.

೨೩. ಅರವತ್ತುನಾಲ್ಕುವಿಧವಾದ ಭಕ್ಷ್ಯಭೋಜ್ಯಾದಿಗಳನ್ನು ಐದುಸಾಲುಗಳಲ್ಲಿಟ್ಟು ಅರ್ಪಿಸಬೇಕು. ತುಲಸೀದಲಸಹಿತವಾಗಿ ಯಮುನಾನದಿಯ ನೀರಿನಿಂದ ಅಭಿಷೇಕಮಾಡಬೇಕು. ಈರೀತಿಯಾಗಿ ಐವತ್ತಾರುವಿಧವಾದ ಉಪಚಾರಗಳಿಂದ ಭಕ್ತಿಯುತನಾಗಿ ಪೂಜೆಮಾಡಬೇಕು.

೨೪-೨೫. ಅನಂತರ ಅಗ್ನಿಯನ್ನೂ, ಬ್ರಾಹ್ಮಣರನ್ನೂ, ಹಸುಗಳನ್ನೂ, ದೇವತೆಗಳನ್ನೂ ಗಂಧಪುಷ್ಪಗಳಿಂದ ಪೂಜಿಸಬೇಕು. ಬ್ರಾಹ್ಮಣರಿಗೆ ಪರಿಮಳಯುಕ್ತವಾದ ಮೃಷ್ಟಾನ್ನಸಂತರ್ಪಣೆಮಾಡಬೇಕು. ಬೇರೆ ಜಾತಿಯವರಿಗೂ ಊಟ ಹಾಕಬೇಕು.

೨೬. ಗೋಪೀಗೋಪಾಲರೊಡನೆ ಹಸುಗಳ ನರ್ತನವನ್ನು ಮಾಡಿಸಬೇಕು. ಮಂಗಳವಾದ್ಯಗಳಿಂದಲೂ, ಜಯಶಬ್ದಗಳಿಂದಲೂ ಗೋವರ್ಧನಪರ್ವತದ ಉತ್ಸವವನ್ನಾಚರಿಸಬೇಕು.

ಯತ್ರ ಗೋವರ್ಧನಾಭಾವಸ್ತತ್ರ ಪೂಜಾವಿಧಿಂ ಶೃಣು ।
ಗೋಮಯೈರ್ವರ್ಧನಂ ಕುರ್ಯಾತ್ತದಾಕಾರಃ ಪರೋನ್ನತಃ ॥ ೨೭ ॥

ಪುಷ್ಪೈರ್ವ್ಯೂಹೈರ್ಲತಾಜಾಲೈರೀಷಿಕಾಭಿಃ ಸಮನ್ವಿತಃ ।
ಪೂಜನೀಯಃ ಸದಾ ಮರ್ತ್ಯೈರ್ಗಿರಿರ್ಗೋವರ್ಧನೋ ಭುವಿ ॥ ೨೮ ॥

ಶಾಲಗ್ರಾಮಸ್ಯ ದೇವಸ್ಯ ಸೇವನಂ ಕಾರಯೇತ್ಸದಾ ।
ಪಾತಕಂ ನ ಸ್ಪೃಶೇತ್ತಂ ವೈ ಪದ್ಮಪತ್ರಂ ಯಥಾ ಜಲಂ ॥ ೨೯ ॥

ಗಿರಿರಾಜಶಿಲಾಸೇವಾಂ ಯಃ ಕರೋತಿ ದ್ವಿಜೋತ್ತಮಃ ।
ಸಪ್ತದ್ವೀಪಮಹೀತೀರ್ಥಾವಗಾಹಫಲಮೇತಿ ಸಃ ॥ ೩೦ ॥

---

೨೭. ಇದಿಷ್ಟು ಗೋವರ್ಧನಪರ್ವತದ ಸಮೀಪದಲ್ಲಿ ಮಾಡಬೇಕಾದುದು. ಗೋವರ್ಧನಪರ್ವತವಿಲ್ಲದ ಬೇರೆ ದೇಶಗಳಲ್ಲಿ ಪರ್ವತದ ಪೂಜಾವಿಧಿಯನ್ನು ಕೇಳು. ಸಗಣಿಯಿಂದ ಸ್ವಲ್ಪ ಎತ್ತರವಾಗಿ ಗೋವರ್ಧನಪರ್ವತವನ್ನು ಮಾಡಬೇಕು.

೨೮. ಪುಷ್ಪಗಳಿಂದ ಕೂಡಿರುವ ಲತಾಸಮೂಹಗಳನ್ನೂ ಅದರಲ್ಲಿ ರಚಿಸಬೇಕು. ಈ ರೀತಿಯಾದ ಪರ್ವತವನ್ನು ಪ್ರಪಂಚದಲ್ಲಿ ಯಾವ ನರನು ಬೇಕಾದರೂ ಪೂಜಿಸಬಹುದು.

೨೯. ಸಾಲಿಗ್ರಾಮವನ್ನು ದಿನವೂ ಪೂಜಿಸಿ ಸೇವಿಸಬೇಕು. ಅದರಿಂದ ಕಮಲದ ಎಲೆಯಮೇಲಿನ ನೀರಿನಂತೆ ಯಾವ ಪಾತಕವೂ ಅವನನ್ನು ಮುಟ್ಟಲಾರದು.

೩೦. ಗೋವರ್ಧನಪರ್ವತದ ಶಿಲೆಯನ್ನು ಪೂಜಿಸಿ ಸೇವಿಸಿದವನು ಸಪ್ತ ದ್ವೀಪಗಳಲ್ಲಿನ ತೀರ್ಥಗಳಲ್ಲಿ ಸ್ನಾನಮಾಡಿದ ಫಲವನ್ನು ಪಡೆಯುವನು.

ಗಿರಿರಾಜಮಹಾಪೂಜಾಂ ವರ್ಷೇ ವರ್ಷೇ ಕರೋತಿ ಯಃ ।
ಇಹ ಸರ್ವಸುಖಂ ಭುಕ್ತ್ವಾಽಮುತ್ರ ಮೋಕ್ಷಂ ಪ್ರಯಾತಿ ಸಃ　　　　॥ ೩೧ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗಿರಿರಾಜಖಂಡೇ
ಗಿರಿರಾಜಪೂಜಾವಿಧಿವರ್ಣನಂ ನಾಮ
ಪ್ರಥಮೋಽಧ್ಯಾಯಃ

---

೩೧. ಈ ಗಿರಿರಾಜನಾದ ಗೋವರ್ಧನನ ಪೂಜೆಯನ್ನು ಯಾರು ಪ್ರತಿ ವರ್ಷವೂ ಆಚರಿಸುವರೋ ಅವರು ಈ ಲೋಕದಲ್ಲಿಯೂ ಸುಖವನ್ನನುಭವಿಸಿ ಪರಲೋಕದಲ್ಲಿ ಮೋಕ್ಷವನ್ನು ಪಡೆಯುವರು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಗಿರಿರಾಜಖಂಡದಲ್ಲಿ ಗಿರಿರಾಜಪೂಜಾವಿಧಿವರ್ಣನೆ ಎಂಬ ಒಂದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗಿರಿರಾಜಖಂಡೇ

ದ್ವಿತೀಯೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಶ್ರುತ್ವಾ ವಚೋ ನಂದಸುತಸ್ಯ ಸಾಕ್ಷಾತ್
ಶ್ರೀನಂದಸನ್ನಂದವರಾ ವ್ರಜೇಶಾಃ ।
ಸುವಿಸ್ಮಿತಾಃ ಪೂರ್ವಕೃತಂ ವಿಹಾಯ
ಪ್ರಚಕ್ರಿರೇ ಶ್ರೀಗಿರಿರಾಜಪೂಜಾಂ ॥ ೧ ॥

ನೀತ್ವಾ ಬಲೀನ್ಮೈಥಿಲ ನಂದರಾಜಃ
ಸುತೌ ಸಮಾನೀಯ ಚ ರಾಮಕೃಷ್ಣೌ ।
ಯಶೋದಯಾ ಶ್ರೀಗಿರಿಪೂಜನಾರ್ಥಂ
ಸಮುತ್ಸುಕೋ ಗರ್ಗಯುತಃ ಪ್ರಸನ್ನಃ ॥ ೨ ॥

ಎರಡನೆಯ ಅಧ್ಯಾಯವು

೧. ನಾರದನು ಹೇಳಿದನು :—ಎಲೈ ಬಹುಲಾಶ್ವನೇ, ನಂದಕುಮಾರನ ಮಾತನ್ನು ಕೇಳಿ ನಂದ, ಸನ್ನಂದ ಮುಂತಾದ ಗೋಪಪ್ರಮುಖರು ಆಶ್ಚರ್ಯಗೊಂಡು ಹಿಂದೆ ಮಾಡುತ್ತಿದ್ದ ಇಂದ್ರಪೂಜೆಯನ್ನು ಬಿಟ್ಟು ಗೋವರ್ಧನಪರ್ವತದ ಪೂಜೆಯನ್ನು ಮಾಡಲುಪಕ್ರಮಿಸಿದರು.

೨. ನಂದರಾಜನು ಕಾಣಿಕೆಗಳನ್ನೆಲ್ಲಾ ಪರ್ವತದ ಹತ್ತಿರಕ್ಕೆ ಸಾಗಿಸಿದನು. ಮಕ್ಕಳಾದ ರಾಮಕೃಷ್ಣರೊಡನೆಯೂ, ಪತ್ನಿಯಾದ ಯಶೋದೆಯೊಡನೆಯೂ ಹೊರಟನು. ಗರ್ಗಾಚಾರ್ಯರನ್ನು ಬರಮಾಡಿಕೊಂಡನು.

ತ್ವರಂ ಸಮಾರುಹ್ಯ ಮಹೋನ್ನತಂ ಗಜಂ
ವಿಚಿತ್ರವರ್ಣಂ ಧೃತಹೇಮಶೃಂಖಲಂ ।
ಗೋವರ್ಧನಾಂತಂ ಪ್ರಯಯೌ ಗವಾಂ ಗಣೈಃ
ಶರದ್ಘನೈಃ ಶಕ್ರ ಇವ ಪ್ರಿಯಾಯುತಃ ॥ ೩ ॥

ನಂದೋಪನಂದಾವೃಷಭಾನವಶ್ಚ
ಪುತ್ರೈಶ್ಚ ಪೌತ್ರೈಶ್ಚ ಸಹಾಂಗನಾಭಿಃ ।
ಸಮಾಯಯುಃ ಶ್ರೀಗಿರಿರಾಜಪಾರ್ಶ್ವಂ
ಸರ್ವಂ ಸಮಾನೀಯ ಚ ಯಜ್ಞಭಾರಂ ॥ ೪ ॥

ಸಹಸ್ರಬಾಲಾರ್ಕಪರಿಸ್ಫುರದ್ದ್ಯುತಿ-
ಮಾರುಹ್ಯ ರಾಧಾ ಶಿಬಿಕಾಂ ಸಖೀಗಣೈಃ ।
ಶಚೀವ ದಿವ್ಯಾಂಬರರತ್ನಭೂಷಣಾ
ಬಭೌ ಚಕೋರೀ ಭ್ರಮರೀ ಸಮಾಕುಲಾ ॥ ೫ ॥

---

೩. ವಿಚಿತ್ರವರ್ಣಗಳಿಂದ ಕೂಡಿದ ಒಂದು ಆನೆಯನ್ನು ಏರಿದನು. ಅದಕ್ಕೆ ಚಿನ್ನದ ಸರಪಳಿಗಳನ್ನು ಕಟ್ಟಿದ್ದರು. ಶರತ್ಕಾಲದ ಮೇಘಗಳೊಡನೆ ಇಂದ್ರನು ಹೊರಡುವಂತೆ ಜಾಗ್ರತೆಯಾಗಿ ಹಸುಗಳೊಡನೆ ಪ್ರಿಯರೊಡನೆ ಗೋವರ್ಧನಪರ್ವತದ ತಪ್ಪಲನ್ನು ಸೇರಿದನು.

೪. ನಂದ, ಉಪನಂದ, ವೃಷಭಾನುಗಳು ಇವರೇ ಮೊದಲಾದವರೆಲ್ಲರೂ ಪುತ್ರಪೌತ್ರರೊಡನೆಯೂ ಸ್ತ್ರೀಯರೊಡನೆಯೂ ಕೂಡಿ ಯಜ್ಞಕ್ಕೆ ಬೇಕಾದುದೆಲ್ಲವನ್ನೂ ತೆಗೆದುಕೊಂಡು ಅಲ್ಲಿಗೆ ಬಂದರು.

೫. ರಾಧೆಯು ದಿವ್ಯಾಂಬರರತ್ನಭೂಷಿತಳಾಗಿ ಶಚಿಯಂತೆ ಶೋಭಿಸುತ್ತಾ ಸಖಿಯರೊಡನೆ ಸಹಸ್ರಬಾಲಸೂರ್ಯರಂತೆ ಪರಿಶೋಭಿಸುತ್ತಿರುವ ಮೇನೆಯನ್ನು ಹತ್ತಿ, ಹೆಣ್ಣು ಚಕೋರಿಯು ಸ್ತ್ರೀದುಂಬಿಗಳೊಡಗೂಡಿದಂತೆ ಆನಂದದಿಂದ ತೆರಳಿದಳು.

ಸಮಾಗತೇ ಪಾರ್ಶ್ವಗತೇ ಸ್ವಲಂಕೃತೇ
ರಾಜನ್ಸಖೀಕೋಟಿಸಮಾವೃತೇ ಪರೇ ।
ಸಖ್ಯೌ ವಿಭಾತೇ ಲಲಿತಾವಿಶಾಖೇ
ಚಂದ್ರಾನನೇ ಚಾಲಿತಚಾರುಚಾಮರೇ ॥ ೬ ॥

ಏವಂ ರಮಾ ವೈ ವಿರಜಾ ಚ ಮಾಧವೀ
ಮಾಯಾ ಚ ಕೃಷ್ಣಾ ನೃಪ ಜಹ್ನುನಂದಿನೀ ।
ದ್ವಾತ್ರಿಂಶದಷ್ಟೌ ಚ ತಥಾ ಹಿ ಷೋಡಶ–
ಸಖ್ಯಶ್ಚ ತಾಸಾಂ ಕಿಲ ಯೂಥ ಆಗತಃ ॥ ೭ ॥

ಶ್ರೀಮೈಥಿಲಾನಾಂ ಕಿಲ ಕೌಶಲಾನಾಂ
ತಥಾ ಶ್ರುತೀನಾಮೃಷಿರೂಪಕಾಣಾಂ ।
ತಥಾ ತ್ವಯೋಧ್ಯಾಪುರವಾಸಿನೀನಾಂ
ಶ್ರೀಯಜ್ಞಸೀತಾವನವಾಸಿನೀನಾಂ ॥ ೮ ॥

---

೬. ಆ ರಾಧೆಯ ಅಕ್ಕಪಕ್ಕಗಳಲ್ಲಿ ಪ್ರಧಾನಸಖಿಯರಾದ ಲಲಿತಾ, ವಿಶಾಖಾ, ಚಂದ್ರಾನನಾ ಎಂಬುವರು ಅಲಂಕೃತರಾಗಿ ಕೋಟಿ ಇತರ ಸಖಿಯರಿಂದಾವೃತರಾಗಿ ರಾಧೆಗೆ ಚಾಮರವನ್ನು ಬೀಸುತ್ತಾ ಹೊರಟಿದ್ದರು.

೭. ಈರೀತಿಯಾದ ಸಂಭ್ರಮದಿಂದ ರಮಾ, ವಿರಜಾ, ಮಾಧವಿ, ಮಾಯಾ, ಯಮುನಾ, ಗಂಗಾ ಮುಂತಾದವರು ಹೊರಟರು. ಸಖಿಯರ ಗುಂಪು ಐವತ್ತಾರು ತಂಡವಾಗಿ ನಡೆದಿತ್ತು.

೮. ಮಿಥಿಲದೇಶದವರು, ಕೋಶಲದೇಶದವರು, ಋಷಿರೂಪಧಾರಿಗಳಾದ ಶ್ರುತಿಗಳು, ಅಯೋಧ್ಯಾಪುರವಾಸಿಗಳು, ಶ್ರೀ ಸೀತಾವನವಾಸಿಗಳು ಇವರೇ ಮೊದಲಾದವರು ಪೂಜೆಯಲ್ಲಿ ಭಾಗವಹಿಸಲು ಬಂದಿದ್ದರು.

ರಮಾದಿವೈಕುಂಠನಿವಾಸಿನೀನಾಂ
ತಥೋರ್ಧ್ವವೈಕುಂಠನಿವಾಸಿನೀನಾಂ ।
ಮಹೋಜ್ಜ್ವಲದ್ದ್ವೀಪನಿವಾಸಿನೀನಾಂ
ಧ್ರುವಾದಿಲೋಕಾಚಲವಾಸಿನೀನಾಂ ॥ ೯ ॥

ಸಮುದ್ರಜಾ ದಿವ್ಯಗುಣತ್ರಯಾಣಾ-
ಮಾದಿವ್ಯವೈಮಾನಿಕಜೌಷಧೀನಾಂ ।
ಜಾಲಂಧರೀಣಾಂ ಚ ಸಮುದ್ರಕನ್ಯಾ
ಬರ್ಹಿಷ್ಮತೀಜಾ ಸುತಲಸ್ಥಿತಾನಾಂ ॥ ೧೦ ॥

ತಥಾಪ್ಸರಸ್ಸರ್ವಫಣೀಂದ್ರಜಾನಾ-
ಮಾಸಾಂ ಚ ಯೂಥಾ ವ್ರಜವಾಸಿನೀನಾಂ ।
ಸಮಾಯಯುಃ ಶ್ರೀಗಿರಿರಾಜಪಾರ್ಶ್ವಂ
ಸ್ವಲಂಕೃತಾಃ ಪಾಣಿಬಲಿಪ್ರದೀಪ್ರಾಃ ॥ ೧೧ ॥

---

೯. ರಮಾದಿವೈಕುಂಠವಾಸಿಗಳು, ಊರ್ಧ್ವವೈಕುಂಠನಿವಾಸಿಗಳು, ಮಹಾದ್ವೀಪವಾಸಿಗಳು, ಧ್ರುವಾದಿಲೋಕಾಚಲವಾಸಿಗಳು ಇವರೇ ಮೊದಲಾದ ಅನೇಕರು ಪೂಜೆಗೆ ಬಂದಿದ್ದರು.

೧೦. ಸಮುದ್ರದಿಂದ ಉತ್ಪನ್ನರಾದವರು, ದಿವ್ಯಗುಣತ್ರಯಗಳಿಂದ ಕೂಡಿದವರು, ದಿವ್ಯವೈಮಾನಿಕರಿಂದ ಉತ್ಪನ್ನರಾದವರು, ಓಷಧಿಗಳಿಂದ ಹುಟ್ಟಿದವರು. ಜಾಲಂಧರಿಯರು, ಸಮುದ್ರಕನ್ಯೆಯರು, ಬರ್ಹಿಷ್ಮತಿಸಂಭೂತರು, ಸುತಲವಾಸಿಗಳು. ಇವರೆಲ್ಲರೂ ಪೂಜೆಗೆ ಸಿದ್ಧರಾಗಿ ತೆರಳಿದ್ದರು.

೧೧. ಅಪ್ಸರೆಯರು, ಸರ್ಪಕನ್ಯೆಯರು, ಮುಂತಾದವರೂ, ಗೋಕುಲವಾಸಿಗಳೂ ಎಲ್ಲರೂ ಕೈಯಲ್ಲಿ ಕಾಣಿಕೆಗಳನ್ನು ಹಿಡಿದುಕೊಂಡು ಅಲಂಕೃತರಾಗಿ ಗೋವರ್ಧನಪರ್ವತದ ಸಮೀಪಕ್ಕೆ ಬಂದರು.

ಗೋಪಾಶ್ಚ ವೃದ್ಧಾಃ ಶಿಶವೋ ಯುವಾನಃ
ಪೀತಾಂಬರೋಷ್ಣೀಷಕಬರ್ಹಮಂಡಿತಾಃ ।
ಶ್ರೀಹಾರಗುಂಜಾವನಮಾಲಿಕಾಭೀ
ರೇಜುಸ್ಸಮೇತಾ ನವಯಷ್ಟಿವೇಣುಭಿಃ ॥ ೧೨ ॥

ಶ್ರುತ್ವೋತ್ಸವಂ ಶೈಲವರಸ್ಯ ಸಂಮುಖಾತ್
ಗಂಗಾಧರೋ ಬದ್ಧಕಪರ್ದಮಂಡಲಃ ।
ಕಪಾಲಭೃನ್ನಸ್ಥಿಜಭಸ್ಮರೂಷಿತಃ
ಸರ್ಪಾಲಿಮಾಲಾವಲಯೈರ್ವಿಭೂಷಿತಃ ॥ ೧೩ ॥

ದತ್ತೂರಭೃಂಗಾವಿಷಪಾನವಿಹ್ವಲೋ
ಹಿಮಾದ್ರಿಪುತ್ರೀಸಹಿತೋ ಗಣಾವೃತಃ ।
ಆರುಹ್ಯ ನಂದೀಶ್ವರಮಾದಿವಾಹನಂ
ಸಮಾಯಯೌ ಶ್ರೀಗಿರಿರಾಜಮಂಡಲಂ ॥ ೧೪ ॥

---

೧೨. ಗೋಪರೂ, ವೃದ್ಧರೂ, ಬಾಲಕರೂ. ಯುವಕರೂ, ಸಿದ್ಧರಾಗಿ ಹೋಗಿ ಸೇರಿದರು. ಕೆಲವರು ಪೀತಾಂಬರಗಳನ್ನುಟ್ಟಿರುವಸಾಲುಗಳನ್ನು ಧರಿಸಿದ್ದರು. ಕೆಲವು ಹುಡುಗರು ನವಿಲುಗರಿಗಳಿಂದ ತಲೆಯನ್ನಲಂಕರಿಸಿಕೊಂಡಿದ್ದರು. ಕೆಲವರು ತುಳಸಿಯ ಹಾರಗಳನ್ನೂ, ಕೆಲವರು ಗುಲಗಂಜಿಯ ಹಾರಗಳನ್ನೂ ಧರಿಸಿದ್ದರು. ಕೆಲವರು ಕೈಲಿ ಕೋಲುಗಳನ್ನು ಹಿಡಿದು ಹೊರಟಿದ್ದರು.

೧೩. ಗೋವರ್ಧನೋತ್ಸವವೆಂದು ಕೇಳಿದ ಕೂಡಲೇ ಈಶ್ವರನು ಜಟಾಜೂಟವನ್ನು ಬಿಗಿದುಕಟ್ಟಿ ಕಪಾಲವನ್ನು ಕೈಯಲ್ಲಿ ಹಿಡಿದುಕೊಂಡು ಚಿತಾಭಸ್ಮವನ್ನು ಮೈಗೆ ಲೇಪಿಸಿಕೊಂಡು ಸರ್ಪಮಾಲೆಗಳಿಂದ ಭೂಷಿತನಾಗಿ ಹೊರಟನು.

೧೪. ದತ್ತೂರದಂತೆಯೂ, ಭೃಂಗದಂತೆಯೂ ಕಪ್ಪಾಗಿರುವ ವಿಷವನ್ನು ಪಾನಮಾಡಿ ವಿಹ್ವಲನಾದ ಆ ಮಹೇಶ್ವರನು ಗಿರಿಜೆಯೊಡನೆ ನಂದಿಯನ್ನೇರಿ ಪ್ರಮಥ ಗಣಗಳಿಂದಾವೃತನಾಗಿ ಶ್ರೀಗಿರಿರಾಜನ ಹತ್ತಿರಕ್ಕೆ ಬಂದನು.

ರಾಜರ್ಷಿವಿಪ್ರರ್ಷಿಸುರರ್ಷಯಶ್ಚ
ಸಿದ್ಧೇಶಯೋಗೇಶ್ವರಹಂಸಮುಖ್ಯಾಃ ।
ಆಜಗ್ಮುರಾರಾದ್ಗಿರಿದರ್ಶನಾರ್ಥಂ
ಸಹಸ್ರಶೋ ವಿಪ್ರಗಣಾಃ ಸಮೇತಾಃ ॥ ೧೫ ॥

ಗೋವರ್ಧನೋ ರತ್ನಶಿಲಾಮಯೋಽಭೂತ್
ಸುವರ್ಣಶೃಂಗೈಃ ಪರಿತಃ ಸ್ಫುರದ್ಭಿಃ ।
ಮತ್ತಾಲಿಭಿರ್ನಿರ್ಝರಸುಂದರೀಭಿಃ
ದರೀಭಿರುಚ್ಚಾಂಗಕರೀವ ರಾಜನ್ ॥ ೧೬ ॥

ತದೈವ ಶೈಲಾಃ ಕಿಲ ಮೂರ್ತಿಮಂತಃ
ಸೋಪಾಯನಾ ಮೇರುಹಿಮಾಚಲಾದ್ಯಾಃ ।
ನೇಮುರ್ಗಿರಿಂ ಮಂಗಳಪಾಣಯಸ್ತಂ
ಗೋವರ್ಧನಂ ರೂಪಧರಂ ಗಿರೀಂದ್ರಾಃ ॥ ೧೭ ॥

---

೧೫. ರಾಜರ್ಷಿಗಳು, ಬ್ರಹ್ಮಋಷಿಗಳು, ದೇವಋಷಿಗಳು, ಸಿದ್ಧೇಶ ಯೋಗೀಶ್ವರರು, ಪರಿವ್ರಾಜಕರು, ಸಹಸ್ರಾರು ಬ್ರಾಹ್ಮಣರು, ಇವರೆಲ್ಲರೂ ಗೋವರ್ಧನಪರ್ವತದ ಸಮೀಪಕ್ಕೆ ಬಂದರು.

೧೬. ಆ ಗೋವರ್ಧನ ಪರ್ವತವು ರತ್ನಮಯವಾದ ಶಿಲೆಗಳಿಂದ ಕೂಡಿರುವುದು. ಅದರ ಶಿಖರಗಳು ಸುವರ್ಣಮಯವಾಗಿ ಪ್ರಕಾಶಿಸುತ್ತಲಿರುವುವು. ಪುಷ್ಪಗಳು ಅಧಿಕವಾಗಿರುವುದರಿಂದ ಅವುಗಳ ಪರಾಗವನ್ನು ಪಾನಮಾಡಿ ದುಂಬಿಗಳು ಮದಿಸಿ ಝುಂಕಾರಮಾಡುತ್ತಿರುವುವು. ಅನೇಕ ಗಿರಿನದಿಗಳು ಕಲರವದಿಂದ ಹರಿಯುತ್ತಿರುವುವು. ಅನೇಕ ಕಂದರಗಳಿರುವುವು. ಇದನ್ನು ನೋಡಿದರೆ ಎತ್ತರವಾದ ಆನೆಯಂತೆ ಕಾಣುವುದು.

೧೭. ಆಮೇಲೆ, ಮೇರು, ಹಿಮಾಚಲ ಮುಂತಾದ ಶ್ರೇಷ್ಠವಾದ ಪರ್ವತಗಳು, ಶರೀರವನ್ನು ಧರಿಸಿ ಕಾಣಿಕೆಯನ್ನು ತೆಗೆದುಕೊಂಡು ಬಂದು ಗೋವರ್ಧನಕ್ಕೆ ಅರ್ಪಿಸಿ ನಮಸ್ಕರಿಸಿದವು.

ದ್ವಿಜೈಶ್ಚ ಗೋವರ್ಧನದೇವಪೂಜನಂ
ಕೃತ್ವಾಽಚ್ಯುತೋಕ್ತಂ ದ್ವಿಜವಹ್ನಿಗೋಧನಂ।
ಸಂಪೂಜ್ಯ ಧೃತ್ವಾ ಸುಧನಂ ಮಹಾಧನಂ
ಬಲಿಂ ದದೌ ಶ್ರೀಗಿರಿಯೇ ವ್ರಜೇಶ್ವರಃ ॥ ೧೮ ॥

ನಂದೋಪನಂದೈರ್ವೃಷಭಾನುಭಿಶ್ಚ
ಗೋಪೀಗಣೈರ್ಗೋಪಗಣೈಃ ಪ್ರಹರ್ಷಿತಃ।
ಗಾಯದ್ಭಿರಾನರ್ತನವಾದ್ಯತತ್ಪರೈ-
ಶ್ಚಕಾರ ಕೃಷ್ಣೋಽದ್ರಿವರಪ್ರದಕ್ಷಿಣಾಂ ॥ ೧೯ ॥

ದೇವೇಷು ವರ್ಷತ್ಸು ಚ ಪುಷ್ಪವರ್ಷಂ
ಜನೇಷು ವರ್ಷತ್ಸು ಚ ಲಾಜಸಂಘಂ।
ರೇಜೇ ಮಹಾರಾಜ ಇವಾಧ್ವರೇ ಜನೈ-
ರ್ಗೋವರ್ಧನೋ ನಾಮ ಗಿರೀಂದ್ರರಾಜರಾಟ್ ॥ ೨೦ ॥

---

೧೮. ನಂದನು ಬ್ರಾಹ್ಮಣರ ನೇತೃತ್ವದಿಂದ ಗಿರಿರಾಜನ ಪೂಜೆಯನ್ನು ಮಾಡಿ ಆಮೇಲೆ ಅಚ್ಯುತನ ಅಪ್ಪಣೆಯಂತೆ ಬ್ರಾಹ್ಮಣರನ್ನೂ, ಅಗ್ನಿಯನ್ನೂ, ಹಸುಗಳನ್ನೂ ಪೂಜಿಸಿ ಮಹಾಧನವನ್ನು ಕಾಣಿಕೆಯನ್ನಾಗಿ ಒಪ್ಪಿಸಿದನು.

೧೯. ಅನಂತರ ಶ್ರೀಕೃಷ್ಣನು ನಂದ, ಉಪನಂದ, ವೃಷಭಾನು, ಗೋಪಾಲಕರು, ಗೋಪಿಯರು, ಇವರುಗಳೊಡನೆ ಸೇರಿ ಗೋವರ್ಧನಪರ್ವತಕ್ಕೆ ಪ್ರದಕ್ಷಿಣೆಯನ್ನು ಮಾಡಿದನು. ಆಗ ಕೆಲವರು ಹಾಡುತ್ತಿದ್ದರು. ಕೆಲವರು ಕುಣಿಯುತ್ತಿದ್ದರು. ಕೆಲವರು ವಾದ್ಯಗಳನ್ನು ಬಾರಿಸುತ್ತಿದ್ದರು.

೨೦. ದೇವತೆಗಳು ಪುಷ್ಪವೃಷ್ಟಿಯನ್ನು ಕರೆಯುತ್ತಿದ್ದರು. ಜನಗಳು ಅರಳನ್ನು ಎರಚುತ್ತಿದ್ದರು. ಇಂತಹ ವೈಭವದಿಂದ ಕೂಡಿದ ಗಿರಿರಾಜನಾದ ಗೋವರ್ಧನನು ಮಹಾರಾಜನಂತೆ ಪ್ರಕಾಶಿಸಿದನು.

ಕೃಷ್ಣೋಽಪಿ ಸಾಕ್ಷಾತ್ತ್ವ್ರಜಶೈಲಮಧ್ಯಾತ್
ಧೃತ್ವಾಽತಿದೀರ್ಘಂ ಕಿಲ ಚಾನ್ಯರೂಪಂ ।
ಶೈಲೋಽಸ್ಮಿ ಲೋಕಾನಿತಿ ಭಾಷಯನ್ ಸನ್
ಜಘಾಸ ಸರ್ವಂ ಕೃತಮನ್ನಕೂಟಂ　　|| ೨೧ ||

ಗೋಪಾಲಗೋಪೀಗಣವೃಂದಮುಖ್ಯಾ
ಊಚುಃ ಸ್ವಯಂ ವೀಕ್ಷ್ಯ ಗಿರೇಃ ಪ್ರಭಾವಂ ।
ದಾತುಂ ವರಂ ತತ್ರ ಸಮುದ್ಯತಂ ತಂ
ಸುವಿಸ್ಮಿತಾ ಹರ್ಷಿತಮಾನಸಾಸ್ತೇ　　|| ೨೨ ||

ಜ್ಞಾತೋಽಸಿ ಗೋಪೈರ್ಗಿರಿರಾಜದೇವಃ
ಪ್ರದರ್ಶಿತೋ ನಂದಸುತೇನ ಸಾಕ್ಷಾತ್ ।
ನೋ ಗೋಧನಂ ವೋ ಕಿಲ ಬಂಧುವರ್ಗೋ
ವೃದ್ಧಿಂ ಸಮಾಯಾತು ದಿನೇ ದಿನೇ ಕೌ　　|| ೨೩ ||

---

೨೧. ಶ್ರೀಕೃಷ್ಣನು ಆ ಗೋವರ್ಧನಪರ್ವತದ ಮಧ್ಯಭಾಗದಲ್ಲಿ ನಿಂತು ದೀರ್ಘವಾದ ಶರೀರವನ್ನು ಧರಿಸಿ ನಾನೇ ಈ ಪರ್ವತ ಎಂದು ಹೇಳುತ್ತಾ ಅಲ್ಲಿದ್ದ ಅನ್ನದ ರಾಶಿಯನ್ನು ತಿಂದುಬಿಟ್ಟನು.

೨೨. ಗೋಪಗೋಪಿಯರೆಲ್ಲರೂ ಆ ಶ್ರೀಹರಿಯ ಅದ್ಭುತಾಕಾರವನ್ನು ನೋಡಿ ಗಿರಿಯ ಮಹಿಮೆಯನ್ನು ಹೊಗಳುತ್ತಿದ್ದರು. ಆಗ ವರವನ್ನು ಕೊಡಲು ದ್ಯುಕ್ತನಾಗಿ ಬಂದಿರುವ ಪರ್ವತರಾಜನನ್ನು ನೋಡಿ ಎಲ್ಲರೂ ಆಶ್ಚರ್ಯಗೊಂಡರು.

೨೩. ಎಲೈ ಗಿರಿರಾಜನೇ, ನೀನು ನಮಗೆಲ್ಲಾ ದೇವತೆಯು. ನಂದ ಕುಮಾರನು ನಿನ್ನನ್ನು ನಮ್ಮ ದೇವರನ್ನಾಗಿ ತೋರಿಸಿದನು. ನಮ್ಮ ಗೋಧನವೂ ನಮ್ಮ ಬಂಧುವರ್ಗವೂ ಪ್ರಪಂಚದಲ್ಲಿ ದಿನದಿನವೂ ಅಭಿವೃದ್ಧಿಯನ್ನು ಹೊಂದಲಿ ಎಂದು ಕೇಳಿಕೊಳ್ಳಲು,

ತಥಾಸ್ತು ಚೋಕ್ತ್ವಾ ಗಿರಿರಾಜರಾಜೋ
ಗೋವರ್ಧನೋ ದಿವ್ಯವಪುರ್ದಧಾನಃ ।
ಕಿರೀಟಕೇಯೂರಮನೋಹರಾಂಗಃ
ಕ್ಷಣೇನ ತತ್ರಾಂತರಧೀಯತಾರಾತ್ ॥ ೨೪ ॥

ನಂದೋಪನಂದಾ ವೃಷಭಾನವಶ್ಚ
ಬಲಸ್ಸುಚಂದ್ರೋ ವೃಷಭಾನುರಾಜಃ ।
ಶ್ರೀನಂದರಾಜಶ್ಚ ಹರಿಶ್ಚ ಗೋಪಾ
ಗೋಪ್ಯಶ್ಚ ಸರ್ವಾ ನಿಜಗೋಧನೈಶ್ಚ ॥ ೨೫ ॥

ದ್ವಿಜಾಶ್ಚ ಯೋಗೇಶ್ವರಸಿದ್ಧಸಂಘಾಃ
ಶಿವಾದಯಶ್ಚಾನ್ಯಜನಾಶ್ಚ ಸರ್ವೇ ।
ನತ್ವಾಥ ಸಂಪೂಜ್ಯ ಗಿರಿಂ ಪ್ರಸನ್ನಾಃ
ಸ್ವಂ ಸ್ವಂ ಗೃಹಂ ಜಗ್ಮುರನಿಚ್ಛಯಾಶ್ಚ ॥ ೨೬ ॥

---

೨೪. ಗಿರಿರಾಜನು ಹಾಗೆಯೇ ಆಗಲೆಂದು ಹೇಳಿದನು. ದಿವ್ಯವಾದ ಶರೀರವನ್ನು ಧರಿಸಿ ಬಂದಿದ್ದನು. ಕಿರೀಟವನ್ನು ತಲೆಯಲ್ಲಿ ಧರಿಸಿ ಭುಜಕೀರ್ತಿಗಳನ್ನು ಧರಿಸಿ ಮನೋಹರಾಂಗನಾಗಿ ಶೋಭಿಸುತ್ತಿದ್ದನು. ವರವನ್ನು ಕೊಟ್ಟು ತಕ್ಷಣ ಅಂತರ್ಧಾನನಾದನು.

೨೫. ನಂದ, ಉಪನಂದ, ವೃಷಭಾನುಗಳು, ಬಲರಾಮ, ಸುಚಂದ್ರ, ವೃಷಭಾನುರಾಜ, ಶ್ರೀನಂದರಾಜ, ಹರಿ, ಗೋಪಗೋಪಿಯರು ಇವರೆಲ್ಲರೂ ತಮ್ಮ ತಮ್ಮ ಗೋಧನಗಳೊಡನೆ ಹಿಂತಿರುಗಿದರು.

೨೬. ದ್ವಿಜರು, ಯೋಗೇಶ್ವರರು, ಸಿದ್ಧರು, ಶಿವನೇ ಮೊದಲಾದವರು ಬೇರೆ ಜನಗಳೆಲ್ಲರೂ ಗಿರಿಯನ್ನು ಪೂಜಿಸಿ ನಮಸ್ಕರಿಸಿ ಪ್ರಸನ್ನರಾಗಿ ಗಿರಿಯನ್ನು ಬಿಟ್ಟು ಬರಲು ಇಚ್ಛೆಯಿಲ್ಲದವರಾದರೂ ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿದರು.

ಶ್ರೀಕೃಷ್ಣಚಂದ್ರಸ್ಯ ಪರಂ ಚರಿತ್ರಂ
ಗಿರೀಂದ್ರರಾಜಸ್ಯ ಮಹೋತ್ಸವಂ ಚ ।
ಮಯಾ ತವಾಗ್ರೇ ಕಥಿತಂ ವಿಚಿತ್ರಂ
ನೃಣಾಂ ಮಹಾಪಾಪಹರಂ ಪವಿತ್ರಂ ॥ ೨೭ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗಿರಿರಾಜಖಂಡೇ ಗಿರಿರಾಜಮಹೋತ್ಸವ ವರ್ಣನಂ ನಾಮ ದ್ವಿತೀಯೋಽಧ್ಯಾಯಃ

---

೨೭. ಎಲೈ ಮೈಥಿಲ, ಶ್ರೀಕೃಷ್ಣನ ಪುಣ್ಯತಮವಾದ ಚರಿತ್ರೆಯನ್ನೂ, ಗಿರಿರಾಜನಾದ ಗೋವರ್ಧನನ ಉತ್ಸವವಿಷಯವನ್ನೂ ತಿಳಿಸಿರುವೆನು. ಇದನ್ನು ಕೇಳಿದವರ ಪಾಪಗಳೆಲ್ಲವೂ ನಾಶವಾಗುವುವು. ಇದು ಪರಮಪವಿತ್ರವಾದುದು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಗಿರಿರಾಜಖಂಡದಲ್ಲಿ ಗಿರಿರಾಜನ ಮಹೋತ್ಸವ ವರ್ಣನೆ ಎಂಬ ಎರಡನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗಿರಿರಾಜಖಂಡೇ

ತೃತೀಯೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅಥ ಮನ್ಮುಖತಃ ಶ್ರುತ್ವಾ ಸ್ವಾತ್ಮಯಾಗಸ್ಯ ನಾಶನಂ ।
ಗೋವರ್ಧನೋತ್ಸವಂ ಜಾತಂ ಕೋಪಂ ಚಕ್ರೇ ಪುರಂದರಃ ॥ ೧ ॥

ಸಂವರ್ತಕಂ ನಾಮ ಗಣಂ ಪ್ರಲಯೇ ಮುಕ್ತಬಂಧನಂ ।
ಇಂದ್ರೋ ವ್ರಜವಿನಾಶಾಯ ಪ್ರೇಷಯಾಮಾಸ ಸತ್ವರಂ ॥ ೨ ॥

ಅಥ ಮೇಘಗಣಾಃ ಕ್ರುದ್ಧಾಃ ಧ್ವನಂತಶ್ಚಿತ್ರವರ್ಣಿನಃ ।
ಕೃಷ್ಣಾಭಾಃ ಪೀತಭಾಃ ಕೇಚಿತ್ ಕೇಚಿಚ್ಚ ಹರಿತಪ್ರಭಾಃ ॥ ೩ ॥

ಮೂರನೆಯ ಅಧ್ಯಾಯವು

೧. ನಾರದನು ಹೇಳಿದನು :—ಎಲೈ ಬಹುಲಾಶ್ವನೇ, ಕೇಳು. ಇಂದ್ರನ ಪೂಜೆಯನ್ನು ತ್ಯಜಿಸಿ ಗೋವರ್ಧನೋತ್ಸವವನ್ನು ಮಾಡಿದ ವಿಷಯವನ್ನು ನಾನು ಇಂದ್ರನಿಗೆ ತಿಳಿಸಿದೆನು. ಅದನ್ನು ಕೇಳಿ ಅವನಿಗೆ ಅತಿಕೋಪವುಂಟಾಯಿತು.

೨. ಆಗ ಅವನು ಗೋಕುಲವನ್ನು ನಾಶಮಾಡಬೇಕೆಂದು ಬಗೆದು ಅದಕ್ಕೋಸ್ಕರವಾಗಿ ಪ್ರಲಯಕಾಲದಲ್ಲಿ ಬಿಡತಕ್ಕ ಸಂವರ್ತಕವೆಂಬ ಮೇಘಗಣಗಳನ್ನು ಬಿಟ್ಟನು.

೩. ಅವನಪ್ಪಣೆಯಂತೆ ಮೇಘಗಣಗಳೆಲ್ಲವೂ ಕೋಪದಿಂದ ಧ್ವನಿಮಾಡುತ್ತಾ ಆಕಾಶದಲ್ಲಿ ಸೇರಿದವು. ಕೆಲವು ಕಪ್ಪುಬಣ್ಣದವು, ಕೆಲವು ಹಳದಿಯಾಗಿಯೂ ಕೆಲವು ಹಸುರಾಗಿಯೂ ಇದ್ದವು.

ಇಂದ್ರಗೋಪನಿಭಾಃ ಕೇಚಿತ್ಕೇಚಿತ್ಕರ್ಪೂರವತ್ಪ್ರಭಾಃ ।
ನಾನಾವಿಧಾಶ್ಚ ಯೇ ಮೇಘಾ ನೀಲಪಂಕಜಸುಪ್ರಭಾಃ ॥ ೪ ॥

ಹಸ್ತಿತುಲ್ಯಾನ್ವಾರಿಬಿಂದೂನ್ ವವೃಷುಸ್ತೇ ಮದೋದ್ಧತಾಃ ।
ಹಸ್ತಿಶುಂಡಾಸಮಾಭಿಶ್ಚ ಧಾರಾಭಿಶ್ಚಂಚಲಾಶ್ಚ ಯೇ ॥ ೫ ॥

ನಿಪೇತುಃ ಕೋಟಿಶಶ್ಚಾದ್ರಿಕೂಟತುಲ್ಯೋಪಲಾ ಭೃಶಂ ।
ವಾತಾ ವವುಃ ಪ್ರಚಂಡಾಶ್ಚ ಕ್ಷೇಪಯಂತಸ್ತರೂನ್ಗೃಹಾನ್ ॥ ೬ ॥

ಪ್ರಚಂಡವಜ್ರಪಾತಾನಾಂ ಮೇಘಾನಾಮಂತಕಾರಿಣಾಂ ।
ಮಹಾಶಬ್ದೋಽಭವದ್ಭೂಮೌ ಮೈಥಿಲೇಂದ್ರ ಭಯಂಕರಃ ॥ ೭ ॥

---

೪. ಇಂದ್ರಗೋಪದ ಬಣ್ಣದಂತೆ ಬಣ್ಣವುಳ್ಳವು ಕೆಲವು. ಮತ್ತು ಕೆಲವು ಕರ್ಪೂರದಂತಿದ್ದವು. ನಾನಾವಿಧವಾದ ಬಣ್ಣಗಳಿಂದ ಕೂಡಿದ ಕೆಲವು ನೀಲ ಕಮಲದಂತೆ ಕಾಣುತ್ತಿದ್ದವು.

೫. ಆ ಮೇಘಗಳು ಮದಿಸಿದವುಗಳಾಗಿ ಆನೆಗಳಂತಿರುವ ದೊಡ್ಡದೊಡ್ಡದಾದ ನೀರಿನ ಧಾರೆಗಳನ್ನು ಸುರಿಸಿದವು. ಆನೆಯ ಸೊಂಡಿಲಿನ ಆಕಾರಕ್ಕೆ ನೀರಿನ ಧಾರೆಗಳು ಚಂಚಲವಾಗಿ ಸುರಿಯುತ್ತಿದ್ದವು.

೬. ಅತಿಯಾಗಿ ಗಾಳಿಯು ಬೀಸಲಾರಂಭಿಸಿತು. ಕೋಟ್ಯಾನುಕೋಟಿ ಪರ್ವತಗಳೂ, ಶಿಖರಗಳೂ, ಕಲ್ಲುಬಂಡೆಗಳೂ ಉರುಳಿದವು. ಮರಗಳೂ, ಮನೆಗಳೂ ಉರುಳಿಹೋದವು.

೭. ಪ್ರಚಂಡವಾದ ಸಿಡಿಲಿನ ಶಬ್ದವು ಕೇಳಿಬರುತ್ತಿತ್ತು. ಪ್ರಪಂಚವನ್ನೇ ನಾಶಮಾಡುವ ಮೇಘಗಳು ಒಟ್ಟಾಗಿ ಸೇರಿದ್ದವು. ಇವುಗಳಿಂದ ಅತಿಭಯಂಕರವಾದ ಶಬ್ದವುಂಟಾಯಿತು.

ನನಾದ ತೇನ ಬ್ರಹ್ಮಾಂಡಂ ಸಪ್ತಲೋಕೈರ್ಬಿಲೈಸ್ಸಹ |
ವಿಚೇಲುರ್ದಿಗ್ಗಜಾಸ್ತಾರಾ ಹ್ಯಪತನ್ಭೂಮಿಮಂಡಲಂ || ೮ ||

ಭಯಭೀತಾ ಗೋಪಮುಖ್ಯಾಃ ಸಕುಟುಂಬಾ ಜಿಗೀಷವಃ |
ಶಿಶೂನ್ ಸ್ವಾನ್ ಸ್ವಾನ್ ಪುರಸ್ಕೃತ್ಯ ನಂದಮಂದಿರಮಾಯಯುಃ || ೯ ||

ಶ್ರೀನಂದನಂದನಂ ನತ್ವಾ ಸಬಲಂ ಪರಮೇಶ್ವರಂ |
ಊಚುರ್ವ್ರಜೌಕಸಃ ಸರ್ವೇ ಭಯಾರ್ತಾಃ ಶರಣಂ ಗತಾಃ || ೧೦ ||

|| ಗೋಪಾ ಊಚುಃ ||

ರಾಮ ರಾಮ ಮಹಾಬಾಹೋ ಕೃಷ್ಣ ಕೃಷ್ಣ ವ್ರಜೇಶ್ವರ |
ಪಾಹಿ ಪಾಹಿ ಮಹಾಕಷ್ಟಾದಿಂದ್ರದತ್ತಾನ್ನಿಜಾನ್ ಜನಾನ್ || ೧೧ ||

---

೮. ಸಪ್ತಲೋಕಗಳೂ, ಪಾತಾಳವೂ, ಅಖಿಲಬ್ರಹ್ಮಾಂಡವೂ ಪ್ರತಿಧ್ವನಿಯಾಯಿತು. ದಿಗ್ಗಜಗಳೂ, ನಕ್ಷತ್ರಗಳೂ ಚಲಿಸಿದವು. ಭೂಮಂಡಲವೂ ಮುರಿದುಬಿದ್ದಿತು.

೯. ಗೋಪಗೋಪಿಯರು ಭಯದಿಂದ ನಡುಗಿದರು. ಪ್ರಾಣವನ್ನುಳಿಸಿಕೊಂಡರೆ ಸಾಕೆಂದು ತಮ್ಮ ತಮ್ಮ ಮಕ್ಕಳನ್ನು ಕರೆದುಕೊಂಡು ಜಾಗ್ರತೆಯಾಗಿ ನಂದರಾಜನ ಅರಮನೆಯನ್ನು ಹೊಕ್ಕರು.

೧೦. ವ್ರಜಜನರೆಲ್ಲರೂ ನಂದಕುಮಾರನನ್ನೂ, ಬಲರಾಮನನ್ನೂ ನಮಸ್ಕರಿಸಿ ಭಯಾರ್ತರಾಗಿ ಪರಮಪ್ರಭುವಾದ ಶ್ರೀಕೃಷ್ಣನನ್ನು ಕುರಿತು ಇಂತೆಂದರು.

೧೧. ರಾಮನೇ, ಮಹಾಬಾಹುವಾದ ಶ್ರೀಕೃಷ್ಣನೇ, ನೀನು ವ್ರಜಕ್ಕೆಲ್ಲಾ ಒಡೆಯನು. ಇಂದ್ರನಿಂದ ಈಗ ನಿನ್ನ ಜನಗಳಾದ ನಮಗೆ ಕಷ್ಟವೊದಗಿರುವುದು. ನಮ್ಮನ್ನು ಕಾಪಾಡು.

ಹಿತ್ವೇಂದ್ರಯಾಗಂ ತ್ವದ್ವಾಕ್ಯಾತ್ಕೃತೋ ಗೋವರ್ಧನೋತ್ಸವಃ ।
ಅದ್ಯ ಶಕ್ರೇ ಪ್ರಕುಪಿತೇ ಕರ್ತವ್ಯಂ ಕಿಂ ವದಾಶು ನಃ　　॥ ೧೨ ॥

॥ ಶ್ರೀ ನಾರದ ಉವಾಚ ॥

ವ್ಯಾಕುಲಂ ಗೋಕುಲಂ ವೀಕ್ಷ್ಯ ಗೋಪೀಗೋಪಾಲಸಂಕುಲಂ ।
ಸವತ್ಸಕಂ ಗೋಕುಲಂ ಚ ಗೋಪಾನಾಹ ನಿರಾಕುಲಃ　　॥ ೧೩ ॥

॥ ಶ್ರೀ ಭಗವಾನುವಾಚ ॥

ಮಾ ಭೈಷ್ಟ ಯಾತಾದ್ರಿತಟಂ ಸರ್ವೈಃ ಪರಿಕರೈಸ್ಸಹ ।
ವಃ ಪೂಜಾ ಪ್ರಹೃತಾ ಯೇನ ಸ ರಕ್ಷಾಂ ಸಂವಿಧಾಸ್ಯತಿ　　॥ ೧೪ ॥

॥ ನಾರದ ಉವಾಚ ॥

ಇತ್ಯುಕ್ತ್ವಾ ಸ್ವಜನೈಸ್ಸಾರ್ಧಮೇತ್ಯ ಗೋವರ್ಧನಂ ಹರಿಃ ।
ಸಮುತ್ಪಾಟ್ಯ ದಧಾರಾದ್ರಿಂ ಹಸ್ತೇನೈಕೇನ ಲೀಲಯಾ　　॥ ೧೫ ॥

---

೧೨. ಇಂದ್ರಪೂಜೆಯನ್ನು ತ್ಯಜಿಸಿ ನಿನ್ನ ಮಾತಿನಂತೆ ನಾವು ಗೋವರ್ಧನೋತ್ಸವವನ್ನು ಮಾಡಿದೆವು. ಅದಕ್ಕೋಸ್ಕರವಾಗಿ ಈಗ ಇಂದ್ರನು ಕೋಪಿಸಿಕೊಂಡಿರುವನು. ನಾವೀಗ ಏನುಮಾಡಬೇಕು ? ಬೇಗ ಹೇಳೆನಲು,

೧೩. ಗೋಕುಲವೆಲ್ಲವೂ ವ್ಯಾಕುಲವಾಗಿರುವುದನ್ನೂ, ಗೋಪೀಗೋಪಾಲರು ದುಃಖಪಡುತ್ತಿರುವುದನ್ನೂ, ಹಸುಗಳನ್ನು ಬಿಟ್ಟು ಕರುಗಳು ದಿಕ್ಕಿಲ್ಲದೆ ತಿರುಗುತ್ತಿರುವುದನ್ನೂ ನೋಡಿ ಹರಿಯು ಸ್ವಲ್ಪವೂ ವ್ಯಾಕುಲವನ್ನು ಪಡದೆ ಅವರನ್ನು ಕುರಿತು ಹೇಳಿದನು.

೧೪. ಜನಗಳೇ, ಹೆದರಬೇಡಿರಿ. ಗೋವರ್ಧನಪರ್ವತದ ತಪ್ಪಲಿಗೆ ಎಲ್ಲಾ ಸಾಮಾನುಗಳೊಡನೆ ತೆರಳಿರಿ. ಯಾರು ನಿಮ್ಮ ಪೂಜೆಯನ್ನು ಸ್ವೀಕರಿಸಿದನೋ ಅವನೀಗ ನಿಮ್ಮನ್ನು ಕಾಪಾಡುವನು.

೧೫. ಹೀಗೆಂದು ಹೇಳಿ ಹರಿಯು ತನ್ನ ಜನರೊಡನೆ ಅದ್ರಿತಟಕ್ಕೆ ಹೋದನು. ಆ ಅದ್ರಿಯನ್ನು ಒಂದೇ ಕೈಯ್ಯಿಂದ ಅನಾಯಾಸವಾಗಿ ಎತ್ತಿಹಿಡಿದನು.

ಯಥೋಚ್ಚಲೀಂಧ್ರಂ ಶಿಶುರತ್ರಮೋ ಗಜಃ
ಸ್ವಪುಷ್ಕರೇಣೈವ ಚ ಪುಷ್ಕರಂ ಗಿರಿಂ ।
ಧೃತ್ವಾ ಬಭೌ ಶ್ರೀವ್ರಜರಾಜನಂದನಃ
ಕೃಪಾಕರೋಽಸೌ ಕರುಣಾಮಯಃ ಪ್ರಭುಃ ॥ ೧೬ ॥

ಅಥಾಹ ಗೋಪಾನ್ನಿಶತಾದ್ರಿಗರ್ತಂ
ಹೇ ತಾತ ಮಾತರ್ವ್ರಜವಲ್ಲಭೇಶಾಃ ।
ಸೋಪಸ್ಕರೈಃ ಸರ್ವಧನೈಶ್ಚ ಗೋಭಿ–
ರತ್ರೈವ ಶಕ್ರಸ್ಯ ಭಯಂ ನ ಕಿಂಚಿತ್ ॥ ೧೭ ॥

ಇತ್ಥಂ ಹರೇರ್ವಚಃ ಶ್ರುತ್ವಾ ಗೋಪಾ ಗೋಧನಸಂಯುತಾಃ ।
ಸಕುಟುಂಬೋಪಸ್ಕರೈಶ್ಚ ವಿವಿಶುಃ ಶ್ರೀಗಿರೇಸ್ತಲಂ ॥ ೧೮ ॥

ವಯಸ್ಯಾ ಬಾಲಕಾಸ್ಸರ್ವೇ ಕೃಷ್ಣೋಕ್ತಾಃ ಸಬಲಾ ನೃಪ ।
ಸ್ವಾನ್ ಸ್ವಾಂಶ್ಚ ಲಗುಡಾನದ್ರೇರವಷ್ಟಂಭಾನ್ ಪ್ರಚಕ್ರಿರೇ ॥ ೧೯ ॥

---

೧೬. ಮಗುವು ಆಟದ ಸಾಮಾನನ್ನು ಎತ್ತಿಹಿಡಿಯುವಂತೆಯೂ, ಆನೆಯು ತನ್ನ ಸೊಂಡಲಿನಿಂದ ಕಮಲವನ್ನು ಎತ್ತಿಹಿಡಿದಂತೆಯೂ, ಕೃಪಾಕರನೂ, ಕರುಣಾಮಯನೂ ಆದ ಆ ವ್ರಜರಾಜ ಕೃಷ್ಣನು ಗೋವರ್ಧನವನ್ನು ಎತ್ತಿಹಿಡಿದು ಪ್ರಕಾಶಿಸಿದನು.

೧೭. ಆಗ ಹರಿಯು ಗೋಪರನ್ನು ಕುರಿತು, ತಂದೆಯೇ, ತಾಯಿಯೇ, ಬಂಧುಗಳೇ, ಗೋಪಾಲಕರೇ, ನಿಮ್ಮ ನಿಮ್ಮ ಸಾಮಾನುಗಳೊಡನೆಯೂ, ಹಸುಗಳು, ಸರ್ವಧನಗಳೊಡನೆಯೂ, ಪರ್ವತದ ಕೆಳಕ್ಕೆ ಬಂದು ಸೇರಿರಿ. ಇಲ್ಲಿ ಇಂದ್ರನ ಭಯವು ಸ್ವಲ್ಪವೂ ಇಲ್ಲ.

೧೮. ಎನ್ನಲು ಅದನ್ನು ಕೇಳಿ ಗೋಪರೆಲ್ಲರೂ ಹಸುಗಳು. ಕುಟುಂಬ ಪರಿವಾರಸಮೇತರಾಗಿ ಪರ್ವತದ ಕೆಳಕ್ಕೆ ಬಂದು ಸೇರಿದರು.

೧೯. ಸ್ನೇಹಿತರೂ, ಬಾಲಕರೂ, ಎಲ್ಲರೂ ಬಂದು ಸೇರಿದರು. ಗೋಪಾಲಕರು ತಾವು ಕೈಲಿ ಹಿಡಿದುಕೊಂಡಿದ್ದ ದೊಣ್ಣೆಗಳನ್ನು ಪರ್ವತವು ಬಿದ್ದೀತೆಂದು ಹೆದರಿಕೆಯಿಂದ ಪರ್ವತಕ್ಕೆ ಊರುಕೋಲಾಗಿ ಕೊಟ್ಟರು.

ಜಲೌಘಮಾಗತಂ ವೀಕ್ಷ್ಯ ಭಗವಾನ್ ತದ್ಗಿರೇರಥಃ ।
ಸುದರ್ಶನಂ ತಥಾ ಶೇಷಂ ಮನಸಾಜ್ಞಾಂ ಚಕಾರ ಹ　　॥ ೨೦ ॥

ಕೋಟಿಸೂರ್ಯಪ್ರಭಂ ಚಾದ್ರೇರೂರ್ಧ್ವಂ ಚಕ್ರಂ ಸುದರ್ಶನಂ ।
ಧಾರಾಸಂಪಾತಮುಪಿಬದಗಸ್ತ್ಯ ಇವ ಮೈಥಿಲ　　॥ ೨೧ ॥

ಅಧೋಧಸ್ತಂ ಗಿರೇಃ ಶೇಷಃ ಕುಂಡಲೀಭೂತ ಆಸ್ಥಿತಃ ।
ರುರೋಧ ತಜ್ಜಲಂ ದೀರ್ಘಂ ಯಥಾವೇಲಂ ಮಹೋದಧಿಂ　　॥ ೨೨ ॥

ಸಪ್ತಾಹಂ ಸುಸ್ಥಿರಸ್ತಸ್ಥೌ ಗೋವರ್ಧನಧರೋ ಹರಿಃ ।
ಶ್ರೀಕೃಷ್ಣಚಂದ್ರಂ ಪಶ್ಯಂತಃ ಚಕೋರಾ ಇವ ತೇ ಸ್ಥಿತಾಃ　　॥ ೨೩ ॥

ಮತ್ತಮೈರಾವತಂ ನಾಗಂ ಸಮಾರುಹ್ಯ ಪುರಂದರಃ ।
ಸಸೈನ್ಯಃ ಕ್ರೋಧಸಂಯುಕ್ತೋ ವ್ರಜಮಂಡಲಮಾಯಯೌ　　॥ ೨೪ ॥

---

೨೦. ನೀರಿನ ಪ್ರವಾಹವು ಬರುತ್ತಿರುವುದನ್ನು ನೋಡಿ ಹರಿಯು ಅದನ್ನು ಅಡಗಿಸಲು ಸುದರ್ಶನಕ್ಕೂ, ಶೇಷನಿಗೂ, ಮನಸ್ಸಿನಿಂದಲೇ ಆಜ್ಞಾಪಿಸಿದನು.

೨೧. ಕೋಟಿಸೂರ್ಯಪ್ರಕಾಶಮಾನವಾದ ಆ ಸುದರ್ಶನಚಕ್ರವು ಪರ್ವತದ ಮೇಲ್ಭಾಗದಲ್ಲಿದ್ದು ಅಗಸ್ತ್ಯನು ಸಮುದ್ರಪಾನಮಾಡಿದಂತೆ ಅಲ್ಲಿದ್ದ ನೀರನ್ನೂ, ಬೀಳುತ್ತಿರುವ ಜಲಧಾರೆಗಳನ್ನೂ ಕುಡಿದುಬಿಟ್ಟಿತು.

೨೨. ಶೇಷನು ಪರ್ವತದ ಕೆಳಭಾಗದಲ್ಲಿ ಸುತ್ತಿಕೊಂಡು ಮಲಗಿ ಕೆಳಕ್ಕೆ ಬರತಕ್ಕ ನೀರಿನ ಪ್ರವಾಹವನ್ನು ದಡವು ಸಮುದ್ರವನ್ನು ತಡೆಯುವಂತೆ ತಡೆದನು.

೨೩. ಈ ರೀತಿ ಒಂದೇಸಮನೆ ಏಳುದಿನಗಳು ಮಳೆ ಸುರಿಯಿತು. ಹರಿಯು ಮಾತ್ರ ಗೋವರ್ಧನಪರ್ವತವನ್ನು ಎತ್ತಿಹಿಡಿದು ಏಳುದಿನಗಳವರೆಗೂ ಸುಖವಾಗಿ ನಿಂತಿದ್ದನು. ಗೋಪಿಗೋಪಾಲರು ಚಕೋರಪಕ್ಷಿಗಳಂತೆ ಶ್ರೀಕೃಷ್ಣಚಂದ್ರನನ್ನು ನೋಡುತ್ತಾ ಅದರಿಂದಲೇ ತೃಪ್ತರಾಗಿ ಇದ್ದರು.

೨೪. ಅದನ್ನು ನೋಡಿ ಇಂದ್ರನು ಮದಿಸಿದ ಐರಾವತವನ್ನು ಏರಿ ಸೈನ್ಯ ಸಮೇತನಾಗಿ ಅತಿಕೋಪಗೊಂಡು ಗೋಕುಲಕ್ಕೆ ಬಂದನು.

**ದೂರಾಚ್ಚಿಕ್ಷೇಪ ವಜ್ರಂ ಸ್ವಂ ನಂದಗೋಷ್ಠಜಿಘಾಂಸಯಾ ।
ಸ್ತಂಭಯಾಮಾಸ ಶಕ್ರಸ್ಯ ಸವಜ್ರಂ ಮಾಧವೋ ಭುಜಂ ॥ ೨೫ ॥**

**ಭಯಭೀತಸ್ತದಾ ಶಕ್ರಃ ಸಂವರ್ತಕಗಣೈಸ್ಸಹ ।
ದುದ್ರಾವ ಸಹಸಾ ದೇವೈರ್ಯಥೇಭಃ ಸಿಂಹತಾಡಿತಃ ॥ ೨೬ ॥**

**ತದೈವಾರ್ಕೋದಯೋ ಜಾತೋ ಗತಾ ಮೇಘಾ ಇತಸ್ತತಃ ।
ವಾತಾ ಉಪರತಾಃ ಸದ್ಯೋ ನದ್ಯಃ ಸ್ವಲ್ಪಜಲಾ ನೃಪ ॥ ೨೭ ॥**

**ವಿಪಂಕಂ ಭೂತಲಂ ಜಾತಂ ನಿರ್ಮಲಂ ಖಂ ಬಭೂವ ಹ ।
ಚತುಷ್ಪದಾಃ ಪಕ್ಷಿಣಶ್ಚ ಸುಖಮಾಪುಸ್ತತಸ್ತತಃ ॥ ೨೮ ॥**

**ಹರಿಣೋಕ್ತಾಸ್ತದಾ ಗೋಪಾ ನಿರ್ಯಯುರ್ಗಿರಿಗರ್ತತಃ ।
ಸ್ವಂ ಸ್ವಂ ಧನಂ ಗೋಧನಂ ಚ ಸಮಾದಾಯ ಶನೈಃ ಶನೈಃ ॥ ೨೯ ॥**

---

೨೫. ತನ್ನ ವಜ್ರಾಯುಧವನ್ನು ದೂರದಿಂದ ನಂದಗೋಕುಲದ ಮೇಲೆ ಎಸೆಯಲುದ್ಯುಕ್ತನಾದುದನ್ನು ನೋಡಿ ಹರಿಯು ವಜ್ರಾಯುಧಸಹಿತವಾದ ಅವನ ಕೈಯನ್ನು ಅಲ್ಲಿಯೇ ನಿಲ್ಲುವಂತೆ ಸ್ತಂಭಿಸಿದನು.

೨೬. ತನಗೀರೀತಿಯಾಗಲು ಇಂದ್ರನು ಸಂವರ್ತಕ ಮೇಘಗಳನ್ನು ಕರೆದು ಕೊಂಡು ದೇವತೆಗಳೊಡನೆ ಸಿಂಹದ ಭಯದಿಂದ ಆನೆಯು ಓಡುವಂತೆ ಓಡಿಹೋದನು.

೨೭. ಆಗ ಮೇಘಗಳು ಮರೆಯಾದವು. ಸೂರ್ಯೋದಯವಾಯಿತು. ವಾಯುವಿನ ವೇಗವು ನಿಂತಿತು. ನದಿಗಳ ಪ್ರವಾಹವು ತಗ್ಗಿ ನೀರು ಅಲ್ಪವಾಗಿ ಹರಿಯಿತು.

೨೮. ಭೂಮಿಯಲ್ಲಿ ಕೆಸರಡಗಿತು. ಆಕಾಶವು ನಿರ್ಮಲವಾಯಿತು. ಚತುಷ್ಪಾದ ಜಂತುಗಳೂ, ಪಕ್ಷಿಗಳೂ, ಸುಖವಾಗಿ ತಿರುಗಾಡಿದವು.

೨೯. ಶ್ರೀಕೃಷ್ಣನ ಮಾತಿನಂತೆ ಗೋಪರೆಲ್ಲರೂ ತಮ್ಮ ಗೋಧನಗಳೊಡನೆಯೂ ಸಾಮಾನುಗಳೊಡನೆಯೂ ಗಿರಿಯ ಕೆಳಭಾಗದಿಂದ ನಿಧಾನವಾಗಿ ತೆರಳಲು ಪ್ರಾರಂಭಿಸಿದರು.

ನಿರ್ಯಾತೇತಿ ವಯಸ್ಯಾಂಶ್ಚ ಪ್ರಾಹ ಗೋವರ್ಧನೋದ್ಧರಃ ।
ತೇ ತಮಾಹುಶ್ಚ ನಿರ್ಗಚ್ಛ ಧಾರಯಾಮೋಽದ್ರಿಮೋಜಸಾ ॥ ೩೦ ॥

ಇತಿ ನಾದಪರಾನ್ಗೋಪಾನ್ ಗೋವರ್ಧನಧರೋ ಹರಿಃ ।
ತದರ್ಧಂ ಚ ಗಿರೇರ್ಭಾರಂ ಪ್ರಾದತ್ತೇಭ್ಯೋ ಮಹಾಮನಾಃ ॥ ೩೧ ॥

ಪತಿತಾಸ್ತೇನ ಭಾರೇಣ ಗೋಪಬಾಲಾಶ್ಚ ನಿರ್ಬಲಾಃ । ॥ ೩೨ ॥

ಕರೇಣ ತಾನ್ ಸಮುತ್ಥಾಪ್ಯ ಸ್ವಸ್ಥಾನೇ ಪೂರ್ವವದ್ಗಿರಿಂ ।
ಸರ್ವೇಷಾಂ ಪಶ್ಯತಾಂ ಕೃಷ್ಣಃ ಸ್ಥಾಪಯಾಮಾಸ ಲೀಲಯಾ ॥ ೩೩ ॥

ತದೈವ ಗೋಪೀಗಣಗೋಪಮುಖ್ಯಾಃ
ಸಂಪೂಜ್ಯ ಕೃಷ್ಣಂ ನೃಪನಂದಸೂನುಂ ।
ಗಂಧಾಕ್ಷತಾದ್ಯೈರ್ದಧಿದುಗ್ಧಭೋಗೈ-
ರ್ಜ್ಞಾತ್ವಾ ಪರಂ ನೇಮುರತೀವ ಸರ್ವೇ ॥ ೩೪ ॥

---

೩೦. ಕೃಷ್ಣನು ಗೆಳೆಯರಾದ ಗೋಪಾಲಕರನ್ನು ಇನ್ನು ನೀವು ಇಲ್ಲಿಂದ ನಡೆಯಿರಿ ಎನ್ನಲು ಅವರು ಅವನನ್ನು ಕುರಿತು ನಾವೆಲ್ಲರೂ ಸೇರಿ ಈ ಗಿರಿಯನ್ನು ಎತ್ತಿ ಹಿಡಿಯುವೆವು ನೀನು ಹೋಗು ಎಂದರು.

೩೧. ಹೀಗೆನ್ನಲು ಗೋವರ್ಧನಧಾರಿಯು ತಾನು ಹೊತ್ತಿರುವ ಭಾರದಲ್ಲಿ ಅರ್ಧಭಾರವನ್ನು ಹೊರಲು ಅವರಿಗೆ ಕೊಟ್ಟನು.

೩೨-೩೩. ಅದರ ಭಾರದಿಂದ ಗೋಪರೆಲ್ಲರೂ ಬಿದ್ದುಬಿಟ್ಟರು. ಆಗ ಶ್ರೀಕೃಷ್ಣನು ಅವರನ್ನು ಕೈಹಿಡಿದೆಬ್ಬಿಸಿ ಪರ್ವತವನ್ನು ಅನಾಯಾಸವಾಗಿ ಎತ್ತಿ ಅದು ಇದ್ದ ಸ್ಥಳದಲ್ಲಿಯೇ ಅದನ್ನು ಸ್ಥಾಪಿಸಿದನು.

೩೪. ಅನಂತರ ಗೋಪೀಗೋಪಾಲರೆಲ್ಲರೂ ನಂದಕುಮಾರನನ್ನು ಗಂಧಾಕ್ಷತಾದಿಗಳಿಂದ ಪೂಜಿಸಿ ಮೊಸರು ಹಾಲುಗಳಿಂದ ಸಂತುಷ್ಟಿಪಡಿಸಿ ನಮಸ್ಕರಿಸಿದರು.

ನಂದೋ ಯಶೋದಾ ನೃಪ ರೋಹಿಣೀ ಚ
ಬಲಶ್ಚ ಸನ್ನಂದಮುಖಾಶ್ಚ ವೃದ್ಧಾಃ ।
ಆಲಿಂಗ್ಯ ಕೃಷ್ಣಂ ಪ್ರದಮುರ್ಧನಾನಿ
ಶುಭಾಶಿಷಾ ತಂ ಯುಯುಜುರ್ಘೃಣಾರ್ತಾಃ ॥ ೩೫ ॥

ಸಂಶ್ಲಾಘ್ಯ ತಂ ಗಾಯನವಾದತತ್ಪರಾ
ನೃತ್ಯಂತ ಆರಾನ್ನೃಪನಂದನಂದನಂ ।
ಆಜಗ್ಮುರೇವ ಸ್ವಗೃಹಾನ್ವ್ರಜೌಕಸೋ
ಹರಿಂ ಪುರಸ್ಕೃತ್ಯ ಮನೋರಥಂ ಗತಾಃ ॥ ೩೬ ॥

ತದೈವ ದೇವಾ ವವೃಷುಃ ಪ್ರಹರ್ಷಿತಾಃ
ಪುಷ್ಪೈಃ ಶುಭ್ರೈಃ ಸುಂದರನಂದನೋದ್ಭವೈಃ ।
ಜಗುರ್ಯಶಃ ಶ್ರೀಗಿರಿರಾಜಧಾರಿಣೋ
ಗಂಧರ್ವಮುಖ್ಯಾ ದಿವಿ ಸಿದ್ಧಸಂಘಾಃ ॥ ೩೭ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗಿರಿರಾಜಖಂಡೇ
ಗೋವರ್ಧನೋದ್ಧರಣಂ ನಾಮ ತೃತೀಯೋಽಧ್ಯಾಯಃ

---

೩೫. ನಂದ, ಯಶೋದೆ, ರೋಹಿಣಿ, ಬಲರಾಮ, ಸನ್ನಂದ ಮೊದಲಾದವರೂ, ಗೋಪಪ್ರಮುಖರೂ ಶ್ರೀಕೃಷ್ಣನನ್ನು ಆಲಂಗಿಸಿ ಅನೇಕ ಧನಗಳನ್ನು ಅರ್ಪಿಸಿ ಶುಭಾಶೀರ್ವಾದಗಳನ್ನು ಮಾಡಿದರು.

೩೬. ಗೋಪಬಾಲಕರೆಲ್ಲರೂ ನೃತ್ಯ, ಗೀತ ವಾದ್ಯಗಳನ್ನು ಮಾಡುತ್ತಾ ಶ್ರೀಕೃಷ್ಣನ ಸುತ್ತಲೂ ನೆರದು ಅವನನ್ನು ಹೊಗಳುತ್ತಾ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

೩೭. ದೇವತೆಗಳು ನಂದನವನದಲ್ಲಿದ್ದ ಪುಷ್ಪಗಳ ಮಳೆಗರೆದರು. ಗಂಧರ್ವರೂ, ಸಿದ್ಧರೂ ಗಿರಿಧಾರಿಯ ಗುಣಗಳನ್ನು ಹಾಡಿದರು. ಎಲ್ಲರೂ ಸಂತೋಷಪಟ್ಟರು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಗಿರಿರಾಜಖಂಡದಲ್ಲಿ ಗೋವರ್ಧನೋದ್ಧರಣವೆಂಬ ಮೂರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗಿರಿರಾಜಖಂಡೇ

ಚತುರ್ಥೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅಥ ದೇವಗಣೈಸ್ಸಾರ್ಧಂ ಶಕ್ರಸ್ತತ್ರ ಸಮಾಗತಃ ।
ಗತಮಾನೋ ಗಿರೌ ಕೃಷ್ಣಂ ರಹಸಿ ಪ್ರಣನಾಮ ಹ ॥ ೧ ॥

ದಶಾವತಾರೋ ಭಗವಾನ್ ತ್ವಮೇವ
ರಿರಿಕ್ಷಯಾ ಧರ್ಮಗವಾಂಶ್ರುತೀಶ್ಚ ।
ಅದ್ಯೈವ ಜಾತಃ ಪರಿಪೂರ್ಣದೇವಃ
ಕಂಸಾದಿದೈತ್ಯೇಂದ್ರವಿನಾಶನಾಯ ॥ ೨ ॥

ನಾಲ್ಕನೆಯ ಅಧ್ಯಾಯವು

೧. ನಾರದನು ಹೇಳಿದನು :—ಎಲೈ ಬಹುಲಾಶ್ವನೇ, ಕೇಳು. ಶ್ರೀಕೃಷ್ಣನ ಅದ್ಭುತವಾದ ವ್ಯವಹಾರವನ್ನು ನೋಡಿ ಇಂದ್ರನು ಕೋಪವನ್ನು ಬಿಟ್ಟು ದೇವಗಣಗಳೊಂದಿಗೆ ಗುಟ್ಟಾಗಿ ಬಂದು ಕೃಷ್ಣನನ್ನು ನಮಸ್ಕರಿಸಿ ಇಂತೆಂದನು.

೨. ಪರಮಾತ್ಮ, ದಶಾವತಾರವನ್ನು ಧರಿಸುವ ಭಗವಂತನು ನೀನು. ಇಂದು ಧರ್ಮವನ್ನೂ, ಹಸುಗಳನ್ನೂ ಶ್ರುತಿಗಳನ್ನೂ ರಕ್ಷಿಸಲು ಭೂಮಿಯಲ್ಲಿ ಅವತರಿಸಿರುವೆ. ಪರಿಪೂರ್ಣತಮನಾಗಿ ಕಂಸಾದಿ ರಾಕ್ಷಸರನ್ನು ಕೊಲ್ಲಲು ಹುಟ್ಟಿರುವೆ.

ತ್ವನ್ಮಾಯಯಾ ಮೋಹಿತಚಿತ್ತವೃತ್ತಿಂ
ಮದೋದ್ಧತಂ ಹೇಲನಭಾಜನಂ ಮಾಂ ।
ಪಿತೇವ ಪುತ್ರಂ ದ್ಯುಪತೇ ಕ್ಷಮಸ್ವ
ಪ್ರಸೀದ ದೇವೇಶ ಜಗನ್ನಿವಾಸ ॥ ೩ ॥

ಓಂ ನಮೋ ಗೋವರ್ಧನೋದ್ಧರಣಾಯ ಗೋಕುಲ ನಿವಾಸಾಯ ಗೋಪಾಲಾಯ ಗೋಪಾಲಪತಯೇ ಗೋಪೀಜನ ಭರ್ತ್ರೇ ಗಿರಿಜೋದ್ಧರ್ತ್ರೇ ಕರುಣಾನಿಧಯೇ ಜಗದ್ವಿಧಯೇ ಜಗನ್ಮಂಗಲಾಯ ಜಗನ್ನಿವಾಸಾಯ ಜಗನ್ಮೋಹನಾಯ ಕೋಟಿ ಮನ್ಮಥಮನ್ಮಥಾಯ ವೃಷಭಾನುಸುತಾವರಾಯ ಶ್ರೀನಂದ ರಾಜಕುಲಪ್ರದೀಪಾಯ ಶ್ರೀಕೃಷ್ಣಾಯ ಪರಿಪೂರ್ಣತಮಾಯ ತ್ವಸಂಖ್ಯಬ್ರಹ್ಮಾಂಡಪತಯೇ ಗೋಲೋಕಧಾಮಧಿಷಣಾಧಿ-ಪತಯೇ ಸ್ವಯಂ ಭಗವತೇ ಸಬಲಾಯ ನಮಸ್ತೇ ನಮಸ್ತೇ ॥

---

೩. ನಿನ್ನ ಮಾಯೆಯಿಂದ ನಾನು ಮೋಹಿತನಾಗಿ ನೀನು ಯಾರೆಂಬುದನ್ನು ಮರೆತಿದ್ದೆನು. ಮದೋದ್ಧತನಾಗಿ ಈ ರೀತಿ ವ್ಯವಹರಿಸಿದೆ. ಆದುದರಿಂದ ತಂದೆಯು ಮಕ್ಕಳನ್ನು ಕ್ಷಮಿಸುವಂತೆ ಕ್ಷಮಿಸು. ಜಗನ್ನಿವಾಸನೇ, ದೇವದೇವ, ನನಗೆ ಪ್ರಸನ್ನನಾಗು.

೪. ಗೋವರ್ಧನಧಾರಿಯೇ, ಗೋಕುಲನಿವಾಸಿಯೂ, ಗೋಪಾಲನೂ ಆದ ನಿನಗೆ ನಮಸ್ಕಾರವು. ಗೋಪಾಲರಿಗೆಲ್ಲಾ ಪ್ರಭುವು ನೀನು. ಗೋಪೀಜನರ ಪ್ರೀತಿಪಾತ್ರನು. ಕರುಣಾನಿಧಿಯೇ, ನಿನಗೆ ನಮಸ್ಕಾರವು. ಜಗನ್ನಿಯಾಮಕನೂ ಜಗನ್ಮಂಗಲದಾಯಕನೂ ಆದ ನಿನಗೆ ನಮಸ್ಕಾರವು. ಜಗನ್ನಿವಾಸನು ನೀನು. ಜಗತ್ತನ್ನೇ ಮೋಹಗೊಳಿಸುವವನು. ಕೋಟಿಮನ್ಮಥಲಾವಣ್ಯನು. ವೃಷಭಾನು ಸುತೆಯಾದ ರಾಧೆಯ ಪತಿಯು ನೀನು. ನಂದರಾಜನ ಕುಲಪ್ರದೀಪನಾದ ನಿನಗೆ ನಮಸ್ಕಾರವು. ಕೃಷ್ಣನೇ, ಪರಿಪೂರ್ಣತಮನು ನೀನು. ಅಸಂಖ್ಯಬ್ರಹ್ಮಾಂಡಗಳಿಗೆ ಅಧಿಪತಿಯು. ಗೋಲೋಕಕ್ಕೆ ರಾಜನು. ಎಲೈ, ಭಗವಂತನೇ, ಬಲರಾಮ ಸಹಿತನಾದ ನಿನಗೆ ನಮಸ್ಕಾರವು, ನಮಸ್ಕಾರವು ಎಂದು ಸ್ತೋತ್ರಮಾಡಿದನು.

|| ಶ್ರೀ ನಾರದ ಉವಾಚ ||

ಇತಿ ಶಕ್ರಕೃತಂ ಸ್ತೋತ್ರಂ ಪ್ರಾತರುತ್ಥಾಯ ಯಃ ಪಠೇತ್ ।
ಸರ್ವಸಿದ್ಧಿರ್ಭವೇತ್ತಸ್ಯ ಸಂಕಟಾನ್ನ ಭಯಂ ಭವೇತ್ || ೫ ||

ಇತಿ ಸ್ತುತ್ವಾ ಹರಿಂ ದೇವಂ ಸರ್ವೈರ್ದೇವಗಣೈಸ್ಸಹ ।
ಕೃತಾಂಜಲಿಪುಟೋ ಭೂತ್ವಾ ಪ್ರಣನಾಮ ಪುರಂದರಃ || ೬ ||

ಅಥ ಗೋವರ್ಧನೇ ರಮ್ಯೇ ಸುರಭಿರ್ಗೌಃ ಸಮುದ್ರಜಾ ।
ಸ್ನಾಪಯಾಮಾಸ ಗೋಪೇಶಂ ದುಗ್ಧಧಾರಾಭಿರಾತ್ಮನಃ || ೭ ||

ಶುಂಡಾದಂಡೈಶ್ಚತುರ್ಭಿಶ್ಚ ದ್ಯುಗಂಗಾಜಲಪೂರಿತೈಃ ।
ಶ್ರೀಕೃಷ್ಣಂ ಸ್ನಾಪಯಾಮಾಸ ಮತ್ತ ಐರಾವತೋ ಗಜಃ || ೮ ||

ಋಷಿಭಿಃ ಶ್ರುತಿಭಿಃ ಸರ್ವೈರ್ದೇವಗಂಧರ್ವಕಿನ್ನರಾಃ ।
ತುಷ್ಟುವುಸ್ತೇ ಹರಿಂ ರಾಜನ್ ಹರ್ಷಿತಾಃ ಪುಷ್ಪವರ್ಷಿಣಃ || ೯ ||

---

೫. ಎಲೈ ರಾಜನೇ, ಇಂದ್ರನು ಮಾಡಿದ ಈ ಸ್ತೋತ್ರವನ್ನು ಪ್ರತಿದಿನವೂ ಪ್ರಾತಃಕಾಲದಲ್ಲಿ ಯಾರು ಪಠಿಸುವರೋ ಅವರಿಗೆ ಸರ್ವಾಭೀಷ್ಟವೂ ಸಿದ್ಧಿಸುವುದು. ತೊಂದರೆಯ ಭಯವಿರುವುದಿಲ್ಲ.

೬. ಇಂದ್ರನು ಈ ರೀತಿ ಹರಿಯನ್ನು ಸ್ತುತಿಸಿ ಅಂಜಲಿಬದ್ಧನಾಗಿ ದೇವಗಣ ಗಳೊಂದಿಗೆ ಶ್ರೀಕೃಷ್ಣನಿಗೆ ಪ್ರಣಾಮಮಾಡಿದನು.

೭. ಸಮುದ್ರೋತ್ಪನ್ನವಾದ ಸುರಭಿ ಎಂಬ ಹಸುವು ಆ ರಮ್ಯವಾದ ಗೋವರ್ಧನಪರ್ವತದಲ್ಲಿ ತನ್ನ ಹಾಲಿನ ಧಾರೆಗಳಿಂದ ಗೋಪೇಶನಾದ ಶ್ರೀಕೃಷ್ಣನನ್ನು ಅಭಿಷೇಕಮಾಡಿದಳು.

೮. ಐರಾವತವು ತನ್ನ ನಾಲ್ಕು ಸೊಂಡಿಲುಗಳಿಂದಲೂ ಆಕಾಶಗಂಗೆಯ ನೀರನ್ನು ತುಂಬಿಕೊಂಡು ಶ್ರೀಕೃಷ್ಣನಿಗೆ ಅಭಿಷೇಕಮಾಡಿತು.

೯. ದೇವತೆಗಳೂ, ಗಂಧರ್ವರೂ, ಕಿನ್ನರರೂ, ಋಷಿಗಳೊಡನೆಯೂ ವೇದಗಳೊಡನೆಯೂ ಆ ಹರಿಯನ್ನು ಸ್ತುತಿಸಿದರು. ಸಂತೋಷದಿಂದ ಪುಷ್ಪವೃಷ್ಟಿ ಯನ್ನು ಕರೆದರು.

ಕೃಷ್ಣಾಭಿಷೇಕೇ ಸಂಜಾತೇ ಗಿರಿರ್ಗೋವರ್ಧನೋ ಮಹಾನ್ ।
ದ್ರವೀಭೂತೋಽವಹದ್ರಾಜನ್ ಹರ್ಷಾನಂದಾದಿತಸ್ತತಃ ॥ ೧೦ ॥

ಪ್ರಸನ್ನೋ ಭಗವಾನ್ ತಸ್ಮಿನ್ ಕೃತವಾನ್ ಹಸ್ತಪಂಕಜಂ ।
ತದ್ಧಸ್ತಚಿಹ್ನಮದ್ಯಾಪಿ ದೃಶ್ಯತೇ ತದ್ಗಿರೌ ನೃಪ ॥ ೧೧ ॥

ತತ್ತೀರ್ಥಂ ಚ ಪರಂ ಭೂತಂ ನರಾಣಾಂ ಪಾಪನಾಶನಂ ।
ತದೇವ ಪಾದಚಿಹ್ನಂ ಸ್ಯಾತ್ತತ್ತೀರ್ಥಂ ವಿದ್ಧಿ ಮೈಥಿಲ ॥ ೧೨ ॥

ಏತಾವತ್ತಸ್ಯ ತತ್ರೈವ ಪಾದಚಿಹ್ನಂ ಬಭೂವ ಹ ।
ಸುರಭೇಃ ಪಾದಚಿಹ್ನಾನಿ ಬಭೂವುಸ್ತತ್ರ ಮೈಥಿಲ ॥ ೧೩ ॥

ದ್ಯುಗಂಗಾಜಲಪಾತೇನ ಕೃಷ್ಣಸ್ನಾನೇನ ಮೈಥಿಲ ।
ತತ್ರೈವ ಮಾನಸೀ ಗಂಗಾ ಗಿರೌ ಜಾತಾಘನಾಶಿನೀ ॥ ೧೪ ॥

---

೧೦. ಕೃಷ್ಣನ ಅಭಿಷೇಕದಿಂದ ಅತ್ಯಾನಂದಪಟ್ಟ ಗೋವರ್ಧನಪರ್ವತವು ದ್ರವರೂಪವಾಗಿ ಹರಿಯತೊಡಗಿತು.

೧೧. ಅದರಿಂದ ಪ್ರಸನ್ನನಾದ ಹರಿಯು ಗಿರಿಯಮೇಲೆ ತನ್ನ ಹಸ್ತವನ್ನು ಊರಿದನು. ಮೈಥಿಲ, ಅದರ ಗುರುತು ಈಗಲೂ ಕಾಣಿಸುತ್ತಿರುವುದು.

೧೨. ಆರೀತಿ ಹರಿದ ನೀರು ತೀರ್ಥವಾಗಿ ಪರಿಣಮಿಸಿತು. ಅತಿಶ್ರೇಷ್ಠವಾದುದು. ಅದರ ಸಂಪರ್ಕದಿಂದ ಮನುಷ್ಯರ ಪಾಪಗಳು ನಾಶವಾಗುವುವು. ಆ ತೀರ್ಥಕ್ಕೆ ಪಾದಚಿಹ್ನೆ ಎಂದು ಹೆಸರಾಯಿತು.

೧೩. ಅಲ್ಲಿ ಶ್ರೀಹರಿಯು ಪಾದದ ಗುರುತೂ ಸುರಭಿಯ ಪಾದಗಳ ಗುರುತೂ ಇವೆ.

೧೪. ಆಕಾಶಗಂಗೆಯು ಗಿರಿಯಮೇಲೆ ಬಿದ್ದು ಅದರಲ್ಲಿ ಶ್ರೀಕೃಷ್ಣನು ಸ್ನಾನ ಮಾಡಿದುದರಿಂದ ಅಲ್ಲಿ ಮಾನಸೀಗಂಗೆಯು ಉಂಟಾದಳು. ಅದರ ಸ್ನಾನದಿಂದ ಪಾಪಗಳು ನಾಶವಾಗುವುವು.

ಸುರಭೇರ್ದುಗ್ಧಧಾರಾಭಿರ್ಗೋವಿಂದಸ್ನಾನತೋ ನೃಪ ।
ಜಾತೋ ಗೋವಿಂದಕುಂಡೋಽದ್ರೌ ಮಹಾಪಾಪಹರಃ ಪರಃ ॥ ೧೫ ॥

ಕದಾಚಿತ್ತಸ್ಮಿನ್ ದುಗ್ಧಸ್ಯ ಸ್ವಾದುತ್ವಂ ಪ್ರತಿಪದ್ಯತೇ ।
ತತ್ರ ಸ್ನಾತ್ವಾ ನರಃ ಸಾಕ್ಷಾದ್ಗೋವಿಂದಪದಮಾಪ್ನುಯಾತ್ ॥ ೧೬ ॥

ಪ್ರದಕ್ಷಿಣೀಕೃತ್ಯ ಹರಿಂ ಪ್ರಣಮ್ಯ
ದತ್ವಾ ಬಲಿಂ ತತ್ರ ಪುರಂದರಾದಯಃ ।
ಜಯಧ್ವನಿಂ ಕೃತ್ಯ ಸುಪುಷ್ಪವರ್ಷಿಣೋ
ಯಯುಃ ಸುರಾಃ ಸೌಖ್ಯಯುತಾಸ್ತ್ರಿವಿಷ್ಟಪಂ ॥ ೧೭ ॥

ಕೃಷ್ಣಾಭಿಷೇಕಸ್ಯ ಕಥಾಂ ಶೃಣೋತಿ ಯೋ
ದಶಾಶ್ವಮೇಧಾವಭೃಥಾಧಿಕಂ ಫಲಂ ।
ಪ್ರಾಪ್ನೋತಿ ರಾಜೇಂದ್ರ ಸ ಏವ ಭೂಯಸಃ
ಪರಂ ಪದಂ ಯಾತಿ ಪರಸ್ಯ ವೇಧಸಃ ॥ ೧೮ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗಿರಿರಾಜಖಂಡೇ
ಶ್ರೀಕೃಷ್ಣಾಭಿಷೇಕೋ ನಾಮ ಚತುರ್ಥೋಽಧ್ಯಾಯಃ

---

೧೫. ಸುರಭಿಹಸುವಿನ ಕ್ಷೀರಧಾರೆಗಳಿಂದ ಗೋವಿಂದನು ಸ್ನಾನಮಾಡಿದುದರಿಂದ ಅದು ಗೋವಿಂದ ಕುಂಡವೆಂಬ ತೀರ್ಥವಾಯಿತು. ಅದರಲ್ಲಿ ಸ್ನಾನ ಮಾಡಿದರೆ ಮಹಾಪಾತಕಗಳೆಲ್ಲಾ ನಾಶವಾಗುವುವು.

೧೬. ಕೆಲವು ವೇಳೆ ಆ ತೀರ್ಥವು ಹಾಲಿನಂತೆ ಅತಿರುಚಿಯಾಗಿರುವುದು. ಅಲ್ಲಿ ಸ್ನಾನಮಾಡಿದ ನರನು ಗೋವಿಂದನ ಪದವನ್ನು ಪಡೆಯುವನು.

೧೭. ಇಂದ್ರನೇ ಮೊದಲಾದ ದೇವತೆಗಳು ಹರಿಗೆ ಪ್ರದಕ್ಷಿಣೆನಮಸ್ಕಾರವನ್ನು ಮಾಡಿ ಕಾಣಿಕೆಯನ್ನು ಒಪ್ಪಿಸಿ ಜಯಜಯಾಕಾರವನ್ನು ಮಾಡುತ್ತಾ ಪುಷ್ಪವೃಷ್ಟಿಯನ್ನು ಕರೆದು ಆನಂದದಿಂದ ದೇವಲೋಕವನ್ನು ಸೇರಿದರು.

೧೮. ಎಲೈ ರಾಜನೇ, ಯಾವನು ಈ ಕೃಷ್ಣಾಭಿಷೇಕದ ಕಥೆಯನ್ನು ಕೇಳುವನೋ ಅವನು ಹತ್ತು ಅಶ್ವಮೇಧಯಾಗದ ಅವಭೃಥದ ಫಲವನ್ನು ಪಡೆಯುವನು, ಪರಮಪದವಾದ ಬ್ರಹ್ಮಪದವನ್ನು ಹೊಂದುವನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಗಿರಿರಾಜಖಂಡದಲ್ಲಿ ಶ್ರೀಕೃಷ್ಣನ ಅಭಿಷೇಕವೆಂಬ ನಾಲ್ಕನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗಿರಿರಾಜಖಂಡೇ

ಪಂಚಮೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಏಕದಾ ಸರ್ವಗೋಪಾಲಾ ಗೋಪ್ಯೋ ನಂದಸುತಸ್ಯ ತತ್ ।
ಅದ್ಭುತಂ ಚರಿತಂ ದೃಷ್ಟ್ವಾ ನಂದಮಾಹುರ್ಯಶೋದಯಂ ॥ ೧ ॥

॥ ಗೋಪಾ ಊಚುಃ ॥

ಹೇ ಗೋಪರಾಜ ತ್ವದ್ವಂಶೇ ಕೋಽಪಿ ಜಾತೋ ನ ಚಾದ್ರಿಧೃಕ್ ।
ನ ಕ್ಷಮಸ್ತ್ವಂ ಶಿಲಾಂ ಧರ್ತುಂ ಸಪ್ತಾಹಂ ಹೇ ಯಶೋದಯ ॥ ೨ ॥

ಐದನೆಯ ಅಧ್ಯಾಯವು

೧. ನಾರದನು ಹೇಳತೊಡಗಿದನು :—ಎಲೈ ಬಹುಲಾಶ್ವನೇ, ಕೇಳು. ಗೋಪಾಲಕರೆಲ್ಲರೂ ಕೃಷ್ಣನ ಅದ್ಭುತ ವ್ಯವಹಾರವನ್ನು ನೋಡಿ ಒಂದು ದಿವಸ ನಂದನ ಹತ್ತಿರಕ್ಕೆ ಬಂದು ಅವನನ್ನು ಕುರಿತು ಈ ರೀತಿ ಅಂದರು.

೨. ಎಲೈ ಗೋಪರಾಜನೇ, ನಿನ್ನ ವಂಶದಲ್ಲಿ ಪರ್ವತವನ್ನು ಎತ್ತುವಷ್ಟು ಸಮರ್ಥನಾದವನು ಇದುವರೆವಿಗೂ ಹುಟ್ಟಿರಲಿಲ್ಲ. ಅದರಲ್ಲೂ ಒಂದೇಸಮನೆ ಏಳು ದಿನಗಳು ಕಲ್ಲುಬಂಡೆಯನ್ನು ಎತ್ತಲು ಯಾರು ಸಮರ್ಥರು ?

ಕ್ವ ಸಪ್ತಹಾಯನೋ ಬಾಲಃ ಕ್ವಾದ್ರಿರಾಜಸ್ಯ ಧಾರಣಂ |
ತೇನ ನೋ ಜಾಯತೇ ಶಂಕಾ ತವ ಪುತ್ರೇ ಮಹಾಬಲೇ || ೩ ||

ಅಯಂ ಬಿಭ್ರದ್ಗಿರಿವರಂ ಕಮಲಂ ಗಜರಾಡಿವ |
ಉಚ್ಛಿಲೀಂಧ್ರಂ ಯಥಾ ಬಾಲೋ ಹಸ್ತೇನೈಕೇನ ಲೀಲಯಾ || ೪ ||

ಗೌರವರ್ಣಾ ಯಶೋದೇ ತ್ವಂ ನಂದ ತ್ವಂ ಗೌರವರ್ಣಧೃಕ್ |
ಅಯಂ ಜಾತಃ ಕೃಷ್ಣವರ್ಣ ಏತತ್ಕುಲವಿಲಕ್ಷಣಂ || ೫ ||

ಯದ್ವಾಸ್ತು ಕ್ಷತ್ರಿಯಾಣಾಂ ತು ಬಾಲ ಏತಾದೃಶೋ ಯಥಾ |
ಬಲಭದ್ರೇ ನ ದೋಷಃ ಸ್ಯಾಚ್ಚಂದ್ರವಂಶಸಮುದ್ಭವೇ || ೬ ||

---

೩. ಇದೆಂತಹ ಆಶ್ಚರ್ಯ ! ಆ ಏಳು ವರ್ಷದ ಹುಡುಗನೆಲ್ಲಿ, ಆ ಪರ್ವತರಾಜನೆಲ್ಲಿ. ಅಂತಹ ಪರ್ವತವನ್ನು ಎತ್ತಿಬಿಟ್ಟನಲ್ಲಾ ! ನಮಗೇನೋ ನಿನ್ನ ಮಗನ ವಿಷಯದಲ್ಲಿ ಅನುಮಾನವುಂಟಾಗಿರುವುದು. ಹುಡುಗನು ಇಂತಹ ಪರ್ವತವನ್ನು ಎತ್ತುವುದೆಂದರೇನು ?

೪. ಗಜರಾಜನು ಕಮಲವನ್ನು ಅನಾಯಾಸವಾಗಿ ಎತ್ತುವಂತೆಯೂ, ಆಟದ ಸಾಮಾನನ್ನು ಬಾಲನು ಒಂದೇ ಕೈಯಿಂದ ಎತ್ತುವಂತೆಯೂ ಶ್ರೀಕೃಷ್ಣನು ಆ ಪರ್ವತವನ್ನು ಒಂದೇಕೈಯ್ಯಿಂದ ಎತ್ತಿಬಿಟ್ಟನು.

೫. ಯಶೋದೆಯು ಬೆಳ್ಳಗಿರುವಳು. ನೀನೂ ಬೆಳ್ಳಗಿರುವೆ. ನಿಮ್ಮಿಂದ ಜನಿಸಿದ ಆ ಶ್ರೀಕೃಷ್ಣನು ಕಪ್ಪುಬಣ್ಣದವನು. ಇದಂತೂ ಕುಲವಿಲಕ್ಷಣವಾದುದು.

೬. ಅದೂ ಹೋಗಲಿ. ಕ್ಷತ್ರಿಯಕುಮಾರರಿಗೆ ಬಾಲ್ಯದಲ್ಲಿಯೇ ಇಂತಹ ಪರಾಕ್ರಮವಿರುವುದು ಸ್ವಭಾವವು. ಆದರೆ ಬಲರಾಮನೂ ಕ್ಷತ್ರಿಯಕುಮಾರನಲ್ಲವೇ, ಅವನೂ ಚಂದ್ರವಂಶಸಮುದ್ಭವನು. ಅವನಲ್ಲಿ ಇಂತ ದೋಷಗಳಾವುವೂ ಇಲ್ಲವು.

ಜಾತೇಸ್ತ್ಯಾಗಂ ಕರಿಷ್ಯಾಮೋ ಯದಿ ಸತ್ಯಂ ನ ಭಾಷಸೇ ।
ಗೋಪೇಷು ಚಾಸ್ಯ ವೋತ್ಪತ್ತಿಂ ವದ ಚೇನ್ನ ಕಲಿರ್ಭವೇತ್ ॥ ೭ ॥

॥ ಶ್ರೀ ನಾರದ ಉವಾಚ ॥

ಶ್ರುತ್ವಾ ಗೋಪಾಲವಚನಂ ಯಶೋದಾ ಭಯವಿಹ್ವಲಾ ।
ನಂದರಾಜಸ್ತದಾ ಪ್ರಾಹ ಗೋಪಾನ್ಕ್ರೋಧಪ್ರಪೂರಿತಾನ್ ॥ ೮ ॥

॥ ಶ್ರೀ ನಂದ ಉವಾಚ ॥

ಗರ್ಗಸ್ಯ ವಾಕ್ಯಂ ಹೇ ಗೋಪಾ ವದಿಷ್ಯಾಮಿ ಸಮಾಹಿತಃ ।
ಯೇನ ಗೋಪಗಣಾ ಯೂಯಂ ಭವತಾಶು ಗತವ್ಯಥಾಃ ॥ ೯ ॥

ಕಕಾರಃ ಕಮಲಾಕಾಂತೋ ಋಕಾರೋ ರಾಮ ಇತ್ಯಪಿ ।
ಷಕಾರಃ ಷಡ್ಗುಣಪತಿಃ ಶ್ವೇತದ್ವೀಪನಿವಾಸಕೃತ್ ॥ ೧೦ ॥

ಣಕಾರೋ ನಾರಸಿಂಹೋಽಯಮಕಾರೋ ಹ್ಯಕ್ಷರೋಗ್ನಿಭುಕ್ ।
ವಿಸರ್ಗೌ ಚ ತಥಾ ಹ್ಯೇತೌ ನರನಾರಾಯಣಾವೃಷೀ ॥ ೧೧ ॥

---

೭. ನೀನು ನಮ್ಮ ಶಂಕೆಯನ್ನು ಪರಿಹರಿಸು. ಸತ್ಯವನ್ನು ಹೇಳದಿದ್ದರೆ ನಿನ್ನ ಜಾತಿಯನ್ನೇ ಬಿಟ್ಟು ಹೋಗುವೆವು. ಗೋಪರಲ್ಲಿ ಇಂಥವನ ಉತ್ಪತ್ತಿಯು ಹೇಗಾಯಿತು ಎಂಬುದನ್ನು ತಿಳಿಸಿದರೆ ಯಾವ ಜಗಳವೂ ಇರುವುದಿಲ್ಲ ಎಂದರು.

೮. ಗೋಪಾಲಕರು ಕ್ರುದ್ಧರಾಗಿ ಈ ರೀತಿ ಹೇಳಿದುದನ್ನು ಕೇಳಿ ಯಶೋದೆಯು ಭಯಪಟ್ಟಳು. ಆಗ ನಂದನು ಆ ಗೋಪರನ್ನು ಸಮಾಧಾನಪಡಿಸಿದನು.

೯. ಎಲೈ ಗೋಪಾಲರೇ, ಗರ್ಗಾಚಾರ್ಯರು ಹೇಳಿದ ವಾಕ್ಯವನ್ನು ನಾನೀಗ ನಿಮಗೆ ತಿಳಿಸುವೆನು. ಅದನ್ನು ಕೇಳುವುದರಿಂದ ನೀವೆಲ್ಲರೂ ಮನಸ್ಸಿನ ವ್ಯಥೆಯನ್ನು ಬಿಡುವಿರಿ.

೧೦-೧೨. ಗೋಪರೇ, ಕೃಷ್ಣಃ ಎಂಬ ಪದದಲ್ಲಿ ಕಕಾರ, ಋಕಾರ, ಷಕಾರ, ಣಕಾರ ವಿಸರ್ಗಗಳೆರಡು ಎಂದು ಆರು ಅಕ್ಷರಗಳಿರುವುವು. ಕಕಾರವೆಂದರೆ ಕಮಲಾಕಾಂತನು. ಋಕಾರಕ್ಕೆ ರಾಮನೆಂದು ಹೆಸರು. ಷಕಾರವು ಷಡ್ಗುಣಗಳಿಗೆ ಅಧಿಪತಿ ಎಂಬರ್ಥವನ್ನು ಸೂಚಿಸುವುದು. ಮತ್ತು ಶ್ವೇತದ್ವೀಪನಿವಾಸಿ ಎಂಬರ್ಥವು. ಣಕಾರಕ್ಕೆ ನಾರಸಿಂಹನೆಂದರ್ಥ. ಅಕಾರಕ್ಕೆ ಅಕ್ಷರವೆಂದೂ ಅಗ್ನಿಭುಕ್ ಎಂದೂ

ಸಂಪ್ರಲೀನಾಶ್ಚ ಷಟ್ಪೂರ್ಣಾ ಯಸ್ಮಿನ್ ಶಬ್ದೇ ಮಹಾತ್ಮನಿ ।
ಪರಿಪೂರ್ಣತಮೋ ಸಾಕ್ಷಾತ್ತೇನ ಕೃಷ್ಣಃ ಪ್ರಕೀರ್ತಿತಃ ॥ ೧೨ ॥

ಶುಕ್ಲೋ ರಕ್ತಸ್ತಥಾ ಪೀತೋ ವರ್ಣೋಽಸ್ಯಾನುಯುಗಂ ಧೃತಃ ।
ದ್ವಾಪರಾಂತೇ ಕಲೇರಾದೌ ಬಾಲೋಽಯಂ ಕೃಷ್ಣತಾಂ ಗತಃ ॥ ೧೩ ॥

ತಸ್ಮಾತ್ಕೃಷ್ಣ ಇತಿ ಖ್ಯಾತೋ ನಾಮ್ನಾಯಂ ನಂದನಂದನಃ ।
ವಸವಶ್ಚೇಂದ್ರಿಯಾಣೀತಿ ತದ್ದೇವಾ ಚಿತ್ತ ಏವ ಹಿ ॥ ೧೪ ॥

ತಸ್ಮಿನ್ಯಶ್ಚೇಷ್ಟತೇ ಸೋಽಪಿ ವಾಸುದೇವ ಇತಿ ಸ್ಮೃತಃ ॥ ೧೫ ॥

ವೃಷಭಾನುಸುತಾ ರಾಧಾ ಯಾ ಜಾತಾ ಕೀರ್ತಿಮಂದಿರೇ ।
ತಸ್ಯಾಃ ಪತಿರಯಂ ಸಾಕ್ಷಾತ್ತೇನ ರಾಧಾಪತಿಃ ಸ್ಮೃತಃ ॥ ೧೬ ॥

ಅರ್ಥವು. ಎರಡು ವಿಸರ್ಗಗಳಿಗೆ ನರನಾರಾಯಣಋಷಿಗಳೆಂದರ್ಥವು. ಈ ರೀತಿಯಾಗಿ ಕೃಷ್ಣಃ ಎಂಬ ಶಬ್ದದಲ್ಲಿ ಆರು ವಿಷಯಗಳು ಲೀನವಾಗಿರುವುವು. ಅದು ಪರಿಪೂರ್ಣತಮವಾದುದು. ಆದುದರಿಂದ ಅವನಿಗೆ ಶ್ರೀಕೃಷ್ಣನೆಂದು ಹೆಸರಾಯಿತು.

೧೩. ಪ್ರತಿಯುಗದಲ್ಲಿಯೂ ಹರಿಯ ವರ್ಣವು, ಕೃತಯುಗದಲ್ಲಿ ಬಿಳುಪಾಗಿಯೂ, ತ್ರೇತಾಯುಗದಲ್ಲಿ ಕೆಂಪಾಗಿಯೂ, ದ್ವಾಪರದಲ್ಲಿ ಹಳದಿಯಾಗಿಯೂ ಇರುವುದು. ಈಗ ದ್ವಾಪರದ ಕೊನೆಯ ಮತ್ತು ಕಲಿಯುಗದ ಆದಿಯಲ್ಲಿ ಹುಟ್ಟಿರುವ ಇವನ ಬಣ್ಣವು ಕಪ್ಪಾದುದು.

೧೪. ಆದುದರಿಂದಲೂ ಈ ನಂದಕುಮಾರನಿಗೆ ಕೃಷ್ಣನೆಂದು ಹೆಸರು ಬಂದಿದೆ. ಅಷ್ಟವಸುಗಳೇ ಅವನ ಇಂದ್ರಿಯಗಳು. ತದಧಿದೇವತೆಗಳೇ ಅವನ ಮನಸ್ಸು.

೧೫-೧೬. ಆ ವಸುಗಳು ಇವನಲ್ಲಿ ಇರುವುದರಿಂದಲೂ, ಆ ದೇವತೆಗಳು ಚಿತ್ತಸ್ವರೂಪವಾಗಿರುವುದರಿಂದಲೂ ಇವನಿಗೆ ವಾಸುದೇವನೆಂದು ಹೆಸರಾಯಿತು. ಕೀರ್ತಿಮಂದಿರದಲ್ಲಿ ಹುಟ್ಟಿರುವ ವೃಷಭಾನುವಿನ ಮಗಳಾದ ರಾಧೆಯು ಇವನಿಗೆ ಪತ್ನಿಯು. ಆದುದರಿಂದ ಇವನಿಗೆ ರಾಧಾಪತಿ ಎಂದು ಹೆಸರಾಯಿತು.

ಪರಿಪೂರ್ಣತಮಃ ಸಾಕ್ಷಾಚ್ಛ್ರೀಕೃಷ್ಣೋ ಭಗವಾನ್ ಸ್ವಯಂ ।
ಅಸಂಖ್ಯಬ್ರಹ್ಮಾಂಡಪತಿಃ ಗೋಲೋಕೇ ಧಾಮ್ನಿ ರಾಜತೇ ॥ ೧೭ ॥

ಸೋಽಯಂ ತವ ಶಿಶುರ್ಜಾತೋ ಭಾರಾವತರಣಾಯ ಚ ।
ಕಂಸಾದೀನಾಂ ವಧಾರ್ಥಾಯ ಭಕ್ತಾನಾಂ ಪಾಲನಾಯ ಚ ॥ ೧೮ ॥

ಅನಂತಾನ್ಯಸ್ಯ ನಾಮಾನಿ ವೇದಗುಹ್ಯಾನಿ ಭಾರತ ।
ಲೀಲಾಭಿಶ್ಚ ಭವಿಷ್ಯಂತಿ ತತ್ಕರ್ಮಸು ನ ವಿಸ್ಮಯಃ ॥ ೧೯ ॥

ಇತಿ ಶ್ರುತ್ವಾತ್ಮಜೇ ಗೋಪಾಃ ಸಂದೇಹಂ ನ ಕರೋಮ್ಯಹಂ ।
ವೇದವಾಕ್ಯಂ ಬ್ರಹ್ಮವಚಃ ಪ್ರಮಾಣಂ ಹಿ ಮಹೀತಲೇ ॥ ೨೦ ॥

---

೧೭. ಅವನು ಪರಿಪೂರ್ಣತಮನು. ಭಗವಂತನು. ಅಸಂಖ್ಯವಾದ ಬ್ರಹ್ಮಾಂಡಗಳಿಗೆಲ್ಲಾ ಅಧಿಪತಿಯು. ಇಂತಹ ಶ್ರೀಕೃಷ್ಣನು ಗೋಲೋಕದಲ್ಲಿ ಪ್ರಕಾಶಿಸುತ್ತಿರುವನು.

೧೮. ಅವನೀಗ ನಿನಗೆ ಮಗನಾಗಿ ಹುಟ್ಟಿರುವನು. ಕಂಸನೇ ಮೊದಲಾದ ರಾಕ್ಷಸರನ್ನು ಕೊಂದು ಭೂಭಾರವನ್ನು ನಾಶಮಾಡಲೂ, ಭಕ್ತರನ್ನು ಸಂರಕ್ಷಿಸಲೂ ಅವನ ಉತ್ಪತ್ತಿಯಾಗಿರುವುದು.

೧೯. ಅವನಿಗೆ ಅನಂತವಾದ ಹೆಸರುಗಳಿರುವುವು. ಅವನು ಮಾಡತಕ್ಕ ಕೆಲಸಗಳೆಲ್ಲವೂ ಅವನ ಲೀಲೆಯಿಂದ ನಡೆಯುವುವು. ಆದುದರಿಂದ ಅವನ ಅದ್ಭುತ ಕರ್ಮಗಳನ್ನು ನೋಡಿ ವಿಸ್ಮಯವನ್ನು ಹೊಂದಬೇಕಾದುದೇನೂ ಇಲ್ಲ.

೨೦. ಎಲೈ ಗೋಪರೇ, ಈ ರೀತಿ ಗರ್ಗಮುನಿಯು ಹೇಳಿದುದರಿಂದ ನನ್ನ ಸಂದೇಹವೆಲ್ಲಾ ದೂರವಾಯಿತು. ಇದ್ದ ಸಂಶಯವನ್ನು ನಾನೂ ಬಿಟ್ಟುಬಿಟ್ಟೆನು. ವೇದವಾಕ್ಯಗಳೂ, ಬ್ರಾಹ್ಮಣರವಚನವೂ, ಸತ್ಪ್ರಮಾಣಗಳಲ್ಲವೇ! ಆದುದರಿಂದ ಗರ್ಗಮುನಿಯ ಮಾತು ಪ್ರಮಾಣಗಳು. ಅದನ್ನು ನಂಬಲೇ ಬೇಕು. ಎನ್ನಲು,

॥ ಗೋಪಾ ಊಚುಃ ॥

ಯದ್ಯಾಗತಸ್ತವ ಗೃಹೇ ಗರ್ಗಾಚಾರ್ಯೋ ಮಹಾಮುನಿಃ ।
ತತ್ಕ್ಷಣೇ ನಾಮಕರಣೇ ನಾಹೂತಾ ಜ್ಞಾತಯಸ್ತ್ವಯಾ ॥ ೨೧ ॥

ಸ್ವಗೃಹೇ ನಾಮಕರಣಂ ಭವತಾ ಚ ಕೃತಂ ಶಿಶೋಃ ।
ತವ ಚೈತಾದೃಶೀ ರೀತಿರ್ಗುಪ್ತಂ ಸರ್ವಂ ಗೃಹೇಽಪಿ ಯತ್ ॥ ೨೨ ॥

॥ ಶ್ರೀ ನಾರದ ಉವಾಚ ॥

ಏವಂ ವದಂತಸ್ತೇ ಗೋಪಾ ನಿರ್ಗತಾ ನಂದಮಂದಿರಾತ್ ।
ವೃಷಭಾನುವರಂ ಜಗ್ಮುಃ ಕ್ರೋಧಪೂರಿತವಿಗ್ರಹಾಃ ॥ ೨೩ ॥

ವೃಷಭಾನುವರಂ ಸಾಕ್ಷಾನ್ನಂದರಾಜಸಹಾಯಕಂ ।
ಪ್ರಾಹುರ್ಗೋಪಗಣಾಸ್ಸರ್ವೇ ಜ್ಞಾತೇರ್ಮದಸಮನ್ವಿತಾಃ ॥ ೨೪ ॥

---

೨೧. ಅದನ್ನು ಕೇಳಿ ಗೋಪರಿಂತೆಂದರು :— ಅದೇನೋ ಸರಿಯಾದುದು. ಆದರೆ. ನೀನು ನಿನ್ನ ಮಗನ ನಾಮಕರಣಕ್ಕೋಸ್ಕರವಾಗಿ ಗರ್ಗಮಹಾಮುನಿಯನ್ನು ಕರೆಸಿದೆಯಲ್ಲವೇ ? ಆಗ ನಿನ್ನ ಜ್ಞಾತಿಗಳನ್ನೇಕೆ ಕರೆಸಲಿಲ್ಲ ?

೨೨. ನಿನ್ನ ಮನೆಯಲ್ಲಿ ನೀನು ಗುಟ್ಟಾಗಿ ನಾಮಕರಣವನ್ನು ಮಾಡಿಕೊಂಡು ಬಿಟ್ಟಿರುವೆ. ಇಂತಹ ಗೂಢವಾದ ರೀತಿ ಏತಕ್ಕೆ ? ಇವೆಲ್ಲಾ ಸರಿಯಾಗಿ ಕಾಣಿಸುತ್ತಿಲ್ಲ.

೨೩. ಎಂದು ಹೇಳಿ ಗೋಪರೆಲ್ಲರೂ ಅತಿಕುಪಿತರಾಗಿ ನಂದನರಮನೆಯಿಂದ ಹೊರಟು ವೃಷಭಾನುವಿನ ಹತ್ತಿರಕ್ಕೆ ಹೋದರು.

೨೪. ವೃಷಭಾನುವರನು ನಂದರಾಜನ ಸಹಾಯಕನು. ಗೋಪರೆಲ್ಲಾ ಹೋಗಿ ಜ್ಞಾತಿವೈರದಿಂದ ಕೋಪಗೊಂಡು ಇಂತೆಂದರು.

॥ ಗೋಪಾ ಊಚುಃ ॥

ವೃಷಭಾನುವರಂ ತ್ವಂ ವೈ ಜ್ಞಾತಿಮುಖ್ಯೋ ಮಹಾಮನಾಃ ।
ನಂದರಾಜಂ ತ್ಯಜ ಜ್ಞಾತೇರ್ಹೇ ಗೋಪೇಶ್ವರ ಭೂಪತೇ ॥ ೨೫ ॥

॥ ವೃಷಭಾನುರುವಾಚ ॥

ಕೋ ದೋಷೋ ನಂದರಾಜಸ್ಯ ಜ್ಞಾತೇಸ್ತಂ ಸಂತ್ಯಜಾಮ್ಯಹಂ ।
ಗೋಪೇಷ್ಟೋ ಜ್ಞಾತಿಮುಕುಟೋ ನಂದರಾಜೋ ಮಮ ಪ್ರಿಯಃ ॥ ೨೬ ॥

॥ ಗೋಪಾ ಊಚುಃ ॥

ನ ಚೇತ್ತ್ಯಜಸಿ ತಂ ರಾಜಂ ತ್ಯಜಾಮಸ್ತ್ವಾಂ ವ್ರಜೌಕಸಃ ।
ತ್ವದ್ಗೃಹೇ ವರ್ಧಿತಾ ಕನ್ಯೋದ್ವಾಹಯೋಗ್ಯಾ ಮಹಾಮುನೇ ॥ ೨೭ ॥

ಭವತಾ ಜ್ಞಾತಿಮುಖ್ಯೇನ ಸಂಪದುನ್ಮದಶಾಲಿನಾ ।
ನ ದತ್ತಾ ವರಮುಖ್ಯಾಯ ಕಲುಷಂ ತವ ವಿದ್ಯತೇ ॥ ೨೮ ॥

---

೨೫. ಎಲೈ ರಾಜನೇ, ನೀನು ವೃಷಭಾನುಗಳಲ್ಲಿ ಮುಖ್ಯನಾದವನು. ಜ್ಞಾತಿಗಳಲ್ಲಿ ಪ್ರಮುಖನು. ಗೌರವಶಾಲಿಯು. ನೀನೀಗ ಜ್ಞಾತಿಯಾದ ನಂದರಾಜನನ್ನು ಬಿಟ್ಟುಬಿಡಬೇಕು.

೨೬. ಎಂದು ಹೇಳಲು, ಅದನ್ನು ಕೇಳಿ ವೃಷಭಾನುವು :—ಎಲೈ ಗೋಪರೇ, ನಾನವನನ್ನು ಬಿಡಲು ಅವನಲ್ಲಿರುವ ದೋಷವೇನು ತಿಳಿಸಿ. ಅವನು ಗೋಪರಿಗೆ ಪ್ರಿಯನಾದವನು. ಜ್ಞಾನಿಗಳಲ್ಲಿ ಶ್ರೇಷ್ಠನಾದವನು. ಎಲ್ಲಕ್ಕಿಂತಲೂ ನನಗೆ ಬೇಕಾದವನು. ಎನ್ನಲು,

೨೭. ಆಗ ಗೋಪರು ಕೋಪದಿಂದ :—ಎಲೈ, ನೀನು ಅವನನ್ನು ಬಿಡದಿದ್ದರೆ ಗೋಕುಲವಾಸಿಗಳಾದ ನಾವೆಲ್ಲರೂ ನಿನ್ನನ್ನು ಬಿಟ್ಟುಬಿಡುವೆವು. ನಿನ್ನ ಮನೆಯಲ್ಲಿ ಈಗ ನಿನ್ನ ಮಗಳು ಮದುವೆಗೆ ಯೋಗ್ಯಳಾಗಿರುವಳು. ಈಗವಳನ್ನು ಕೃಷ್ಣನಿಗೆ ಕೊಡಬೇಕೆಂದಿರುವೆ.

೨೮. ನೀನೂ ಜ್ಞಾತಿಯಂತೆಯೇ ಆಗಿರುವೆ. ನಿನಗೆ ಸಂಪತ್ತು ಅತಿಯಾಗಿ ಮದಶಾಲಿಯಾಗಿರುವೆ. ಬೇರೆ ವರನಿಗೆ ನೀನು ಕೊಡದೆ ಅವನಿಗೇ ಕೊಟ್ಟರೆ ನಿನ್ನ ತಪ್ಪು ಪೂರ್ಣವಾಗುವುದು. ನೀನು ದೋಷಿಯಾಗುವೆ.

ಅದ್ಯ ತ್ವಾಂ ಜ್ಞಾತಿಸಂಭ್ರಷ್ಟಂ ಪೃಥಕ್ ಮನ್ಯಾಮಹೇ ನೃಪ ।
ನ ಚೇಚ್ಛೀಘ್ರಂ ನಂದರಾಜಂ ತ್ಯಜ ತ್ಯಜ ಮಹಾಮತೇ　　　　॥ ೨೯ ॥

॥ ವೃಷಭಾನುರುವಾಚ ॥

ಗರ್ಗಸ್ಯ ವಾಕ್ಯಂ ಹೇ ಗೋಪಾ ವದಿಷ್ಯಾಮಿ ಸಮಾಹಿತಃ ।
ಯೇನ ಗೋಪಗಣಾ ಯೂಯಂ ಭವತಾಶು ಗತವ್ಯಥಾಃ　　　　॥ ೩೦ ॥

ಅಸಂಖ್ಯಬ್ರಹ್ಮಾಂಡಪತಿಃ ಗೋಲೋಕೇಶಃ ಪರಾತ್ಪರಃ ।
ತಸ್ಮಾತ್ಪರೋ ವರೋ ನಾಸ್ತಿ ಜಾತೋ ನಂದಗೃಹೇ ಶಿಶುಃ　　　　॥ ೩೧ ॥

ಭುವೋ ಭಾರಾವತಾರಾಯ ಕಂಸಾದೀನಾಂ ವಧಾಯ ಚ ।
ಬ್ರಹ್ಮಣಾ ಪ್ರಾರ್ಥಿತಃ ಕೃಷ್ಣೋ ಬಭೂವ ಜಗತೀತಲೇ　　　　॥ ೩೨ ॥

---

೨೯. ಇಂದಿನಿಂದಲೇ ನಿನ್ನನ್ನು ಜ್ಞಾತಿಗಳಿಂದ ಬಿಡಲ್ಪಟ್ಟಿರುವನೆಂದು ತಿಳಿದುಕೊಳ್ಳುತ್ತೇವೆ. ಇದು ಬೇಡವೆಂಬ ಪಕ್ಷಕ್ಕೆ ಆದಷ್ಟು ಜಾಗ್ರತೆಯಾಗಿ ನಂದರಾಜನನ್ನು ಬಿಟ್ಟುಬಿಡು.

೩೦. ಎನಲು, ವೃಷಭಾನುವಿಂತೆಂದನು. ಎಲೈ ಗೋಪರೇ, ಸ್ವಲ್ಪ ಸಮಾಧಾನಚಿತ್ತರಾಗಿರಿ. ಗರ್ಗಮುನಿಯು ಹೇಳಿದ ವಿಷಯವನ್ನು ನಿಮಗೆ ತಿಳಿಸುವೆನು. ಅದನ್ನು ಕೇಳಿದರೆ ನಿಮ್ಮ ಸಂಶಯವೆಲ್ಲ ಜಾಗ್ರತೆಯಾಗಿ ನಿವೃತ್ತಿಯಾಗುವುದು.

೩೧. ಶ್ರೀಕೃಷ್ಣನು ಸಾಮಾನ್ಯಮನುಷ್ಯನೆಂದು ಭಾವಿಸಬೇಡಿ. ಅವನು ಅಸಂಖ್ಯಬ್ರಹ್ಮಾಂಡಗಳಿಗೂ ಅಧಿಪತಿಯು. ಗೋಲೋಕಾಧಿಪತಿಯು. ಪರಾತ್ಪರನು. ಅವನಿಗಿಂತಲೂ ದೊಡ್ಡವನೂ, ಶ್ರೇಷ್ಠನೂ ಮತ್ತಾರೂ ಇಲ್ಲವು. ಅವನೀಗ ಶಿಶುರೂಪದಿಂದ ನಂದನ ಮನೆಯಲ್ಲಿ ಹುಟ್ಟಿರುವನು.

೩೨. ಕಂಸಾದಿದುಷ್ಟರನ್ನು ನಾಶಮಾಡಿ ಭೂಮಿಯ ಭಾರವನ್ನು ಇಳುಹಲು ಬ್ರಹ್ಮನ ಪ್ರಾರ್ಥನೆಯಂತೆ ಭೂಮಿಯಲ್ಲಿ ಅವತರಿಸಿರುವನು.

ಶ್ರೀಕೃಷ್ಣಪಟ್ಟರಾಜ್ಞೀ ಯಾ ಗೋಲೋಕೇ ರಾಧಿಕಾಭಿಧಾ ।
ತ್ವದ್ಗೇಹೇ ಸಾಪಿ ಸಂಜಾತಾ ತ್ವಂ ನ ಜಾನಾಸಿ ತಾಂ ಪರಾ ॥ ೩೩ ॥

ಅಹಂ ನ ಕಾರಯಿಷ್ಯಾಮಿ ವಿವಾಹಮನಯೋರ್ನೃಪ ।
ತಯೋರ್ವಿವಾಹೋ ಭವಿತಾ ಭಾಂಡೀರೇ ಯಮುನಾತಟೇ ॥ ೩೪ ॥

ವೃಂದಾವನಸಮೀಪೇ ಚ ನಿರ್ಜನೇ ಸುಂದರಸ್ಥಳೇ ।
ಪರಮೇಷ್ಠೀ ಸಮಾಗತ್ಯ ವಿವಾಹಂ ಕಾರಯಿಷ್ಯತಿ ॥ ೩೫ ॥

ತಸ್ಮಾದ್ರಾಧಾಂ ಗೋಪವರ ವಿದ್ಧ್ಯರ್ಧಾಂಗೀಂ ಪರಸ್ಯ ಚ ।
ಲೋಕಚೂಡಾಮಣೇಃ ಸಾಕ್ಷಾದ್ರಾಜ್ಞೀಂ ಗೋಲೋಕಮಂದಿರೇ ॥ ೩೬ ॥

ಯೂಯಂ ಸರ್ವೇಽಪಿ ಗೋಪಾಲಾ ಗೋಲೋಕಾದಾಗತಾ ಭುವಿ ।
ತಥಾ ಗೋಪೀಗಣಾ ಗಾವೋ ಗೋಕುಲೇ ರಾಧಿಕೇಚ್ಛಯಾ ॥ ೩೭ ॥

---

೩೩. ಶ್ರೀಕೃಷ್ಣನ ಪಟ್ಟಮಹಿಷಿಯು ರಾಧಿಕಾ ಎಂಬುವಳು. ಅವಳು ಗೋಲೋಕದಲ್ಲಿ ನಿನ್ನ (ವೃಷಭಾನುವಿನ) ಮನೆಯಲ್ಲಿ ಹುಟ್ಟಿರುವಳು. ಅವಳು ಪರಮಪವಿತ್ರಳು. ಅವಳನ್ನು ನೀನು ಅರಿತಿಲ್ಲ.

೩೪-೩೫. ಅವರಿಬ್ಬರ ಮದುವೆಯನ್ನು ನಾನು ಮಾಡುವುದಿಲ್ಲ. ಅದನ್ನು ಸಾಕ್ಷಾತ್ ಪರಬ್ರಹ್ಮನೇ ನೆರವೇರಿಸುವನು. ವಿವಾಹವು ಭಾಂಡೀರಪ್ರದೇಶದ ಯಮುನೆಯ ದಡದಲ್ಲಿರುವ ಸುಂದರವೂ ನಿರ್ಜನವೂ ಆದ ವೃಂದಾವನದ ಸಮೀಪದಲ್ಲಿ ನಡೆಯುವುದು.

೩೬. ಆದುದರಿಂದ ಎಲೈ ಗೋಪವರನೇ, ರಾಧೆಯನ್ನು ಲೋಕಚೂಡಾಮಣಿಯೂ, ಪರಾತ್ಪರನೂ ಆದ ಕೃಷ್ಣನ ಅರ್ಧಾಂಗಿ ಎಂದು ತಿಳಿ.

೩೭. ಗೋಪಾಲರಾದ ನೀವೆಲ್ಲರೂ ಗೋಲೋಕದಿಂದ ಬಂದವರು. ಗೋಪಿಯರೂ, ಹಸುಗಳೂ ರಾಧೆಯ ಇಚ್ಛೆಯಂತೆ ಇಲ್ಲಿ ಅವತರಿಸಿರುವರು.

ಏವಮುಕ್ತ್ವಾ ಗತೇ ಸಾಕ್ಷಾದ್ಗರ್ಗಾಚಾರ್ಯೇ ಮಹಾಮುನೌ ।
ತದ್ದಿನಾದಥ ರಾಧಾಯಾಂ ಸಂದೇಹಂ ನ ಕರೋಮ್ಯಹಂ ॥ ೩೮ ॥

ವೇದವಾಕ್ಯಂ ಬ್ರಹ್ಮವಚಃ ಪ್ರಮಾಣಂ ಹಿ ಮಹೀತಲೇ ।
ಇತಿ ವಃ ಕಥಿತಂ ಗೋಪಾಃ ಕಿಂ ಭೂಯಃ ಶ್ರೋತುಮಿಚ್ಛಥ ॥ ೩೯ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗಿರಿರಾಜಖಂಡೇ ಗೋಪವಿವಾದೋ ನಾಮ ಪಂಚಮೋಽಧ್ಯಾಯಃ

---

೩೮. ಗರ್ಗಮಹಾಮುನಿಯು ಹೀಗೆಂದು ಹೇಳಿದನು. ಅಂದಿನಿಂದ ನಾನು ರಾಧೆಯ ವಿಷಯದಲ್ಲಿ ಸಂಶಯವನ್ನೇ ಬಿಟ್ಟಿರುವೆನು.

೩೯. ವೇದವಾಕ್ಯವೂ, ಬ್ರಾಹ್ಮಣರ ಮಾತೂ ಜಗತ್ತಿನಲ್ಲಿ ಸತ್ಪ್ರಮಾಣಗಳು. ಆದುದರಿಂದ ಗರ್ಗಮುನಿಯ ಮಾತು ನಿಜವಾದುದು. ಗೋಪರೇ, ಇಷ್ಟು ವಿಷಯವನ್ನು ತಿಳಿಸಿರುವೆನು. ಮತ್ತೇನನ್ನು ಕೇಳಬೇಕೆಂದಿರುವಿರಿ ? ಎಂದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಗಿರಿರಾಜಖಂಡದಲ್ಲಿ ಗೋಪವಿವಾದವೆಂಬ ಐದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗಿರಿರಾಜಖಂಡೇ

ಷಷ್ಠೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ವೃಷಭಾನುವರಸ್ಯೇದಂ ವಚಃ ಶ್ರುತ್ವಾ ವ್ರಜೌಕಸಃ ।
ಊಚುಃ ಪುನಃ ಶಾಂತಿಗತಾ ವಿಸ್ಮಿತಾ ಮುಕ್ತಸಂಶಯಾಃ ॥ ೧ ॥

॥ ಗೋಪಾ ಊಚುಃ ॥

ಸಮೀಚೀನಂ ವಚೋ ರಾಜನ್ ರಾಧೇಯಂ ತು ಹರಿಪ್ರಿಯಾ ।
ತತ್ಪ್ರಭಾವೇಣ ತೇ ದೀರ್ಘಂ ವೈಭವಂ ದೃಶ್ಯತೇ ಭುವಿ ॥ ೨ ॥

ಸಹಸ್ರಶೋ ಗಜಾ ಮತ್ತಾಃ ಕೋಟಿಶೋಽಶ್ವಾಶ್ಚ ಚಂಚಲಾಃ ।
ರಥಾಶ್ಚ ದೇವಧಿಷ್ಣ್ಯಾಭಾಃ ಶಿಬಿಕಾಃ ಕೋಟಿಶಃ ಶುಭಾಃ ॥ ೩ ॥

ಆರನೆಯ ಅಧ್ಯಾಯವು

೧. ನಾರದನು ಬಹುಲಾಶ್ವನನ್ನು ಕುರಿತಿಂತೆಂದನು :—ಎಲೈ ಮೈಥಿಲ, ಕೇಳು. ವೃಷಭಾನುವು ಹೇಳಿದುದನ್ನು ಕೇಳಿ ಗೋಪರು ಶಾಂತರಾದರು. ಅವರ ಸಂಶಯವು ದೂರವಾಯಿತು. ವಿಸ್ಮಿತರಾಗಿ ಪುನಃ ವೃಷಭಾನುವನ್ನು ಕೇಳಿದರು.

೨. ಎಲೈ ರಾಜನೇ, ಒಳ್ಳೆಯಮಾತನ್ನೇ ಹೇಳಿದೆ. ರಾಧೆಯು ಹರಿಯ ಪ್ರಿಯಳು. ಆ ಹರಿಯ ಪ್ರಭಾವದಿಂದಲೇ ನೀನು ಈ ರೀತಿಯಾದ ಮಹತ್ತಾದ ವೈಭವವನ್ನು ಅನುಭವಿಸುತ್ತಿರುವೆ.

೩. ನಿನ್ನ ಹತ್ತಿರ ಸಾವಿರಾರು ಮತ್ತಗಜಗಳಿರುವುವು. ಕೋಟ್ಯಾನುಕೋಟಿ ಚಂಚಲವಾದ ಅಶ್ವಗಳಿರುವುವು. ದೇವತೆಗಳ ರಥಕ್ಕೆ ಸಮಾನವಾದ ಅನೇಕ ರಥಗಳಿರುವುವು. ಕೋಟ್ಯಾನುಕೋಟಿ ಮನೋಹರವಾದ ಪಾಲಕಿಗಳಿರುವುವು.

ಕೋಟಿಶಃ ಕೋಟಿಶೋ ಗಾವೋ ಹೇಮರತ್ನಮನೋಹರಾಃ ।
ಮಂದಿರಾಣಿ ವಿಚಿತ್ರಾಣಿ ರತ್ನಾನಿ ವಿವಿಧಾನಿ ಚ ॥ ೪ ॥

ಸರ್ವಂ ಸೌಖ್ಯಂ ಭೋಜನಾದಿ ದೃಶ್ಯತೇ ಸಾಂಪ್ರತಂ ತವ ।
ಕಂಸೋಽಪಿ ಧರ್ಷಿತೋ ಜಾತೋ ದೃಷ್ಟ್ವಾ ತೇ ಬಲಮದ್ಭುತಂ ॥ ೫ ॥

ಕನ್ಯಕುಬ್ಜಪತೇಃ ಸಾಕ್ಷಾದ್ಭಾಲಂದನೃಪಸ್ಯ ಚ ।
ಜಾಮಾತಾ ತ್ವಂ ಮಹಾವೀರ ಕುಬೇರ ಇವ ಕೋಶವಾನ್ ॥ ೬ ॥

ತ್ವತ್ಸಮಂ ವೈಭವಂ ನಾಸ್ತಿ ನಂದರಾಜಗೃಹೇ ಕ್ವಚಿತ್ ।
ಕೃಷೀವಲೋ ನಂದರಾಜೋ ಗೋಪತಿರ್ದೀನಮಾನಸಃ ॥ ೭ ॥

ಯದಿ ನಂದಸುತಃ ಸಾಕ್ಷಾತ್ಪರಿಪೂರ್ಣತಮೋ ಹರಿಃ ।
ಸರ್ವೇಷಾಂ ಪಶ್ಯತಾಂ ನಸ್ತತ್ಪರೀಕ್ಷಾಂ ಕಾರಯ ಪ್ರಭೋ ॥ ೮ ॥

---

೪. ಸುವರ್ಣರತ್ನಾಲಂಕಾರಗಳಿಂದ ಶೋಭಿತವಾಗಿರುವ ಕೋಟಿ ಕೋಟಿ ಹಸುಗಳಿರುವುವು. ವಿಚಿತ್ರವಾದ ಮಂದಿರಗಳಿರುವುವು. ವಿವಿಧವಾದ ರತ್ನಗಳಿರುವುವು.

೫. ಊಟಉಪಚಾರಾದಿಗಳೆಲ್ಲ ಸುಖಮಯವಾಗಿ ನಡೆಯುತ್ತಿರುವುವು. ನಿನ್ನ ವೈಭವವನ್ನೂ, ಬಲವನ್ನೂ ನೋಡಿ ಕಂಸನೂ ಕೂಡ ಅಸೂಯೆಪಡುತ್ತಿರುವನು.

೬. ಕನ್ಯಕುಬ್ಜದ ರಾಜನಾದ ಭಾಲನಂದನನ ಅಳಿಯನಲ್ಲವೇ ನೀನು ? ಮಹಾವೀರನು. ನವನಿಧಿಗಳನ್ನು ಪಡೆದ ಕುಬೇರನಂತೆ ನೀನು ಅನೇಕ ನಿಧಿಗಳನ್ನು ಹೊಂದಿರುವೆ.

೭. ನಂದರಾಜನಿಗೂ ಸಹ ನಿನಗೆ ಸಮವಾದ ವೈಭವವಿಲ್ಲ. ಅವನು ರೈತನಂತಿರುವನು. ಗೋವುಗಳಿಗೆಲ್ಲಾ ಒಡೆಯನು. ಪಾಪ, ದೀನನು.

೮. ನೀನು ಹೇಳಿದುದರಲ್ಲಿ ನಂಬಿಕೆಯೇನೋ ಇರುವುದು. ಆದರೆ ಸಂಶಯವು ಇನ್ನೂ ಹೋಗಿಲ್ಲ. ನಂದಕುಮಾರನು ಪರಿಪೂರ್ಣತಮನಾದ ಹರಿಯೇ ಆಗಿದ್ದರೆ ನಮ್ಮೆದುರಿಗೆ ಅದರ ಪರೀಕ್ಷೆಯಾಗಬೇಕು. ಆಗ ನಾವು ಒಪ್ಪುವೆವು. ಅಷ್ಟನ್ನು ಮಾಡಿಸು.

॥ ಶ್ರೀ ನಾರದ ಉವಾಚ ॥

ತೇಷಾಂ ವಾಕ್ಯಂ ತತಃ ಶ್ರುತ್ವಾ ವೃಷಭಾನುವರೋ ಮಹಾನ್ ।
ಚಕಾರ ನಂದರಾಜಸ್ಯ ವೈಭವಸ್ಯ ಪರೀಕ್ಷಣಂ ॥ ೯ ॥

ಕೋಟಿದಾಮಾನಿ ಮುಕ್ತಾನಾಂ ಸ್ಥೂಲಾನಾಂ ಮೈಥಿಲೇಶ್ವರ ।
ಏಕೈಕಾ ಯೇಷು ಮುಕ್ತಾಶ್ಚ ಕೋಟಿಮೌಲ್ಯಾಃ ಸ್ಫುರತ್ಪ್ರಭಾಃ ॥ ೧೦ ॥

ನಿಧಾಯ ತಾನಿ ಪಾತ್ರೇಷು ವೃಷಾನ್ಯೈಃ ಕುಶಲೈರ್ಜನೈಃ ।
ಪ್ರೇಷಯಾಮಾಸ ನಂದಾಯ ಸರ್ವೇಷಾಂ ಪಶ್ಯತಾಂ ನೃಪ ॥ ೧೧ ॥

ನಂದರಾಜಸಭಾಂ ಗತ್ವಾ ವೃಷಾನಾಃ ಕುಶಲಾ ಭೃಶಂ ।
ನಿಧಾಯ ದಾಮಪಾತ್ರಾಣಿ ನಂದಮಾಹುಃ ಪ್ರಣಮ್ಯ ತಂ ॥ ೧೨ ॥

॥ ವೃಷಾನಾ ಊಚುಃ ॥

ವಿವಾಹಯೋಗ್ಯಾಂ ನವಕಂಜನೇತ್ರಾಂ
ಕೋಟೀಂದುಬಿಂಬದ್ಯುತಿಮಾದಧಾನಾಂ ।

---

೯. ಎನ್ನಲು, ಆಗ ಶ್ರೇಷ್ಠನಾದ ವೃಷಭಾನುವು ನಂದರಾಜನ ವೈಭವದ ಪರೀಕ್ಷೆಯನ್ನು ಮಾಡಿಸಿದನು.

೧೦-೧೧. ದಪ್ಪ ದಪ್ಪ ಮುತ್ತುಗಳ ಒಂದುಕೋಟಿ ಹಾರವನ್ನು ತಟ್ಟೆಗಳಲ್ಲಿಟ್ಟು ಬುದ್ಧಿವಂತರಾದ ಜನಗಳ ಕೈಲಿ ನಂದನಿಗೆ ಕೊಟ್ಟು ಕಳುಹಿಸಿದನು. ಅವು ಪ್ರಕಾಶಿಸುತ್ತಿದ್ದವು. ಒಂದೊಂದು ಮುತ್ತಿಗೂ ಒಂದೊಂದುಕೋಟಿ ಬೆಲೆಯಾಗುತ್ತಿತ್ತು.

೧೨. ಕುಶಲಿಗಳಾದ ಅವರು ಜಾಗ್ರತೆಯಾಗಿ ನಂದನ ಸಭೆಗೆ ಹೋಗಿ ಆ ಮುತ್ತಿನಸರಗಳ ಪಾತ್ರೆಗಳನ್ನು ಅವನೆದುರಿಗೆ ಇರಿಸಿ ಅವನನ್ನು ನಮಸ್ಕರಿಸಿ ಇಂತೆಂದರು.

೧೩. ಎಲೈ ನಂದರಾಜನೇ, ವೃಷಭಾನುವರನು ತನ್ನ ಮಗಳಾದ ರಾಧೆಗೆ ಒಳ್ಳೆಯ ವರನನ್ನು ಹುಡುಕಿರುವನು. ಆ ರಾಧೆಯು ವಿವಾಹಕ್ಕೆ ಯೋಗ್ಯಳಾಗಿರುವಳು. ಸುಂದರಿಯಾಗಿರುವಳು. ಅವಳ ಕಣ್ಣುಗಳು ನೂತನವಾದ ಕಮಲದಂತೆ

ವಿಜ್ಞಾಯ ರಾಧಾಂ ವೃಷಭಾನುಮುಖ್ಯಃ
ಚಕ್ರೇ ವಿಚಾರಂ ಸುವರಂ ವಿಚಿನ್ವನ್ || ೧೩ ||

ತವಾಂಗಜಂ ದಿವ್ಯಮನಂಗಮೋಹನಂ
ಗೋವರ್ಧನೋದ್ಧಾರಣದೋಃ ಸಮುದ್ಭಟಂ |
ಸಂವೀಕ್ಷ್ಯ ಚಾಸ್ಮಾನ್ ವೃಷಭಾನುವಂದಿತಃ
ಸಂಪ್ರೇಷಯಾಮಾಸ ವಿಶಾಂ ಪತೇ ಪ್ರಭೋ || ೧೪ ||

ವರಸ್ಯ ಚಾಂಕೇ ಭರಣಾಯ ಪೂರ್ವಂ
ಮುಕ್ತಾಫಲಾನಾಂ ನಿಚಯಂ ಗೃಹಾಣ |
ಇತಶ್ಚ ಕನ್ಯಾರ್ಥಮಲಂ ಪ್ರದೇಹಿ
ಸೈಷಾ ಹಿ ಚಾಸ್ಮತ್ಕುಲಜಾ ಪ್ರಸಿದ್ಧಿಃ || ೧೫ ||

|| ಶ್ರೀ ನಾರದ ಉವಾಚ ||

ದೃಷ್ಟ್ವಾ ದ್ರವ್ಯಂ ಪರೋ ನಂದೋ ವಿಸ್ಮಿತೋಽಪಿ ವಿಚಾರಯನ್ |
ಪ್ರಷ್ಟುಂ ಯಶೋದಾಂ ತತ್ತುಲ್ಯಂ ನೀತ್ವಾ ಚಾಂತಃ ಪುರಂ ಯಯೌ || ೧೬ ||

ಇರುವುವು. ಅವಳ ಮುಖವು ಚಂದ್ರಬಿಂಬದಂತೆ ವಿಶಾಲವಾಗಿ ಕೋಟಿಚಂದ್ರರಂತೆ ಲಾವಣ್ಯಮಯವಾಗಿರುವುದು.

೧೪. ಅವಳಿಗೆ ಸರಿಯಾದ ವರನು ನಿನ್ನ ಮಗನಾದ ಕೃಷ್ಣನೆಂದು ನಿಶ್ಚಯಿಸಿರುವನು. ಅವನೂ ಅಷ್ಟೇ ಪರಾಕ್ರಮಿಯು. ಗೋವರ್ಧನಪರ್ವತವನ್ನು ಎತ್ತಿದ ವೀರನು. ಅದಕ್ಕೋಸ್ಕರ ವೃಷಭಾನುವರನು ನಮ್ಮನ್ನು ಪ್ರಭುವಾದ ನಿನ್ನಲ್ಲಿಗೆ ಕಳುಹಿಸಿರುವನು.

೧೫. ಆದುದರಿಂದ ವರನಿಗೆ ಅಲಂಕಾರಮಾಡಲು ಈ ಮುತ್ತಿನ ಹಾರಗಳನ್ನು ತೆಗೆದುಕೋ. ನೀನೂ ಸಹ ಕನ್ಯಾನಿಶ್ಚಯಕ್ಕೋಸ್ಕರ ಏನಾದರೂ ಕೊಡು. ಈ ತರಹ ವ್ಯವಹಾರವು ನಮ್ಮ ಕುಲದ ಸಂಪ್ರದಾಯವು.

೧೬. ಎಂದು ಹೇಳಲು, ನಂದನು ಆ ಆಭರಣಗಳನ್ನು ನೋಡಿ ಆಶ್ಚರ್ಯಗೊಂಡನು. ಸ್ವಲ್ಪ ಹೊತ್ತು ಯೋಚಿಸಿದನು. ಅನಂತರ ಯಶೋದೆಯನ್ನು ವಿಚಾರಿಸಲು ಅಂತಃಪುರಕ್ಕೆ ತೆರಳಿದನು.

ಚಿರಂ ದಧ್ಯೌ ತದಾ ನಂದೋ ಯಶೋದಾ ಚ ಯಶಸ್ವಿನೀ।
ಏತನ್ಮುಕ್ತಾಸಮಾನಂ ತು ದ್ರವ್ಯಂ ನಾಸ್ತಿ ಗೃಹೇ ಮಮ ॥ ೧೭ ॥

ಲೋಕೇ ಲಜ್ಜಾ ಗತಾ ಸರ್ವಾ ಹಾಸಃ ಸ್ಯಾಚ್ಚೇದ್ಧನೋದ್ಧೃತಂ।
ಕಿಂ ಕರ್ತವ್ಯಂ ತತ್ಪ್ರತಿ ಯಚ್ಛ್ರೀಕೃಷ್ಣೋದ್ವಾಹಕರ್ಮಣಿ ॥ ೧೮ ॥

ತತೋ ಯೋಗ್ಯಂ ತದ್ಗ್ರಹಣಂ ಪಶ್ಚಾತ್ಕಾರ್ಯಂ ಧನಾಗತೇ।
ಏವಂ ಚಿಂತಯತಸ್ತಸ್ಯ ನಂದಸ್ಯೈವ ಯಶೋದಯಾ ॥ ೧೯ ॥

ಅಲಕ್ಷ್ಯ ಆಗತಸ್ತತ್ರ ಭಗವಾನ್ ವೃಜಿನಾರ್ದನಃ।
ನೀತ್ವಾ ದಾಮುಶತಂ ತೇಷು ಬಹಿಃ ಕ್ಷೇತ್ರೇಷು ಸರ್ವತಃ ॥ ೨೦ ॥

---

೧೭. ಆ ಮುತ್ತಿನ ಸರಗಳನ್ನು ನೋಡಿ ಯಶೋದೆಯೂ, ನಂದನೂ ಬಹಳ ಹೊತ್ತು ಯೋಚಿಸಿದರು. ಇಂತಹ ಮುತ್ತಿನ ಸರಗಳಿಗೆ ಸರಿದೂಗುವ ದ್ರವ್ಯವು ನಮ್ಮ ಮನೆಯಲಿಲ್ಲ.

೧೮. ಇದಕ್ಕೆ ಸರಿಯಾದ ಧನವನ್ನು ನಾವು ಕೊಡದಿದ್ದರೆ ಲೋಕದಲ್ಲಿ ಹಾಸ್ಯಕ್ಕೀಡಾಗುವೆವು. ಇದು ನಮಗೆ ಲಜ್ಜಾಸ್ಪದವು. ಆದುದರಿಂದ ಶ್ರೀಕೃಷ್ಣನ ವಿವಾಹವಿಷಯದಲ್ಲಿ ನಾವೇನನ್ನು ಕೊಡಬೇಕು ? ಏನುಮಾಡಬೇಕು ?

೧೯. ಆ ರೀತಿ ಸರಿಯಾದ ದ್ರವ್ಯವನ್ನು ಕೊಟ್ಟರೆ ಈಗ ಇದನ್ನು ತೆಗೆದು ಕೊಳ್ಳುವುದು ಸರಿಯಾದುದು. ಧನವು ಒದಗಿದಾಗ ವೃಷಭಾನುವಿನ ಮಾತನ್ನು ನಿಶ್ಚಯಮಾಡಿಕೊಳ್ಳೋಣ ಎಂದು ಯಶೋದೆಯೂ ನಂದನು ಬಹಳ ಹೊತ್ತು ಯೋಚಿಸಿದರು.

೨೦. ಅದೇ ಸಮಯದಲ್ಲಿ ಇವರಿಗೆ ಕಾಣದಂತೆ ಕೃಷ್ಣನು ಅಲ್ಲಿಗೆ ಬಂದನು. ಅಲ್ಲಿಟ್ಟಿರುವ ಮುತ್ತಿನ ಸರಗಳಲ್ಲಿ ನೂರು ಸರವನ್ನು ತೆಗೆದುಕೊಂಡು ಹೊರಗಡೆ ಇರುವ ಹೊಲಗಳಲ್ಲಿ ಚೆಲ್ಲಾಡಿದನು.

ಮುಕ್ತಾಫಲಾನಿ ಚೈಕೈಕಂ ಪ್ರಕ್ಷಿಪತ್ಸ್ವಕರೇಣ ವೈ ।
ಯಥಾ ಬೀಜಾನಿ ಚಾನ್ನಾನಾಂ ಸ್ವಕ್ಷೇತ್ರೇಷು ಕೃಷೀವಲಃ　　　　॥ ೨೧ ॥

ಅಥ ನಂದೋಽಪಿ ಗಣಯನ್ ಕಲಿಕಾನಿಚಯಂ ಪುನಃ ।
ಶತಂ ನ್ಯೂನಂ ಚ ತದ್ದೃಷ್ಟ್ವಾ ಸಂದೇಹಂ ಸ ಜಗಾಮ ಹ　　　　॥ ೨೨ ॥

॥ ಶ್ರೀ ನಂದ ಉವಾಚ ॥

ನಾಸ್ತಿ ಪೂರ್ವಂ ಯತ್ಸಮಾನಂ ತತ್ರಾಪಿ ನ್ಯೂನತಾಂ ಗತಂ ।
ಅಹೋ ಕಲಂಕೋ ಭವಿತಾ ಜ್ಞಾತಿಷು ಸ್ವೇಷು ಸರ್ವತಃ　　　　॥ ೨೩ ॥

ಅಥ ವಿಕ್ರೀಡನಾರ್ಥಂ ಹಿ ಕೃಷ್ಣೋ ಯದಿ ಗೃಹೀತವಾನ್ ।
ಬಲದೇವೋಽಥವಾ ಬಾಲಸ್ತೌ ಪೃಚ್ಛೇ ದೀನಮಾನಸಃ　　　　॥ ೨೪ ॥

---

೨೧. ಸರದಿಂದ ಹಿರಿದು ಮುತ್ತುಗಳನ್ನು, ರೈತನು ಕ್ಷೇತ್ರದಲ್ಲಿ ಬಿತ್ತವನ್ನು ಎರೆಚುವಂತೆ ಸುತ್ತಲೂ ಎರೆಚಿದನು.

೨೨. ನಂದನು ಮುತ್ತಿನ ಸರಗಳನ್ನು ಏಣಿಸಲು ಬಂದನು. ಅದನ್ನು ಏಣಿಸಲಾಗಿ ಮೊದಲಿಗಿಂತ ನೂರು ಸರಗಳು ಕಡಿಮೆಯಾಗಿದ್ದವು. ಅದರಿಂದ ಸಂದೇಹಗೊಂಡು ಇಂತೆಂದನು.

೨೩. ಇದೇನಿದು ? ಮೊದಲಿಗಿಂತ ಈಗ ತುಂಬಾ ಸರಗಳು ಕಡಿಮೆಯಾಗಿವೆ ? ಇದಕ್ಕೆ ಸಮಾನವಾದ ಮುತ್ತುಗಳು ಬೇರೆ ಇಲ್ಲವು. ಅಯ್ಯೋ ! ಈಗ ನಮ್ಮ ಜ್ಞಾತಿಗಳಲ್ಲಿ ನಮಗೆ ಕೆಟ್ಟಹೆಸರು ಬರುವುದಲ್ಲ.

೨೪. ಏನಾದರೂ ಕೃಷ್ಣನು ಆಟವಾಡಲು ತೆಗೆದುಕೊಂಡು ಹೋಗಿರುವನೇ ? ಅಥವಾ ಬಲರಾಮನೇನಾದರೂ ತೆಗೆದುಕೊಂಡುಹೋಗಿರುವನೋ ? ಏನಾದರೂ ಆಗಲಿ ಆ ಹುಡುಗರನ್ನು ಕೇಳೋಣ.

॥ ಶ್ರೀ ನಾರದ ಉವಾಚ ॥

ಇತ್ಥಂ ವಿಚಾರ್ಯ ನಂದೋಽಪಿ ಕೃಷ್ಣಂ ಪಪ್ರಚ್ಛ ಸಾದರಂ ।
ಪ್ರಹಸನ್ ಭಗವಾನ್ ನಂದಂ ಪ್ರಾಹ ಗೋವರ್ಧನೋದ್ಧರಃ ॥ ೨೫ ॥

॥ ಶ್ರೀ ಭಗವಾನುವಾಚ ॥

ಕೃಷೀವಲಾ ವಯಂ ಗೋಪಾ ಸರ್ವಬೀಜಪ್ರರೋಹಕಾಃ ।
ಕ್ಷೇತ್ರೇ ಮುಕ್ತಾ ಪ್ರಬೀಜಾನಿ ವಿಕೀರ್ಣೀಕೃತವಾನಹಂ ॥ ೨೬ ॥

॥ ಶ್ರೀ ನಾರದ ಉವಾಚ ॥

ಶ್ರುತ್ವಾಥ ಸ್ವಾತ್ಮಜೇನೋಕ್ತಂ ತಂ ನಿರ್ಭತ್ಸ್ಯ ವ್ರಜೇಶ್ವರಃ ।
ತಾನಿ ನೇತುಂ ತತ್ಸಹಿತಃ ತತ್ಕ್ಷೇತ್ರಾಣಿ ಜಗಾಮ ಹ ॥ ೨೭ ॥

ತತ್ರ ಮುಕ್ತಾಫಲಾನಾಂ ತು ಶಾಖಿನಃ ಶತಶಃ ಶುಭಾಃ ।
ದೃಶ್ಯಂತೇ ದೀರ್ಘವಪುಷೋ ಹರಿತ್ಪಲ್ಲವಶೋಭಿತಾಃ ॥ ೨೮ ॥

---

೨೫. ಹೀಗೆ ಆಲೋಚಿಸಿ ನಂದನು ಕೃಷ್ಣನನ್ನು ಆದರದಿಂದ ಕೇಳಿದನು. ಆಗ ಗೋವರ್ಧನಧಾರಿಯಾದ ಕೃಷ್ಣನು ನಗುತ್ತಾ ನಂದನನ್ನು ಕುರಿತು ಹೇಳಿದನು.

೨೬. ಗೋಪರಾದ ನಾವು ಕೃಷಿಯನ್ನು ಮಾಡುವವರು. ಎಲ್ಲಾ ಬೀಜಗಳನ್ನೂ ಬಿತ್ತಿ ಬೆಳೆಯುತಕ್ಕವರು. ಆದುದರಿಂದ ನಾನು ಆ ಮುತ್ತಿನ ಬೀಜಗಳನ್ನು ಹೊರಗಡೆಯ ಹೊಲಗಳಲ್ಲಿ ಚೆಲ್ಲಿರುವೆನು.

೨೭. ಎನ್ನಲು, ನಂದನು ಕೋಪಗೊಂಡು ಅವನನ್ನು ಬೈದನು. ಅನಂತರ ಅವುಗಳನ್ನು ಆರಿಸಿಕೊಂಡು ಬರಲು ಕೃಷ್ಣನನ್ನೂ ಕರೆದುಕೊಂಡು ಹೊಲಗಳ ಹತ್ತಿರಕ್ಕೆ ಬಂದನು.

೨೮. ಅಲ್ಲಿ ಮುತ್ತಿನ ನೂರಾರು ಮರಗಳು ಬೆಳೆದಿದ್ದವು. ಅವು ಮನೋಹರವಾಗಿದ್ದವು. ಹಸುರು ಹಸುರಾದ ಚಿಗುರುಗಳಿಂದ ಶೋಭಿತವಾದ್ದವು. ಎತ್ತರವಾಗಿಯೂ ದಪ್ಪವಾಗಿಯೂ ಬೆಳದಿದ್ದವು.

ಮುಕ್ತಾನಾಂ ಸ್ತಬಕಾನಾಂ ತು ಕೋಟಿಶಃ ಕೋಟಿಶೋ ನೃಪ ।
ಸಂಘಾ ವಿಲಂಬಿತಾ ರೇಜುರ್ಜ್ಯೋತೀಂಷೀವ ನಭಃ ಸ್ಥಲೇ ॥ ೨೯ ॥

ತದಾತಿಹರ್ಷಿತೋ ನಂದೋ ಜ್ಞಾತ್ವಾ ಕೃಷ್ಣಂ ಪರೇಶ್ವರಂ ।
ಮುಕ್ತಾಫಲಾನಿ ದಿವ್ಯಾನಿ ಪೂರ್ವಸ್ಥೂಲಸಮಾನಿ ಚ ॥ ೩೦ ॥

ತೇಷಾಂ ತು ಕೋಟಿಭಾರಾಣಿ ನಿಧಾಯ ಶಕಟೇಷು ಚ ।
ದದೌ ತೇಭ್ಯೋ ವೃಣಾನೇಭ್ಯೋ ನಂದರಾಜೋ ವ್ರಜೇಶ್ವರಃ ॥ ೩೧ ॥

ತೇ ಗೃಹೀತ್ವಾಥ ತತ್ಸರ್ವಂ ವೃಷಭಾನುವರಂ ಗತಾಃ ।
ಸರ್ವೇಷಾಂ ಶೃಣ್ವತಾಂ ನಂದವೈಭವಂ ಪ್ರಜಗುರ್ನೃಪ ॥ ೩೨ ॥

ತದಾತಿವಿಸ್ಮಿತಾಃ ಸರ್ವೇ ಜ್ಞಾತ್ವಾ ನಂದಸುತಂ ಹರಿಂ ।
ವೃಷಭಾನುವರಂ ನೇಮುಃ ನಿಸ್ಸಂದೇಹಾ ವ್ರಜೌಕಸಃ ॥ ೩೩ ॥

---

೨೯. ಆ ಮರಗಳಲ್ಲಿ ಕೋಟ್ಯಾನುಕೋಟಿ ಮುತ್ತಿನ ಗೊಂಚಲುಗಳು ಆಕಾಶದಲ್ಲಿ ನಕ್ಷತ್ರಗಳು ಪ್ರಕಾಶಿಸುವಂತೆ ತೂಗಾಡುತ್ತಾ ಪ್ರಕಾಶಿಸುತ್ತಿದ್ದವು.

೩೦. ಆ ಮುತ್ತುಗಳು ಹಿಂದಿನ ಮುತ್ತುಗಳಂತೆಯೇ ದಿವ್ಯವಾಗಿಯೂ ದಪ್ಪವಾಗಿಯೂ ಇದ್ದವು. ಅವುಗಳನ್ನು ನೋಡಿ ನಂದನು ಆಶ್ಚರ್ಯಾನ್ವಿತನಾದನು. ಶ್ರೀಕೃಷ್ಣನನ್ನು ಪರಮಪುರುಷನೆಂದು ತಿಳಿದನು.

೩೧. ಆಗ ನಂದನು ಮುತ್ತುಗಳನ್ನು ಸಂಗ್ರಹಿಸಿ ಕೋಟಿಮಾಲಿಕೆಗಳನ್ನು ಗಾಡಿಗಳಲ್ಲಿ ತುಂಬಿ ಅಲ್ಲಿಂದ ಬಂದಿರುವವರ ಜೊತೆಯಲ್ಲಿ ಕೊಟ್ಟುಕಳುಹಿಸಿದನು.

೩೨. ಅವರು ಆ ಮುತ್ತುಗಳನ್ನೆಲ್ಲಾ ತೆಗೆದುಕೊಂಡು ವೃಷಭಾನುವಿನ ಸಮೀಪಕ್ಕೆ ತೆರಳಿದರು. ಅಲ್ಲಿ ಎಲ್ಲರಿಗೂ ಕೇಳುವಂತೆ ನಂದನ ವೈಭವವನ್ನು ಹೊಗಳಿದರು.

೩೩. ಅದನ್ನು ಕೇಳಿ ಗೋಪರೆಲ್ಲರಿಗೂ ಆಶ್ಚರ್ಯವುಂಟಾಯಿತು. ಎಲ್ಲರೂ ನಂದಕುಮಾರನನ್ನು ಶ್ರೀಹರಿ ಎಂದು ತಿಳಿದರು. ಮತ್ತು ವೃಷಭಾನುವನ್ನು ನಮಸ್ಕರಿಸಿ ಸಂಶಯವನ್ನೆಲ್ಲಾ ಬಿಟ್ಟುಬಿಟ್ಟರು.

ರಾಧಾ ಹರೇಃ ಪ್ರಿಯಾ ಜ್ಞಾತ್ವಾ ರಾಧಾಯಾಶ್ಚ ಪ್ರಿಯೋ ಹರಿಃ ।
ಜ್ಞಾತೋ ವ್ರಜಜನೈಃ ಸರ್ವೈಸ್ತದ್ದಿನಾನ್ಮೈಥಿಲೇಶ್ವರ ॥ ೩೪ ॥

ಮುಕ್ತಾಕ್ಷೇಪಃ ಕೃತೋ ಯತ್ರ ಹರಿಣಾ ನಂದಸೂನುನಾ ।
ಮುಕ್ತಾಸರೋವರಸ್ತತ್ರ ಜಾತೋ ಮೈಥಿಲ ತೀರ್ಥರಾಟ್ ॥ ೩೫ ॥

ಏಕಂ ಮುಕ್ತಾಫಲಸ್ಯಾಪಿ ದಾನಂ ತತ್ರ ಕರೋತಿ ಯಃ ।
ಲಕ್ಷಮುಕ್ತಾದಾನಫಲಂ ಸಮಾಪ್ನೋತಿ ನ ಸಂಶಯಃ ॥ ೩೬ ॥

ಏವಂ ತೇ ಕಥಿತೋ ರಾಜನ್ಗಿರಿರಾಜಮಹೋತ್ಸವಃ ।
ಭುಕ್ತಿಮುಕ್ತಿಪ್ರದಂ ನೃಣಾಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೩೭ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗಿರಿರಾಜಖಂಡೇ
ಹರಿಪರೀಕ್ಷಣಂ ನಾಮ ಷಷ್ಠೋಽಧ್ಯಾಯಃ

---

೩೪. ಎಲೈ ಬಹುಲಾಶ್ವನೇ, ಅಂದಿನಿಂದ ವ್ರಜಜನರೆಲ್ಲರೂ ರಾಧೆಯನ್ನು ಹರಿಯ ಪ್ರಿಯಳೆಂದೂ, ಹರಿಯನ್ನು ರಾಧೆಯ ಪ್ರಿಯತಮನೆಂದೂ ತಿಳಿದರು.

೩೫. ಎಲ್ಲಿ ಹರಿಯು ಮುತ್ತುಗಳನ್ನು ಚೆಲ್ಲಿದ್ದನೋ ಆ ಪ್ರದೇಶವು ಮುಕ್ತಾಸರೋವರವೆಂದು ಪ್ರಸಿದ್ಧವಾದ ತೀರ್ಥವಾಯಿತು.

೩೬. ಆ ಸ್ಥಳದಲ್ಲಿ ಯಾರು ಒಂದು ಮುತ್ತನ್ನಾದರೂ ದಾನಮಾಡುವರೋ ಅವರಿಗೆ ಲಕ್ಷಮುಕ್ತಾಫಲದಾನದ ಫಲವು ಉಂಟಾಗುವುದು. ಇದರಲ್ಲಿ ಸಂಶಯವಿಲ್ಲ.

೩೭. ಎಲೈ ರಾಜನೇ, ಈ ರೀತಿಯಾಗಿ ನಿನಗೆ ಗಿರಿರಾಜನ ಮಹಿಮೆಯನ್ನು ವರ್ಣಿಸಿ ಹೇಳಿರುವೆನು. ಇದನ್ನು ಕೇಳಿದವರಿಗೆ ಭುಕ್ತಿಯೂ, ಮುಕ್ತಿಯೂ ಉಂಟಾಗುವುದು. ಮತ್ತೇನನ್ನು ಕೇಳಬೇಕೆಂದಿರುವೆ ?

ಇಲ್ಲಿಗೆ ಶ್ರೀಗರ್ಗಸಂಹಿತೆಯ ಗಿರಿರಾಜಖಂಡದಲ್ಲಿ ಹರಿಯ ಪರೀಕ್ಷಣವೆಂಬ
ಆರನೆಯ ಅಧ್ಯಾಯವು ಮುಗಿದುದು.

—|| ಶ್ರೀಃ ||—

—|| ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ||—

ಅಥ ಗಾರ್ಗಸಂಹಿತಾಯಾಂ

ಗಿರಿರಾಜಖಂಡೇ

ಸಪ್ತಮೋಽಧ್ಯಾಯಃ

|| ಬಹುಲಾಶ್ವ ಉವಾಚ ||

ಕತಿ ಮುಖ್ಯಾನಿ ತೀರ್ಥಾನಿ ಗಿರಿರಾಜೇ ಮಹಾತ್ಮನಿ |
ಏತದ್ಬ್ರೂಹಿ ಮಹಾಯೋಗಿನ್ಸಾಕ್ಷಾತ್ತ್ವಂ ದಿವ್ಯದರ್ಶನಃ || ೧ ||

|| ಶ್ರೀ ನಾರದ ಉವಾಚ ||

ರಾಜನ್ಗೋವರ್ಧನಃ ಸರ್ವಃ ಸರ್ವತೀರ್ಥವರಃ ಸ್ಮೃತಃ |
ವೃಂದಾವನೇನ ಗೋಲೋಕಮುಕುಟಾದ್ರಿಃ ಪ್ರಪೂಜಿತಃ || ೨ ||

ಏಳನೆಯ ಅಧ್ಯಾಯವು

೧. ಬಹುಲಾಶ್ವನು ನಾರದನನ್ನು ಪ್ರಶ್ನೆಮಾಡಿದನು:—ಎಲೈ ಮುನಿವರನೇ, ಮಹಾತ್ಮನಾದ ಗಿರಿರಾಜನಲ್ಲಿ ಮುಖ್ಯವಾದ ತೀರ್ಥಗಳೆಷ್ಟಿರುವುವು ? ಅದನ್ನು ನನಗೆ ತಿಳಿಸು. ನೀನು ಮಹಾಯೋಗಿಯು. ದಿವ್ಯದರ್ಶನನು.

೨. ಎಂದು ಕೇಳಲು, ನಾರದನಿಂತೆಂದನು :—ಎಲೈ ರಾಜನೇ, ಗೋವರ್ಧ ಪರ್ವತವೆಲ್ಲವೂ ತೀರ್ಥಮಯವಾದುದು. ಸರ್ವತೀರ್ಥಗಳಲ್ಲಿಯೂ ಶ್ರೇಷ್ಠವಾದುದು. ಗೋಕುಲಕ್ಕೆ ಕಿರೀಟಪ್ರಾಯವಾದ ಈ ಪರ್ವತವನ್ನು ವೃಂದಾವನವು ಪೂಜೆಮಾಡಿತು.

ಗೋಪಗೋಪೀಗವಾಂ ರಕ್ಷಾಪ್ರದಃ ಕೃಷ್ಣಾ ಪ್ರಿಯೋ ಮಹಾನ್ ।
ಪೂರ್ಣಬ್ರಹ್ಮಾತಪತ್ರಂ ಯಸ್ತಸ್ಮಾತ್ತೀರ್ಥವರಸ್ತು ಕಃ ॥ ೩ ॥

ಇಂದ್ರಯಾಗಂ ವಿನಿರ್ಭರ್ತ್ಸ್ಯ ಸರ್ವೈರ್ನಿಜಜನೈಸ್ಸಹ ।
ಯತ್ಪೂಜನಂ ಸಮಾರೇಭೇ ಭಗವಾನ್ಭುವನೇಶ್ವರಃ ॥ ೪ ॥

ಪರಿಪೂರ್ಣತಮಸ್ಸಾಕ್ಷಾಚ್ಛ್ರೀಕೃಷ್ಣೋ ಭಗವಾನ್ಸ್ವಯಂ ।
ಅಸಂಖ್ಯಬ್ರಹ್ಮಾಂಡಪತಿರ್ಗೋಲೋಕೇಶಃ ಪರಾತ್ಪರಃ ॥ ೫ ॥

ಯಸ್ಮಿನ್ ಸ್ಥಿತಃ ಸದಾ ಕ್ರೀಡಾಮರ್ಭಕೈಸ್ಸಹ ಮೈಥಿಲ ।
ಕರೋತಿ ತಸ್ಯ ಮಾಹಾತ್ಮ್ಯಂ ವಕ್ತುಂ ನಾಲಂ ಚತುರ್ಮುಖಃ ॥ ೬ ॥

ಯತ್ರೈವ ಮಾನಸೀ ಗಂಗಾ ಮಹಾಪಾಪೌಘನಾಶಿನೀ ।
ಗೋವಿಂದಕುಂಡಂ ವಿಶದಂ ಶುಭಂ ಚಂದ್ರಸರೋವರಂ ॥ ೭ ॥

---

೩. ಅದು ಗೋಪಗೋಪೀಗಣಗಳ ಮತ್ತು ಗೋವುಗಳ ರಕ್ಷಣೆಯನ್ನು ಮಾಡುತ್ತಿರುವುದು. ಕೃಷ್ಣಾನದಿಯ ಪ್ರಿಯವು. ಪೂರ್ಣಬ್ರಹ್ಮನಿಗೆ ಛತ್ರಿಸ್ವರೂಪವು. ಉತ್ಕೃಷ್ಟವಾದ ತೀರ್ಥವು ಮತ್ತಾವುದಿರುವುದು ?

೪. ಇಂದ್ರನ ಪೂಜೆಯನ್ನು ಸಹ ತಪ್ಪಿಸಿ ಭಗವಾನ್ ಶ್ರೀಕೃಷ್ಣನು ಈ ಗೋವರ್ಧನಪರ್ವತದ ಪೂಜೆಯನ್ನು ಸ್ವಜನರೊಡಗೂಡಿ ಮಾಡಿದನೆಂದಮೇಲೆ ಇದರ ಮಹಿಮೆಯನ್ನು ಹೇಳಬೇಕಾದುದೇನಿದೆ ?

೫. ಶ್ರೀಕೃಷ್ಣನು ಪರಿಪೂರ್ಣತಮನು. ಸಾಕ್ಷಾತ್ ಪರಮಾತ್ಮನು. ಅಸಂಖ್ಯ ಬ್ರಹ್ಮಾಂಡಪತಿಯು. ಗೋಲೋಕಾಧಿಪತಿಯು. ಪರಾತ್ಪರಸ್ವರೂಪನು.

೬. ಆ ಪರ್ವತದಲ್ಲಿ ಶ್ರೀಕೃಷ್ಣನು ಬಾಲಕರೊಡನೆ ಆಟವಾಡುತ್ತಾ ಇರುವನು. ಅಂದಮೇಲೆ ಅಂಥ ಗಿರಿರಾಜನ ಮಾಹಾತ್ಮೆಯು ಅದ್ಭುತವಾದುದು. ಚತುರ್ಮುಖನೂ ಸಹ ಅದರ ಮಾಹಾತ್ಮೆಯನ್ನು ವರ್ಣಿಸಲಾರನು.

೭. ಅಲ್ಲಿ ಮಾನಸೀಗಂಗೆಯು ಹರಿಯುತ್ತಿರುವುದು. ಅದರಲ್ಲಿ ಸ್ನಾನಮಾಡಿದರೆ ಮಹಾಪಾಪಗಳೂ ನಾಶವಾಗುವುವು. ಅಲ್ಲದೆ ಗೋವಿಂದಕುಂಡವೆಂಬ ಸ್ವಚ್ಛ ಸರೋವರವೂ, ಚಂದ್ರಸರೋವರವೆಂಬ ಪುಣ್ಯತೀರ್ಥವೂ ಇರುವುದು.

ರಾಧಾಕುಂಡಃ ಕೃಷ್ಣಕುಂಡೋ ಲಲಿತಾಕುಂಡ ಏವ ಚ ।
ಗೋಪಾಲಕುಂಡಸ್ತತ್ರೈವ ಕುಸುಮಾಕರ ಏವ ಚ　　　　॥ ೮ ॥

ಶ್ರೀಕೃಷ್ಣಮೌಲಿನಂ ಸ್ಪರ್ಶನ್ಮೌಲಿಚಿಹ್ನಾ ಶಿಲಾಭವತ್ ।
ತಸ್ಯಾ ದರ್ಶನಮಾತ್ರೇಣ ದೇವಮೌಲಿರ್ಭವೇಜ್ಜನಃ　　　　॥ ೯ ॥

ಯಸ್ಯಾಂ ಶಿಲಾಯಾಂ ಕೃಷ್ಣೇನ ಚಿತ್ರಾಣಿ ಲಿಖಿತಾನಿ ಚ ।
ಅದ್ಯಾಪಿ ಚಿತ್ರಾ ಪುಣ್ಯಾ ಚ ನಾಮ್ನಾ ಚಿತ್ರಶಿಲಾ ಗಿರೌ　　　　॥ ೧೦ ॥

ಯಾಂ ಶಿಲಾಮರ್ಭಕೈಃ ಕೃಷ್ಣೋ ವಾದಯನ್ ಕ್ರೀಡತೇ ರತಃ ।
ವಾದಿನೀ ಸಾ ಶಿಲಾ ಜಾತಾ ಮಹಾಪಾಪೌಘನಾಶಿನೀ　　　　॥ ೧೧ ॥

ಯತ್ರ ಶ್ರೀಕೃಷ್ಣಚಂದ್ರೇಣ ಗೋಪಾಲೈಸ್ಸಹ ಮೈಥಿಲ ।
ಕೃತಾ ವೈ ಕಂದುಕಕ್ರೀಡಾ ತತ್ಕ್ಷೇತ್ರಂ ಕಂದುಕಂ ಸ್ಮೃತಂ　　　　॥ ೧೨ ॥

---

೮. ರಾಧಾಕುಂಡ, ಕೃಷ್ಣಕುಂಡ, ಲಲಿತಾಕುಂಡ, ಗೋಪಾಲಕುಂಡ, ಕುಸುಮಾಕರ ಎಂಬ ತೀರ್ಥಗಳಿರುವುವು.

೯. ಶ್ರೀಕೃಷ್ಣನ ಮೌಲಿಸ್ಪರ್ಶದಿಂದ ಉಂಟಾದ ಮೌಲಿಚಿಹ್ನವೆಂಬ ಶಿಲೆ ಇರುವುದು. ಅದರ ದರ್ಶನಮಾತ್ರದಿಂದ ಮನುಜನು ದೇವಶ್ರೇಷ್ಠನಾಗುವನು.

೧೦. ಶ್ರೀಕೃಷ್ಣನು ಒಂದು ಶಿಲೆಯಲ್ಲಿ ಅನೇಕ ಚಿತ್ರಗಳನ್ನು ಬರೆದಿದ್ದನು. ಅದು ಈಗಲೂ ವಿಚಿತ್ರವಾಗಿಯೂ, ಪುಣ್ಯವಾಗಿಯೂ ಇರುವ ಚಿತ್ರಶಿಲಾ ಎಂಬ ಹೆಸರಿನಿಂದ ಕೂಡಿದೆ.

೧೧. ವಾದಿನೀಶಿಲೆ ಎಂಬುದಿರುವುದು. ಈ ಶಿಲೆಯಮೇಲೆ ಶ್ರೀಕೃಷ್ಣನು ಕೊಳಲನ್ನು ಬಾರಿಸುತ್ತಾ ಹುಡುಗರೊಡನೆ ಆಡುತ್ತಿದ್ದನಾದುದರಿಂದ ಇದಕ್ಕೆ ವಾದಿನೀಶಿಲೆ ಎಂದು ಹೆಸರಾಯಿತು. ಇದು ಮಹಾಪಾತಕಗಳನ್ನೂ ನಾಶಮಾಡುವುದು.

೧೨. ಕಂದುಕಕ್ಷೇತ್ರವೆಂಬುದಿರುವುದು. ಅಲ್ಲಿ ಶ್ರೀಕೃಷ್ಣನು ಗೋಪಾಲಕರೊಡನೆ ಚಂಡನ್ನಾಡಿದ್ದನು. ಆದುದರಿಂದ ಅದಕ್ಕೆ ಕಂದುಕಕ್ಷೇತ್ರವೆಂದು ಹೆಸರಾಯಿತು.

ದೃಷ್ಟ್ವಾ ಶಕ್ರಪದಂ ಯಾತಿ ನತ್ವಾ ಬ್ರಹ್ಮಪದಂ ಚ ತತ್ ।
ವಿಲುಠನ್ ಯಸ್ಯ ರಜಸಾ ಸಾಕ್ಷಾದ್ವಿಷ್ಣುಪದಂ ವ್ರಜೇತ್ ॥ ೧೩ ॥

ಗೋಪಾನಾಮುಷ್ಣಿಷಾಣ್ಯತ್ರ ಚೋರಯಾಮಾಸ ಮಾಧವಃ ।
ಔಷ್ಣಿಷಂ ನಾಮ ತತ್ತೀರ್ಥಂ ಮಹಾಪಾಪಹರಂ ಗಿರೌ ॥ ೧೪ ॥

ತತ್ರೈಕದಾ ವೈ ದಧಿವಿಕ್ರಯಾರ್ಥಂ
ವಿನಿರ್ಗತೋ ಗೋಪವಧೂಸಮೂಹಃ ।
ಶ್ರುತ್ವಾ ಕ್ವಣನ್ನೂಪುರಶಬ್ದಮಾರಾತ್
ರುರೋಧ ತನ್ಮಾರ್ಗಮನಂಗಮೋಹೀ ॥ ೧೫ ॥

ವಂಶೀಧರೋ ವೇತ್ರವರೇಣ ಗೋಪೈಃ
ಪುರಶ್ಚ ತಾಸಾಂ ವಿನಿಧಾಯ ಪಾದಂ ।
ಮಹ್ಯಂ ಕರಾದಾನಧನಾಯ ದಾನಂ
ದೇಹೀತಿ ಗೋಪೀರ್ನಿಜಗಾದ ಮಾರ್ಗೇ ॥ ೧೬ ॥

---

೧೩. ಆ ಕಂದುಕಕ್ಷೇತ್ರವನ್ನು ದರ್ಶನಮಾಡಿದರೆ ಇಂದ್ರಪದವಿಯು ಲಭಿಸುವುದು. ಅದನ್ನು ನಮಸ್ಕರಿಸಿದರೆ ಬ್ರಹ್ಮಪದವಿಯು ದೊರೆಯುವುದು. ಅಲ್ಲಿನ ಧೂಳಿನಲ್ಲಿ ಹೊರಳಾಡಿದರೆ ವಿಷ್ಣುಪದವೇ ಸಿಕ್ಕುವುದು.

೧೪. ಔಷ್ಣೀಷವೆಂಬ ಮಹಾಪಾಪಹರವಾದ ತೀರ್ಥವಿರುವುದು. ಇಲ್ಲಿ ಮಾಧವನು ಗೋಪರ ಪೇಟಗಳನ್ನು ಅಪಹರಿಸಿದ್ದನು.

೧೫. ಒಂದು ದಿನ ವ್ರಜಗೋಪಿಯರು ಮೊಸರನ್ನು ಮಾರಲು ಗೋಕುಲದಿಂದ ಹೊರಟರು. ಅವರ ಕಾಲ್ಗಡಗಗಳ ಶಬ್ದವನ್ನು ಕೇಳಿ ಶ್ರೀಹರಿಯು ಗೋಪಬಾಲಕರೊಡನೆ ಓಡಿಬಂದು ದಾರಿಗೆ ಅಡ್ಡಲಾಗಿ ನಿಂತನು.

೧೬. ತನ್ನ ಕೈಲಿದ್ದ ಬೆತ್ತವನ್ನು ತೋರಿಸುತ್ತಾ ಅವರ ಮುಂದುಗಡೆ ಕಾಲನ್ನೂರಿಕೊಂಡು ನಿಂತು ನನಗೆ ಕೈಕಾಣಿಕೆಯನ್ನು ಅರ್ಪಿಸಿ ಮುಂದೆ ಹೋಗಿರಿ ಎಂದು ಹೇಳಿದನು.

॥ ಗೋಪ್ಯ ಊಚುಃ ॥

ವಕ್ರಸ್ತ್ವಮೇವಾಸಿ ಸಮಾಸ್ಥಿತಃ ಪಥಿ
ಗೋಪಾರ್ಭಕೈರ್ಗೋರಸಲಂಪಟೋ ಭೃಶಂ ।
ಮಾತ್ರಾ ಚ ಪಿತ್ರಾ ಸಹ ಕಾರಯಾಮೋ
ಬಲಾದ್ಭವಂತಂ ಕಿಲ ಕಂಸಬಂಧನೇ ॥ ೧೭ ॥

॥ ಶ್ರೀ ಭಗವಾನುವಾಚ ॥

ಕಂಸಂ ಹನಿಷ್ಯಾಮಿ ಮಹೋಗ್ರದಂಡಂ
ಸ ಬಾಂಧವಂ ಮೇ ಶಪಥೋ ಗವಾಂ ಚ ।
ಏವಂ ಕರಿಷ್ಯಾಮಿ ಯದೋಃ ಪುರೇ ಬಲಾತ್
ನೇಷ್ಯೇ ಸದಾಹಂ ಗಿರಿರಾಜಭೂಮೇಃ ॥ ೧೮ ॥

॥ ಶ್ರೀ ನಾರದ ಉವಾಚ ॥

ಇತ್ಯುಕ್ತ್ವಾ ದಧಿಪಾತ್ರಾಣಿ ಬಾಲೈರ್ನೀತ್ವಾ ಪೃಥಕ್ ಪೃಥಕ್ ।
ಭೂಪೃಷ್ಠೇ ಪೋಥಯಾಮಾಸ ಸಾನಂದಂ ನಂದನಂದನಃ ॥ ೧೯ ॥

---

೧೭. ಆಗ ಗೋಪಿಯರಿಂತೆಂದರು :—ನೀನು ವಕ್ರನು. ಗೋಪಾಲಬಾಲಕರೊಡನೆ ದಾರಿಯಲ್ಲಿ ನಿಂತು ಹಾಲುಮೊಸರುಗಳನ್ನು ಕದಿಯುತ್ತಿರುವೆ. ನಮ್ಮ ತಂದೆ ತಾಯಿಯರಿಗೆ ಹೇಳಿ ನಿನ್ನನ್ನು ಕಂಸನಿಂದ ಬಂಧಿಸುವಂತೆ ಮಾಡಿಸುವೆವು.

೧೮. ಎನ್ನಲು, ಆಗ ಕೃಷ್ಣನಿಂತೆಂದನು :–ನೀವು ನನ್ನನ್ನು ಕಂಸನ ಹತ್ತಿರಕ್ಕೆ ಒಯ್ದರೆ ಮಹೋಗ್ರವಾದ ಶಿಕ್ಷೆಯನ್ನು ವಿಧಿಸುವ ಆ ಕಂಸನನ್ನು ಬಾಂಧವರೊಡನೆ ನಮ್ಮ ಹಸುಗಳ ಸತ್ಯವಾಗಿಯೂ ಕೊಲ್ಲುವೆನು. ಆದುದರಿಂದ ಯದುಪುರಿಯ ಗಿರಿರಾಜಭೂಮಿಯಹತ್ತಿರ ಈಗ ನಿಮ್ಮನ್ನು ಈ ರೀತಿ ಬಲಾತ್ಕರಿಸುವೆನು.

೧೯. ಎಂದು ಹೇಳಿ, ಹರಿಯು ಬಾಲಕರಿಂದ ಮೊಸರಿನ ಮಡಕೆಗಳನ್ನೆಲ್ಲಾ ತರಿಸಿ ಭೂಮಿಯಮೇಲೆ ಒಂದೊಂದಾಗಿ ಎಸೆದು ಚೂರುಮಾಡಿ ಆನಂದಪಟ್ಟನು.

ಅಹೋ ಏಷ ಪರಂ ಧೃಷ್ಟೋ ನಿರ್ಭಯೋ ನಂದನಂದನಃ ।
ನಿರಂಕುಶೋ ಭಾಷಣೀಯೋ ವನೇ ವೀರಃ ಪುರೇಽಬಲಃ ॥ ೨೦ ॥

ಬ್ರುವಾಮಹೇ ಯಶೋದಾಯೈ ನಂದಾಯ ಚ ಕಿಲಾದ್ಯ ವೈ ।
ಏವಂ ವದಂತ್ಯಸ್ತಾ ಗೋಪ್ಯಃ ಸಸ್ಮಿತಾಃ ಪರ್ಯಯುರ್ಗೃಹಾನ್ ॥ ೨೧ ॥

ನೀಪಪಾಲಾಶಪತ್ರಾಣಾಂ ಕೃತ್ವಾ ದ್ರೋಣಾನಿ ಮಾಧವಃ ।
ಜಘಾಸ ಬಾಲಕೈಸ್ಸಾರ್ಧಂ ವಿಚ್ಛಲಾನಿ ದಧೀನಿ ಚ ॥ ೨೨ ॥

ದ್ರೋಣಾಕಾರಾಣಿ ಪತ್ರಾಣಿ ಬಭೂವುಃ ಶಾಖಿನಾಂ ತದಾ ।
ತತ್ಕ್ಷೇತ್ರಂ ಚ ಮಹಾಪುಣ್ಯಂ ದ್ರೋಣಂ ನಾಮ ನೃಪೇಶ್ವರ ॥ ೨೩ ॥

ದಧಿ ದಾನಂ ತತ್ರ ಕೃತ್ವಾ ಪೀತ್ವಾ ಪತ್ರಧೃತಂ ದಧಿ ।
ನಮಸ್ಕುರ್ಯಾನ್ನರಸ್ತಸ್ಯ ಗೋಲೋಕಾನ್ನ ಚ್ಯುತಿರ್ಭವೇತ್ ॥ ೨೪ ॥

೨೦-೨೧. ಆಗ ಗೋಪಿಯರು ವ್ಯಥಿತರಾಗಿ ಇವನು ಬಲುದುಷ್ಟನು. ಸ್ವಲ್ಪವಾದರೂ ಭಯವೇ ಇಲ್ಲವು. ಸ್ವೇಚ್ಛೆಯಾಗಿ ಮಾತನಾಡುವನು. ಇವನ ಶಕ್ತಿಯಲ್ಲಾ ವನದಲ್ಲಿ, ನಮ್ಮ ಹತ್ತಿರವೇ. ಪಟ್ಟಣದಲ್ಲಿ ಬಲವಿಲ್ಲದವನಂತಿರುವನು. ಬನ್ನಿ ಎಲ್ಲರೂ ಹೋಗಿ ಯಶೋದೆಗೆ ಇವನ ತುಂಟಾಟವನ್ನು ತಿಳಿಸೋಣ ಎಂದುಕೊಂಡು ಇವನು ಮಾಡಿದ ಕೃತ್ಯಕ್ಕೆ ನಗುತ್ತಾ ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿದರು.

೨೨. ಆಗ ಮಾಧವನು ನೀಪ, ಮುತ್ತಗ ಇವುಗಳ ಎಲೆಗಳಿಂದ ದೊನ್ನೆಗಳನ್ನು ಮಾಡಿ ಬಾಲಕರೊಡನೆ ಆ ಗರಣೆಮೊಸರನ್ನು ತುಂಬಿಕೊಂಡು ಕುಡಿದನು.

೨೩. ಅಲ್ಲಿರುವ ಮರಗಳ ಎಲೆಗಳೆಲ್ಲಾ ದೊನ್ನೆಯ ಆಕಾರವಾಗಿಯೇ ಆದುವು. ಆ ಪ್ರದೇಶಕ್ಕೆ ದ್ರೋಣ ಎಂಬ ಹೆಸರಾಯಿತು. ಅದು ಮಹಾ ಪುಣ್ಯಕರವಾದುದು.

೨೪. ಆದುದರಿಂದ ಯಾರು ಆ ಪ್ರದೇಶದಲ್ಲಿ ದಧಿದಾನವನ್ನು ಮಾಡುವರೋ ಮತ್ತು ಅಲ್ಲಿರುವ ಮರಗಳ ಎಲೆಯಮೇಲೆ ದಧಿಯನ್ನಿಟ್ಟುಕೊಂಡು ತಿಂದು ನಮಸ್ಕರಿಸುವರೋ ಅವರಿಗೆ ಗೋಲೋಕವು ಸಿಕ್ಕುವುದಲ್ಲದೆ ಅಲ್ಲಿಂದ ಎಂದೂ ಚ್ಯುತಿಯುಂಟಾಗುವುದಿಲ್ಲ.

ನೇತ್ರೇ ಆಚ್ಛಾದ್ಯ ಯತ್ರೈವ ಲೀನೋಽಭೂನ್ಮಾಧವೋಽರ್ಭಕೈಃ ।
ತತ್ರ ತೀರ್ಥಂ ಲೌಕಿಕಂ ಚ ಜಾತಂ ಪಾಪಪ್ರಣಾಶನಂ ॥ ೨೫ ॥

ಕದಂಬಖಂಡತೀರ್ಥಂ ಚ ಲೀಲಾಯುಕ್ತಂ ಹರೇಸ್ಸದಾ ।
ತಸ್ಯ ದರ್ಶನಮಾತ್ರೇಣ ನರೋ ನಾರಾಯಣೋ ಭವೇತ್ ॥ ೨೬ ॥

ಯತ್ರೈವ ರಾಧಯಾ ರಾಸೇ ಶೃಂಗಾರೋಽಕಾರಿ ಮೈಥಿಲ ।
ತತ್ರ ಗೋವರ್ಧನೇ ಜಾತಂ ಸ್ಥಲಂ ಶೃಂಗಾರಮಂಡಲಂ ॥ ೨೭ ॥

ಯೇನ ರೂಪೇಣ ಕೃಷ್ಣೇನ ಧೃತೋ ಗೋವರ್ಧನೋ ಗಿರಿಃ ।
ತದ್ರೂಪಂ ವಿದ್ಯತೇ ತತ್ರ ನೃಪ ಶೃಂಗಾರಮಂಡಲಂ ॥ ೨೮ ॥

---

೨೫. ಮಾಧವನು ಹುಡುಗರೊಡನೆ ಕಣ್ಣಾಮುಚ್ಚಾಲೆಯನ್ನು ಆಡುವ ಸಮಯದಲ್ಲಿ ಒಂದು ಪ್ರದೇಶದಲ್ಲಿ ಕಣ್ಣನ್ನು ಮುಚ್ಚಿಕೊಂಡು ಅಡಗಿದ್ದನು. ಆ ಸ್ಥಳಕ್ಕೆ ಲೌಕಿಕತೀರ್ಥವೆಂದು ಹೆಸರಾಯಿತು. ಅದು ಸರ್ವಪಾಪಗಳನ್ನೂ ನಾಶ ಮಾಡುವುದು.

೨೬. ಒಂದು ಪ್ರದೇಶದಲ್ಲಿ ಹರಿಯು ಯಾವಾಗಲೂ ಲೀಲೆಯಾಡುತ್ತಿದ್ದನು. ಅದಕ್ಕೆ ಕದಂಬಖಂಡತೀರ್ಥವೆಂದು ಹೆಸರಾಯಿತು. ಅದರ ದರ್ಶನಮಾತ್ರದಿಂದ ನರನು ನಾರಾಯಣನೇ ಆಗುವನು.

೨೭. ಗೋವರ್ಧನಪರ್ವತದ ಒಂದು ಪ್ರದೇಶದಲ್ಲಿ ಶ್ರೀಕೃಷ್ಣನು ರಾಧೆಯೊಡನೆ ಶೃಂಗಾರವನ್ನಾಡಿದನು. ಆ ಸ್ಥಳವು ಶೃಂಗಾರಮಂಡಲವೆಂದು ಪ್ರಸಿದ್ಧವಾಗಿದೆ.

೨೮. ಆ ಶೃಂಗಾರಮಂಡಲದಲ್ಲಿ ಕೃಷ್ಣನು ಯಾವ ರೂಪದಲ್ಲಿ ಗೋವರ್ಧನ ಪರ್ವತವನ್ನು ಧರಿಸಿದ್ದನೋ ಆ ಕೃಷ್ಣನ ರೂಪವು ಈಗಲೂ ಇರುವುದು.

ಶಬ್ದಾಶ್ಚತುಸ್ಸಹಸ್ರಾಣಿ ತಥಾ ಚಾಷ್ಟೌ ಶತಾನಿ ಚ ।
ಗತಾಸ್ತತ್ರ ಕಲೇರಾದೌ ಕ್ಷೇತ್ರೇ ಶೃಂಗಾರಮಂಡಲೇ ॥ ೨೯ ॥

ಗಿರಿರಾಜಗುಹಾಮಧ್ಯಾತ್ಸರ್ವೇಷಾಂ ಪಶ್ಯತಾಂ ನೃಪ ।
ಸ್ವತಸ್ಸಿದ್ಧಂ ಚ ತದ್ರೂಪಂ ಹರೇಃ ಪ್ರಾದುರ್ಭವಿಷ್ಯತಿ ॥ ೩೦ ॥

ಶ್ರೀನಾಥಂ ದೇವದಮನಂ ತಂ ವಿದಿಷ್ಯಂತಿ ಸಜ್ಜನಾಃ ।
ಗೋವರ್ಧನಗಿರೌ ರಾಜನ್ಸದಾಲೀಲಾಂ ಕರೋತಿ ಯಃ ॥ ೩೧ ॥

ಯೇ ಕರಿಷ್ಯಂತಿ ನೇತ್ರಾಭ್ಯಾಂ ತಸ್ಯ ರೂಪಸ್ಯ ದರ್ಶನಂ ।
ತೇ ಕೃತಾರ್ಥಾ ಭವಿಷ್ಯಂತಿ ಮೈಥಿಲೇಂದ್ರ ಕಲೌ ಜನಾಃ ॥ ೩೨ ॥

ಜಗನ್ನಾಥೋ ರಂಗನಾಥೋ ದ್ವಾರಕಾನಾಥ ಏವ ಚ ।
ಬದ್ರಿನಾಥಶ್ಚತುಷ್ಕೋಣೇ ಭಾರತಸ್ಯಾಪಿ ವರ್ತತೇ ॥ ೩೩ ॥

೨೯-೩೦. ಎಲೈ ರಾಜನೇ, ಕಲಿಯುಗದ ಆದಿಯಲ್ಲಿ ನಾಲ್ಕುಸಾವಿರದ ಎಂಟನೂರು ಶಬ್ದಗಳು ಆ ಶೃಂಗಾರಮಂಡಲವೆಂಬ ಕ್ಷೇತ್ರದಲ್ಲಿ ಗೋವರ್ಧನ ಪರ್ವತದ ಗುಹೆಯೊಂದರೊಳಗೆ ಪ್ರವೇಶಮಾಡಿ ಬಳಿಕ ಎಲ್ಲರೂ ಕಾಣುವಂತೆ ಹರಿಯ ರೂಪವನ್ನು ಹೊಂದಿ ಈಚೆಗೆ ಬರುವುದು.

೩೧. ಗೋವರ್ಧನಪರ್ವತದಲ್ಲಿ ಸರ್ವದಾ ಲೀಲೆಯನ್ನು ಆಡುತ್ತಿರುವ ಅವನನ್ನು ಸತ್ಪುರುಷರು ಶ್ರೀನಾಥನೆಂದೂ, ದೇವದಮನನೆಂದೂ ಕರೆಯುವರು.

೩೨. ಈ ಕಲಿಯುಗದಲ್ಲಿ ಯಾರು ತಮ್ಮ ಕಣ್ಣುಗಳಿಂದ ಅವನ ಸ್ವರೂಪನ್ನು ದರ್ಶನಮಾಡುವರೋ ಅವರು ಕೃತಾರ್ಥರಾಗುವರು.

೩೩. ಭಾರತದ ನಾಲ್ಕು ಮೂಲೆಗಳಲ್ಲಿ ಜಗನ್ನಾಥ, ರಂಗನಾಥ, ದ್ವಾರಕಾ ನಾಥ, ಬದ್ರಿನಾಥ ಎಂಬ ನಾಲ್ಕು ಪರಮಾತ್ಮನ ಸ್ವರೂಪಗಳಿರುವುವು.

ಮಧ್ಯೇ ಗೋವರ್ಧನಸ್ಯಾಪಿ ನಾಥೋಽಯಂ ವರ್ತತೇ ನೃಪ ।
ಪವಿತ್ರೇ ಭಾರತೇ ವರ್ಷೇ ಪಂಚ ನಾಥಾಃ ಸುರೇಶ್ವರಾಃ ॥ ೩೪ ॥

ಸದ್ಧರ್ಮಮಂಟಪಸ್ತಂಭಾ ಆರ್ತತ್ರಾಣಪರಾಯಣಾಃ ।
ತೇಷಾಂ ತು ದರ್ಶನಂ ಕೃತ್ವಾ ನರೋ ನಾರಾಯಣೋ ಭವೇತ್ ॥ ೩೫ ॥

ಚತುರ್ಣಾಂ ಭುವಿ ನಾಥಾನಾಂ ಕೃತ್ವಾ ಯಾತ್ರಾಂ ನರಃ ಸುಧೀಃ ।
ನ ಪಶ್ಯೇದ್ದೇವದಮನಂ ಸ ನ ಯಾತ್ರಾಫಲಂ ಲಭೇತ್ ॥ ೩೬ ॥

ಶ್ರೀನಾಥಂ ದೇವದಮನಂ ಪಶ್ಯೇದ್ಗೋವರ್ಧನೇ ಗಿರೌ ।
ಚತುರ್ಣಾಂ ಭುವಿ ನಾಥಾನಾಂ ಯಾತ್ರಾಯಾಃ ಫಲಮಾಪ್ನುಯಾತ್ ॥ ೩೭ ॥

---

೩೪. ಎಲೈ ಮೈಥಿಲ, ಗೋವರ್ಧನಪರ್ವತದಲ್ಲಿ ಈ ಶ್ರೀನಾಥನು ನೆಲೆಸಿರುವನು. ಆದುದರಿಂದ ಪವಿತ್ರವಾದ ಭಾರತದೇಶದಲ್ಲಿ ಜಗನ್ನಾಥ, ರಂಗನಾಥ, ದ್ವಾರಕಾನಾಥ, ಬದ್ರಿನಾಥ, ಶ್ರೀನಾಥರೆಂಬ ಐದು ಜನರು ನೆಲಸಿದಂತಾಯಿತು. ಇವರೆಲ್ಲರೂ ದೇವತೆಗಳಿಗೆ ಅಧಿಪತಿಗಳು.

೩೫. ಅವರೆಲ್ಲರೂ ಸದ್ಧರ್ಮಗಳೆಂಬ ಮಂಟಪಗಳಿಗೆ ಸ್ತಂಭಪ್ರಾಯರು. ದುಃಖಿಗಳ ದುಃಖವನ್ನು ನಾಶಮಾಡುವವರು. ಇವರ ದರ್ಶನವನ್ನು ಮಾಡುತ್ತಿದ್ದರೆ ನರನು ನಾರಾಯಣನೇ ಆಗುವನು.

೩೬. ಈ ನಾಲ್ಕು ಜನರಿರುವ ಸ್ಥಳಕ್ಕೆ ಯಾತ್ರೆಬೆಳೆಸಿ ಅವರ ದರ್ಶನವನ್ನು ಮಾಡಿ ಯಾರು ಗೋವರ್ಧನಪರ್ವತದಲ್ಲಿರುವ ದೇವದಮನನ ದರ್ಶನವನ್ನು ಮಾಡುವುದಿಲ್ಲವೋ ಅವರ ಯಾತ್ರೆಯು ನಿಷ್ಫಲವಾಗುವುದು.

೩೭. ಯಾರು ಮೊದಲೇ ಗೋವರ್ಧನಪರ್ವತಕ್ಕೆ ಯಾತ್ರೆ ಬೆಳೆಸಿ ಅಲ್ಲಿರುವ ದೇವದಮನನನ್ನು ಸಂದರ್ಶಿಸುವರೋ ಅವರಿಗೆ ಇನ್ನುಳಿದ ನಾಲ್ಕು ಜನರನ್ನು ಸಂದರ್ಶಿಸಿದಷ್ಟು ಫಲವುಂಟಾಗುವುದು.

ಐರಾವತಸ್ಯ ಸುರಭೇಃ ಪದಚಿಹ್ನಾನಿ ಯತ್ರ ವೈ ।
ತತ್ರ ನತ್ವಾ ನರಃ ಪಾಪೀ ವೈಕುಂಠಂ ಯಾತಿ ಮೈಥಿಲ ॥ ೩೮ ॥

ಹಸ್ತಚಿಹ್ನಂ ಪಾದಚಿಹ್ನಂ ಶ್ರೀಕೃಷ್ಣಸ್ಯ ಮಹಾತ್ಮನಃ ।
ದೃಷ್ಟ್ವಾ ನತ್ವಾ ನರಃ ಕಶ್ಚಿತ್ ಸಾಕ್ಷಾತ್ಕೃಷ್ಣಪದಂ ವ್ರಜೇತ್ ॥ ೩೯ ॥

ಏತಾನಿ ನೃಪ ತೀರ್ಥಾನಿ ಕುಂಡಾದ್ಯಾಯತನಾನಿ ಚ ।
ಅಂಗಾನಿ ಗಿರಿರಾಜಸ್ಯ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೪೦ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗಿರಿರಾಜಖಂಡೇ
ಗಿರಿರಾಜತೀರ್ಥವರ್ಣನಂ ನಾಮ ಸಪ್ತಮೋಽಧ್ಯಾಯಃ

---

೩೮. ಐರಾವತದ ಮತ್ತು ಕಾಮಧೇನುವಿನ ಪಾದಚಿಹ್ನೆಯನ್ನು ಎಲ್ಲಿಯಾದರೂ ಯಾರು ಸಂದರ್ಶಿಸುವರೋ ಅವನು ಪಾಪಿಯಾದರೂ ಸಹ ವೈಕುಂಠವನ್ನು ಪಡೆಯುವನು.

೩೯. ಶ್ರೀಕೃಷ್ಣನ ಹಸ್ತಚಿಹ್ನೆ, ಪಾದದ ಚಿಹ್ನೆ ಇವುಗಳನ್ನು ಯಾವನು ಸಂದರ್ಶಿಸುವನೋ ಅವನು ಶ್ರೀಕೃಷ್ಣನ ಪಾದವನ್ನು ಸೇರುವನು.

೪೦. ಎಲೈ ಮೈಥಿಲ, ಇವು ಗೋವರ್ಧನಪರ್ವತದಲ್ಲಿರುವ ತೀರ್ಥಕ್ಷೇತ್ರಗಳು. ಇವು ಗಿರಿರಾಜನಾದ ಗೋವರ್ಧನನ ಅಂಗಭೂತಗಳು. ಮತ್ತೇನನ್ನು ಕೇಳಬೇಕೆಂದಿರುವೆ ?

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಗಿರಿರಾಜಖಂಡದಲ್ಲಿ ಗಿರಿರಾಜತೀರ್ಥವರ್ಣನೆ
ಎಂಬ ಏಳನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗಿರಿರಾಜಖಂಡೇ

ಅಷ್ಟಮೋಽಧ್ಯಾಯಃ

॥ ಬಹುಲಾಶ್ವ ಉವಾಚ ॥

ಕೇಷು ಕೇಷು ತದಂಗೇಷು ಕಿಂ ಕಿಂ ತೀರ್ಥಂ ಸಮಾಶ್ರಿತಂ ।
ವದ ದೇವ ಮಹಾಭಾಗ ತ್ವಂ ಪರಾವರವಿತ್ತಮಃ ॥ ೧ ॥

॥ ಶ್ರೀ ನಾರದ ಉವಾಚ ॥

ಯತ್ರ ಯಸ್ಯ ಪ್ರಸಿದ್ಧಿಃ ಸ್ಯಾತ್ತದಂಗಂ ಪರಮಂ ವಿದುಃ ।
ಕ್ರಮತೋ ನಾಸ್ತ್ಯಂಗಚಯೋ ಗಿರಿರಾಜಸ್ಯ ಮೈಥಿಲ ॥ ೨ ॥

ಎಂಟನೆಯ ಅಧ್ಯಾಯವು

೧. ಬಹುಲಾಶ್ವನು ನಾರದಮುನಿಯನ್ನು ಕುರಿತು ಪ್ರಶ್ನೆಮಾಡಿದನು :— ಎಲೈ ಮುನಿವರನೇ, ಆ ಗೋವರ್ಧನಪರ್ವತದ ಯಾವಯಾವ ಅಂಗದಲ್ಲಿ ಯಾವ ಯಾವ ತೀರ್ಥಗಳಿರುವುವು ? ಅವುಗಳನ್ನು ದಯವಿಟ್ಟು ತಿಳಿಸು.

೨–೩. ಎನ್ನಲು ನಾರದನು ಹೇಳಿದನು :—ಎಲೈ ಮೈಥಿಲ, ಆ ಪರ್ವತದಲ್ಲಿ ಯಾವ ಭಾಗವು ಪ್ರಸಿದ್ಧಿಯಾಗಿರುವುದೋ ಅದನ್ನೇ ಅದರ ಪವಿತ್ರವಾದ ಅಂಗ ವೆಂದು ತಿಳಿಯುವರು. ಸರ್ವವ್ಯಾಪಿಯಾದ ಪರಬ್ರಹ್ಮನಿಗೆ ಅವಯವಗಳ ನಿರ್ದೇಶ ವಿಲ್ಲದೆ ಅವನ ವಿಭೂತಿಗಳೇ ಅಂಗಗಳೆಂದು ಹೇಳುವರೋ ಹಾಗೆ ಆ ಗಿರಿರಾಜನಿಗೆ ಕ್ರಮವಾದ ಅಂಗಗಳು ಇಲ್ಲವು. ಆವುಗಳನ್ನು ಅದರಂತೆಯೇ ವಿವರಿಸುವೆನು.

ಯಥಾ ಸರ್ವಗತಂ ಬ್ರಹ್ಮ ಸರ್ವಾಂಗಾನಿ ಚ ತಸ್ಯ ವೈ ।
ವಿಭೂತೇರ್ಭಾವತಃ ಶಶ್ವತ್ತಥಾ ವಕ್ಷ್ಯಾಮಿ ಮಾನದ ॥ ೩ ॥

ಶೃಂಗಾರಮಂಡಲಸ್ಯಾಧೋ ಮುಖಂ ಗೋವರ್ಧನಸ್ಯ ಚ ।
ಯತ್ರಾನ್ನಕೂಟಂ ಕೃತವಾನ್ ಭಗವಾನ್ವ್ರಜವಾಸಿಭಿಃ ॥ ೪ ॥

ನೇತ್ರೇ ವೈ ಮಾನಸೀಗಂಗಾ ನಾಸಾ ಚಂದ್ರಸರೋವರಃ ।
ಗೋವಿಂದಕುಂಡೋ ಹ್ಯಧರಃ ಚಿಬುಕಂ ಕೃಷ್ಣಕುಂಡಲಃ ॥ ೫ ॥

ರಾಧಾಕುಂಡಂ ತಸ್ಯ ಜಿಹ್ವಾ ಕಪೋಲೌ ಲಲಿತಾಸರಃ ।
ಗೋಪಾಲಕುಂಡಃ ಕರ್ಣಶ್ಚ ಕರ್ಣಾಂತಃ ಕುಸುಮಾಕರಃ ॥ ೬ ॥

ಮೌಲಿಚಿಹ್ನಾ ಶಿಲಾ ತಸ್ಯ ಲಲಾಟಂ ವಿದ್ಧಿ ಮೈಥಿಲ ।
ಶಿರಶ್ಚಿತ್ರಶಿಲಾ ತಸ್ಯ ಗ್ರೀವಾ ವೈ ವಾದನೀಶಿಲಾ ॥ ೭ ॥

ಕಾಂದುಕಂ ಪಾರ್ಶ್ವದೇಶಾಂಶ್ಚ ಔಷ್ಣೀಷಂ ಕಟಿರುಚ್ಯತೇ ।
ದ್ರೋಣತೀರ್ಥಂ ಪೃಷ್ಠದೇಶೇ ಲೌಕಿಕಂ ಚೋದರೇ ಸ್ಮೃತಂ ॥ ೮ ॥

---

೪. ಶೃಂಗಾರಮಂಡಲದ ಕೆಳಭಾಗವೇ ಗೋವರ್ಧನಪರ್ವತದ ಮುಖವು ಅಲ್ಲಿಯೇ ಶ್ರೀಕೃಷ್ಣನು ಗೋಪರಿಂದ ಅನ್ನದ ರಾಶಿಯನ್ನು ಹಾಕಿಸಿದ್ದುದು.

೫. ಅದರ ನೇತ್ರಗಳು ಮಾನಸೀಗಂಗೆಯು. ಚಂದ್ರಸರೋವರವೇ ಪರ್ವತದ ಮೂಗು, ಗೋವಿಂದಕುಂಡವೆಂಬುದೇ ಗಲ್ಲವು.

೬. ರಾಧಾಕುಂಡವೆಂಬುದೇ ಪರ್ವತದ ನಾಲಗೆಯು. ಲಲಿತಾಸರಸ್ಸೇ ಕೆನ್ನೆಗಳು, ಗೋಪಾಲಕುಂಡವೇ ಕರ್ಣವು, ಕುಸುಮಾಕರವೇ ಕರ್ಣಾಂತರವು.

೭. ಪರ್ವತದ ಲಲಾಟವು ಮೌಲಿಚಿಹ್ನೆ ಎಂಬ ಶಿಲೆಯು. ಚಿತ್ರಶಿಲಾ ಎಂಬುದು ತಲೆಯು, ವಾದನೀಶಿಲಾ ಎಂಬುದು ಅದರ ಕತ್ತು.

೮. ಕಾಂದುಕವೆಂಬುದು ಪರ್ವತದ ಪಾರ್ಶ್ವಭಾಗಗಳು, ಔಷ್ಣೀಷವೆಂಬುದು ಅದರ ಸೊಂಟವು, ಅವನ ಹಿಂಭಾಗದಲ್ಲಿ ದ್ರೋಣತೀರ್ಥವಿರುವುದು, ಮಧ್ಯಭಾಗದಲ್ಲಿ ಲೌಕಿಕವೆಂಬ ತೀರ್ಥವಿರುವುದು.

ಕದಂಬಖಂಡಮುರಸಿ ಜೀವಃ ಶೃಂಗಾರಮಂಡಲಂ ।
ಶ್ರೀಕೃಷ್ಣಪಾದಚಿಹ್ನಂ ತು ಮನಸ್ತಸ್ಯ ಮಹಾತ್ಮನಃ ॥ ೯ ॥

ಹಸ್ತಚಿಹ್ನಂ ತಥಾ ಬುದ್ಧಿರೈರಾವತಪದಂ ಪದಂ ।
ಸುರಭೇಃ ಪಾದಚಿಹ್ನೇಷು ಪಕ್ಷೌ ತಸ್ಯ ಮಹಾತ್ಮನಃ ॥ ೧೦ ॥

ಪುಚ್ಛಕುಂಡೇ ತಥಾ ಪುಚ್ಛಂ ವತ್ಸಕುಂಡೇ ಬಲಂ ಸ್ಮೃತಂ ।
ರುದ್ರಕುಂಡೇ ತಥಾ ಕ್ರೋಧಂ ಕಾಮಂ ಶಕ್ರಸರೋವರೇ ॥ ೧೧ ॥

ಕುಬೇರತೀರ್ಥಂ ಚೋದ್ಯೋಗಂ ಬ್ರಹ್ಮತೀರ್ಥೇ ಪ್ರಸನ್ನತಾಂ ।
ಯಮತೀರ್ಥೇ ಹ್ಯಹಂಕಾರಂ ವದಂತೀತ್ಥಂ ಪುರಾವಿದಃ ॥ ೧೨ ॥

ಏವಮಂಗಾನಿ ಸರ್ವತ್ರ ಗಿರಿರಾಜಸ್ಯ ಮೈಥಿಲ ।
ಕಥಿತಾನಿ ಮಯಾ ತುಭ್ಯಂ ಸರ್ವಪಾಪಹರಾಣಿ ಚ ॥ ೧೩ ॥

---

೯. ಪರ್ವತದ ಎದೆಯಲ್ಲಿ ಕದಂಬಖಂಡಗಳಿರುವುವು. ಶೃಂಗಾರಮಂಡಲವೇ ಜೀವವು. ಶ್ರೀಕೃಷ್ಣನ ಪಾದಚಿಹ್ನೆಯು. ಆ ಮಹಾತ್ಮನಾದ ಪರ್ವತರಾಜನ ಮನಸ್ಸು.

೧೦. ಕೃಷ್ಣನ ಹಸ್ತಚಿಹ್ನೆಯು ಪರ್ವತರಾಜನ ಬುದ್ಧಿಯು. ಐರಾವತ ಪದಚಿಹ್ನೆಯು ಅವನ ಪಾದವು. ಕಾಮಧೇನುವಿನ ಪಾದಚಿಹ್ನೆಗಳು ಅವನ ರೆಕ್ಕೆಗಳು.

೧೧. ಪುಚ್ಛಕುಂಡದಲ್ಲಿ ಅವನ ಪುಚ್ಛವೂ, ವತ್ಸಕುಂಡದಲ್ಲಿ ಅವನ ಬಲವೂ, ರುದ್ರಕುಂಡದಲ್ಲಿ ಕ್ರೋಧವೂ, ಶಕ್ರಸರೋವರದಲ್ಲಿ ಕಾಮವೂ ಇರುವುದು.

೧೨. ಕುಬೇರತೀರ್ಥದಲ್ಲಿ ಅವನ ಕಾರ್ಯವೂ, ಬ್ರಹ್ಮತೀರ್ಥದಲ್ಲಿ ಪ್ರಸನ್ನತೆಯೂ, ಯಮತೀರ್ಥದಲ್ಲಿ ಅಹಂಕಾರವೂ ಇರುವುದೆಂದು ಪ್ರಾಚೀನರು ಹೇಳುವರು.

೧೩. ಎಲೈ ಮೈಥಿಲ, ಇವೇ ಗಿರಿರಾಜನ ಅಂಗಗಳು. ಇವು ಸರ್ವಪಾಪಗಳನ್ನೂ ನಾಶಮಾಡುವುವು. ಇಷ್ಟನ್ನೂ ನಿನಗೆ ಹೇಳಿರುವೆನು

ಗಿರಿರಾಜವಿಭೂತಿಂ ಚ ಯಃ ಶೃಣೋತಿ ನರೋತ್ತಮಃ ।
ಸ ಗಚ್ಛೇದ್ಧಾಮ ಪರಮಂ ಗೋಲೋಕಂ ಯೋಗಿದುರ್ಲಭಂ ॥ ೧೪ ॥

ಸಮುತ್ಥಿತೋಽಸೌ ಹರಿವಕ್ಷಸೋ ಗಿರಿಃ
ಗೋವರ್ಧನೋ ನಾಮ ಗಿರೀಂದ್ರರಾಜರಾಟ್ ।
ಸಮಾಗತೋಽಹ್ಯತ್ರ ಪುಲಸ್ತ್ಯತೇಜಸಾ
ಯದ್ದರ್ಶನಾಜ್ಜನ್ಮಪುನರ್ನ ವಿದ್ಯತೇ ॥ ೧೫ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗಿರಿರಾಜಖಂಡೇ ಶ್ರೀ ಗಿರಿರಾಜ ವಿಭೂತಿವರ್ಣನಂ ನಾಮಾಷ್ಟಮೋಽಧ್ಯಾಯಃ

---

೧೪. ಯಾರು ಗಿರಿರಾಜನ ವೈಭವಗಳನ್ನು ಕೇಳುವರೋ, ಅವರೇ ನರಶ್ರೇಷ್ಠರು. ಅವರಿಗೆ ಯೋಗಿಗಳಿಗೂ ದುರ್ಲಭವಾದ ಪವಿತ್ರವಾದ ಗೋಲೋಕವು ಪ್ರಾಪ್ತವಾಗುವುದು.

೧೫. ಈ ಗೋವರ್ಧನವೆಂಬ ಪರ್ವತರಾಜನು ಹರಿಯ ವಕ್ಷಸ್ಸಿನಿಂದ ಹುಟ್ಟಿ ಆತ್ಮತೇಜಸ್ಸಿನಿಂದ ಪ್ರಕಾಶಿಸುತ್ತಾ ಇಲ್ಲಿರುವನು. ಇವನ ದರ್ಶನದಿಂದ ಪುನಃ ಜನ್ಮವುಂಟಾಗುವುದಿಲ್ಲವು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಗಿರಿರಾಜಖಂಡದಲ್ಲಿ ಶ್ರೀ ಗಿರಿರಾಜನ ವಿಭೂತಿವರ್ಣನೆ ಎಂಬ ಎಂಟನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗಿರಿರಾಜಖಂಡೇ

ನವಮೋಽಧ್ಯಾಯಃ

॥ ಬಹುಲಾಶ್ವ ಉವಾಚ ॥

ಅಹೋ ಗೋವರ್ಧನಃ ಸಾಕ್ಷಾದ್ಗಿರಿರಾಜೋ ಹರಿಪ್ರಿಯಃ ।
ನ ತತ್ಸಮಾನಂ ತೀರ್ಥಂ ಹಿ ವಿದ್ಯತೇ ಭೂತಲೇ ದಿವಿ ॥ ೧ ॥

ಕದಾ ಬಭೂವ ಶ್ರೀಕೃಷ್ಣವಕ್ಷಸೋಽಯಂ ಗಿರೀಶ್ವರಃ ।
ಏತದ್ವದ ಮಹಾಬುದ್ಧೇ ತ್ವಂ ಸಾಕ್ಷಾದ್ಧರಿಮಾನಸಃ ॥ ೨ ॥

ಒಂಭತ್ತನೆಯ ಅಧ್ಯಾಯವು

೧. ಬಹುಲಾಶ್ವನು ಇಂತೆಂದನು :–ಎಲೈ ನಾರದಮಹರ್ಷಿಯೇ, ಗಿರಿರಾಜನಾದ ಗೋವರ್ಧನನು ಹರಿಯ ಪ್ರೀತಿಪಾತ್ರನು. ಅವನಲ್ಲಿರತಕ್ಕ ತೀರ್ಥಗಳಿಗೆ ಸಮಾನವಾದ ತೀರ್ಥಗಳು ಭೂಮಿಯಲ್ಲೂ ಸ್ವರ್ಗದಲ್ಲೂ ಸಹ ಇಲ್ಲ.

೨. ಈ ಪರ್ವತವು ಶ್ರೀಕೃಷ್ಣನ ಎದೆಯಿಂದ ಯಾವಾಗ ಹುಟ್ಟಿತು ? ನೀನು ಮಹಾಪ್ರಾಜ್ಞನು. ಹರಿಯಲ್ಲಿಯೇ ಮನಸ್ಸುಳ್ಳವನು ಆದುದರಿಂದ ಇವೆಲ್ಲವನ್ನೂ ನನಗೆ ತಿಳಿಸು.

|| ಶ್ರೀ ನಾರದ ಉವಾಚ ||

ಗೋಲೋಕೋತ್ಪತ್ತಿವೃತ್ತಾಂತಂ ಶೃಣು ರಾಜನ್ ಮಹಾಮತೇ ।
ಚತುಷ್ಪದಾರ್ಥದಂ ನೄಣಾಮಾದ್ಯಲೀಲಾಸಮನ್ವಿತಂ || ೩ ||

ಅನಾದಿರಾತ್ಮಪುರುಷೋ ನಿರ್ಗುಣಃ ಪ್ರಕೃತೇಃ ಪರಃ ।
ಪರಿಪೂರ್ಣತಮಃ ಸಾಕ್ಷಾಚ್ಛ್ರೀಕೃಷ್ಣೋ ಭಗವಾನ್ಪ್ರಭುಃ || ೪ ||

ಪ್ರತ್ಯಗ್ಧಾಮಸ್ವಯಂ ಜ್ಯೋತೀ ರಮಮಾಣೋ ನಿರಂತರಂ ।
ಯತ್ರ ಕಾಲಃ ಕಲಯತಾಮೀಶ್ವರೋ ಧಾಮ ಮಾನಿನಾಂ || ೫ ||

ರಾಜನ್ ನ ಪ್ರಭವೇನ್ಮಾಯಾ ನ ಮಹಾಂಶ್ಚ ಗುಣಃ ಕೃತಃ ।
ನ ವಿಶಂತಿ ಕ್ವಚಿದ್ರಾಜನ್ಮನಶ್ಚಿತ್ತೋ ಮತಿರ್ಹ್ಯಹಂ || ೬ ||

---

೩. ಎನ್ನಲು, ನಾರದನು ಹೇಳಿದನು :–ಎಲೈ ಬುದ್ಧಿಶಾಲಿಯಾದ ರಾಜನೇ, ಗೋಲೋಕವು ಹುಟ್ಟಿದ ವೃತ್ತಾಂತವನ್ನು ಹೇಳುವೆನು ಕೇಳು. ಇದನ್ನು ಕೇಳಿದರೆ ಧರ್ಮಾರ್ಥಕಾಮಮೋಕ್ಷಗಳು ಸಿದ್ಧಿಸುವುವು. ಇದು ಪರಮಾತ್ಮನ ಆದ್ಯಲೀಲೆಯಿಂದ ಕೂಡಿದುದು.

೪. ಭಗವಂತನಾದ ಶ್ರೀಕೃಷ್ಣನು ಅನಾದಿಪುರುಷನು. ಪರಮಾತ್ಮನು. ನಿರ್ಗುಣನು. ಪ್ರಕೃತಿಗಿಂತಲೂ ಭಿನ್ನನಾದವನು. ಪರಿಪೂರ್ಣತಮನು. ಪ್ರಭುವು.

೫. ಪರಮಾತ್ಮನನ್ನು ಜ್ಯೋತಿಸ್ವರೂಪನೆಂದು ತಿಳಿದು ಕಾಲವನ್ನು ನಿರೀಕ್ಷಿಸುತ್ತಿರುವ ಯೋಗಿಗಳ ಹೃದಯದಲ್ಲಿ ಆ ಈಶ್ವರನು ಊರ್ಧ್ವಜ್ಯೋತಿಸ್ವರೂಪನಾಗಿ ಯಾವಾಗಲೂ ಪ್ರಕಾಶಿಸುವನು.

೬. ಪರಮಾತ್ಮನನ್ನು ಮಾಯೆಯು ಏನೂ ಮಾಡಲಾರದು. ಅಂದರೆ ಮಾಯೆಯಿಂದ ಬಿಡಲ್ಪಟ್ಟಿರುವನು. ಮಹತತ್ತ್ವಾದಿ ಗುಣಗಳಿಂದ ಭಿನ್ನನಾಗಿರುವನು. ಮನಸ್ಸು, ಚಿತ್ತ, ಅಹಂಕಾರ ಮುಂತಾದವುಗಳು ಎಂದೂ ಅವನನ್ನು ಮುಟ್ಟಲಾರವು.

ಸ್ವಧಾಮ್ನಿ ಬ್ರಹ್ಮ ಸಾಕಾರಮಿಚ್ಛಯಾ ವ್ಯರಚೀಕರತ್ ।
ಪ್ರಥಮಂ ಚಾಭವಚ್ಛೇಷೋ ವಿಶ್ವಶ್ವೇತೋ ಬೃಹದ್ವಪುಃ ॥ ೭ ॥

ತದುತ್ಸಂಗೇ ಮಹಾಲೋಕೋ ಗೋಲೋಕೋ ಲೋಕವಂದಿತಃ ।
ಯಂ ಪ್ರಾಪ್ಯ ಭಕ್ತಿಸಂಯುಕ್ತಃ ಪುನರಾವರ್ತತೇ ನ ಹಿ ॥ ೮ ॥

ಅಸಂಖ್ಯಬ್ರಹ್ಮಾಂಡಪತೇರ್ಗೋಲೋಕಾಧಿಪತೇಃ ಪ್ರಭೋಃ ।
ಪುನಃ ಪದಾಬ್ಜಸಂಭೂತಾ ಗಂಗಾ ತ್ರಿಪಥಗಾಮಿನೀ ॥ ೯ ॥

ಪುನರ್ವಾಮಾಂಸತಸ್ತಸ್ಯ ಕೃಷ್ಣಾ ಭೂತ್ಸರಿತಾಂ ವರಾ ।
ರೇಜೇ ಶೃಂಗಾರಕುಸುಮೈರ್ಯರ್ಥೋಷ್ಣಿಷ್ಣಮ್ಮುದ್ರಿತಾ ನೃಪ ॥ ೧೦ ॥

ಶ್ರೀರಾಮಮಂಡಲಂ ದಿವ್ಯಂ ಹೇಮರತ್ನಸಮನ್ವಿತಂ ।
ನಾನಾಶೃಂಗಾರಪಟಲಂ ಗುಲ್ಫಾಭ್ಯಾಂ ಶ್ರೀಹರೇಃ ಪ್ರಭೋಃ ॥ ೧೧ ॥

---

೭. ಅಂತಹ ನಿರಾಕಾರವಾದ ತೇಜಸ್ಸಿನಲ್ಲಿ ಸಾಕಾರವನ್ನು ತನ್ನ ಇಚ್ಛೆಯಿಂದ ನಿರ್ಮಿಸಿಕೊಂಡನು. ಮೊದಲು ಅತಿ ಬಿಳುಪೂ, ದೊಡ್ಡ ಶರೀರವೂ ಉಳ್ಳ ಶೇಷನಾದನು.

೮. ಅವನ ತೊಡೆಯಮೇಲೆ ಒಂದು ಮಹಾಲೋಕವು ನಿರ್ಮಿತವಾಯಿತು. ಅದೇ ಗೋಲೋಕವು. ಜಗತ್ಪೂಜ್ಯವಾದುದು. ಭಕ್ತಿಭಾವದಿಂದ ಅದನ್ನು ಪಡೆದವರಿಗೆ ಪುನರ್ಜನ್ಮವಿಲ್ಲವು.

೯. ಅನಂತರ ಗಂಗೆಯು ಅಸಂಖ್ಯಬ್ರಹ್ಮಾಂಡಗಳಿಗೆ ಅಧಿಪತಿಯೂ ಗೋಲೋಕಕ್ಕೆ ಸ್ವಾಮಿಯೂ ಆದ ಶ್ರೀಹರಿಯ ಪಾದಕಮಲದಿಂದ ಹುಟ್ಟಿದಳು.

೧೦. ಅವನ ಎಡಭಾಗದ ಭುಜದಿಂದ ಕೃಷ್ಣಾನದಿಯು ಹುಟ್ಟಿತು. ಅದು ನದಿಗಳಲ್ಲೆಲ್ಲಾ ಶ್ರೇಷ್ಠವಾದುದು. ಶೃಂಗಾರಕ್ಕನುಕೂಲವಾದ ಹೂಗಳಿಂದ ಕೂಡಿ ಮುದ್ರಿತವಾದ ಉಷ್ಣೀಷದಂತೆ ಪ್ರಕಾಶಿಸುವುದು.

೧೧. ಶ್ರೀರಾಮಮಂಡಲವೆಂಬ ಲತಾಮಂಟಪವಿರುವುದು. ಅದು ಚಿನ್ನದಿಂದಲೂ, ರತ್ನಗಳಿಂದಲೂ ತುಂಬಿರುವುದು. ನಾನಾವಿಧವಾದ ಶೃಂಗಾರಗಳಿಗೆ ಆವಾಸಸ್ಥಾನವಾಗಿರುವುದು. ಶ್ರೀಹರಿಯ ಲತಾಕುಂಜಗಳಿಂದ ಕೂಡಿರುವುದು.

ಸಭಾಪ್ರಾಂಗಣವೀಥೀಭಿರ್ಮಂಡಪೈಃ ಪರಿವೇಷ್ಟಿತಃ ।
ವಸಂತಮಾಧುರ್ಯಧರಃ ಕೂಜತ್ಕೋಕಿಲಸಂಕುಲಃ ॥ ೧೨ ॥

ಮಯೂರೈಃ ಷಟ್ಪದೈರ್ವ್ಯಾಪ್ತಃ ಸರೋಭಿಃ ಪರಿಸೇವಿತಃ ।
ಜಾತೋ ನಿಕುಂಜೋ ಜಂಘಾಭ್ಯಾಂ ಶ್ರೀಕೃಷ್ಣಸ್ಯ ಮಹಾತ್ಮನಃ ॥ ೧೩ ॥

ವೃಂದಾವನಂ ಚ ಜಾನುಭ್ಯಾಂ ರಾಜನ್ಸರ್ವವನೋತ್ತಮಂ ।
ಲೀಲಾಸರೋವರಃ ಸಾಕ್ಷಾದೂರುಭ್ಯಾಂ ಪರಮಾತ್ಮನಃ ॥ ೧೪ ॥

ಕಟಿದೇಶಾತ್ಸ್ವರ್ಣಭೂಮಿರ್ದಿವ್ಯರತ್ನಖಚಿತ್ಪ್ರಭಾ ।
ಉದರೇ ರೋಮರಾಜಿಶ್ಚ ಮಾಧವ್ಯೋ ವಿಸ್ತೃತಾ ಲತಾಃ ॥ ೧೫ ॥

---

೧೨. ಅಲ್ಲಿ ಅನೇಕ ಸಭಾಂಗಣಗಳೂ, ಅವುಗಳಿಗೆ ಹೋಗುವ ದಾರಿಗಳೂ ಇರುವುವು. ಅನೇಕ ಲತಾಮಂಟಪಗಳಿರುವುವು. ವಸಂತದ ಸೊಬಗು ಅಲ್ಲಿ ಯಾವಾಗಲೂ ಇರುವುದು. ಕೋಕಿಲೆಗಳು ಮಧುರವಾಗಿ ಗಾನಮಾಡುತ್ತಿರುವುವು.

೧೩. ನವಿಲುಗಳು ನರ್ತನಮಾಡುತ್ತಿರುವುವು. ಭ್ರಮರಗಳು ಹಾರಾಡುತ್ತಿರುವುವು. ಅನೇಕ ಸರೋವರಗಳಿರುವುವು. ಈ ಲತಾಮಂಟಪವು ಶ್ರೀಕೃಷ್ಣನ ಮಂಡಿಗಳಿಂದ ಹುಟ್ಟಿತು.

೧೪. ಸರ್ವವನಶ್ರೇಷ್ಠವಾದ ವೃಂದಾವನವು ಶ್ರೀಹರಿಯ ಜಾನುಪ್ರದೇಶದಿಂದ ಹುಟ್ಟಿತು. ಲೀಲಾಸರೋವರವೆಂಬುದು ಪರಮಾತ್ಮನ ತೊಡೆಗಳಿಂದ ಹುಟ್ಟಿತು.

೧೫. ಅವನ ಕಟಿಪ್ರದೇಶದಿಂದ ದಿವ್ಯವಾದ ರತ್ನಗಳಿಂದ ಬೆಳಗುತ್ತಿರುವ ಸುವರ್ಣಭೂಮಿಯು ಹುಟ್ಟಿತು. ಆ ಮಾಧವನ ಉದರವೂ ರೋಮಸಮೂಹವೂ ದೊಡ್ಡದಾಗಿ ಬೆಳೆದಿರುವ ಲತೆಗಳು.

ನಾನಾಪಕ್ಷಿಗಣೈರ್ನ್ಯಾಸ್ತಾ ಧ್ವನದ್ಭ್ರಮರಭೂಷಿತಾಃ ।
ಸಪುಷ್ಪಫಲಭಾರೈಶ್ಚ ನತಾಃ ಸತ್ಕೂಲಜಾ ಇವ || ೧೬ ||

ಶ್ರೀನಾಭಿಪಂಕಜಾತ್ತಸ್ಯ ಪಂಕಜಾನಿ ಸಹಸ್ರಶಃ ।
ಸರಃ ಸುಹರಿಲೋಕಸ್ಯ ತಾನಿ ರೇಜುರಿತಸ್ತತಃ || ೧೭ ||

ತ್ರಿವಲಿಪ್ರಾಂತತೋ ವಾಯುರ್ಮಂದಗಾಮ್ಯತಿಶೀತಲಃ ।
ಜತ್ರುದೇಶಾಚ್ಛುಭಾ ಜಾತಾ ಮಧುರಾ ದ್ವಾರಕಾಪುರೀ || ೧೮ ||

ಭುಜಾಭ್ಯಾಂ ಶ್ರೀಹರೇರ್ಜಾತಾಃ ಶ್ರೀದಾಮಾದ್ಯಷ್ಟ ಪಾರ್ಷದಾಃ ।
ನಂದಾಶ್ಚ ಮಣಿಬಂಧಾಭ್ಯಾಮುಪನಂದಾಃ ಕರಾಗ್ರತಃ || ೧೯ ||

ಶ್ರೀಕೃಷ್ಣಬಾಹುಮೂಲಾಭ್ಯಾಂ ಸರ್ವೇ ವೈ ವೃಷಭಾನವಃ ।
ಕೃಷ್ಣರೋಮಸಮುದ್ಭೂತಾಃ ಸರ್ವೇ ಗೋಪಗಣಾ ನೃಪ || ೨೦ ||

---

೧೬. ಆ ಲತೆಗಳು ನಾನಾವಿಧವಾದ ಪಕ್ಷಿಗಣದಿಂದಲೂ, ಧ್ವನಿಮಾಡುತ್ತಿರುವ ಭ್ರಮರಗಳಿಂದಲೂ, ಹೂ, ಹಣ್ಣು ಮುಂತಾದುವುಗಳಿಂದಲೂ ಕೂಡಿ ಬಗ್ಗಿರುವುವುಗಳಾಗಿ ಸತ್ಕುಲಪ್ರಸೂತರಾದ ಸ್ತ್ರೀಯರಂತೆ ಪ್ರಕಾಶಿಸುತ್ತಿರುವುವು.

೧೭. ಆ ಗೋಲೋಕದ ಸರೋವರಗಳಲ್ಲಿರುವ ಕಮಲಗಳು ಲಕ್ಷ್ಮಿಯ ನಾಭಿಕಮಲದಿಂದ ಹುಟ್ಟಿದವು. ಈ ರೀತಿಯಾದ ಸಾವಿರಾರು ಕಮಲಗಳಿಂದ ಕೂಡಿದ ಅನೇಕ ಸರೋವರಗಳು ರಂಜಿಸುತ್ತಿರುವುವು.

೧೮. ಅಲ್ಲಿ ನಿಧಾನವಾಗಿಯೂ, ಶೀತಳವಾಗಿಯೂ ಬೀಸುತ್ತಿರುವ ವಾಯುವು ಲಕ್ಷ್ಮಿಯ ತ್ರಿವಳಿಪ್ರದೇಶದಿಂದ ಹುಟ್ಟಿದುದು. ಮನೋಹರವಾದ ದ್ವಾರಕಾಪುರೀಯು ಭುಜಪ್ರದೇಶದಿಂದ ಹುಟ್ಟಿತು.

೧೯. ಶ್ರೀಹರಿಯ ತೋಳುಗಳಿಂದ ಶ್ರೀದಾಮನೇ ಮೊದಲಾದ ಎಂಟು ಜನ ಸಭಿಕರು ಹುಟ್ಟಿದರು. ಮಣಿಬಂಧಗಳಿಂದ ನಂದಾದಿಗಳೂ, ಕರಾಗ್ರದಿಂದ ಉಪನಂದರೂ ಹುಟ್ಟಿದರು.

೨೦. ಶ್ರೀಕೃಷ್ಣನ ಬಾಹುಮೂಲಗಳಿಂದ ಎಲ್ಲಾ ವೃಷಭಾನುಗಳೂ, ಅವನ ರೋಮಗಳಿಂದ ಗೋಪಗಣಗಳೆಲ್ಲರೂ ಹುಟ್ಟಿದರು.

ಶ್ರೀಕೃಷ್ಣಮನಸಾ ಗಾವೋ ವೃಷಾ ಧರ್ಮಧುರಂಧರಾಃ ।
ಬುದ್ಧೇರ್ಯವಸಗುಲ್ಮಾನಿ ಬಭೂವುರ್ಮೈಥಿಲೇಶ್ವರ ॥ ೨೦ ॥

ತದ್ವಾಮಾಂಸಾತ್ಸಮುದ್ಭೂತಂ ಗೌರಂ ತೇಜಃ ಸ್ಫುರತ್ಪ್ರಭಂ ।
ಲೀಲಾ ಶ್ರೀರ್ಭೂಶ್ಚ ವಿರಜಾ ತಸ್ಮಾಜ್ಜಾತಾ ಹರೇಃ ಪ್ರಿಯಾಃ ॥ ೨೨ ॥

ಲೀಲಾವತೀ ಪ್ರಿಯಾ ತಸ್ಯ ತಾಂ ರಾಧಾಂ ತು ವಿದುಃ ಪರೇ ।
ಶ್ರೀರಾಧಾಯಾ ಭುಜಾಭ್ಯಾಂ ತು ವಿಶಾಖಾ ಲಲಿತಾ ಸಖೀ ॥ ೨೩ ॥

ಸಹಚರ್ಯಸ್ತಥಾ ಗೋಪ್ಯೋ ರಾಧಾರೋಮೋದ್ಭವಾ ನೃಪ ।
ಏವಂ ಗೋಲೋಕರಚನಾಂ ಚಕಾರ ಮಧುಸೂದನಃ ॥ ೨೪ ॥

ವಿಧಾಯ ಸರ್ವಂ ನಿಜಲೋಕಮಿತ್ಥಂ
ಶ್ರೀರಾಧಯಾ ತತ್ರ ರರಾಜ ರಾಜನ್ ।
ಅಸಂಖ್ಯಲೋಕಾಂಡಪತಿಃ ಪರಾತ್ಮಾ
ಪರಃ ಪರೇಶಃ ಪರಿಪೂರ್ಣದೇವಃ ॥ ೨೫ ॥

---

೨೧. ಶ್ರೀಕೃಷ್ಣನ ಮನಸ್ಸಿನಿಂದ ಹಸುಗಳೂ, ಧರ್ಮಧುರಂಧರವಾದ ಎತ್ತುಗಳೂ, ಬುದ್ಧಿಯಿಂದ ಹುಲ್ಲು ಮತ್ತು ಸೊದೆ ಮುಂತಾದುವುಗಳೂ ಹುಟ್ಟಿದವು.

೨೨. ಅವನ ಎಡಭುಜದಿಂದ ಬಿಳುಪಾಗಿಯೂ, ಪ್ರಕಾಶವಾಗಿಯೂ ಇರುವ ತೇಜಸ್ಸು ಉತ್ಪನ್ನವಾಯಿತು. ಅದರಿಂದ ಲೀಲಾ, ಶ್ರೀಃ, ಭೂಃ, ವಿರಜಾ ಎಂಬ ಕೃಷ್ಣನ ಪತ್ನಿಯರು ಹುಟ್ಟಿದರು.

೨೩. ಕೆಲವರು ಆ ಲೀಲಾವತಿಯನ್ನೇ ರಾಧೆ ಎಂಬುದಾಗಿ ತಿಳಿದಿರುವರು. ರಾಧೆಯ ಭುಜಗಳಿಂದ ವಿಶಾಖಾ, ಲಲಿತಾ ಎಂಬ ಸಖಿಯರು ಹುಟ್ಟಿದರು.

೨೪. ಇನ್ನುಳಿದ ಸಖಿಯರೂ, ಗೋಪಿಯರೂ ರಾಧೆಯ ರೋಮಗಳಿಂದ ಹುಟ್ಟಿದವರು. ಈ ರೀತಿಯಾಗಿ ಮಧುಸೂದನನು ಗೋಲೋಕವನ್ನು ರಚಿಸಿದನು.

೨೫. ಈ ರೀತಿಯಾಗಿ ಹರಿಯು ತನ್ನ ಲೋಕವನ್ನು ಸೃಷ್ಟಿಸಿ, ಅಲ್ಲಿ ಶ್ರೀರಾಧೆಯೊಡನೆ ಪ್ರಕಾಶಿಸಿದನು. ಅವನು ಅಸಂಖ್ಯಬ್ರಹ್ಮಾಂಡಗಳಿಗೂ ಅಧಿಪತಿಯು. ಪರಾತ್ಮನು, ಪರೇಶನು, ಪರಿಪೂರ್ಣಸ್ವರೂಪನಾದ ದೇವನು.

ತತ್ರೈಕದಾ ಸುಂದರರಾಸಮಂಡಲೇ
ಸ್ಫುರತ್ಕ್ವಣನ್ನೂಪುರಶಬ್ದಸಂಕುಲೇ।
ಸುಚ್ಛತ್ರಮುಕ್ತಾಫಲದಾಮುಜಾಮೃತ–
ಸ್ರವದ್ಬೃಹದ್ಬಿಂದುವಿರಾಜಿತಾಂಗಣೇ ॥ ೨೬ ॥

ಶ್ರೀಮಾಲತೀನಾಂ ಸುವಿತಾನಜಾಲತಃ
ಸ್ವತಃ ಸ್ರವತ್ಸನ್ಮಕರಂದಗಂಧಿತೇ।
ಮೃದಂಗತಾಲಧ್ವನಿವೇಣುನಾದಿತೇ
ಸುಕಂಠಗೀತಾದಿಮನೋಹರೇ ಪರೇ ॥ ೨೭ ॥

ಶ್ರೀಸುಂದರೀರಾಸರಸೇ ಮನೋರಮೇ
ಮಧ್ಯಸ್ಥಿತಂ ಕೋಟಿಮನೋಜಮೋಹನಂ।
ಜಗಾದ ರಾಧಾ ಪತಿಮೂರ್ಜಯಾ ಗಿರಾ
ಕೃತ್ವಾ ಕಟಾಕ್ಷಂ ರಸದಾನಕೌಶಲಂ ॥ ೨೮ ॥

---

೨೬. ಒಂದುಸಾರೆ ರಾಸಕ್ರೀಡೆಯು ನಡೆಯಿತು. ಸುಂದರರಾದ ಸ್ತ್ರೀಯರೆಲ್ಲರೂ ಸೇರಿದ್ದರು. ಅವರ ಬಳೆಗಳ ಮತ್ತು ಕಾಲ್ಗಡಗಗಳ ಶಬ್ದವು ಸುತ್ತಲೂ ಹರಡಿತ್ತು. ಪರಸ್ಪರ ಸಮ್ಮರ್ದದಿಂದ ಮುತ್ತಿನಸರಗಳು ಕಿತ್ತು ಅಮೃತದ ನದಿಯು ಹರಿಯುವಂತೆ ಆ ಮುತ್ತುಗಳು ರಾಸಾಂಗಳದಲ್ಲೆಲ್ಲಾ ಹರಡಿತ್ತು.

೨೭. ಆ ರಾಸಮಂಟಪದ ಸುತ್ತಲೂ ಜಾಜಿಯಗಿಡಗಳು ಬೆಳೆದು ಮೇಲ್ಹಾವಣಿಯಂತೆ ಹರಡಿದ್ದವು. ಅವುಗಳಿಂದ ಪುಷ್ಪರಸಗಳು ಹರಿದು ಸುವಾಸನೆಯು ಸುತ್ತಲೂ ಹರಡಿದ್ದಿತು. ಮೃದಂಗ, ತಾಳ, ಕೊಳಲು ಮುಂತಾದ ವಾದ್ಯಧ್ವನಿಗಳಿಂದ ಸಮ್ಮಿಶ್ರವಾಗಿ ಮೃದುವಾದ ಕಂಠಗಳಿಂದ ಹೊರಟಿರುವ ಗೀತಗಳು ಇಂಪಾಗಿ ಕೇಳಿಬರುತ್ತಿದ್ದವು.

೨೮. ಆಗ ರಾಧೆಯು ಸುಂದರಿಯರ ರಾಸಕ್ರೀಡಾರಸವನ್ನು ಅನುಭವಿಸುತ್ತ ಅವರ ಮಧ್ಯದಲ್ಲಿರುವ ಮನ್ಮಥನಂತೆ ಮನೋಹರನಾಗಿರುವ ಪತಿಯನ್ನು ನೋಡಿ ಕ್ರೀಡಾರಸದಾನಕುಶಲಗಳಾದ ಕಟಾಕ್ಷಗಳನ್ನು ಬೀರುತ್ತಾ ವಿನಯದಿಂದ ಅವನನ್ನು ಕುರಿತು ಇಂತೆಂದಳು.

॥ ಶ್ರೀ ರಾಧೋವಾಚ ॥

ಯದಿ ರಾಸೇ ಪ್ರಸನ್ನೋಽಸಿ ಮಮ ಪ್ರೇಮ್ಣಾ ಜಗತ್ಪತೇ
ತದಹಂ ಪ್ರಾರ್ಥನಾಂ ತ್ವಾಂ ತು ಕರೋಮಿ ಮನಸಿ ಸ್ಥಿತಂ ॥ ೨೯ ॥

॥ ಶ್ರೀ ಭಗವಾನುವಾಚ ॥

ಇಚ್ಛಾಂ ವರಯ ವಾಮೋರು ಯತ್ತೇ ಮನಸಿ ವರ್ತತೇ ।
ನ ದೇಯಂ ಯದಿ ಯದ್ವಸ್ತು ಪ್ರೇಮ್ಣಾ ದಾಸ್ಯಾಮಿ ತತ್ಪ್ರಿಯೇ ॥ ೩೦ ॥

॥ ರಾಧೋವಾಚ ॥

ವೃಂದಾವನೇ ದಿವ್ಯನಿಕುಂಜಪಾರ್ಶ್ವೇ
ಕೃಷ್ಣಾತಟೇ ರಾಸರಸಾಯ ಯೋಗ್ಯಂ ।
ರಹಸ್ಥಲಂ ತ್ವಂ ಕುರುತಾನ್ಮನೋಜ್ಞಂ
ಮನೋರಥೋಽಯಂ ಮಮ ದೇವದೇವ ॥ ೩೧ ॥

---

೨೯. ಎಲೈ ಜಗತ್ಪತಿಯೇ, ಈ ರಾಸಕ್ರೀಡೆಯಲ್ಲಿ ನನ್ನ ಪ್ರೇಮದಿಂದ ನೀನು ಪ್ರಸನ್ನನಾಗಿದ್ದಲ್ಲಿ ನನ್ನ ಮನಸ್ಸಿನಲ್ಲಿರುವ ಒಂದು ವಿಷಯವನ್ನು ನಡೆಸಿಕೊಡಲು ಪ್ರಾರ್ಥಿಸುವೆನು.

೩೦. ಎಂದು ಕೇಳಲು ಆಗ ಭಗವಂತನಿಂತೆಂದನು :—ಎಲೈ ವಾಮೋರು, ನಿನಗೆ ಇಷ್ಟಬಂದುದನ್ನು ಕೇಳಿಕೋ. ನಿನ್ನ ಮನಸ್ಸಿನ ಇಷ್ಟಾರ್ಥವನ್ನು ನೆರವೇರಿಸುವೆನು. ಕೊಡಬಾರದ ವಸ್ತುವಾದರೂ ಸಹ ನಿನ್ನಲ್ಲಿರುವ ಪ್ರೇಮದಿಂದ ಅದನ್ನು ಕೊಡುವೆನು.

೩೧. ಎಂದು ಹೇಳಲು ರಾಧೆಯು ಈರೀತಿ ಅಂದಳು :–ಎಲೈ ದೇವದೇವನೇ, ಕೃಷ್ಣಾನದಿಯ ದಡದಲ್ಲಿರುವ ವೃಂದಾವನದ ದಿವ್ಯವಾದ ಲತಾಮಂಟಪದ ಪಕ್ಕದಲ್ಲಿ ರಾಸಕ್ರೀಡೆಯಾಡಲು ಯೋಗ್ಯವಾಗಿರುವಂತೆಯೂ ಅದೇ ನಮ್ಮ ರಹಸ್ಥಳವಾಗುವಂತೆಯೂ ಅನುಗ್ರಹಿಸು. ಇದೇ ನನ್ನ ಮನೋರಥವು.

॥ ಶ್ರೀ ನಾರದ ಉವಾಚ ॥

ತಥಾಸ್ತು ಚೋಕ್ತ್ವಾ ಭಗವಾನ್ ರಹೋ ಯೋಗ್ಯಂ ವಿಚಿಂತಯನ್ ।
ಸ್ವಂ ನೇತ್ರಪಂಕಜಾಭ್ಯಾಂ ತು ಹೃದಯಂ ಸ್ವ ದದರ್ಶ ಹ ॥ ೩೨ ॥

ತದೈವ ಕೃಷ್ಣಹೃದಯಾದ್ಗೋಪೀಪ್ಸ್ವೂಹಸ್ಯ ಪಶ್ಯತಃ ।
ನಿರ್ಗತಂ ಸಜಲಂ ತೇಜೋಽನುರಾಗಸ್ಯೇವ ಚಾಂಕುರಂ ॥ ೩೩ ॥

ಪತಿತಂ ರಾಸಭೂಮೌ ತದ್ವವೃಧೇ ಪರ್ವತಾಕೃತಿ ।
ರತ್ನಧಾತುಮಯಂ ದಿವ್ಯಂ ಸುನಿರ್ಝರದರೀವೃತಂ ॥ ೩೪ ॥

ಕದಂಬಬಹುಲಾಶೋಕಲತಾಜಾಲಮನೋಹರಂ ।
ಮಂದಾರಕುಂದವೃಂದಾಢ್ಯಂ ಸುಪಕ್ಷಿಗಣಸಂಕುಲಂ ॥ ೩೫ ॥

---

೩೨. ಎನ್ನಲು ಶ್ರೀಕೃಷ್ಣನು 'ತಥಾಸ್ತು' ಎಂದು ಹೇಳಿ ರಹಃಕ್ರೀಡೆಗೆ ಯೋಗ್ಯವಾದ ಜಾಗವು ಯಾವುದೆಂದು ಯೋಚಿಸಿದನು. ಅನಂತರ ತನ್ನ ನೇತ್ರ ಕಮಲಗಳಿಂದ ತನ್ನ ಹೃದಯವನ್ನು ನೋಡಿಕೊಂಡನು.

೩೩. ಗೋಪಿಯರೆಲ್ಲರೂ ನೋಡುತ್ತಿರುವಂತೆಯೇ ಶ್ರೀಕೃಷ್ಣನ ಹೃದಯ ದಿಂದ ಜಲಸಹಿತವಾದ ಒಂದು ತೇಜಸ್ಸು ಅನುರಾಗದ ಅಂಕುರದೋಪಾದಿಯಲ್ಲಿ ಹೊರಟಿತು.

೩೪. ಅದು ರಾಸಭೂಮಿಯಲ್ಲಿ ಹೋಗಿಬಿದ್ದು ಬೆಳೆಯುತ್ತಾ ಬೆಳೆಯುತ್ತಾ ಪರ್ವತದಂತೆ ಆಯಿತು. ರತ್ನಗಳಿಂದಲೂ, ಗೈರಿಕಾದಿ ಧಾತುಗಳಿಂದಲೂ ತುಂಬಿತು. ನಿರ್ಝರಗಳಿಂದಲೂ, ಕಂದರಗಳಿಂದಲೂ ಕೂಡಿತು.

೩೫. ಕದಂಬ, ಬಹುಲಾಶೋಕ ಮುಂತಾದ ಮರಗಳೂ, ಅನೇಕ ಲತೆಗಳೂ, ಮಂದಾರ, ಕುಂದ ಮುಂತಾದ ಪುಷ್ಪವೃಕ್ಷಗಳೂ, ನಾನಾವಿಧವಾದ ಪಕ್ಷಿಗಳೂ ಅಲ್ಲಿರುವುವು. ಅವುಗಳಿಂದ ಕೂಡಿ ಆ ಪರ್ವತವು ಮನೋಹರವಾಗಿರುವುದು.

ಕ್ಷಣಮಾತ್ರೇಣ ವೈದೇಹ ಲಕ್ಷಯೋಜನವಿಸ್ತೃತಂ ।
ಶತಕೋಟಿಯೋಜನಾನಾಂ ಲಂಬಿತಂ ಶೇಷವತ್ಪುನಃ ॥ ೩೬ ॥

ಊರ್ಧ್ವಂ ಸಮುನ್ನತಂ ಜಾತಂ ಪಂಚಾಶತ್ಕೋಟಿಯೋಜನಂ ।
ಕರೀಂದ್ರವತ್ ಸ್ಥಿತಂ ಶಶ್ವತ್ಪಂಚಾಶತ್ಕೋಟಿವಿಸ್ತೃತಂ ॥ ೩೭ ॥

ಕೋಟಿಯೋಜನದೀರ್ಘಾಂಗೈಃ ಶೃಂಗಾನಾಂ ಶತಕೈಃ ಸ್ಫುರನ್ ।
ಉಚ್ಚಕೈಃ ಸ್ವರ್ಣಕಲಶೈಃ ಪ್ರಾಸಾದಮಿವ ಮೈಥಿಲ ॥ ೩೮ ॥

ಗೋವರ್ಧನಾಖ್ಯಂ ತಚ್ಚಾಹುಃ ಶತಶೃಂಗಂ ತಥಾ ಪರೇ ।
ಏವಂ ಭೂತಂ ತು ತದಪಿ ವರ್ಧಿತಂ ಮನಸೋತ್ಸುಕಂ ॥ ೩೯ ॥

ಕೋಲಾಹಲೇ ತದಾ ಜಾತೇ ಗೋಲೋಕೇ ಭಯವಿಹ್ವಲೇ ।
ವೀಕ್ಷ್ಯೋತ್ಥಾಯ ಹರಿಃ ಸಾಕ್ಷಾದ್ಧಸ್ತೇನಾಶು ತತಾಡ ಹ ॥ ೪೦ ॥

---

೩೬. ಅದು ಕ್ಷಣಮಾತ್ರದಲ್ಲಿಯೇ ಒಂದುಲಕ್ಷ ಯೋಜನ ವಿಸ್ತಾರವಾಯಿತು. ಶೇಷನಂತೆ ನೂರುಕೋಟಿ ಯೋಜನದ ದೂರ ಹಬ್ಬಿತು.

೩೭. ಅದರ ಎತ್ತರ ಐವತ್ತುಕೋಟಿ ಯೋಜನದ ದೂರವಿರುವುದು. ಕರೀಂದ್ರನಂತೆ ದಿನದಿನವೂ ಐವತ್ತುಕೋಟಿ ಯೋಜನ ವಿಸ್ತಾರವಾಗಿ ಬೆಳೆಯಿತು.

೩೮. ಅದರ ಭಾಗಗಳು ಕೋಟಿ ಯೋಜನ ಎತ್ತರವಾಗಿರುವುವು. ನೂರಾರು ಶೃಂಗಗಳು ಪ್ರಕಾಶಿಸುತ್ತಿರುವುವು. ಎತ್ತರವಾದ ಚಿನ್ನದಕಲಶಗಳಿದ್ದು ಅರಮನೆಯಂತೆ ಶೋಭಿಸುತ್ತಿರುವುದು.

೩೯-೪೦. ಕೆಲವರು ಇದನ್ನು ಗೋವರ್ಧನವೆಂದೂ, ಮತ್ತೆ ಕೆಲವರು ಶತಶೃಂಗವೆಂದೂ ಕರೆಯುವರು. ಈರೀತಿಯಾಗಿ ಗೋವರ್ಧನಪರ್ವತವು ದಿನದಿನಕ್ಕೂ ಜಾಸ್ತಿಯಾಗಿ ಬೆಳೆಯುತ್ತಾ ಬರಲು ಅದನ್ನು ನೋಡಿ ಗೋಲೋಕದವರೆಲ್ಲಾ ಹೆದರಿ ವಿಹ್ವಲರಾದರು. ಆಗ ಹರಿಯು ಬಂದು ಅದರ ಮೇಲ್ಭಾಗವನ್ನು ಕೈಯ್ಯಿಂದ ತಟ್ಟಿದನು.

ಕಿಂ ವರ್ಧಸೇ ಭೋ ಪ್ರಚ್ಛನ್ನಂ ಲೋಕಮಾಚ್ಛಾದ್ಯ ತಿಷ್ಠಸಿ ।
ಕಿಂ ವಾ ನ ಚೈತೇ ವಸಿತುಂ ತಚ್ಛಾಂತಿಮಕರೋದ್ಧರಿಃ ॥ ೪೧ ॥

ಸಂವೀಕ್ಷ್ಯ ತಂ ಗಿರಿವರಂ ಪ್ರಸನ್ನಾ ಭಗವತ್ಪ್ರಿಯಾ ।
ತಸ್ಮಿನ್ ರಹಃ ಸ್ಥಲೇ ರಾಜನ್ ರರಾಜ ಹರಿಣಾ ಸಹ ॥ ೪೨ ॥

ಸೋಽಯಂ ಗಿರಿವರಃ ಸಾಕ್ಷಾಚ್ಛ್ರೀಕೃಷ್ಣೇನ ಪ್ರಣೋದಿತಃ ।
ಸರ್ವತೀರ್ಥಮಯಃ ಶ್ಯಾಮೋ ಘನಶ್ಯಾಮಸ್ಸುರಪ್ರಿಯಃ ॥ ೪೩ ॥

ಭಾರತಾತ್ಪಶ್ಚಿಮದಿಶಿ ಶಾಲ್ಮಲೀದ್ವೀಪಮಧ್ಯತಃ ।
ಗೋವರ್ಧನೋ ಜನ್ಮ ಲೇಭೇ ಪತ್ನ್ಯಾಂ ದ್ರೋಣಾಚಲಸ್ಯ ಚ ॥ ೪೪ ॥

---

೪೧. ಎಲೈ ಪರ್ವತನೇ, ಯಾರಿಗೂ ಕಾಣದಂತೆ ಗೋಲೋಕವನ್ನು ಆವರಿಸಿಕೊಂಡು ದಿನದಿನಕ್ಕೂ ಬೆಳೆಯುತ್ತಿರುವೆಯಲ್ಲವೇ? ಜನಗಳು ಗೋಲೋಕದಲ್ಲಿ ವಾಸಮಾಡಕೂಡದೆಂದು ಬೆಳೆಯುತ್ತಿರುವೆಯೋ ? ಎಂದು ಹೇಳಿ ಹರಿಯು ಅದು ಬೆಳೆಯುವುದನ್ನು ನಿಲ್ಲಿಸಿದನು.

೪೨. ಈ ಪರ್ವತವನ್ನು ನೋಡಿ ಶ್ರೀಹರಿಯ ಪ್ರಿಯಳಾದ ರಾಧೆಯು ಪ್ರಸನ್ನಳಾದಳು. ಅಲ್ಲಿಯೇ ರಹಸ್ಥಾನವನ್ನು ಕಲ್ಪಿಸಿಕೊಂಡು ಹರಿಯೊಡನೆ ಪ್ರಕಾಶಿಸಿದಳು.

೪೩. ಅದೇ ಗೋವರ್ಧನಪರ್ವತವು ಸಾಕ್ಷಾತ್ ಶ್ರೀಕೃಷ್ಣನಿಂದ ಪೋಷಿಸಲ್ಪಟ್ಟು ರಂಜಿಸುತ್ತಿರುವುದು. ಅದು ಸರ್ವತೀರ್ಥಗಳಿಗೂ ಆವಾಸಸ್ಥಾನವಾಗಿರುವುದು. ಮೋಡದಂತೆ ಕಪ್ಪಾಗಿರುವುದು. ದೇವತೆಗಳಿಗೆ ಪ್ರಿಯವಾಗಿರುವುದು.

೪೪. ಭಾರತದ ಪಶ್ಚಿಮದಿಕ್ಕಿನಲ್ಲಿರುವ ಶಾಲ್ಮಲೀದ್ವೀಪದ ಮಧ್ಯದಲ್ಲಿ ದ್ರೋಣಾಚಲದ ಪತ್ನಿಯಲ್ಲಿ ಈ ಗೋವರ್ಧನಪರ್ವತವು ಹುಟ್ಟಿತು.

ಪುಲಸ್ತ್ಯೇನ ಸಮಾನೀತೋ ಭಾರತೇ ವ್ರಜಮಂಡಲೇ ।
ವೈದೇಹ ತಸ್ಯಾಗಮನಂ ಮಯಾ ತುಭ್ಯಂ ಪುರೋದಿತಂ ॥ ೪೫ ॥

ಯಥಾ ಪುರಾ ವರ್ಧಿತಮುತ್ಸುಕೋಽಯಂ
ತಥಾಪಿಧಾನಂ ಭವಿತಾ ಭುವೋ ವಾ ।
ವಿಚಿಂತ್ಯ ಶಾಪಂ ಮುನಿನಾ ಪರೇಶೋ
ದ್ರೋಣಾತ್ಮಜಾಯೇತಿ ದದೌ ಕ್ಷಯಾರ್ಥಂ ॥ ೪೬ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗಿರಿರಾಜಖಂಡೇ
ಶ್ರೀಗಿರಿರಾಜೋತ್ಪತ್ತಿವರ್ಣನಂ ನಾಮ ನವಮೋಽಧ್ಯಾಯಃ

---

೪೫. ಪುಲಸ್ತ್ಯನು ಇದನ್ನು ಭಾರತದ ವ್ರಜಮಂಡಲಕ್ಕೆ ತಂದನು. ಅದು ಬಂದ ವಿಷಯವನ್ನು ನಿನಗೆ ಹಿಂದೆಯೇ ಹೇಳಿರುವೆನಷ್ಟೇ.

೪೬. ಗೋವರ್ಧನವು ಉತ್ಸಾಹದಿಂದ ದಿನದಿನವೂ ಬೆಳೆಯುತ್ತಿರುವುದನ್ನೂ, ಕಾಲಕ್ರಮೇಣ ಅದು ಭೂಮಿಯನ್ನೇ ಆವರಿಸಿಕೊಳ್ಳುವುದನ್ನೂ ಪರಮಾತ್ಮನು ನೋಡಿ ಇದರಿಂದ ದುರ್ವಾಸಮುನಿಯ ಶಾಪಬರುವುದನ್ನು ಯೋಚಿಸಿ ಅದು ಬೆಳೆಯದಂತೆ ಮಾಡಿದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಗಿರಿರಾಜಖಂಡದಲ್ಲಿ ಶ್ರೀ ಗಿರಿರಾಜನ ಉತ್ಪತ್ತಿವರ್ಣನವೆಂಬ ಒಂಭತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗಿರಿರಾಜಖಂಡೇ

ದಶಮೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ ।
ಯಸ್ಯ ಶ್ರವಣಮಾತ್ರೇಣ ಮಹಾಪಾಪಂ ಪ್ರಣಶ್ಯತಿ ॥ ೧ ॥

ವಿಜಯೋ ಬ್ರಾಹ್ಮಣಃ ಕಶ್ಚಿದ್ಗೌತಮೀತೀರವಾಸಕೃತ್ ।
ಆಯಯೌ ಸ್ವಮೃಣಂ ನೇತುಂ ಮಥುರಾಂ ಪಾಪನಾಶಿನೀಂ ॥ ೨ ॥

ಹತ್ತನೆಯ ಅಧ್ಯಾಯವು

೧. ನಾರದನು ಬಹುಲಾಶ್ವನನ್ನು ಕುರಿತಿಂತೆಂದನು :—ಎಲೈ ಮೈಥಿಲ, ಈ ಗೋವರ್ಧನಪರ್ವತದ ವಿಷಯದಲ್ಲಿ ಪುರಾತನವಾದ ಇತಿಹಾಸವೊಂದನ್ನು ಉದಾಹರಿಸುವರು. ಅದನ್ನು ಕೇಳುವುದರಿಂದ ಮಹಾಪಾತಕಗಳೂ ನಾಶವಾಗುವುವು. ಅದನ್ನು ಹೇಳುವೆನು ಕೇಳು.

೨. ಗೌತಮೀನದಿಯ ತೀರದಲ್ಲಿ ವಿಜಯನೆಂಬ ಬ್ರಾಹ್ಮಣನು ವಾಸಮಾಡುತ್ತಿದ್ದನು. ಅವನು ಒಂದುಸಾರಿ ತನ್ನ ಸಾಲವನ್ನು ಪಡೆಯಲು ಮಥುರಾಪಟ್ಟಣಕ್ಕೆ ಬಂದನು.

ಕೃತ್ವಾ ಕಾರ್ಯಂ ಗೃಹಂ ಗಚ್ಛನ್ಗೋವರ್ಧನತಟೇಂ ಗತಃ ।
ವರ್ತುಲಂ ತತ್ರ ಪಾಷಾಣಂ ಚೈಕಂ ಜಗ್ರಾಹ ವೈಥಿಲ ॥ ೩ ॥

ಶನೈಃ ಶನೈರ್ವನೋದ್ದೇಶೇ ನಿರ್ಗತೋ ವ್ರಜಮಂಡಲಾತ್ ।
ಅಗ್ರೇ ದದರ್ಶ ಚಾಯಾಂತಂ ರಾಕ್ಷಸಂ ಘೋರರೂಪಿಣಂ ॥ ೪ ॥

ಹೃದಯೇ ಚ ಮುಖಂ ಯಸ್ಯ ತ್ರಯಃ ಪಾದಾ ಭುಜಾಶ್ಚ ಷಟ್ ।
ಹಸ್ತತ್ರಯಂ ಚ ಸ್ಥೂಲೋಷ್ಠೋ ನಾಸಾ ಹಸ್ತಸಮುನ್ನತಾ ॥ ೫ ॥

ಸಪ್ತಹಸ್ತಾ ಚಲಜ್ಜಿಹ್ವಾ ಕಂಟಕಾಭಾಸ್ತನೂರುಹಾಃ ।
ಅರುಣೇ ಚಾಕ್ಷಿಣೀ ದೀರ್ಘೇ ದಂತಾ ವಕ್ರಾ ಭಯಂಕರಾಃ ॥ ೬ ॥

ರಾಕ್ಷಸೋ ಘುರ್ಘುರಂ ಶಬ್ದಂ ಕೃತ್ವಾ ಚಾಪಿ ಬುಭುಕ್ಷಿತಃ ।
ಆಯಯೌ ಸಮ್ಮುಖೇ ರಾಜನ್ಬ್ರಾಹ್ಮಣಸ್ಯ ಸ್ಥಿತಸ್ಯ ಚ ॥ ೭ ॥

---

೩. ಕೆಲಸವನ್ನು ಮುಗಿಸಿಕೊಂಡು ತನ್ನ ಊರಿಗೆ ಹೊರಟನು. ದಾರಿಯಲ್ಲಿ ಗೋವರ್ಧನಪರ್ವತದ ತಪ್ಪಲು ಸಿಕ್ಕಿತು. ಅಲ್ಲಿ ಬಿದ್ದಿದ್ದ ಒಂದು ಗುಂಡಾದ ಕಲ್ಲನ್ನು ಕೈಯ್ಯಲ್ಲಿ ಹಿಡಿದುಕೊಂಡು ಮುಂದೆ ತೆರಳಿದನು.

೪. ವ್ರಜಮಂಡಲದಿಂದ ಹೊರಟ ದಾರಿಯು ಒಂದು ಕಾಡಿನ ಮಧ್ಯಭಾಗದಲ್ಲಿ ಹೋಗುವುದು. ಆ ಬ್ರಾಹ್ಮಣನು ಆ ದಾರಿಯಲ್ಲಿ ಹೋಗುತ್ತಿರಲು ಎದುರಿಗೆ ಒಬ್ಬ ಭಯಂಕರನಾದ ರಾಕ್ಷಸನು ಬರುತ್ತಿರುವುದನ್ನು ನೋಡಿದನು.

೫-೬. ಅವನ ಮುಖವು ಅವನ ಎದೆಯ ಮೇಲಿದ್ದಿತು. ಅವನಿಗೆ ಮೂರು ಕಾಲುಗಳೂ, ಆರು ಭುಜಗಳೂ, ಮೂರು ಕೈಗಳೂ ಇದ್ದವು. ಅವನ ತುಟಿಗಳು ದಪ್ಪವಾಗಿದ್ದುವು. ಕೈನಷ್ಟು ಎತ್ತರವಾದ ಮೂಗಿದ್ದಿತು. ಏಳು ನಾಲಿಗೆಗಳಿದ್ದವು. ಅವು ಯಾವಾಗಲೂ ನಡುಗುತ್ತಿದ್ದುವು. ಮೈರೋಮಗಳು ಮುಳ್ಳಿನಂತಿದ್ದವು. ಕಣ್ಣುಗಳು ಕೆಂಪಾಗಿಯೂ, ಉದ್ದವಾಗಿಯೂ ಇದ್ದವು. ಹಲ್ಲುಗಳು ವಕ್ರವಾಗಿಯೂ ಭಯಂಕರವಾಗಿಯೂ ಇದ್ದವು.

೭. ಆ ರಾಕ್ಷಸನು ಘುರ್ ಘುರ್ ಎಂದು ಶಬ್ದವನ್ನು ಮಾಡುತ್ತಾ ಹಸಿವಿನಿಂದ ಕೂಡಿದವನಾಗಿ ಆ ಬ್ರಾಹ್ಮಣನ ಎದುರಿಗೆ ಬಂದು ನಿಂತುಕೊಂಡನು.

ಗಿರಿರಾಜೋದ್ಭವೇನಾಸೌ ಪಾಷಾಣೇನ ಜಘಾನ ತಂ।
ಗಿರಿರಾಜಶಿಲಾಸ್ಪರ್ಶಾತ್ತ್ಯಕ್ತ್ವಾಽಸೌ ರಾಕ್ಷಸೀಂ ತನುಂ ॥ ೮ ॥

ಪದ್ಮಪತ್ರವಿಶಾಲಾಕ್ಷಃ ಶ್ಯಾಮಸುಂದರವಿಗ್ರಹಃ।
ವನಮಾಲೀ ಪೀತವಾಸಾ ಮುಕುಟೀ ಕುಂಡಲಾನ್ವಿತಃ ॥ ೯ ॥

ವಂಶೀಧರೋ ವೇತ್ರಹಸ್ತಃ ಕಾಮದೇವ ಇವಾಪರಃ।
ಭೂತ್ವಾ ಕೃತಾಂಜಲಿರ್ವಿಪ್ರಂ ಪ್ರಣನಾಮ ಮುಹುರ್ಮುಹುಃ ॥ ೧೦ ॥

॥ ಸಿದ್ಧ ಉವಾಚ ॥

ಧನ್ಯಸ್ತ್ವಂ ಬ್ರಾಹ್ಮಣಶ್ರೇಷ್ಠ ಪರತ್ರಾಣಪರಾಯಣಃ।
ತ್ವಯಾ ವಿಮೋಚಿತೋಽಹಂ ವೈ ರಾಕ್ಷಸಾತ್ಮಾನ್ಮಹಾಮತೇ ॥ ೧೧ ॥

ಪಾಷಾಣಸ್ಪರ್ಶಮಾತ್ರೇಣ ಕಲ್ಯಾಣಂ ಮೇ ಬಭೂವ ಹ।
ನ ಕೋಽಪಿ ಮಾಂ ಮೋಚಯಿತುಂ ಸಮರ್ಥೋ ಹಿ ತ್ವಯಾ ವಿನಾ ॥ ೧೨ ॥

---

೮. ಆಗ ಬ್ರಾಹ್ಮಣನು ತನ್ನ ಕೈಲಿದ್ದ ಗೋವರ್ಧನಪರ್ವತದ ಕಲ್ಲಿನಿಂದ ಆ ರಾಕ್ಷಸನನ್ನು ಹೊಡೆದನು. ಗಿರಿರಾಜನ ಶಿಲಾಸ್ಪರ್ಶದಿಂದ ಆ ರಾಕ್ಷಸನು ತನ್ನ ರಾಕ್ಷಸಶರೀರವನ್ನು ಬಿಟ್ಟು,

೯-೧೦. ಸುಂದರವಾದ ಶರೀರವನ್ನು ಪಡೆದನು. ಕಮಲಪತ್ರದಂತೆ ವಿಶಾಲವಾದ ಕಣ್ಣುಗಳಿದ್ದವು. ಕಪ್ಪಗೆ ಸುಂದರವಾದ ಶರೀರವುಂಟಾಯಿತು. ತುಳಸಿಯ ಹಾರವನ್ನು ಧರಿಸಿ ಪೀತಾಂಬರವನ್ನುಟ್ಟಿದ್ದನು. ಕಿರೀಟವು ತಲೆಯಲ್ಲಿ ಶೋಭಿಸುತ್ತಿತ್ತು. ಕರ್ಣಕುಂಡಲಗಳನ್ನಿಟ್ಟಿದ್ದನು. ಕೊಳಲನ್ನೂ, ಬೆತ್ತವನ್ನೂ ಹಿಡಿದು ಮನ್ಮಥನಂತೆ ಪ್ರಕಾಶಿಸುತ್ತಿದ್ದನು. ಅಂಜಲಿಬದ್ಧನಾಗಿ ಆ ಬ್ರಾಹ್ಮಣನನ್ನು ಪುನಃ ಪುನಃ ನಮಸ್ಕರಿಸಿ,

೧೧. ಆ ಸಿದ್ಧನು ಇಂತೆಂದನು :—ಎಲೈ ಬ್ರಾಹ್ಮಣಶ್ರೇಷ್ಠನೇ, ನೀನೇ ಧನ್ಯನು. ಪರೋಪಕಾರನಿರತನಾದ ನಿನ್ನಿಂದ ನನ್ನ ರಾಕ್ಷಸಜನ್ಮವು ನಾಶವಾಯಿತು.

೧೨. ಒಂದು ಕಲ್ಲಿನ ಸ್ಪರ್ಶದಿಂದ ನನಗೆ ಶುಭವುಂಟಾಗಿರುವುದು. ಆದುದರಿಂದ ನನ್ನನ್ನು ರಾಕ್ಷಸಜನ್ಮದಿಂದ ಬಿಡಿಸಿ ಒಳ್ಳೆಯ ಜನ್ಮವನ್ನು ಒದಗಿಸಿದ ವಿಷಯದಲ್ಲಿ ನಿನ್ನನ್ನು ಬಿಟ್ಟರೆ ಮತ್ತಾರು ಸಮರ್ಥರು ?

|| ಬ್ರಾಹ್ಮಣ ಉವಾಚ ||

ವಿಸ್ಮಿತಸ್ತವವಾಕ್ಯೇಽಹಂ ನ ತ್ವಾಂ ಮೋಚಯಿತುಂ ಕ್ಷಮಃ |
ಪಾಷಾಣಸ್ಪರ್ಶನಫಲಂ ನ ಜಾನೇ ವದ ಸುವ್ರತ || ೧೩ ||

|| ಸಿದ್ಧ ಉವಾಚ ||

ಗಿರಿರಾಜೋ ಹರೇ ರೂಪಂ ಶ್ರೀಮಾನ್ಗೋವರ್ಧನೋ ಗಿರಿಃ |
ತಸ್ಯ ದರ್ಶನಮಾತ್ರೇಣ ನರೋ ಯಾತಿ ಕೃತಾರ್ಥತಾಂ || ೧೪ ||

ಗಂಧಮಾದನಯಾತ್ರಾಯಾಂ ಯತ್ಫಲಂ ಲಭತೇ ನರಃ |
ತಸ್ಮಾತ್ಕೋಟಿಗುಣಂ ಪುಣ್ಯಂ ಗಿರಿರಾಜಸ್ಯ ದರ್ಶನೇ || ೧೫ ||

ಪಂಚವರ್ಷಸಹಸ್ರಾಣಿ ಕೇದಾರೇ ಯತ್ತಪಃಫಲಂ |
ತಚ್ಚ ಗೋವರ್ಧನೇ ವಿಪ್ರ ಕ್ಷಣೇನ ಲಭತೇ ನರಃ || ೧೬ ||

---

೧೩. ಎನ್ನಲು, ಬ್ರಾಹ್ಮಣನಿಂತೆಂದನು :—ಎಲೈ ಸಿದ್ಧನೇ, ನಿನ್ನ ಮಾತುಗಳನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಗುತ್ತಿರುವುದು. ನಿನ್ನ ಆ ರಾಕ್ಷಸಜನ್ಮವನ್ನು ನಾಶಮಾಡುವಷ್ಟು ಸಮರ್ಥನು ನಾನಲ್ಲ. ಅಥವಾ ಈ ಕಲ್ಲಿನ ಸಾಮರ್ಥ್ಯವೋ ? ಅದೂ ನನಗೆ ತಿಳಿಯದು. ನಿನಗೆ ತಿಳಿದಿದ್ದರೆ ಹೇಳು.

೧೪. ಎಂದು ಕೇಳಲು, ಸಿದ್ಧನು ಹೇಳಿದನು:—ಗಿರಿರಾಜನಾದ ಗೋವರ್ಧನ ಪರ್ವತವು ಹರಿಯ ಸ್ವರೂಪವು. ಆದುದರಿಂದ ಅದರ ದರ್ಶನದಿಂದ ಮನುಜನು ಕೃತಕೃತ್ಯನಾಗುವನು.

೧೫. ಗಂಧಮಾದನಪರ್ವತದ ಯಾತ್ರೆಯನ್ನು ಮಾಡಿದರೆ ಯಾವ ಫಲವುಂಟಾಗುವುದೋ ಅದಕ್ಕಿಂತ ಕೋಟಿಯಷ್ಟು ಅಧಿಕಫಲವು ಗೋವರ್ಧನಪರ್ವತದ ದರ್ಶನದಿಂದ ಉಂಟಾಗುವುದು.

೧೬. ಕೇದಾರಕ್ಷೇತ್ರದಲ್ಲಿ ಐದುಸಹಸ್ರವರ್ಷಗಳು ತಪಸ್ಸುಮಾಡಿದರೆ ಯಾವ ಫಲವುಂಟಾಗುವುದೋ ಆ ಫಲವು ಈ ಗೋವರ್ಧನದಲ್ಲಿ ಕ್ಷಣಕಾಲ ತಪಸ್ಸುಮಾಡಿದರೆ ದೊರಕುವುದು.

ಮಲಯಾದ್ರೌ ಸ್ವರ್ಣಭಾರದಾನಸ್ಯಾಪಿ ಚ ಯತ್ಫಲಂ ।
ತಸ್ಮಾತ್ಕೋಟಿಗುಣಂ ಪುಣ್ಯಂ ಗಿರಿರಾಜೇ ಹಿ ಮಾಸಿಕಂ ॥ ೧೭ ॥

ಪರ್ವತೇ ಮಂಗಲಪ್ರಸ್ಥೇ ಯೋ ದದ್ಯಾದ್ಧೇಮದಕ್ಷಿಣಾಂ ।
ಸ ಯಾತಿ ವಿಷ್ಣುಸಾರೂಪ್ಯಂ ಯುಕ್ತಃ ಪಾಪಶತೈರಪಿ ॥ ೧೮ ॥

ತತ್ಪದಂ ಹಿ ನರೋ ಯಾತಿ ಗಿರಿರಾಜಸ್ಯ ದರ್ಶನಾತ್ ।
ಗಿರಿರಾಜಸಮಂ ಪುಣ್ಯಮನ್ಯತ್ತೀರ್ಥಂ ನ ವಿದ್ಯತೇ ॥ ೧೯ ॥

ಋಷಭಾದ್ರೌ ಕೂಟಕಾದ್ರೌ ಕೋಲಕಾದ್ರೌ ತಥಾ ನರಃ ।
ಸುವರ್ಣಶೃಂಗಯುಕ್ತಾನಾಂ ಗವಾಂ ಕೋಟಿಂ ದದಾತಿ ಯಃ ॥ ೨೦ ॥

ಮಹಾಪುಣ್ಯಂ ಲಭೇತ್ಸೋಽಪಿ ವಿಪ್ರಾನ್ಸಂಪೂಜ್ಯ ಯತ್ನತಃ ।
ತಸ್ಮಾಲ್ಲಕ್ಷಗುಣಂ ಪುಣ್ಯಂ ಗಿರೌ ಗೋವರ್ಧನೇ ದ್ವಿಜ ॥ ೨೧ ॥

---

೧೭. ಮಲಯಪರ್ವತದಲ್ಲಿ ಸುವರ್ಣಭಾರವನ್ನು ದಾನಮಾಡಿದರೆ ಯಾವ ಫಲವುಂಟಾಗುವುದೋ, ಆ ಫಲವು ಒಂದು ತಿಂಗಳು ಗಿರಿರಾಜನ ಸಮೀಪದಲ್ಲಿದ್ದರೆ ಉಂಟಾಗುವುದು.

೧೮. ಗೋವರ್ಧನಪರ್ವತದ ಪುಣ್ಯತಮವಾದ ಕೆಳಪ್ರದೇಶದಲ್ಲಿ ಯಾರು ಸುವರ್ಣದಕ್ಷಿಣೆಯನ್ನು ಕೊಡುವರೋ ಅವರು ನೂರಾರು ಪಾಪಗಳಿಂದ ಕೂಡಿದ್ದರೂ ಸಹ ವಿಷ್ಣುವಿನ ಸಾರೂಪ್ಯವನ್ನು ಹೊಂದುವರು.

೧೯. ಗಿರಿರಾಜನ ದರ್ಶನಮಾತ್ರದಿಂದಲೇ ವಿಷ್ಣುವಿನ ಪಾದಗಳು ಲಭಿಸುವುವು. ಗಿರಿರಾಜನಿಗೆ ಸಮಾನವಾದ ಪುಣ್ಯತಮವಾದ ತೀರ್ಥಕ್ಷೇತ್ರವು ಮತ್ತೊಂದಿಲ್ಲ.

೨೦-೨೧. ಋಷಭಾದ್ರಿ, ಕೂಟಕಾದ್ರಿ, ಕೋಲಕಾದ್ರಿ ಇವೇ ಮುಂತಾದ ಸ್ಥಳಗಳಲ್ಲಿ ಚಿನ್ನದ ಕಳಸಗಳನ್ನು ಕೊಂಬುಗಳಿಗೆ ತೊಡಿಸಿದ ಒಂದುಕೋಟಿ ಹಸುಗಳನ್ನು, ಬ್ರಾಹ್ಮಣರನ್ನು ಪೂಜಿಸಿ ಅವರಿಗೆ ದಾನಮಾಡಿದರೆ ಮಹಾಪುಣ್ಯವುಂಟಾಗುವುದು. ಅದೇ ರೀತಿಯಾದ ದಾನವನ್ನು ಗೋವರ್ಧನಪರ್ವತದಲ್ಲಿ ಮಾಡಿದರೆ ಅಲ್ಲಿ ಬರುವ ಪುಣ್ಯಕ್ಕಿಂತ ಲಕ್ಷಗುಣಜಾಸ್ತಿಯಾಗಿ ಪುಣ್ಯವು ಬರುವುದು.

ಋಷ್ಯಮೂಕಸ್ಯ ಸಹ್ಯಸ್ಯ ತಥಾ ದೇವಗಿರೇಃ ಪುನಃ ।
ಯಾತ್ರಾಯಾಂ ಲಭತೇ ಪುಣ್ಯಂ ಸಮಸ್ತಾಯಾ ಭುವಃ ಫಲಂ ॥ ೨೨ ॥

ಗಿರಿರಾಜಸ್ಯ ಯಾತ್ರಾಯಾಂ ತಸ್ಮಾತ್ಕೋಟಿಗುಣಂ ಫಲಂ ।
ಗಿರಿರಾಜಸಮಂ ತೀರ್ಥಂ ನ ಭೂತಂ ನ ಭವಿಷ್ಯತಿ ॥ ೨೩ ॥

ಶ್ರೀಶೈಲೇ ದಶವರ್ಷಾಣಿ ಕುಂಡೇ ವಿದ್ಯಾಧರೇ ನರಃ ।
ಸ್ನಾನಂ ಕರೋತಿ ಸುಕೃತೀ ಶತಯಜ್ಞಫಲಂ ಲಭೇತ್ ॥ ೨೪ ॥

ಗೋವರ್ಧನೇ ಪುಚ್ಛಕುಂಡೇ ದಿನೈಕಂ ಸ್ನಾನಕೃನ್ನರಃ ।
ಕೋಟಿಯಜ್ಞಫಲಂ ಸಾಕ್ಷಾತ್ಪುಣ್ಯಮೇತಿ ನ ಸಂಶಯಃ ॥ ೨೫ ॥

ವೆಂಕಟಾದ್ರೌ ವಾರಿಧಾರೇ ಮಹೇಂದ್ರೇ ವಿಂಧ್ಯಪರ್ವತೇ ।
ಯಜ್ಞಂ ಕೃತ್ವಾ ಹ್ಯಶ್ವಮೇಧಂ ನರೋ ನಾಕಪತಿರ್ಭವೇತ್ ॥ ೨೬ ॥

೨೨-೨೩. ಋಷ್ಯಮೂಕ, ಸಹ್ಯ ಈ ಪರ್ವತಗಳ ಮತ್ತು ಸಮಸ್ತ ಭೂಮಂಡಲದ ಯಾತ್ರೆಯನ್ನು ಮಾಡಿದರೆ ಯಾವ ಫಲವುಂಟಾಗುವುದೋ ಅದಕ್ಕಿಂತ ಕೋಟಿಗುಣ ಜಾಸ್ತಿಯಾದ ಫಲವು ಗೋವರ್ಧನಪರ್ವತದ ಯಾತ್ರೆಯೊಂದರಿಂದ ಉಂಟಾಗುವುದು. ಆದುದರಿಂದ ಗಿರಿರಾಜನಿಗೆ ಸಮಾನವಾದ ತೀರ್ಥಪ್ರದೇಶವು ಹಿಂದೆ ಯಾವುದೂ ಇರಲಿಲ್ಲ. ಮುಂದೆ ಯಾವುದೂ ಹುಟ್ಟುವುದಿಲ್ಲ.

೨೪-೨೫. ಶ್ರೀಶೈಲದ ತೀರ್ಥಗಳಲ್ಲಿ ಹತ್ತುವರ್ಷಗಳು ಯಾವನು ಸ್ನಾನ ಮಾಡುವನೋ, ಆ ಪುಣ್ಯಶಾಲಿಗೆ ನೂರು ಯಜ್ಞಗಳ ಫಲವುಂಟಾಗುವುದು. ಆದರೆ ಈ ಗೋವರ್ಧನಪರ್ವತದ ಪುಚ್ಛಕುಂಡವೆಂಬುದರಲ್ಲಿ ಒಂದೇ ದಿನ ಸ್ನಾನಮಾಡಿದರೂ ಸಾಕು. ಅವನಿಗೆ ಒಂದುಕೋಟಿ ಯಜ್ಞದ ಫಲವು ಬರುವುದಲ್ಲದೆ ಪುಣ್ಯಲೋಕವೂ ಸಿಕ್ಕುವುದು. ಇದರಲ್ಲಿ ಸಂಶಯವಿಲ್ಲ.

೨೬-೨೭. ವೆಂಕಟಾದ್ರಿ, ವಾರಿಧಾರ, ಮಹೇಂದ್ರ, ವಿಂಧ್ಯ ಈ ಎಲ್ಲಾ ಸ್ಥಳಗಳಲ್ಲಿಯೂ ಅಶ್ವಮೇಧಯಜ್ಞವನ್ನು ಮಾಡಿದವನು ಸ್ವರ್ಗಾಧಿಪತಿಯಾಗುವನು. ಆದರೆ ಈ ಗೋವರ್ಧನಪರ್ವತ ಒಂದರಲ್ಲಿ ಯಜ್ಞವನ್ನು ಮಾಡಿ ದಕ್ಷಿಣೆಮುಂತಾ

ಗೋವರ್ಧನೇಽಸ್ಮಿನ್ಯೋ ಯಜ್ಞಂ ಕೃತ್ವಾ ದತ್ವಾ ಸುದಕ್ಷಿಣಾಂ ।
ನಾಕೇ ಪದಂ ಸಂವಿಧಾಯ ವಿಷ್ಣೋಃ ಪದಮವಾಪ್ನುಯಾತ್ ॥ ೨೭ ॥

ಚಿತ್ರಕೂಟೇ ಪಯಸ್ವಿನ್ಯಾಂ ಶ್ರೀರಾಮನವಮೀದಿನೇ ।
ಪಾರಿಯಾತ್ರೇ ತೃತೀಯಾಯಾಂ ವೈಶಾಖಸ್ಯ ದ್ವಿಜೋತ್ತಮಃ ॥ ೨೮ ॥

ಕುಕುರಾದ್ರೌ ಚ ಪೂರ್ಣಾಯಾಂ ನೀಲಾದ್ರೌ ದ್ವಾದಶೀ ದಿನೇ ।
ಇಂದ್ರಕೀಲೇ ಚ ಸಪ್ತಮ್ಯಾಂ ಸ್ನಾನಂ ದಾನಂ ತಪಃ ಕ್ರಿಯಾಃ ॥ ೨೯ ॥

ತತ್ಸರ್ವಂ ಕೋಟಿಗುಣಿತಂ ಭವತೀತ್ಥಂ ಹಿ ಭಾರತೇ ।
ಗೋವರ್ಧನೇ ತು ತತ್ಸರ್ವಮನಂತಂ ಜಾಯತೇ ದ್ವಿಜ ॥ ೩೦ ॥

ಗೋದಾವರ್ಯಾಂ ಗುರೌ ಸಿಂಹೇ ಮಾಯಾಪುರ್ಯಾಂ ತು ಕುಂಭಗೇ ।
ಪುಷ್ಕರೇ ಪುಷ್ಯನಕ್ಷತ್ರೇ ಕುರುಕ್ಷೇತ್ರೇ ರವಿಗ್ರಹೇ ॥ ೩೧ ॥

ದುವುಗಳನ್ನು ಕೊಡುವವನು ಸ್ವರ್ಗಕ್ಕೆ ಹೋಗುವುದಲ್ಲದೆ ವಿಷ್ಣುವಿನ ಸ್ಥಾನವನ್ನೇ ಪಡೆಯುವನು.

೨೮-೩೦. ಶ್ರೀರಾಮನವಮಿಯದಿನ ಚಿತ್ರಕೂಟದ ಪಯಸ್ವಿನೀ ತೀರ್ಥದಲ್ಲಿಯೂ, ವೈಶಾಖಮಾಸದ ತೃತೀಯಾತಿಥಿಯಲ್ಲಿ ಪಾರಿಯಾತ್ರಪರ್ವತದಲ್ಲಿಯೂ, ಹುಣ್ಣಿಮೆಯದಿನ ಕುಕುರಾದ್ರಿಯಲ್ಲಿಯೂ, ದ್ವಾದಶೀದಿನ ನೀಲಾದ್ರಿಯಲ್ಲಿಯೂ, ಸಪ್ತಮಿಯಲ್ಲಿ ಇಂದ್ರಕೀಲಪರ್ವತದಲ್ಲಿಯೂ, ಸ್ನಾನ, ದಾನ, ತಪಸ್ಸುಮುಂತಾದುವುಗಳನ್ನಾಚರಿಸಿದರೆ ಯಾವ ಫಲಬರುವುದೋ, ಅದರ ಕೋಟಿಯಷ್ಟು ಜಾಸ್ತಿಫಲವು ಗೋವರ್ಧನಪರ್ವತದಲ್ಲಿ ಸ್ನಾನ, ದಾನ, ತಪಸ್ಸುಗಳನ್ನು ಮಾಡಿದರೆ ಬರುವುದು.

೩೧-೩೨. ಗುರುವು ಸಿಂಹಲಗ್ನಕ್ಕೆ ಬಂದಾಗ ಗೋದಾವರಿಯಲ್ಲಿಯೂ, ಗುರುವು ಕುಂಭಲಗ್ನಕ್ಕೆ ಬಂದಾಗ ಮಾಯಾಪುರಿಯಲ್ಲಿಯೂ, ಪುಷ್ಯನಕ್ಷತ್ರದಲ್ಲಿ ಪುಷ್ಕರಕ್ಷೇತ್ರದಲ್ಲಿಯೂ, ಸೂರ್ಯಗ್ರಹಣದಲ್ಲಿ ಕುರುಕ್ಷೇತ್ರದಲ್ಲಿಯೂ, ಚಂದ್ರಗ್ರಹಣದಲ್ಲಿ ಕಾಶಿಯಲ್ಲಿಯೂ, ಫಾಲ್ಗುಣಮಾಸದಲ್ಲಿ ನೈಮಿಶಾರಣ್ಯದಲ್ಲಿಯೂ,

ಚಂದ್ರಗ್ರಹೇ ತು ಕಾಶ್ಯಾಂ ವೈ ಫಾಲ್ಗುನೇ ನೈಮಿಷೇ ತಥಾ ।
ಏಕಾದಶ್ಯಾಂ ಸೂಕರೇ ಚ ಕಾರ್ತಿಕ್ಯಾಂ ಗುಣಮುಕ್ತಿದೇ ॥ ೩೨ ॥

ಜನ್ಮಾಷ್ಟಮ್ಯಾಂ ಮಧೋಃ ಪುರ್ಯಾಂ ಖಾಂಡವೇ ದ್ವಾದಶೇ ದಿನೇ ।
ಕಾರ್ತಿಕ್ಯಾಂ ಪೂರ್ಣಿಮಾಯಾಂ ತು ವಟೇಶ್ವರಮಹಾವಟೇ ॥ ೩೩ ॥

ಮಕರಾರ್ಕೇ ಪ್ರಯಾಗೇ ತು ಬರ್ಹಿಷ್ಮತ್ಯಾಂ ಹಿ ವೈಧೃತೌ ।
ಅಯೋಧ್ಯಾಸರಯೂತೀರೇ ಶ್ರೀರಾಮನವಮೀದಿನೇ ॥ ೩೪ ॥

ಏವಂ ಶಿವಚತುರ್ದಶ್ಯಾಂ ವೈಜನಾಥೇ ಶುಭೇ ವನೇ ।
ತಥಾ ದರ್ಶೇ ಸೋಮವಾರೇ ಗಂಗಾಸಾಗರಸಂಗಮೇ ॥ ೩೫ ॥

ದಶಮ್ಯಾಂ ಸೇತುಬಂಧೇ ಚ ಶ್ರೀರಂಗೇ ಸಪ್ತಮೀದಿನೇ ।
ಏಷು ದಾನತಪಃಸ್ನಾನಂ ಜಪೋದೇವದ್ವಿಜಾರ್ಚನಂ ॥ ೩೬ ॥

ಏಕಾದಶಿಯಲ್ಲಿ ಸೂಕರತೀರ್ಥದಲ್ಲಿಯೂ, ಕಾರ್ತಿಕಮಾಸದಲ್ಲಿ ಗುಣಮುಕ್ತಿದ ಎಂಬುದರಲ್ಲಿಯೂ ಸ್ನಾನ, ದಾನ, ಜಪ, ದೇವಬ್ರಾಹ್ಮಣಪೂಜಾ ಮುಂತಾದುವುಗಳನ್ನು ಮಾಡಿದರೆ ಎಷ್ಟು ಫಲ ಬರುವುದೋ ಅದರ ಕೋಟಿಯಷ್ಟು ಫಲವು ಗೋವರ್ಧನ ಪರ್ವತದಲ್ಲಿ ಸ್ನಾನ, ದಾನ, ಜಪಾದಿಗಳನ್ನು ಮಾಡುವುದರಿಂದುಂಟಾಗುವುದು.

೩೩-೩೪. ಶ್ರೀಕೃಷ್ಣಜನ್ಮಾಷ್ಟಮಿಯದಿನ ಮಥುರೆಯಲ್ಲಿಯೂ, ದ್ವಾದಶಿಯ ದಿನ ಖಾಂಡವದಲ್ಲಿಯೂ, ಕಾರ್ತೀಕ ಪೂರ್ಣಿಮೆಯದಿನ ವಿದುರಾಶ್ವತ್ಥದಲ್ಲಿಯೂ, ಮಕರಸಂಕ್ರಾಂತಿಯಲ್ಲಿ ಪ್ರಯಾಗದಲ್ಲಿಯೂ, ವೈಧೃತಿಯಲ್ಲಿ ಬರ್ಹಿಷ್ಮತಿಯಲ್ಲಿಯೂ, ಶ್ರೀರಾಮನವಮಿಯದಿನ ಅಯೋಧ್ಯೆಯ ಸರಯೂನದಿಯತೀರದಲ್ಲಿಯೂ, ಸ್ನಾನ, ದಾನ, ಜಪ, ದೇವಬ್ರಾಹ್ಮಣಪೂಜಾದಿಗಳನ್ನು ಮಾಡಿದರೆ ಎಷ್ಟು ಫಲ ಬರುವುದೋ ಅದರ ಕೋಟಿಯಷ್ಟು ಫಲವು ಗೋವರ್ಧನಪರ್ವತದಲ್ಲಿ ಸ್ನಾನ, ದಾನ, ಜಪಾದಿಗಳನ್ನು ಮಾಡುವುದರಿಂದುಂಟಾಗುವುದು.

೩೫-೩೬. ಶಿವಚತುರ್ದಶಿಯದಿನ ವೈಜನಾಥವನದಲ್ಲಿಯೂ, ಅಮಾವಾಸ್ಯೆ, ಸೋಮವಾರಗಳಲ್ಲಿ ಗಂಗಾಸಾಗರಸಂಗಮದಲ್ಲಿಯೂ, ದಶಮಿಯದಿನ ಸೇತುಬಂಧನದಲ್ಲಿಯೂ, ಸಪ್ತಮೀದಿನ ಶ್ರೀರಂಗದಲ್ಲಿಯೂ, ಸ್ನಾನ, ದಾನ, ಜಪ, ದೇವಬ್ರಾಹ್ಮಣ ಪೂಜಾದಿಗಳನ್ನು ಮಾಡಿದರೆ ಎಷ್ಟು ಫಲವು ಬರುವುದೋ ಅದರ ಕೋಟಿಯಷ್ಟು

ತತ್ಸರ್ವಂ ಕೋಟಿಗುಣಿತಂ ಭವತೀಹ ದ್ವಿಜೋತ್ತಮ ।
ತತ್ತುಲ್ಯಂ ಪುಣ್ಯಮಾಪ್ನೋತಿ ಗಿರೌ ಗೋವರ್ಧನೇಪಿ ಚ ॥ ೩೭ ॥

ಗೋವಿಂದಕುಂಡೇ ವಿಶದೇ ಯಃ ಸ್ನಾತಿ ಕೃಷ್ಣಮಾನಸಃ ।
ಪ್ರಾಪ್ನೋತಿ ಕೃಷ್ಣಸಾರೂಪ್ಯಂ ಮೈಥಿವೇಂದ್ರ ನ ಸಂಶಯಃ ॥ ೩೮ ॥

ಅಶ್ವಮೇಧಸಹಸ್ರಾಣಿ ರಾಜಸೂಯಶತಾನಿ ಚ ।
ಮಾನಸೀಗಂಗಯಾ ತುಲ್ಯಾನಿ ಭವಂತ್ಯತ್ರ ನೋ ಗಿರೌ ॥ ೩೯ ॥

ತ್ವಯಾ ವಿಪ್ರ ಕೃತಂ ಸಾಕ್ಷಾದ್ಗಿರಿರಾಜಸ್ಯ ದರ್ಶನಂ ।
ಸ್ಪರ್ಶನಂ ಚ ತತಃ ಸ್ನಾನಂ ನ ತ್ವತ್ತೋಽಪ್ಯಧಿಕೋ ಭುವಿ ॥ ೪೦ ॥

ಜಾಸ್ತಿಫಲವು ಗಿರಿರಾಜನಲ್ಲಿ ಸ್ನಾನ, ದಾನ, ಜಪಾದಿಗಳನ್ನು ಮಾಡುವುದರಿಂದ ಉಂಟಾಗುವುದು.

೩೮. ಗೋವರ್ಧನಪರ್ವತದಲ್ಲಿರುವ ವಿಶಾಲವಾದ ಗೋವಿಂದಕುಂಡವೆಂಬುದರಲ್ಲಿ ಯಾರು ಸ್ನಾನಮಾಡುವರೋ ಅವರು ಶ್ರೀಕೃಷ್ಣನ ಸಾರೂಪ್ಯವನ್ನು ಪಡೆಯುವರು. ಇದರಲ್ಲಿ ಸಂಶಯವಿಲ್ಲ.

೩೯. ಅಶ್ವಮೇಧಸಹಸ್ರಗಳಾಗಲೀ, ರಾಜಸೂಯಶತವಾಗಲೀ ಇಲ್ಲಿ ಹರಿಯುತಕ್ಕ ಮಾನಸೀಗಂಗೆಯ ಸ್ನಾನಕ್ಕೆ ಸಮಾನವಾಗಲಾರವು.

೪೦. ಎಲೈ ಬ್ರಾಹ್ಮಣನೇ, ನೀನು ಗೋವರ್ಧನಪರ್ವತವನ್ನು ಸಾಕ್ಷಾತ್ತಾಗಿ ದರ್ಶನಮಾಡಿರುವೆ. ಅದರ ಸ್ಪರ್ಶನವೂ ಆಗಿರುವುದು. ಅಲ್ಲಿ ಸ್ನಾನವನ್ನೂ ಮಾಡಿ ಪವಿತ್ರನಾಗಿರುವೆ. ಆದುದರಿಂದ ಈ ಭೂಮಿಯಲ್ಲಿ ನಿನಗಿಂತ ಶ್ರೇಷ್ಠನು ಮತ್ತೊಬ್ಬನಿಲ್ಲ.

ನ ಮನ್ಯಸೇ ಚೇನ್ಮಾಂ ಪಶ್ಯ ಮಹಾಪಾತಕಿನಂ ಪರಂ ।
ಗೋವರ್ಧನಶಿಲಾಸ್ಪರ್ಶಾತ್ಕೃಷ್ಣಸಾರೂಪ್ಯತಾಂ ಗತಂ ॥ ೪೧ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗಿರಿರಾಜಖಂಡೇ ಶ್ರೀಗಿರಿರಾಜ ಮಾಹಾತ್ಮ್ಯಂ ನಾಮ ದಶಮೋಽಧ್ಯಾಯಃ

---

೪೧. ನನ್ನ ಮಾತಿನಲ್ಲಿ ನಂಬಿಕೆಯಿಲ್ಲದಿದ್ದರೆ ಮಹಾಪಾತಕಿಯಾದ ನಾನು ಯಾವ ಅವಸ್ಥೆಯನ್ನು ಹೊಂದಿರುವೆನೆಂಬುದನ್ನು ನೋಡು. ಗೋವರ್ಧನಶಿಲೆಯ ಸ್ಪರ್ಶಮಾತ್ರದಿಂದಲೇ ನನಗೆ ಶ್ರೀಕೃಷ್ಣನ ಸಾರೂಪ್ಯವು ಬಂದಿರುವುದು ಎಂದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಗಿರಿರಾಜಖಂಡದಲ್ಲಿ ಶ್ರೀಗಿರಿರಾಜ ಮಾಹಾತ್ಮೆ ವರ್ಣನೆ ಎಂಬ ಹತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಗಿರಿರಾಜಖಂಡೇ

ಏಕಾದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಇತಿ ಶ್ರುತ್ವಾ ಸಿದ್ಧವಾಕ್ಯಂ ಬ್ರಾಹ್ಮಣೋ ವಿಸ್ಮಯಂ ಗತಃ ।
ಪುನಃ ಪಪ್ರಚ್ಛ ತಂ ರಾಜನ್ಗಿರಿರಾಜಪ್ರಭಾವವಿತ್ ॥ ೧ ॥

॥ ಬ್ರಾಹ್ಮಣ ಉವಾಚ ॥

ಪುರಾ ಜನ್ಮನಿ ಕಸ್ತ್ವಂ ಭೋ ತ್ವಯಾಂ ಕಿಂ ಕಲುಷಂ ಕೃತಂ ।
ಸರ್ವಂ ವದ ಮಹಾಭಾಗ ತ್ವಂ ಸಾಕ್ಷಾದ್ದಿವ್ಯದರ್ಶನಃ ॥ ೨ ॥

ಹನ್ನೊಂದನೆಯ ಅಧ್ಯಾಯ

೧. ನಾರದನು ಹೇಳಿದನು :—ಎಲೈ ಬಹುಲಾಶ್ವನೇ, ಕೇಳು. ಆ ಸಿದ್ಧನು ಹೇಳಿದ ಗೋವರ್ಧನಮಹಾತ್ಮೆಯನ್ನು ಕೇಳಿ ಬ್ರಾಹ್ಮಣನು ವಿಸ್ಮಿತನಾದನು. ಪುನಃ ಗೋವರ್ಧನದ ಮಹಾತ್ಮೆಯನ್ನು ಕೇಳಲಿಷ್ಟವುಳ್ಳವನಾಗಿ ಆ ಸಿದ್ಧನನ್ನು ಕುರಿತಿಂತೆಂದನು.

೨. ಎಲೈ, ಪೂರ್ವಜನ್ಮದಲ್ಲಿ ನೀನು ಯಾರು ? ನಿನಗೆ ರಾಕ್ಷಸಜನ್ಮ ಬರಲು ನೀನು ಮಾಡಿದ ಪಾಪವೇನು ? ಈಗ ನೀನು ದಿವ್ಯರೂಪಿಯಾದ ಮಹಾತ್ಮನಾಗಿರುವೆ. ಎಲ್ಲ ವಿಷಯಗಳನ್ನೂ ನನಗೆ ತಿಳಿಸು ಎನ್ನಲು ಸಿದ್ಧನಿಂತೆಂದನು.

॥ ಸಿದ್ಧ ಉವಾಚ ॥

ಪುರಾ ಜನ್ಮನಿ ವೈಶ್ಯೋಽಹಂ ಧನೀ ವೈಶ್ಯಸುತೋ ಮಹಾನ್ ।
ಆಬಾಲ್ಯಾದ್ದ್ಯೂತನಿರತೋ ವಿಟಗೋಷ್ಠೀವಿಶಾರದಃ ॥ ೩ ॥

ವೇಶ್ಯಾರತಃ ಕುಮಾರ್ಗೋಽಹಂ ಮದಿರಾಮದವಿಹ್ವಲಃ ।
ಮಾತ್ರಾ ಪಿತ್ರಾ ಭಾರ್ಯಯಾಪಿ ಭರ್ತ್ಸಿತೋಽಹಂ ಸದಾ ದ್ವಿಜ ॥ ೪ ॥

ಏಕದಾ ತು ಮಯಾ ವಿಪ್ರ ಪಿತರೌ ಗರದಾನತಃ ।
ಮಾರಿತೌ ಚ ತಥಾ ಭಾರ್ಯಾ ಖಡ್ಗೇನ ಪಥಿ ಮಾರಿತಾ ॥ ೫ ॥

ಗೃಹೀತ್ವಾ ತದ್ಧನಂ ಸರ್ವಂ ವೇಶ್ಯಯಾ ಸಹಿತಃ ಖಲಃ ।
ದಕ್ಷಿಣಾಶಾಂ ಚ ಗತವಾನ್ದಸ್ಯುಕರ್ಮಾತಿನಿರ್ದಯಃ ॥ ೬ ॥

೩–೪. ಬ್ರಾಹ್ಮಣನೇ, ಹೇಳುವೆನು ಕೇಳು. ಹಿಂದಿನ ಜನ್ಮದಲ್ಲಿ ನಾನೊಬ್ಬ ವೈಶ್ಯನು. ಧನವಂತನಾದ ವೈಶ್ಯನ ಪುತ್ರನು. ಧನಮದದಿಂದ ಕೂಡಿ ಚಿಕ್ಕಂದಿನಿಂದಲೂ ದ್ಯೂತ ಮುಂತಾದ ಕೆಟ್ಟಚಾಳಿಗೆ ಬಿದ್ದುಬಿಟ್ಟೆನು. ವಿಟರ ತಂಡಕ್ಕೆ ಮುಖ್ಯಸ್ಥನಾದೆನು. ವೇಶ್ಯೆಯರಲ್ಲಿ ಆಸಕ್ತಿ ಇಟ್ಟೆನು. ಮದ್ಯವನ್ನೂ ಸೇವಿಸಲು ಪ್ರಾರಂಭಿಸಿದೆನು. ನನ್ನೀ ದುರ್ಮಾರ್ಗವನ್ನು ತಾಯಿ, ತಂದೆ, ಹೆಂಡತಿ ಎಲ್ಲರೂ ತಡೆದರು. ಆದರೆ ನಾನು ಬಿಡದಿರಲು ಅವರು ನನ್ನನ್ನು ತಿರಸ್ಕರಿಸಿದರು.

೫. ಇದರಿಂದ ಕ್ರುದ್ಧನಾದ ನಾನು ತಂದೆತಾಯಿಗಳಿಗೆ ವಿಷವಿಕ್ಕಿ ಸಾಯಿಸಿದೆನು. ದಾರಿಯಲ್ಲಿ ಕಾದು ಕುಳಿತು ನನ್ನ ಹೆಂಡತಿಯನ್ನೂ ಕತ್ತರಿಸಿದೆನು.

೬. ಅವರ ಹತ್ತಿರವಿದ್ದ ಧನವನ್ನೆಲ್ಲಾ ತೆಗೆದುಕೊಂಡು ವೇಶ್ಯೆಯೊಡಗೂಡಿ ದಕ್ಷಿಣದಿಕ್ಕನ್ನು ಕುರಿತು ಹೊರಟೆನು. ನೀಚನಾದ ನನಗೆ ಆ ಕೆಲಸಮಾಡುವುದರಲ್ಲಿ ದಯವೇ ಕಂಡುಬರಲಿಲ್ಲ.

ಏಕದಾ ತು ಮಯಾ ವೇಶ್ಯಾ ನಿಃಕ್ಷಿಪ್ತಾ ಹ್ಯಂಧಕೂಪಕೇ ।
ದಸ್ಯುನಾ ಹಿ ಮಯಾ ಪಾಶೈರ್ಮಾರಿತಾಃ ಶತಶೋ ನರಾಃ　　　　॥ ೭ ॥

ಧನಲೋಭೇನ ಭೋ ವಿಪ್ರ ಬ್ರಹ್ಮಹತ್ಯಾಶತಂ ಕೃತಂ ।
ಕ್ಷತ್ರಹತ್ಯಾ ವೈಶ್ಯಹತ್ಯಾಃ ಶೂದ್ರಹತ್ಯಾಃ ಸಹಸ್ರಶಃ　　　　॥ ೮ ॥

ಏಕದಾ ಮಾಂಸಮಾನೇತುಂ ಮೃಗಾನ್ಹಂತುಂ ವನೇ ಗತಂ ।
ಸರ್ಪೋಽದಶತ್ಪಾದಪೃಷ್ಠೇ ದುಷ್ಟಂ ಮಾಂ ನಿಧನಂ ಗತಂ　　　　॥ ೯ ॥

ಸಂತಾಡ್ಯ ಮುದ್ಗರೈರ್ಘೋರೈರ್ಯಮದೂತಾ ಭಯಂಕರಾಃ ।
ಬಧ್ವಾ ಮಾಂ ನರಕಂ ನಿನ್ಯುರ್ಮಹಾಪಾತಕಿನಂ ಖಲಂ　　　　॥ ೧೦ ॥

ಮನ್ವಂತರಂ ತು ಪತಿತಃ ಕುಂಭೀಪಾಕೇ ಮಹಾಖಲೇ ।
ಕಲ್ಪೈಕಂ ತಪ್ತಸೂರ್ಮ್ಯಾಂ ಚ ಮಹಾದುಃಖಗತಃ ಖಲಃ　　　　॥ ೧೧ ॥

---

೭. ದಿನಕ್ರಮೇಣ ನನ್ನ ಕಳ್ಳತನವು ಜಾಸ್ತಿಯಾಗುತ್ತಾ ಬಂದಿತು. ವೇಶ್ಯೆಯನ್ನೂ ಕೂಡ ನಾನು ಕತ್ತಲಮನೆಯಲ್ಲಿ ಬಂಧಿಸಿಟ್ಟೆನು. ಕಳ್ಳತನಕ್ಕೋಸ್ಕರವಾಗಿ ನೂರಾರು ಜನರನ್ನು ಕೊಂದೆನು.

೮. ಧನದಾಸೆಗೆ ಬಿದ್ದು ನೂರಾರು ಬ್ರಹ್ಮಹತ್ಯವನ್ನು ಮಾಡಿದೆನು. ಅಲ್ಲದೆ ಕ್ಷತ್ರಹತ್ಯೆ, ವೈಶ್ಯಹತ್ಯೆ, ಶೂದ್ರಹತ್ಯೆಗಳನ್ನೂ ಸಾವಿರಾರು ಮಾಡಿದೆನು.

೯. ಒಂದು ದಿನ ನಾನು ಮಾಂಸಕ್ಕಾಗಿ ಮೃಗಗಳನ್ನು ಕೊಲ್ಲಲು ಕಾಡಿಗೆ ಹೋಗಿದ್ದಾಗ ಒಂದು ಸರ್ಪವು ನನ್ನ ಕಾಲನ್ನು ಕಚ್ಚಿತು. ಆಗ ನಾನು ಬಿದ್ದು ಸತ್ತುಹೋದೆನು.

೧೦. ಆಗ ಭಯಂಕರರಾದ ಯಮದೂತರು ಬಂದು ಮುದ್ಗರಗಳಿಂದ ನನ್ನನ್ನು ಹೊಡೆಯುತ್ತಾ ಹಗ್ಗಗಳಿಂದ ಕಟ್ಟಿ ಮಹಾಪಾತಕಿಯೂ, ದುಷ್ಟನೂ ಆದ ನನ್ನನ್ನು ನರಕಕ್ಕೆ ಎಳೆದುಕೊಂಡು ಹೋದರು.

೧೧. ನಾನು ಮಾಡಿದ ಪಾಪಕ್ಕೋಸ್ಕರ ನನಗೆ ಒಂದು ಮನ್ವಂತರ ಕುಂಭೀಪಾಕ ನರಕಭೋಗವು ಪ್ರಾಪ್ತವಾಯಿತು. ಅಲ್ಲದೆ ಒಂದು ಕಲ್ಪಪೂರ್ತ ತಪ್ತಸೂರ್ಮ್ಯ ಎಂಬುದರಲ್ಲಿ ಬೀಳಬೇಕಾಯಿತು.

ಚತುರಶೀತಿಲಕ್ಷಾಣಾಂ ನರಕಾಣಾಂ ಪೃಥಕ್ ಪೃಥಕ್ ।
ವರ್ಷಂ ವರ್ಷಂ ನಿಪತಿತೋ ನಿರ್ಗತೋಽಹಂ ಯಮೇಚ್ಛಯಾ ॥ ೧೨ ॥

ತತಸ್ತು ಭಾರತೇ ವರ್ಷೇ ಪ್ರಾಪ್ತೋಽಹಂ ಕರ್ಮವಾಸನಾಂ ।
ದಶವಾರಂ ಸೂಕರೋಽಹಂ ವ್ಯಾಘ್ರೋಽಹಂ ಶತಜನ್ಮಸು ॥ ೧೩ ॥

ಉಷ್ಟ್ರೋಽಹಂ ಜನ್ಮಶತಕಂ ಮಹಿಷಃ ಶತಜನ್ಮಸು ।
ಸರ್ಪೋಽಹಂ ಜನ್ಮಸಾಹಸ್ರಂ ಮಾರಿತೋ ದುಷ್ಟಮಾನವೈಃ ॥ ೧೪ ॥

ಏವಂ ವರ್ಷಾಯುತಾಂತೇ ತು ನಿರ್ಜಲೇ ವಿಪಿನೇ ದ್ವಿಜ ।
ರಾಕ್ಷಸಶ್ಚೇದೃಶೋ ಜಾತೋ ವಿಕರಾಲೋ ಮಹಾಖಲಃ ॥ ೧೫ ॥

ಕಸ್ಯ ಶೂದ್ರಸ್ಯ ದೇಹಂ ವೈ ಸಮಾರುಹ್ಯ ವ್ರಜಂ ಗತಃ ।
ವೃಂದಾವನಸ್ಯ ನಿಕಟೇ ಯಮುನಾನಿಕಟಾಚ್ಛುಭಾತ್ ॥ ೧೬ ॥

---

೧೨. ವರ್ಷವರ್ಷವೂ ಒಂದೊಂದು ನರಕವನ್ನು ಭೋಗಿಸುತ್ತಾ ಎಂಭತ್ತು ನಾಲ್ಕುಲಕ್ಷ ನರಕಗಳನ್ನು ಅನುಭವಿಸಿ ಕೊನೆಗೆ ಯಮನ ಅಭಿಪ್ರಾಯದಂತೆ ಬಿಡಲ್ಪಟ್ಟೆನು.

೧೩. ಅನಂತರ ಭಾರತದಲ್ಲಿ ಹುಟ್ಟಿ ಕರ್ಮವನ್ನು ಅನುಭವಿಸಿದೆನು. ಹತ್ತು ಜನ್ಮಗಳು ಹಂದಿಯಾಗಿಯೂ ನೂರುಜನ್ಮಗಳು ಹುಲಿಯಾಗಿಯೂ ಹುಟ್ಟಿದೆನು.

೧೪. ನೂರುಜನ್ಮ ಒಂಟೆಯಾಗಿದ್ದೆನು. ಎಮ್ಮೆಯಾಗಿ ನೂರುಜನ್ಮಗಳನ್ನು ನೂಕಿದೆನು. ಸಾವಿರಜನ್ಮಗಳು ಸರ್ಪನಾಗಿ ಮಾನವರಿಂದ ಹೊಡೆಯಲ್ಪಟ್ಟೆನು.

೧೫. ಈ ರೀತಿ ಅಯುತವರ್ಷಗಳನ್ನು ಕಳೆದು ಕೊನೆಗೆ ಈ ನಿರ್ಜಲವಾದ ಅರಣ್ಯದಲ್ಲಿ ರಾಕ್ಷಸರೂಪವನ್ನು ಧರಿಸಿ ಭಯಂಕರನಾಗಿಯೂ ದುಷ್ಟನಾಗಿಯೂ ಇದ್ದೆನು.

೧೬-೧೭. ಒಂದು ದಿನ ನಾನು ಬಾಯಾರಿದವನಾಗಿ ಒಬ್ಬ ಶೂದ್ರನ ಶರೀರದಲ್ಲಿ ಸೇರಿಕೊಂಡು ಯಮುನೆಗೆ ಬಂದೆನು. ಆದರೆ ಅದರ ದಡದಲ್ಲಿ ಕಪ್ಪಾಗಿಯೂ,

ಸಮುತ್ಥಿತಾ ಯಷ್ಟಿಹಸ್ತಾಃ ಶ್ಯಾಮಲಾಃ ಕೃಷ್ಣಪಾರ್ಷದಾಃ ।
ತೈಸ್ತಾಡಿತೋ ಧರ್ಷಿತೋಽಹಂ ವ್ರಜಭೂಮೌ ಪಲಾಯಿತಾಃ　　॥ ೧೭ ॥

ಬುಭುಕ್ಷಿತೋ ಬಹುದಿನೈಸ್ತ್ವಾಂ ಖಾದಿತುಮಿಹಾಗತಃ ।
ತಾವತ್ತ್ವಯಾ ತಾಡಿತೋಽಹಂ ಗಿರಿರಾಜಾಶ್ಮನಾ ಮುನೇ ॥
ಶ್ರೀಕೃಷ್ಣಕೃಪಯಾ ಸಾಕ್ಷಾತ್ಕಲ್ಯಾಣಂ ಮೇ ಬಭೂವ ಹ　　॥ ೧೮ ॥

॥ ಶ್ರೀ ನಾರದ ಉವಾಚ ॥

ಏವಂ ಪ್ರವದತಸ್ತಸ್ಯ ಗೋಲೋಕಾಚ್ಚ ಮಹಾರಥಃ　　॥ ೧೯ ॥

ಸಹಸ್ರಾದಿತ್ಯಸಂಕಾಶೋ ಹಯಾಯುತಸಮನ್ವಿತಃ　　॥ ೨೦ ॥

ಸಹಸ್ರಚಕ್ರಧ್ವನಿಭೃಲ್ಲಕ್ಷಪಾರ್ಷದಮಂಡಿತಃ ।
ಮಂಜೀರಕಿಂಕಿಣೀಜಾಲೀ ಮನೋಹರತರೋ ನೃಪ　　॥ ೨೧ ॥

ಕೈಯ್ಯಲ್ಲಿ ಕೋಲನ್ನು ಹಿಡಿದುಕೊಂಡವರೂ ಆದ ಶ್ರೀಕೃಷ್ಣನ ಅನುಚರರು ಇದ್ದರು. ಅವರು ನನ್ನನ್ನು ನೋಡುತ್ತಲೇ ಓಡಿಬಂದು ನನ್ನನ್ನು ಹೊಡೆದರು. ನಾನು ಓಡಿ ಹೋದೆನು.

೧೮. ಬಹಳ ದಿನದಿಂದ ಹಸಿದಿದ್ದ ನಾನು ನಿನ್ನನ್ನು ನೋಡಿ ತಿನ್ನಲು ಬಂದೆನು. ನೀನೂ ನನ್ನನ್ನು ಹೊಡೆದೆ. ಆ ಗಿರಿರಾಜನ ಕಲ್ಲಿನ ಏಟಿನಿಂದ ನನ್ನ ಆ ರೂಪವು ಹೋಯಿತು. ಶ್ರೀಕೃಷ್ಣನ ಕೃಪೆಯಿಂದ ನನಗೆ ಒಳ್ಳೆಯದಾಯಿತು.

೧೯-೨೧. ಎಂದು ಹೇಳುತ್ತಿರುವಷ್ಟರಲ್ಲಿಯೇ ಗೋಲೋಕದಿಂದ ಒಂದು ರಥವು ಬಂದಿತು. ಅದು ಸಹಸ್ರಸೂರ್ಯರಂತೆ ಪ್ರಕಾಶಿಸುತ್ತಿತ್ತು. ಹತ್ತುಸಾವಿರ ಹಯಗಳು ಅದಕ್ಕೆ ಕಟ್ಟಲ್ಪಟ್ಟಿದ್ದುವು. ಸಾವಿರಚಕ್ರಗಳಿದ್ದವು. ಲಕ್ಷ ಸೇವಕ ಜನರಿದ್ದರು. ಕಿರುಗಂಟೆಗಳು ಅಲ್ಲಲ್ಲಿ ಕಟ್ಟಿದ್ದುದರಿಂದ ಅತಿಮನೋಹರವಾಗಿ ಶಬ್ದವಾಗುತ್ತಿದ್ದಿತು.

ಪಶ್ಯತಸ್ತಸ್ಯ ವಿಪ್ರಸ್ಯ ತಮಾನೇತುಂ ಸಮಾಗತಃ ।
ತಮಾಗತಂ ರಥಂ ದಿವ್ಯಂ ನೇಮತುರ್ವಿಪ್ರನಿರ್ಜರಾ ॥ ೨೨ ॥

ತತಸ್ಸಮಾರುಹ್ಯ ರಥಂ ಸ ಸಿದ್ಧೋ
ವಿರಂಜಯನ್ಮೈಥಿಲ ಮಂಡಲಂ ದಿಶಾಂ ।
ಶ್ರೀಕೃಷ್ಣಲೋಕಂ ಪ್ರಯಯೌ ಪರಾತ್ಪರಂ
ನಿಕುಂಜಲೀಲಾಲಲಿತಂ ಮನೋಹರಂ ॥ ೨೩ ॥

ವಿಪ್ರೋಽಪಿ ತಸ್ಮಾತ್ಪುನರಾಗತೋ ಗಿರಿಂ
ಗೋವರ್ಧನಂ ಸರ್ವಗಿರೀಂದ್ರದೈವತಂ ।
ಪ್ರದಕ್ಷಿಣೀಕೃತ್ಯ ಪುನಃ ಪ್ರಣಮ್ಯ ತಂ
ಯಯೌ ಗೃಹಂ ಮೈಥಿಲ ತತ್ಪ್ರಭಾವವಿತ್ ॥ ೨೪ ॥

ಇದಂ ಮಯಾ ತೇ ಕಥಿತಂ ಪ್ರಚಂಡಂ
ಸುಮುಕ್ತಿದಂ ಶ್ರೀಗಿರಿರಾಜಖಂಡಂ ।

---

೨೨. ಆ ರಥವು ಬಂದುದನ್ನು ನೋಡಿ ಇದು ಆ ಸಿದ್ಧನನ್ನು ಕರೆದುಕೊಂಡುಹೋಗಲು ಬಂದಿರುವುದೆಂದು ತಿಳಿದು ಅವರಿಬ್ಬರೂ ಅದನ್ನು ನಮಸ್ಕರಿಸಿದರು.

೨೩. ಅನಂತರ ಆ ಸಿದ್ಧನು ರಥದಲ್ಲಿ ಕುಳಿತುಕೊಂಡು ದಿಙ್ಮಂಡಲಗಳನ್ನು ಬೆಳಗುತ್ತಾ ಉತ್ತಮೋತ್ತಮವೂ, ಮನೋಹರವೂ, ಲತಾಮಂಟಪಗಳ ಲೀಲೆಯಿಂದಲೂ ಕೂಡಿರುವ ಶ್ರೀಕೃಷ್ಣನ ಲೋಕಕ್ಕೆ ಹೊರಟುಹೋದನು.

೨೪. ಆಮೇಲೆ ಬ್ರಾಹ್ಮಣನು ಪುನಃ ಹಿಂತಿರುಗಿ ಗೋವರ್ಧನಪರ್ವತದ ಹತ್ತಿರಕ್ಕೆ ಬಂದು ಆ ಗಿರಿವರವನ್ನು ಪ್ರದಕ್ಷಿಣೆಮಾಡಿ ನಮಸ್ಕರಿಸಿ ಅದರ ಪ್ರಭಾವವನ್ನು ಭಾವಿಸುತ್ತಾ ತನ್ನೂರಿಗೆ ತೆರಳಿದನು.

೨೫. ಎಲೈ ಮೈಥಿಲ, ಪ್ರಚಂಡವೂ, ಮುಕ್ತಿದಾಯಕವೂ ಆದ ಗಿರಿರಾಜಖಂಡವನ್ನು ನಿನಗೆ ಹೇಳಿರುವೆನು. ಇದನ್ನು ಕೇಳಿದ ಜನರು ತೊಂದರೆಯಿಂದ

ಶೃತ್ವಾ ಜನಃ ಪ್ರಾಪ್ಸ್ಯತಿ ನ ಪ್ರಚಂಡಂ
ಸ್ವಪ್ನೇಽಪಿ ಪಶ್ಯೇದ್ಯಮದಂಡಮುಗ್ರಂ || ೨೫ ||

ಯಃ ಶೃಣೋತಿ ಗಿರಿರಾಜಯಶಸ್ಯಂ
ಗೋಪರಾಜನವಕೇಲಿರಹಸ್ಯಂ ।
ದೇವರಾಜ ಇವ ಸೋಽತ್ರ ಸಮೇತಿ
ನಂದರಾಜ ಇವ ಶಾಂತಿಮಮುತ್ರ || ೨೬ ||

ಇತಿ ಶ್ರೀಮದ್ಗರ್ಗಸಂಹಿತಾಯಾಂ ಗಿರಿರಾಜಖಂಡೇ
ಸಿದ್ಧಮೋಕ್ಷೋ ನಾಮ ಏಕಾದಶೋಽಧ್ಯಾಯಃ
—: ಗಿರಿರಾಜಖಂಡಸ್ಸಮಾಪ್ತಃ :—

ಬಿಡುಗಡೆಯನ್ನು ಹೊಂದುವರು. ಅಲ್ಲದೆ ಸ್ವಪ್ನದಲ್ಲಿಯೂ ಕೂಡ ಯಮನ ಉಗ್ರ ಶಿಕ್ಷೆಯನ್ನು ನೋಡಲಾರರು.

೨೬. ಶ್ರೀಕೃಷ್ಣನ ನೂತನ ಕ್ರೀಡೆಗಳಿಗೆ ರಹಸ್ಯಸ್ಥಾನವಾದ ಈ ಗಿರಿರಾಜನ ಮಾಹಾತ್ಮೆಯನ್ನು ಯಾರು ಕೇಳುವರೋ, ಅವರು ಇಹಲೋಕದಲ್ಲಿ ಇಂದ್ರನಂತೆ ಭೋಗಶಾಲಿಗಳಾಗಿಯೂ, ಪರಲೋಕದಲ್ಲಿ ನಂದರಾಜನಂತೆ ಶಾಂತಿಯುಕ್ತರಾಗಿಯೂ ಆಗುವರು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಗಿರಿರಾಜಖಂಡದಲ್ಲಿ ಸಿದ್ಧಮೋಕ್ಷವೆಂಬ
ಹನ್ನೊಂದನೆಯ ಅಧ್ಯಾಯವು ಮುಗಿದುದು.



—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಮಾಧುರ್ಯಖಂಡೇ

ಪ್ರಥಮೋಽಧ್ಯಾಯಃ

ಅತಸೀಕುಸುಮೋಪಮೇಯಕಾಂತಿ–
ರ್ಯಮುನಾಕೂಲಕದಂಬಮಧ್ಯವರ್ತೀ ।
ನವಗೋಪವಧೂವಿಲಾಸಶಾಲೀ
ವನಮಾಲೀ ವಿತನೋತು ಮಂಗಲಾನಿ ॥ ೧ ॥

ಪರಿಕರೀಕೃತಪೀತಪಟಂ ಹರಿಂ
ಶಿಖಿಕಿರೀಟನತೀಕೃತಕಂದರಂ ।
ಲಕುಟವೇಣುಕರಂ ಚಲಕುಂಡಲಂ
ಪಟುತರಂ ನಟವೇಷಧರಂ ಭಜೇ ॥ ೨ ॥

ಒಂದನೆಯ ಅಧ್ಯಾಯವು

೧. ಆ ಶ್ರೀಕೃಷ್ಣನ ದೇಹಕಾಂತಿಯು ನೀಲವಾದ ಅಗಸೆಯ ಹೂವಿಗೆ ಸಮಾನವಾಗಿರುವುದು. ಯಮುನಾನದಿಯ ಕದಂಬವೃಕ್ಷಗಳ ಮಧ್ಯದಲ್ಲಿ ಆಟವಾಡುತ್ತಿರುವನು. ರಾಧೆಯ ನೂತನ ವಿಲಾಸಗಳಲ್ಲಿ ಭಾಗಿಯಾಗಿ ರಮಿಸುವನು. ತುಳಸಿಯ ಹಾರವನ್ನು ಹಾಕಿಕೊಂಡು ಪ್ರಕಾಶಿಸುತ್ತಿರುವನು. ಇಂತಹ ಪರಮಾತ್ಮನು ಮಂಗಳವನ್ನುಂಟುಮಾಡಲಿ.

೨. ಪೀತಾಂಬರವನ್ನು ಸೊಂಟಕ್ಕೆ ಕಟ್ಟಿ ಆನಂದವಾಗಿ ನರ್ತಿಸುವನು. ನವಿಲುಗರಿಗಳಿಂದಲಂಕೃತನಾದ ಕಿರೀಟದಿಂದ ಕತ್ತು ಸ್ವಲ್ಪ ಬಗ್ಗಿರುವುದು. ಒಂದು ಕೈಲಿ ಬೆತ್ತವನ್ನೂ, ಮತ್ತೊಂದರಲ್ಲಿ ಕೊಳಲನ್ನೂ ಧರಿಸಿರುವನು. ಓಡಾಡುವಾಗ ಕಿವಿಗಳಿಗೆ ಹಾಕಿರುವ ಕುಂಡಲಗಳು ಅಲುಗಾಡುತ್ತಾ ಪ್ರಕಾಶಿಸುವುವು. ಇಂತಹ ಸಮರ್ಥನಾದ ನಟವೇಷಧಾರಿಯಾದ ಹರಿಯನ್ನು ಭಜಿಸುವೆನು.

|| ಬಹುಲಾಶ್ವ ಉವಾಚ ||

ಶ್ರುತಿರೂಪಾದಯೋ ಗೋಪ್ಯೋ ಭೂತಪೂರ್ವಾ ವರಾನ್ಮುನೇ |
ಕಥಂ ಶ್ರೀಕೃಷ್ಣಚಂದ್ರೇಣ ಜಾತಾಃ ಪೂರ್ಣಮನೋರಥಾಃ || ೩ ||

ಗೋಪಾಲಕೃಷ್ಣಚರಿತಂ ಪವಿತ್ರಂ ಪರಮಾದ್ಭುತಂ |
ಏತದ್ವದ ಮಹಾಬುದ್ಧೇ ತ್ವಂ ಪರಾವರವಿತ್ತಮ || ೪ ||

|| ಶ್ರೀ ನಾರದ ಉವಾಚ ||

ಶ್ರುತಿರೂಪಾಶ್ಚ ಯಾ ಗೋಪ್ಯೋ ಗೋಪಾನಾಂ ಸುಕುಲೇ ವ್ರಜೇ |
ಲೇಭಿರೇ ಜನ್ಮ ವೈದೇಹ ಶೇಷಶಾಯಿವರಾಚ್ಛ್ರುತಾತ್ || ೫ ||

ಕಮನೀಯಂ ನಂದಸೂನುಂ ವೀಕ್ಷ್ಯ ವೃಂದಾವನೇ ಚ ತಾಃ |
ವೃಂದಾವನೇಶ್ವರೀಂ ವೃಂದಾಂ ಭೇಜಿರೇ ತದ್ವರೇಚ್ಛಯಾ || ೬ ||

---

೩. ಬಹುಲಾಶ್ವನು ನಾರದನನ್ನು ಕುರಿತು ಪ್ರಶ್ನೆಮಾಡಿದನು :—ಎಲೈ ಮುನಿವರನೇ, ಗೋಪಿಯರೆಲ್ಲರೂ ಶ್ರುತಿರೂಪರಷ್ಟೆ. ಅವರು ಪರಮಾತ್ಮನ ವರದಿಂದ ಗೋಪಿಯರಾಗಿ ಹುಟ್ಟಿದರು. ಅವರ ಇಷ್ಟಾರ್ಥವು ಶ್ರೀಕೃಷ್ಣನಿಂದ ಪೂರ್ಣವಾದ ಬಗೆ ಹೇಗೆ ?

೪. ಗೋಪಾಲಕೃಷ್ಣನ ಚರಿತ್ರೆಯು ಪವಿತ್ರವಾದುದು. ಪರಮಾಶ್ಚರ್ಯವಾದುದು. ನೀನು ಪೂರ್ವಾಪರಜ್ಞಾನಿಯು. ಸರ್ವವನ್ನೂ ಬಲ್ಲವನಾದುದರಿಂದ ನನ್ನ ಸಂಶಯವನ್ನು ನಿವಾರಿಸು.

೫. ಎಂದು ಕೇಳಲು ನಾರದನಿಂತೆಂದನು :—ಎಲೈ ವೈದೇಹ, ಕೇಳು. ಶ್ರುತಿಸ್ವರೂಪರಾದ ಗೋಪಿಯರು ಗೋಕುಲದಲ್ಲಿ ಶೇಷಶಾಯಿಯಾದ ಹರಿಯ ವರದಿಂದ ಸತ್ಕುಲದಲ್ಲಿ ಜನ್ಮವನ್ನು ಪಡೆದರು.

೬. ಅವರೆಲ್ಲರೂ ವೃಂದಾವನದಲ್ಲಿ ಸುಂದರನಾದ ನಂದಕುಮಾರನನ್ನು ನೋಡಿ ಅವನ ಅನುಗ್ರಹವನ್ನು ಪಡೆಯಲು ವೃಂದಾವನೇಶ್ವರಿಯಾದ ವೃಂದೆಯ ಹತ್ತಿರಕ್ಕೆ ಹೋದರು.

ವೃಂದಾದತ್ತಾದ್ವರಾದಾಶು ಪ್ರಸನ್ನೋ ಭಗವಾನ್ಹರಿಃ ।
ನಿತ್ಯಂ ತಾಸಾಂ ಗೃಹೇ ಯಾತಿ ರಾಸಾರ್ಥಂ ಭಕ್ತವತ್ಸಲಃ　　॥ ೭ ॥

ಏಕದಾ ತು ನಿಶೀಥಿನ್ಯಾ ವ್ಯತೀತೇ ಪ್ರಹರದ್ವಯೇ ।
ರಾಸಾರ್ಥಂ ಭಗವಾನ್ಕೃಷ್ಣಃ ಪ್ರಾಪ್ತವಾನ್ತದ್ಗೃಹೇ ನೃಪ　　॥ ೮ ॥

ತದಾ ಉತ್ಕಂಠಿತಾ ಗೋಪ್ಯಃ ಕೃತ್ವಾ ತತ್ಪೂಜನಂ ಪರಂ ।
ಪ್ರಪ್ರಚ್ಛುಃ ಪರಯಾ ಭಕ್ತ್ಯಾ ಗಿರಾ ಮಧುರಯಾ ಪ್ರಭುಂ　　॥ ೯ ॥

॥ ಗೋಪ್ಯ ಊಚುಃ ॥

ಕಥಂ ನ ಚಾಗತಃ ಶೀಘ್ರಂ ನೋ ಗೃಹಾನ್ವೃಜಿನಾರ್ದನ ।
ಉತ್ಕಂಠಿತಾನಾಂ ಗೋಪೀನಾಂ ತ್ವಯಿ ಚಂದ್ರೇ ಚಕೋರವತ್　　॥ ೧೦ ॥

---

೭. ವೃಂದೆಯು ಅವರೆಲ್ಲರಿಗೂ ವರವನ್ನು ಕೊಟ್ಟಳು. ಅದರಿಂದ ಹರಿಯು ಗೋಪಿಯರಿಗೆಲ್ಲಾ ಪ್ರಸನ್ನನಾದನು. ಅಂದಿನಿಂದ ಭಕ್ತವತ್ಸಲನಾದ ಅವನು ರಾಸ ಕ್ರೀಡೆಯಾಡಲು ದಿನವೂ ಆ ಗೋಪಿಯರ ಮನೆಗಳಿಗೆ ಹೋಗುವನು.

೮. ಒಂದು ದಿನ ರಾತ್ರಿ ಎರಡು ಪ್ರಹರಗಳು ಕಳೆದಿದ್ದವು. ಆ ಸಮಯದಲ್ಲಿ ರಾಸಕ್ರೀಡೆಯಾಡಬೇಕೆಂಬ ಇಚ್ಛೆಯಿಂದ ಹರಿಯು ಗೋಪಿಯರ ಮನೆಗೆ ಹೋದನು.

೯. ಆ ಸಮಯದಲ್ಲಿ ಅವರು ಸಂಭ್ರಮದಿಂದ ಕೃಷ್ಣನ ಪೂಜೆಯನ್ನು ಮಾಡಿದರು. ಅನಂತರ ಭಕ್ತಿಯಿಂದ ಕೂಡಿದವರಾಗಿ ಮಧುರವಾದ ಮಾತಿನಿಂದ ಇಂತೆಂದರು.

೧೦. ಪಾಪಹರನಾದ ಹರಿಯೇ, ನೀನಿಂದು ಬೇಗ ಏತಕ್ಕೆ ಬರಲಿಲ್ಲ ? ಚಂದ್ರನನ್ನು ನೋಡಲು ಉತ್ಸುಕವಾಗಿರುವ ಚಕೋರದಂತೆ ನಾವು ನಿನ್ನನ್ನು ನೋಡಲು ಉತ್ಸುಕರಾಗಿದ್ದೆವು, ಎನ್ನಲು ಅದಕ್ಕೆ ಕೃಷ್ಣನು,

|| ಶ್ರೀ ಭಗವಾನುವಾಚ ||

ಯೋ ಯಸ್ಯ ಚಿತ್ತೇ ವಸತಿ ನ ಸ ದೂರೇ ಕದಾಚನ ।
ಖೇ ಸೂರ್ಯಂ ಕಮಲಂ ಭೂಮೌ ದೃಷ್ಟ್ವೇದಂ ಸ್ಫುರತಿ ಪ್ರಿಯಾಃ || ೧೧ ||

ಭಾಂಡೀರೇ ಮೇ ಗುರುಸ್ಸಾಕ್ಷಾದ್ದುರ್ವಾಸಾ ಭಗವಾನ್ಮುನಿಃ ।
ಆಗತೋಽದ್ಯ ಪ್ರಿಯಾಸ್ತಸ್ಯ ಸೇವಾರ್ಥಂ ಗತವಾನಹಂ || ೧೨ ||

ಗುರುರ್ಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ ।
ಗುರುಸ್ಸಾಕ್ಷಾತ್ಪರಬ್ರಹ್ಮ ತಸ್ಮೈ ಶ್ರೀಗುರುವೇ ನಮಃ || ೧೩ ||

ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರುವೇ ನಮಃ || ೧೪ ||

---

೧೧. ಯಾರು ಯಾವನ ಮನಸ್ಸಿನಲ್ಲಿ ಜ್ಞಾಪಿಸಿಕೊಳ್ಳಲ್ಪಡುವನೋ ಅವನು ಎಂದಿಗೂ ದೂರವಾಗಲಾರನು. ನೋಡಿ, ಸೂರ್ಯ ಆಕಾಶವಲ್ಲಿರುವನು. ಅವನು ದೂರವಾಗಿದ್ದರೂ ಕಮಲವು ಅವನ ಸ್ಮರಣೆಯಿಂದಲೇ ಅವನನ್ನು ಹೊಂದಿ ಪ್ರಕಾಶಿಸುತ್ತಿರುವುದು.

೧೨. ಎಲೈ ಪ್ರಿಯರೇ, ಇಂದು ಭಾಂಡೀರಕ್ಕೆ ನನ್ನ ಗುರುವಾದ ದುರ್ವಾಸ ಮುನಿವರರು ಬಂದಿದ್ದರು. ಆದುದರಿಂದ ಅವರ ಸೇವೆಗೋಸ್ಕರ ನಾನು ಹೋಗಿದ್ದೆನು.

೧೩. ಗುರುವು ಸಾಕ್ಷಾತ್ ಬ್ರಹ್ಮನು. ವಿಷ್ಣುವೂ, ಮಹೇಶ್ವರನೂ ದೇವತೆಯೂ ಸಹ ಗುರುವೇ. ಗುರುವು ಸಾಕ್ಷಾತ್ ಪರಮಾತ್ಮನು. ಅಂತಹ ಗುರುವಿಗೆ ನಮಸ್ಕಾರವು.

೧೪. ಅಜ್ಞಾನವೆಂಬ ಅಂಧಕಾರದಲ್ಲಿ ಮುಳುಗಿ ಅಂಧನಾಗಿರುವ ಮನುಷ್ಯನಿಗೆ ಜ್ಞಾನವೆಂಬ ಅಂಜನವನ್ನು ಹಾಕಿ ಕಣ್ತೆರಸಿದ ಆ ಮಹಾತ್ಮ ಗುರುವಿಗೆ ನಮಸ್ಕಾರವು.

ಸ್ವಗುರುಂ ಮಾ ವಿಜಾನೀಯಾನ್ನಾವಮನ್ಯೇತ ಕರ್ಹಿಚಿತ್ ।
ನ ಮರ್ತ್ಯಬುದ್ಧ್ಯಾ ಸೇವೇತ ಸರ್ವದೇವಮಯೋ ಗುರುಃ ॥ ೧೫ ॥

ತಸ್ಮಾತ್ತತ್ಪೂಜನಂ ಕೃತ್ವಾ ನತ್ವಾ ತತ್ಪಾದಪಂಕಜಂ ।
ಆಗತೋಽಹಂ ವಿಲಂಬೇನ ಭವತೀನಾಂ ಗೃಹಾನ್ಪ್ರಿಯಾಃ ॥ ೧೬ ॥

॥ ಶ್ರೀ ನಾರದ ಉವಾಚ ॥

ಶ್ರುತ್ವಾ ತತ್ಪರಮಂ ವಾಕ್ಯಂ ಗೋಪ್ಯಃ ಸರ್ವಾಸ್ತು ವಿಸ್ಮಿತಾಃ ।
ಕೃತಾಂಜಲಿಪುಟಾ ಊಚುಃ ಶ್ರೀಕೃಷ್ಣಂ ನಮ್ರಕಂಧರಾಃ ॥ ೧೭ ॥

॥ ಗೋಪ್ಯ ಊಚುಃ ॥

ಪರಿಪೂರ್ಣತಮಸ್ಯಾಪಿ ದುರ್ವಾಸಾಸ್ತೇ ಗುರುಃ ಸ್ಮೃತಃ ।
ಅಹೋ ತದ್ದರ್ಶನಂ ಕರ್ತುಂ ಮನೋ ನ ಶ್ಚೋದ್ಯತಂ ಪ್ರಭೋ ॥ ೧೮ ॥

---

೧೫. ಗುರುವಿನ ವಿಷಯವನ್ನು ವಿಮರ್ಶೆಮಾಡಲು ಹೋಗಬಾರದು. ಎಂದೂ ಅವಮಾನ ಮಾಡಬಾರದು. ಗುರುವು ಸಮಸ್ತದೇವತಾಸ್ವರೂಪನಾದುದರಿಂದ ಮನುಷ್ಯಬುದ್ಧಿಯಿಂದ ಅವನನ್ನು ಸೇವಿಸಬಾರದು.

೧೬. ದುರ್ವಾಸಮುನಿಯ ಪಾದಕಮಲಗಳನ್ನು ಪೂಜಿಸಿ ನಮಸ್ಕರಿಸಿ ಬರುವಲ್ಲಿ ಇಷ್ಟು ವಿಲಂಬವಾಯಿತು. ಆದರೂ ನಿಮ್ಮ ಮನೆಗಳಿಗೆ ಬಂದಿರುವೆನು ಎಂದನು.

೧೭. ಪರಮಾತ್ಮನ ಪವಿತ್ರವಾದ ಮಾತನ್ನು ಕೇಳಿ ಗೋಪಿಯರೆಲ್ಲರೂ ಅತಿವಿಸ್ಮಿತರಾದರು. ಎಲ್ಲರೂ ಕತ್ತನ್ನು ಬಗ್ಗಿಸಿ ಅಂಜಲಿಬದ್ಧರಾಗಿ ಕೃಷ್ಣನನ್ನು ಕುರಿತಿಂತೆಂದರು.

೧೮. ನೀನು ಪರಿಪೂರ್ಣತಮನು. ನಿನಗೂ ದುರ್ವಾಸನು ಗುರುವೆಂದರೆ ಬಹಳ ಆಶ್ಚರ್ಯವಾಗಿರುವುದು. ಆದುದರಿಂದ ಆ ಗುರುವಿನ ದರ್ಶನಮಾಡಬೇಕೆಂದು ನಮಗೆ ಮನಸ್ಸು ಬಂದಿದೆ.

ಅದ್ಯ ದೇವ ನಿಶೀಥಿನ್ಯಾ ವ್ಯತೀತೇ ಪ್ರಹರದ್ವಯೇ ।
ಕಥಂ ತದ್ದರ್ಶನಂ ಭೂಯಾದಸ್ಮಾಕಂ ಪರಮೇಶ್ವರ ॥ ೧೯ ॥

ತಥಾ ಮಧ್ಯೇ ದೀರ್ಘನದೀ ಯಮುನಾಪ್ರತಿಬಂಧಿಕಾ ।
ಕಥಂ ತತ್ತರಣಂ ನಾವಮೃತೇ ದೇವ ಭವಿಷ್ಯತಿ ॥ ೨೦ ॥

॥ ಶ್ರೀ ಭಗವಾನುವಾಚ ॥

ಅವಶ್ಯಮೇವ ಗಂತವ್ಯಂ ಭವತೀಭಿರ್ಯದಾ ಪ್ರಿಯಾಃ ।
ಯಮುನಾಮೇತ್ಯ ಚೈತದ್ವೈ ವಕ್ತವ್ಯಂ ಮಾರ್ಗಹೇತವೇ ॥ ೨೧ ॥

ಯದಿ ಕೃಷ್ಣೋ ಬಾಲಯತಿಃ ಸರ್ವದೋಷವಿವರ್ಜಿತಃ ।
ತರ್ಹಿ ನೋ ದೇಹಿ ಮಾರ್ಗಂ ವೈ ಕಾಲಿಂದಿ ಸರಿತಾಂ ವರ ॥ ೨೨ ॥

---

೧೯. ಈಗ ತಾನೇ ರಾತ್ರಿಯಲ್ಲಿ ಎರಡು ಪ್ರಹರಗಳು ಸಂದಿವೆ. ಈಗ ಹೇಗೆ ಅವರ ದರ್ಶನವಾದೀತು? ಆಚೆಯಕಡೆ ಹೋಗಲು ನಮಗೆ ಬಹಳ ಹೆದರಿಕೆ ಯಾಗಿರುವುದು.

೨೦. ಅಲ್ಲದೆ ಯಮುನಾನದಿಯನ್ನು ದಾಟಿಹೋಗಬೇಕು. ಆ ನದಿಯು ದೊಡ್ಡದಾಗಿ ಹರಿಯುತ್ತಾ ನಮ್ಮ ಮಾರ್ಗಕ್ಕೆ ತಡೆಯಾಗಿದೆ. ನೌಕೆಯಿಲ್ಲದೆ ಅದನ್ನು ಹೇಗೆ ದಾಟೋಣ?

೨೧. ಎನ್ನಲು, ಹರಿಯು ಇಂತೆಂದನು:—ನಿಮಗೀರೀತಿ ಅಭಿಪ್ರಾಯ ವಿದ್ದಲ್ಲಿ ನೀವು ಖಂಡಿತಾ ಹೋಗಲೇಬೇಕು. ಯಮುನೆಯು ಅಡ್ಡಳಾಗಿರುವಳೆಂದಿ ರಲ್ಲವೇ, ಆದರೂ ನೀವು ಯಮುನೆಯ ಹತ್ತಿರಕ್ಕೆ ಹೋಗಿ ಹೀಗೆ ಹೇಳಿರಿ—

೨೨. ಎಲೈ ಕಾಲಿಂದಿಯೇ, ಕೃಷ್ಣನು ಸಮಸ್ತದೋಷವಿವರ್ಜಿತನಾದ ಬಾಲಯತಿಯು ಆಗಿದ್ದಪಕ್ಷಕ್ಕೆ ನೀನು ನಮಗೆ ದಾರಿಯನ್ನು ಬಿಡು. ನೀನು ಸರಿಚ್ಛ್ರೇಷ್ಠಳು.

ಇತ್ಯುಕ್ತೇ ವಚನೇ ಕೃಷ್ಣಾ ಮಾರ್ಗಂ ವೋ ದಾಸ್ಯತಿ ಸ್ವತಃ ।
ಸುಖೇನ ತೇನ ವ್ರಜತ ಯೂಯಂ ಸರ್ವಾ ವ್ರಜಾಂಗನಾಃ ॥ ೨೩ ॥

॥ ಶ್ರೀ ನಾರದ ಉವಾಚ ॥

ಇತಿ ಶ್ರುತ್ವಾಥ ತದ್ವಾಕ್ಯಂ ಪಾತ್ರೈರ್ದೀರ್ಘೈರ್ವ್ರಜಾಂಗನಾಃ ।
ಷಟ್ಪಂಚಾಶತ್ತಮಾನ್ಭೋಗಾನ್ನೀತ್ವಾ ಸರ್ವಾಃ ಪೃಥಕ್ ಪೃಥಕ್ ॥ ೨೪ ॥

ಯಮುನಾಮೇತ್ಯ ಹರ್ಯುಕ್ತಂ ಜಗುರಾನತಕಂಧರಾಃ ।
ಸದ್ಯಃ ಕೃಷ್ಣಾ ದದೌ ಮಾರ್ಗಂ ಗೋಪೀಭ್ಯೋ ಮೈಥಿಲೇಶ್ವರಃ ॥ ೨೫ ॥

ತೇನ ಗೋಪ್ಯೋ ಗತಾಸ್ಸರ್ವಾ ಭಾಂಡೀರಂ ಚಾಪಿ ವಿಸ್ಮಿತಾಃ ।
ತತಃ ಪ್ರದಕ್ಷಿಣೀಕೃತ್ಯ ಮುನಿಂ ದುರ್ವಾಸಸಂ ಚ ತಾಃ ॥ ೨೬ ॥

ನತ್ವಾ ತದ್ದರ್ಶನಂ ಚಕ್ರುಃ ಪುರೋ ಧೃತ್ವಾಶನಂ ಬಹು ।
ಮೇ ಪೂರ್ವಂ ಚಾಪಿ ಪೂರ್ವಂ ಮೇಽನ್ನಂ ಭೋಜ್ಯಂ ತ್ವಯಾಮುನೇ ॥ ೨೭ ॥

---

೨೩. ಎಂದು ಹೇಳಿದರೆ ಯಮುನೆಯು ದಾರಿಯನ್ನು ಬಿಡುವಳು. ಆಗ ನೀವು ಸುಖವಾಗಿ ಹೋಗುವಿರಿ. ಆದುದರಿಂದ ನೀವೆಲ್ಲರೂ ಹೊರಡಿರಿ ಎಂದನು.

೨೪-೨೫. ಶ್ರೀಕೃಷ್ಣನ ಮಾತನ್ನು ಕೇಳಿ ಎಲ್ಲರೂ ದೊಡ್ಡ ದೊಡ್ಡ ಪಾತ್ರೆಗಳಲ್ಲಿ ಐವತ್ತಾರುವಿಧವಾದ ಭೋಗಸಾಮಗ್ರಿಗಳನ್ನು ಸಿದ್ಧ ಮಾಡಿ ತೆಗೆದುಕೊಂಡು ಯಮುನಾನದಿಯ ಹತ್ತಿರಕ್ಕೆ ಬಂದರು. ಅಲ್ಲಿ ಹರಿಯು ಹೇಳಿದಂತೆ ಹೇಳಲು ಯಮುನೆಯು ಅವರಿಗೆ ದಾರಿಯನ್ನು ಬಿಟ್ಟುಕೊಟ್ಟಳು.

೨೬. ಅನಂತರ ಗೋಪಿಯರೆಲ್ಲರೂ ಭಾಂಡೀರಪ್ರದೇಶಕ್ಕೆ ಹೋಗಿ ದುರ್ವಾಸನನ್ನು ನೋಡಿ ವಿಸ್ಮಿತರಾದರು. ಎಲ್ಲರೂ ದುರ್ವಾಸಮುನಿಗೆ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿದರು.

೨೭. ತಾವು ತಂದಿರತಕ್ಕ ಸಾಮಗ್ರಿಗಳನ್ನು ಅವನ ಮುಂದಿರಿಸಿ ನಾನು ತಂದಿರುವುದನ್ನು ಮೊದಲು ತಿನ್ನಿರಿ, ನಾನು ತಂದಿರುವುದನ್ನು ಮೊದಲು ತಿನ್ನಿರಿ ಎಂದು ಹೇಳತೊಡಗಿದರು.

ಏವಂ ವಿವಿದಮಾನಾನಾಂ ಗೋಪೀನಾಂ ಭಕ್ತಿಲಕ್ಷಣಂ ।
ವಿಜ್ಞಾಯ ಮುನಿಶಾರ್ದೂಲಃ ಪ್ರೋವಾಚ ವಿಮಲಂ ವಚಃ ॥ ೨೮ ॥

॥ ಮುನಿರುವಾಚ ॥

ಗೋಪ್ಯಃ ಪರಮಹಂಸೋಽಹಂ ಕೃತಕೃತ್ಯೋ ಹಿ ನಿಷ್ಕ್ರಿಯಃ ।
ತಸ್ಮಾನ್ಮುಖೇ ಮೇ ದಾತವ್ಯಂ ಸ್ವಂ ಸ್ವಂ ಚಾಪ್ಯಶನಂ ಕರೈಃ ॥ ೨೯ ॥

॥ ಶ್ರೀ ನಾರದ ಉವಾಚ ॥

ಏವಂ ವಿದಾರಿತೇ ತೇನ ಮುಖೇ ಗೋಪ್ಯೋಽತಿಹರ್ಷಿತಾಃ ।
ಷಟ್ಪಂಚಾಶತ್ತಮಾನ್ಭೋಗಾನ್ಸ್ವಾನ್ ಸ್ವಾನ್ ಸರ್ವಾಃ ಸಮಾಕ್ಷಿಪನ್ ॥ ೩೦ ॥

ಕ್ಷಿಪಂತೀನಾಂ ಚ ಗೋಪೀನಾಂ ಪಶ್ಯಂತೀನಾಂ ಮುನೀಶ್ವರಃ ।
ಜಘಾಸ ಕೋಟಿಶೋ ಭಾರಾನ್ಭೋಗಾನ್ಸರ್ವಾನ್ ಕ್ಷುಧಾತುರಃ ॥ ೩೧ ॥

ವಿಸ್ಮಿತಾನಾಂ ಚ ಗೋಪೀನಾಂ ಚ ಪಶ್ಯಂತೀನಾಂ ಪರಸ್ಪರಂ ।
ಇತ್ಥಂ ಶೂನ್ಯಾನಿ ಪಾತ್ರಾಣಿ ಬಭೂವುರ್ನೃಪಸತ್ತಮ ॥ ೩೨ ॥

---

೨೮. ಈ ರೀತಿ ಪರಸ್ಪರ ವಾದಮಾಡುತ್ತಿರುವ ಗೋಪಿಯರ ಭಕ್ತಿಯನ್ನು ತಿಳಿದು ಮುನಿವರನು ಅವರನ್ನು ಕುರಿತು ಇಂತೆಂದನು.

೨೯. ಎಲೈ ಗೋಪಿಯರೇ, ನಾನು ಸನ್ಯಾಸಿಯು. ಯಾವಾಗಲೂ ತೃಪ್ತನಾಗಿರತಕ್ಕವನು. ನಿಷ್ಕ್ರಿಯನು. ಆದುದರಿಂದ ನೀವೇ ನಿಮ್ಮ ಕೈಗಳಿಂದ ನಿಮ್ಮ ಭಾಗಗಳ ಆಹಾರದಲ್ಲಿ ಸ್ವಲ್ಪ ಸ್ವಲ್ಪವನ್ನು ನನ್ನ ಬಾಯಲ್ಲಿ ಹಾಕಿರಿ.

೩೦. ಎಂದು ಹೇಳಿ ಮುನಿಯು ಬಾಯನ್ನು ತೆರೆದುಕೊಂಡು ಕುಳಿತನು. ಗೋಪಿಯರು ಹರ್ಷಗೊಂಡು ಐವತ್ತಾರುತರಹ ಭಕ್ಷ್ಯಗಳನ್ನೂ ಅವನ ಬಾಯಲ್ಲಿ ಹಾಕಿದರು.

೩೧. ಗೋಪಿಯರು ಹಾಕುತ್ತಲೇ ಇದ್ದರು. ಅವರು ನೋಡುತ್ತಿರುವಂತೆಯೇ ಮುನಿಯು ಅವರು ತಂದಿದ್ದ ಕೋಟ್ಯಾನುಕೋಟಿ ಭಕ್ಷ್ಯಗಳನ್ನೆಲ್ಲಾ ತಿಂದುಹಾಕಿದನು.

೩೨. ಗೋಪಿಯರೆಲ್ಲರೂ ವಿಸ್ಮಿತರಾಗಿ ಒಬ್ಬರ ಮುಖವನ್ನು ಮತ್ತೊಬ್ಬರು ನೋಡುತ್ತಾ ಇದ್ದರು. ಸ್ವಲ್ಪ ಹೊತ್ತಿನೊಳಗೇ ಪಾತ್ರೆಗಳೆಲ್ಲವೂ ಬರಿದಾದವು.

ಅಥ ಗೋಪ್ಯೋ ಮುನಿಂ ಶಾಂತಂ ನತ್ವಾ ತಂ ಭಕ್ತವತ್ಸಲಂ ।
ವಿಸ್ಮಿತಾಃ ಪ್ರಣತಾಃ ಪ್ರಾಹುಃ ಸರ್ವಾಃ ಪೂರ್ಣಮನೋರಥಾಃ ॥ ೩೩ ॥

॥ ಗೋಪ್ಯ ಊಚುಃ ॥

ಮುನೇರಾಗಮನಾತ್ಪೂರ್ವಂ ಕೃಷ್ಣೋಕ್ತವಚಸಾ ನದೀಂ ।
ತೀರ್ತ್ವಾಗತಾಸ್ತ್ವತ್ಸಮೀಪಂ ದರ್ಶನಾರ್ಥಂ ಶುಭೇಚ್ಛಯಾ ॥ ೩೪ ॥

ಇತಃ ಕಥಂ ಗಮಿಷ್ಯಾಮಃ ಸಂದೇಹೋಽಯಂ ಮಹಾನಭೂತ್ ।
ತದ್ವಿಧೇಹಿ ನಮಸ್ತುಭ್ಯಂ ಯೇನ ಪಂಥಾ ಲಘುರ್ಭವೇತ್ ॥ ೩೫ ॥

॥ ಮುನಿರುವಾಚ ॥

ಸುಖೇನಾತಃ ಪ್ರಗಂತವ್ಯಂ ಭವತೀಭಿರ್ಯದಾ ಸ್ವತಃ ।
ಯಮುನಾಮೇತ್ಯ ಚೈತದ್ವೈ ವಕ್ತವ್ಯಂ ಮಾರ್ಗಹೇತವೇ ॥ ೩೬ ॥

---

೩೩. ಆಗ ಅವರು ಶಾಂತನಾಗಿ ಕುಳಿತಿರುವ ಭಕ್ತವತ್ಸಲನಾದ ಆ ಮುನಿಯನ್ನು ನಮಸ್ಕರಿಸಿ ಸಂಪೂರ್ಣಮನೋರಥರಾಗಿ ಆಶ್ಚರ್ಯದಿಂದ ಅವನನ್ನು ಕುರಿತಿಂತೆಂದರು—

೩೪. ಮುನಿಗಳ ಆಗಮನಾನಂತರ ತಮ್ಮನ್ನು ನೋಡಬೇಕೆಂಬ ಆಸೆಯುಳ್ಳವರಾದೆವು. ಕೃಷ್ಣನ ಮಾತಿನಿಂದ ದಾರಿಯನ್ನು ಬಿಟ್ಟ ಯಮುನೆಯನ್ನು ದಾಟಿ ತಮ್ಮ ಸಂದರ್ಶನಕ್ಕೋಸ್ಕರ ಇಲ್ಲಿಗೆ ಬಂದೆವು.

೩೫. ಈಗ ನಾವು ನದಿಯನ್ನು ದಾಟಿ ಹೋಗುವುದು ಹೇಗೆ? ಹೀಗೆ ಸಂಶಯವು ಅಧಿಕವಾಗಿರುವುದು. ಆದುದರಿಂದ ಮುನಿವರನೇ, ನಿನಗೆ ನಮಸ್ಕಾರವು. ಹಿಂದಿನಂತೆಯೇ ನಮ್ಮ ದಾರಿಯು ಅನುಕೂಲವಾಗುವಂತೆ ಮಾಡು.

೩೬. ಎನ್ನಲು, ಮುನಿಯು ಹೇಳಿದನು:—ನೀವು ಹೇಗೆ ಸುಖವಾಗಿ ಬಂದಿರೋ ಹಾಗೆಯೇ ಸುಖವಾಗಿ ಹೋಗಿರಿ. ನೀವು ಯಮುನೆಯ ಹತ್ತಿರಕ್ಕೆ ಹೋಗಿ ಮಾರ್ಗವು ಅನುಕೂಲಿಸಲು ಈ ರೀತಿ ಹೇಳಿರಿ—

ಯದಿ ದುರ್ವಾರಸಂ ಪೀತ್ವಾ ದುರ್ವಾಸಾಃ ಕೇವಲಂ ಕ್ಷಿತೌ ।
ವ್ರತೀ ನೀರನ್ನೋ ನಿರ್ವಾರೀ ವರ್ತತೇ ಪೃಥವೀತಲೇ ॥ ೩೭ ॥

ತರ್ಹಿ ನೋ ದೇಹಿ ಮಾರ್ಗಂ ವೈ ಕಾಲಿಂದೀ ಸರಿತಾಂ ವರೇ ।
ಇತ್ಯುಕ್ತೇ ವಚನೇ ಕೃಷ್ಣಾ ಮಾರ್ಗಂ ವೋ ದಾಸ್ಯತಿ ಸ್ವತಃ ॥ ೩೮ ॥

॥ ಶ್ರೀ ನಾರದ ಉವಾಚ ॥

ಇತಿ ಶ್ರುತ್ವಾ ವಚೋ ಗೋಪ್ಯೋ ನತ್ವಾ ತಂ ಮುನಿಪುಂಗವಂ ।
ಯಮುನಾಮೇತ್ಯ ಮುನ್ಯುಕ್ತಂ ಚೋಕ್ತ್ವಾ ತೀರ್ತ್ವಾ ನದೀಂ ನೃಪ ॥ ೩೯ ॥

ಶ್ರೀಕೃಷ್ಣಪಾರ್ಶ್ವಮಾಜಗ್ಮುರ್ವಿಸ್ಮಿತಾ ಮಂಗಲಾಯನಾಃ ॥ ೪೦ ॥

ಅಥ ರಾಸೇ ಗೋಪವಧ್ವಃ ಸಂದೇಹಂ ಮನಸೋತ್ಥಿತಂ ।
ಪಪ್ರಚ್ಛುಃ ಶ್ರೀಹರಿಂ ವೀಕ್ಷ್ಯ ರಹಃ ಪೂರ್ಣಮನೋರಥಾಃ ॥ ೪೧ ॥

೩೭-೩೮. ದುರ್ವಾಸಮುನಿಯು ಅನ್ನ, ನೀರು ಇವುಗಳನ್ನು ಸೇವಿಸದೆ ಕೇವಲ ದೂರ್ವೆಯ ರಸದಿಂದ ಜೀವಿಸಿ ವ್ರತಿಯಾಗಿರುವುದು ನಿಜವಾದರೆ ನಮಗೆ ದಾರಿಯನ್ನು ಕೊಡು ಎಂದು ಹೇಳಿರಿ. ಆಗ ಯಮುನೆಯು ನಿಮಗೆ ದಾರಿಯನ್ನು ಕೊಡುವಳು.

೩೯-೪೦. ಎಂದು ಹೇಳಿದನಂತರ ಗೋಪಿಯರೆಲ್ಲರೂ ನದಿಯ ಹತ್ತಿರಕ್ಕೆ ಹೋಗಿ ಮುನಿಯು ಹೇಳಿದಂತೆ ಹೇಳಿದರು. ಯಮುನೆಯು ಜಾಗವನ್ನು ಬಿಟ್ಟಳು. ವಿಸ್ಮಿತರಾಗಿ ನದಿಯನ್ನು ದಾಟಿ ಶ್ರೀಕೃಷ್ಣನ ಹತ್ತಿರಕ್ಕೆ ಬಂದರು.

೪೧. ಪುನಃ ರಾಸಕ್ರೀಡೆಯು ಪ್ರಾರಂಭವಾಯಿತು. ಆಗ ಅವರೆಲ್ಲರೂ ತಮ್ಮ ಮನಸ್ಸಿನ ಸಂಶಯವನ್ನು ಶ್ರೀಹರಿಯ ಹತ್ತಿರ ಗೋಪ್ಯವಾಗಿ ಹೇಳಿದರು.

|| ಗೋಪ್ಯ ಊಚುಃ ||

ದುರ್ವಾಸಸೋ ದರ್ಶನಂ ಭೋಃ ಕೃತಮಸ್ಮಾಭಿರಗ್ರತಃ ।
ಯುವಯೋರ್ವಾಕ್ಯತಶ್ಚಾತ್ರ ಸಂದೇಹೋಽಯಂ ಪ್ರಜಾಪತೇ || ೪೨ ||

ಯಥಾ ಗುರುಸ್ತಥಾ ಶಿಷ್ಯೋ ಮೃಷಾವಾದೀ ನ ಸಂಶಯಃ ।
ಜಾರಸ್ತ್ವಮಸಿ ಗೋಪೀನಾಂ ರಸಿಕೋ ಬಾಲ್ಯತಃ ಪ್ರಭೋಃ || ೪೩ ||

ಕಥಂ ಬಾಲಯತಿಸ್ತ್ವಂ ವೈ ವರತಾದ್ವೃಜಿನಾರ್ದನ ।
ಕಥಂ ದೂರ್ವಾರಸಂ ಪೀತ್ವಾ ದುರ್ವಾಸಾ ಬಹುಭುಕ್ ಮುನಿಃ ||
ನೋ ಜಾತ ಏವ ಸಂದೇಹಃ ಪಶ್ಯಂತೀನಾಂ ವ್ರಜೇಶ್ವರ || ೪೪ ||

|| ಶ್ರೀ ಭಗವಾನುವಾಚ ||

ನಿರ್ಮಮೋ ನಿರಹಂಕಾರಃ ಸಮಾನಃ ಸರ್ವಗಃ ಪರಃ ।
ಸದಾ ವೈಷಮ್ಯರಹಿತೋ ನಿರ್ಗುಣೋಽಹಂ ನ ಸಂಶಯಃ || ೪೫ ||

---

೪೨. ಎಲೈ ಪ್ರಭುವೇ, ದುರ್ವಾಸಮುನಿಯ ದರ್ಶನವನ್ನೇನೋ ಮಾಡಿಕೊಂಡು ಬಂದೆವು. ಆದರೆ ನಿಮ್ಮಿಬ್ಬರ ಮಾತುಗಳಲ್ಲಿ ನಮಗೆ ಅತಿಯಾದ ಸಂದೇಹವುಂಟಾಗಿರುವುದು.

೪೩-೪೪. ಗುರುವೂ ಸುಳ್ಳುಹೇಳುವವನು. ಶಿಷ್ಯನೂ ಸುಳ್ಳುಹೇಳುವವನು. ಇಬ್ಬರಿಗೂ ಸರಿಯಾಗಿದೆ. ಈ ವಿಷಯದಲ್ಲಿ ಸಂಶಯವೇ ಇಲ್ಲ. ನೀನು ಬಾಲ್ಯದಿಂದಲೂ ರಸಿಕನು. ಯಾವಾಗಲೂ ಗೋಪಿಯರಲ್ಲಿ ಆಸಕ್ತನಾದ ಜಾರನು. ಇಷ್ಟಾದರೂ ಬಾಲಯತಿ ನಾನು ಎಂದು ಸುಳ್ಳುಹೇಳಿರುವೆ. ಆ ಮುನಿಯು ನಾವು ತೆಗೆದುಕೊಂಡುಹೋದುವನ್ನೆಲ್ಲಾ ತಿಂದುಹಾಕಿದನು. ಆದರೂ ನಾನು ದೂರ್ವೆಯ ರಸವನ್ನು ಕುಡಿದೇ ಜೀವಿಸಿರುವೆನು ಎಂದು ಸುಳ್ಳುಹೇಳಿದನು. ಇವೆಲ್ಲವನ್ನೂ ಪ್ರತ್ಯಕ್ಷವಾಗಿ ಕಂಡ ನಮಗೆ ಸಂದೇಹಬರುವುದು ನ್ಯಾಯವಾದುದಷ್ಟೆ.

೪೫. ಎಂದು ಕೇಳಲು ಭಗವಂತನಿಂತೆಂದನು :–ನಾನು ಮಮತ್ವರಹಿತನು, ನಿರಹಂಕಾರನು, ಎಲ್ಲರಲ್ಲೂ ಸಮಾನಬುದ್ಧಿಯುಳ್ಳವನು, ಸರ್ವವಿಷಯವನ್ನೂ ತಿಳಿದವನು, ಶ್ರೇಷ್ಠನು, ದ್ವೇಷರಹಿತನು, ಹಾಗೂ ಗುಣರಹಿತನು.

ತಥಾಪಿ ಭಕ್ತಾನ್ಭಜತೋ ಭಜೇಽಹಂ ವೈ ಯಥಾ ತಥಾ ।
ತಥೈವ ಸಾಧುರ್ಜ್ಞಾನೀ ವೈ ವೈಷಮ್ಯರಹಿತಸ್ಸದಾ ॥ ೪೬ ॥

ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಂ ।
ಜೋಷಯೇತ್ಸರ್ವಕರ್ಮಾಣಿ ವಿದ್ವಾನ್ಯುಕ್ತಃ ಸಮಾಚರೇತ್ ॥ ೪೭ ॥

ಯಸ್ಯ ಸರ್ವಾಃ ಸಮಾರಂಭಾಃ ಕಾಮಸಂಕಲ್ಪವರ್ಜಿತಾಃ ।
ಜ್ಞಾನಾಗ್ನಿದಗ್ಧಕರ್ಮಾಣಂ ತಮಾಹುಃ ಪಂಡಿತಂ ಬುಧಾಃ ॥ ೪೮ ॥

ನಿರಾಶೀರ್ಯತಚಿತ್ತಾತ್ಮಾ ತ್ಯಕ್ತಸರ್ವಪರಿಗ್ರಹಃ ।
ಶರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಂ ॥ ೪೯ ॥

---

೪೬. ಆದರೂ ಭಕ್ತರು ನನ್ನನ್ನು ಯಾವ ರೀತಿಯಿಂದ ಭಜಿಸುವರೋ ನಾನು ಅದೇ ರೀತಿಯಾಗುವೆನು. ಅದರಂತೆಯೇ ಸಾಧುವೂ ಆಗುವೆನು. ಜ್ಞಾನಿಯೂ ಆಗುವೆನು. ಯಾವಾಗಲೂ ಭಕ್ತರ ವಿಷಯದಲ್ಲಿ ತಾರತಮ್ಯವನ್ನು ತೋರಿಸುವುದಿಲ್ಲ.

೪೭. ಕರ್ಮಬದ್ಧರಾದ ಅಜ್ಞರಿಗೆ ಬೇಧಬುದ್ಧಿಯು ಬರದಂತೆ ಮಾಡಬೇಕು. ಆಗ ಅವರು ಜ್ಞಾನಿಗಳಾಗುವರು. ಯೋಗಿಯಾದವನು ಎಲ್ಲಾ ಕೆಲಸವನ್ನೂ ಆಚರಿಸುವನು. ಅವನು ಕರ್ಮಬದ್ಧನಾಗುವುದಿಲ್ಲ. ಅವನು ವಿದ್ವಾಂಸನೂ ಹೌದು.

೪೮. ಮಾಡುವ ಪ್ರತಿಯೊಂದು ಕೆಲಸವೂ ಕಾಮಸಂಕಲ್ಪವರ್ಜಿತವಾಗಿದ್ದರೆ ಅಂದರೆ ನಿಷ್ಕಾಮವಾಗಿದ್ದರೆ ಅವನೇ ಪಂಡಿತನು. ಅವನ ಪ್ರತಿಯೊಂದು ಕರ್ಮವೂ ಅವನ ಜ್ಞಾನವೆಂಬ ಅಗ್ನಿಯಿಂದ ದಗ್ಧವಾಗುವುದಾದುದರಿಂದ ಅವನಿಗೆ ಕರ್ಮಲೋಪವಿಲ್ಲ. ಅವನನ್ನೇ ಪಂಡಿತನೆಂದು ಕರೆಯುವುದು.

೪೯. ಯಾವನ ಮನಸ್ಸು ಮತ್ತು ಆತ್ಮವು ನಾಶವಿಲ್ಲದಂತೆ ದೃಢವಾಗಿರುವುದೋ ಯಾವನು ಸರ್ವವಿಷಯಗಳನ್ನೂ ತ್ಯಜಿಸಿರುವನೋ ಅವನು ಕರ್ಮಮಾಡಿದರೂ ಅದರ ಪಾಪವು ತಗಲುವುದಿಲ್ಲ. ಆ ಕರ್ಮದಿಂದ ಬಂದ ಪಾಪವು ಅವನ ಶರೀರಕ್ಕೆ ಮಾತ್ರ. ಆತ್ಮನಿಗಿಲ್ಲ.

ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹವಿದ್ಯತೇ ।
ತತ್ಸ್ವಯಂ ಯೋಗಸಂಸಿದ್ಧಃ ಕಾಲೇನಾತ್ಮನಿ ವಿಂದತಿ ॥ ೫೦ ॥

ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ ಕರೋತಿ ಯಃ ।
ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ ॥ ೫೧ ॥

ತಸ್ಮಾನ್ಮುನಿಸ್ತು ದೂರ್ವಾಸಾ ಬಹುಭುಕ್ತ್ವದ್ಧಿತೇ ರತಃ ।
ನ ತಸ್ಯ ಭೋಜನೇಚ್ಛಾ ಸ್ಯಾದ್ದೂರ್ವಾರಸಮಿತಾಶನಃ ॥ ೫೨ ॥

॥ ಶ್ರೀ ನಾರದ ಉವಾಚ ॥

ಇತಿ ಶ್ರುತ್ವಾ ವಚೋ ಗೋಪ್ಯಃ ಸರ್ವಾಸ್ತಾಶ್ಛಿನ್ನಸಂಶಯಾಃ ।
ಶ್ರುತಿರೂಪಾ ಜ್ಞಾನಮಯ್ಯೋ ಬಭೂವುರ್ಮೈಥಿಲೇಶ್ವರ ॥ ೫೩ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಮಾಧುರ್ಯಖಂಡೇ
ಶ್ರುತಿರೂಪೋಪಾಖ್ಯಾನಂ ನಾಮಪ್ರಥಮೋಽಧ್ಯಾಯಃ

---

೫೦. ಮುಖ್ಯವಾಗಿ ಮನುಷ್ಯನಿಗೆ ಜ್ಞಾನಬೇಕು. ಜ್ಞಾನಕ್ಕಿಂತ ಪವಿತ್ರವಾದುದು ಬೇರೊಂದು ಇಲ್ಲ. ಆರೀತಿ ಜ್ಞಾನವನ್ನು ಪಡೆದ ಯೋಗಿಯು ತನ್ನ ಯೋಗಸಿದ್ಧಿಯಿಂದ ತಾನೊಬ್ಬನೇ ಕಾಲಕ್ರಮೇಣ ಆತ್ಮಜ್ಞಾನಿಯಾಗುವನು.

೫೧. ಯಾರು ಸರ್ವಸಂಗಪರಿತ್ಯಾಗಿಯಾಗಿ ತಾನು ಮಾಡುವ ಪ್ರತಿಯೊಂದು ಕೆಲಸವನ್ನೂ ಬ್ರಹ್ಮನಲ್ಲಿ ಅರ್ಪಿಸುವನೋ ಅವನನ್ನು ನೀರು ತಾವರೆಯೆಲೆಯನ್ನು ಹೇಗೆ ಮುಟ್ಟಲಾರದೋ ಹಾಗೆ ಪಾಪಗಳು ಮುಟ್ಟಲಾರವು.

೫೨. ಅಂತಹ ಯೋಗಿಯು ಆ ದೂರ್ವಾಸಮುನಿಯು. ನಿಮ್ಮ ಇಷ್ಟವನ್ನು ನೆರವೇರಿಸಬೇಕೆಂದು ತಿಂದನೇ ಹೊರತು ತಿನ್ನಬೇಕೆಂಬ ಇಚ್ಛೆಯಿಂದಲ್ಲ. ವಾಸ್ತವವಾಗಿಯೂ ಅವನು ದೂರ್ವಾರಸವನ್ನು ಕುಡಿದು ಪ್ರಾಣವನ್ನುಳಿಸಿಕೊಂಡಿರುವನು.

೫೩. ಎಲೈ ಮೈಥಿಲೇಶ್ವರ, ಈರೀತಿ ಕೃಷ್ಣನು ಹೇಳಿದುದನ್ನು ಕೇಳಿ ಶ್ರುತಿಸ್ವರೂಪರಾದ ಆ ಗೋಪಿಯರು ಸಂಶಯವನ್ನು ಬಿಟ್ಟು ಜ್ಞಾನಿಗಳಾದರು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಮಾಧುರ್ಯಖಂಡದಲ್ಲಿ ಶ್ರುತಿರೂಪೋಪಾಖ್ಯಾನವೆಂಬ ಮೊದಲನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಮಾಧುರ್ಯಖಂಡೇ

ದ್ವಿತೀಯೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಗೋಪೀನಾಮೃಷಿರೂಪಾಣಾಮಾಖ್ಯಾನಂ ಶೃಣು ಮೈಥಿಲ ।
ಸರ್ವಪಾಪಹರಂ ಪುಣ್ಯಂ ಕೃಷ್ಣಭಕ್ತಿವಿವರ್ಧನಂ ॥ ೧ ॥

ವಂಗೇಷು ಮಂಗಲೋ ನಾಮ ಗೋಪ ಆಸಿನ್ಮಹಾಮನಾಃ ।
ಲಕ್ಷ್ಮೀವಾನ್ ಶ್ರುತಸಂಪನ್ನೋ ನವಲಕ್ಷಗವಾಂ ಪತಿಃ ॥ ೨ ॥

ಭಾರ್ಯಾಃ ಪಂಚಸಹಸ್ರಾಣಿ ಬಭೂವುಸ್ತಸ್ಯ ಮೈಥಿಲ ।
ಕದಾಚಿದ್ದೈವಯೋಗೇನ ಧನಂ ಸರ್ವಂ ಕ್ಷಯಂ ಗತಂ ॥ ೩ ॥

ಎರಡನೆಯ ಅಧ್ಯಾಯವು

೧. ನಾರದನು ಬಹುಲಾಶ್ವನನ್ನು ಕುರಿತು ಹೇಳಿದನು:—ಎಲೈ ಮೈಥಿಲ, ಇದುವರೆವಿಗೂ ಶ್ರುತಿರೂಪರಾವ ಗೋಪಿಯರ ಚರಿತ್ರೆಯನ್ನು ಹೇಳಿದೆನು. ಈಗ ಋಷಿರೂಪರಾದ ಗೋಪಿಯರ ಚರಿತ್ರೆಯನ್ನು ಹೇಳುವೆನು. ಅದು ಸರ್ವಪಾಪಹಾರಕವಾದುದು. ಪುಣ್ಯವನ್ನುಂಟುಮಾಡುವುದು. ಶ್ರೀಕೃಷ್ಣನಲ್ಲಿ ಭಕ್ತಿಯನ್ನು ಹೆಚ್ಚಿಸುವುದು.

೨. ವಂಗದೇಶದಲ್ಲಿ ಮಂಗಳನೆಂಬ ಒಬ್ಬ ಮಹಾತ್ಮನಾದ ಗೋಪನಿದ್ದನು. ಅವನು ಐಶ್ವರ್ಯವಂತನಾಗಿದ್ದನು. ಅವನಲ್ಲಿ ಒಂಭತ್ತುಲಕ್ಷ ಹಸುಗಳಿದ್ದವು.

೩. ಅವನಿಗೆ ಐದುಸಾವಿರ ಜನರು ಹೆಂಡತಿಯರಿದ್ದರು. ಆದರೆ ಅವನ ಸಂಪತ್ತೆಲ್ಲಾ ದುರದೃಷ್ಟವಶದಿಂದ ನಾಶವಾಯಿತು.

ಚೋರೈರ್ನೀತಾಸ್ತಸ್ಯ ಗಾವಃ ಕಾಶ್ಚಿದ್ರಾಜ್ಞಾ ಹೃತಾ ಬಲಾತ್ ।
ಏವಂ ದೈನ್ಯೇ ಚ ಸಂಪ್ರಾಪ್ತೇ ದುಃಖಿತೋ ಮಂಗಲೋಽಭವತ್ ॥ ೪ ॥

ತದಾ ಶ್ರೀರಾಮಸ್ಯ ವರಾದ್ದಂಡಕಾರಣ್ಯವಾಸಿನಃ ।
ಋಷಯಃ ಸ್ತ್ರೀತ್ವಮಾಪನ್ನಾ ಬಭೂವುಸ್ತಸ್ಯ ಕನ್ಯಕಾಃ ॥ ೫ ॥

ದೃಷ್ಟ್ವಾ ಕನ್ಯಾಸಮೂಹಂ ಸ ದುಃಖೀ ಗೋಪೋಽಥ ಮಂಗಲಃ ।
ಉವಾಚ ದೈನ್ಯದುಃಖಾಢ್ಯ ಆಧಿವ್ಯಾಧಿಸಮಾಕುಲಃ ॥ ೬ ॥

॥ ಮಂಗಲ ಉವಾಚ ॥

ಕಿಂ ಕರೋಮಿ ಕ್ವ ಗಚ್ಛಾಮಿ ಕೋ ಮೇ ದುಃಖಂ ವ್ಯಪೋಹತಿ ।
ಶ್ರೀರ್ನಭೂತಿರ್ನಾಭಿಜನಂ ನ ಬಲಂ ಮೇಽಸ್ತಿ ಸಾಂಪ್ರತಂ ॥ ೭ ॥

---

೪. ಕಳ್ಳರು ಅವನ ಹಸುಗಳನ್ನೆಲ್ಲಾ ಅಪಹರಿಸಿದರು. ಪರರಾಜನು ಅವನ ಸಂಪತ್ತನ್ನೆಲ್ಲಾ ಲೂಟಿಮಾಡಿದನು. ಈ ರೀತಿ ತನಗೆ ತೊಂದರೆಯು ಒದಗಿದುದರಿಂದ ಮಂಗಳನು ಅತಿ ದುಃಖಪಟ್ಟನು.

೫. ಶ್ರೀರಾಮಚಂದ್ರನ ವರದಿಂದ ಡಂಡಕಾರಣ್ಯವಾಸಿಗಳಾದ ಋಷಿಗಳು ಸ್ತ್ರೀಜನ್ಮವನ್ನು ಹೊಂದಿ ಈ ಮಂಗಳನಿಗೆ ಮಕ್ಕಳಾಗಿ ಹುಟ್ಟಿದ್ದರು.

೬. ಆಗ ಅವನು ತನ್ನ ಕನ್ಯೆಯರನ್ನು ನೋಡಿ ಅತಿ ದುಃಖಿತನಾದನು. ಮನೋರೋಗದಿಂದಲೂ ಹೊರಗಿನ ಚಿಂತೆಯಿಂದಲೂ ಕೂಡಿ ದುಃಖಿತನಾಗಿ ಅವರ ವಿಷಯವಾಗಿ ಈ ರೀತಿ ಯೋಚಿಸಿದನು.

೭. ಈಗ ನಾನೇನು ಮಾಡಲಿ ? ಎಲ್ಲಿ ಹೋಗಲಿ ? ನನ್ನ ದುಃಖವನ್ನು ನಿವಾರಣೆ ಮಾಡುವವರಾರು ? ನನ್ನ ಐಶ್ವರ್ಯವೆಲ್ಲಾ ನಾಶವಾಯಿತು. ನನ್ನ ಗೌರವವು ಹಾಳಾಯಿತು. ನನ್ನ ಬಲವೆಲ್ಲಾ ಕಳೆದುಹೋಯಿತು.

ಧನಂ ವಿನಾ ಕಥಂ ಚಾಸಾಂ ವಿವಾಹೋ ಹಾ ಭವಿಷ್ಯತಿ ।
ಭೋಜನೇ ಯತ್ರ ಸಂದೇಹೋ ಧನಾಶಾ ತತ್ರ ಕೀದೃಶೀ ॥ ೮ ॥

ಸತಿ ದೈನ್ಯೇ ಕನ್ಯಕಾಃ ಸ್ಯುಃ ಕಾಕತಾಲೀಯವದ್ಗೃಹೇ ।
ತಸ್ಮಾತ್ಕಸ್ಯಾಪಿ ರಾಜ್ಞಸ್ತು ಧನಿನೋ ಬಲಿನಸ್ತ್ವಹಂ ॥
ದಾಸ್ಯಾಮ್ಯೇತಾಃ ಕನ್ಯಕಾಶ್ಚ ಕನ್ಯಾನಾಂ ಸೌಖ್ಯಹೇತವೇ ॥ ೯ ॥

॥ ಶ್ರೀ ನಾರದ ಉವಾಚ ॥

ಕದರ್ಥೀಕೃತ್ಯ ತಾಃ ಕನ್ಯಾ ಏವಂ ಬುದ್ಧ್ವಾ ಸ್ಥಿತೋಽಭವತ್ ।
ತದೈವ ಮಾಥುರಾದೇಶಾದ್ಗೋಪಶ್ಚೈಕಃ ಸಮಾಗತಃ ॥ ೧೦ ॥

ತೀರ್ಥಯಾಯೀ ಜಯೋ ನಾಮ ವೃದ್ಧೋ ಬುದ್ಧಿಮತಾಂ ವರಃ ।
ತನ್ಮುಖಾನ್ನಂದರಾಜಸ್ಯ ಶ್ರುತಂ ವೈಭವಮದ್ಭುತಂ ॥ ೧೧ ॥

---

೮. ಈ ಹುಡುಗಿಯರ ವಿವಾಹ ಮಾಡುವುದು ಹೇಗೆ? ಧನವಿಲ್ಲದೆ ನಾನೇನು ಮಾಡಬಲ್ಲೆನು ? ಈಗ ಊಟಕ್ಕೇ ತೊಂದರೆ ಬಂದಿರುವಾಗ ಇನ್ನು ಹಣದಾಸೆ ಹೇಗೆ ಸಾಧ್ಯವಾದೀತು ?

೯. ಇಂತಹ ದೈನ್ಯಸಮಯದಲ್ಲಿ ಕಾಕತಾಳೀಯ ನ್ಯಾಯದಂತೆ ಅನಿರೀಕ್ಷಿತವಾಗಿ ಕನ್ಯೆಯರು ಸಿದ್ಧರಾಗಿರುವರು. ಆದುದರಿಂದ ಇವರನ್ನು ಧನವಂತನೂ, ಬಲಶಾಲಿಯೂ ಆದ ಯಾವನಾದರೂ ರಾಜನಿಗೆ ಕೊಟ್ಟು ವಿವಾಹ ಮಾಡಬೇಕು. ಅದರಿಂದ ಅವರಿಗೆ ಸುಖವನ್ನುಂಟುಮಾಡಿದಂತಾಗುವುದು.

೧೦. ಎಂದು ಆ ಕನ್ಯೆಯರ ವಿಷಯವನ್ನೇ ಯೋಚಿಸುತ್ತಾ ಮಂಗಳನು ಕುಳಿತಿರಲು ಅದೇ ಸಮಯದಲ್ಲಿ ಮಧುರಾದೇಶದಿಂದ ಒಬ್ಬ ಗೋಪನು ಅಲ್ಲಿಗೆ ಬಂದನು.

೧೧. ಅವನ ಹೆಸರು ಜಯನೆಂದು. ಅವನು ತೀರ್ಥಯಾತ್ರೆಗೋಸ್ಕರ ಅಲ್ಲಲ್ಲಿ ತಿರುಗುತ್ತಾ ಇಲ್ಲಿಗೆ ಬಂದಿದ್ದನು. ವೃದ್ಧನಾದ ಅವನು ಜ್ಞಾನಿಶ್ರೇಷ್ಠನಾಗಿದ್ದನು. ಅವನಿಂದ ಮಂಗಳನು ನಂದರಾಜನ ವೈಭವವನ್ನು ತಿಳಿದುಕೊಂಡನು.

ನಂದರಾಜಸ್ಯ ವಲಯೇ ಮಂಗಲೋ ದೈನ್ಯಪೀಡಿತಃ ।
ವಿಚಿಂತ್ಯ ಪ್ರೇಷಯಾಮಾಸ ಕನ್ಯಕಾಶ್ಚಾರುಲೋಚನಾಃ ॥ ೧೨ ॥

ತಾ ನಂದರಾಜಸ್ಯ ಗೃಹೇ ಕನ್ಯಕಾ ರತ್ನಭೂಷಿತಾಃ ।
ಗವಾಂ ಗೋಮಯಹಾರಿಣ್ಯೋ ಬಭೂವುರ್ಗೋವ್ರಜೇಷು ಚ ॥ ೧೩ ॥

ಶ್ರೀಕೃಷ್ಣಂ ಸುಂದರಂ ದೃಷ್ಟ್ವಾ ಕನ್ಯಾ ಜಾತಿಸ್ಮರಾಶ್ಚ ತಾಃ ।
ಕಾಲಿಂದೀಸೇವನಂ ಚಕ್ರುರ್ನಿತ್ಯಂ ಶ್ರೀಕೃಷ್ಣಹೇತವೇ ॥ ೧೪ ॥

ಅಥೈಕದಾ ಶ್ಯಾಮಲಾಂಗೀ ಕಾಲಿಂದೀ ದೀರ್ಘಲೋಚನಾ ।
ತಾಭ್ಯಃ ಸ್ವದರ್ಶನಂ ದತ್ವಾ ವರಂ ದಾತುಂ ಸಮುದ್ಯತಾ ॥ ೧೫ ॥

ತಾ ವವ್ರಿರೇ ವ್ರಜೇಶಸ್ಯ ಪುತ್ರೋ ಭೂಯಾತ್ಪತಿಶ್ಚ ನಃ ।
ತಥಾಸ್ತು ಚೋಕ್ತ್ವಾ ಕಾಲಿಂದೀ ತತ್ರೈವಾಂತರಧೀಯತ ॥ ೧೬ ॥

---

೧೨. ಆಗ ದುಃಖಿತನಾದ ಮಂಗಳನು ಯೋಚಿಸಿ ತನ್ನ ಸುಂದರಿಯರಾದ ಕನ್ಯೆಯರನ್ನೆಲ್ಲಾ ನಂದನೂರಿಗೆ ಕಳುಹಿಸಿಕೊಟ್ಟನು.

೧೩. ಆ ಕನ್ಯೆಯರು ನಂದರಾಜನ ಮನೆಯಲ್ಲಿ ರತ್ನಾಲಂಕಾರಗಳಿಂದ ಅಲಂಕೃತರಾಗಿ ಇರುತ್ತಿದ್ದರು. ದಿನವೂ ಹಸುಗಳಿರುವ ಜಾಗಕ್ಕೆ ಹೋಗಿ ಸಗಣಿಯನ್ನು ಆರಿಸಿಕೊಳ್ಳುತ್ತಾ ವ್ಯವಹರಿಸುತ್ತಿದ್ದರು.

೧೪. ಒಂದು ದಿನ ಸುಂದರನಾದ ಶ್ರೀಕೃಷ್ಣನನ್ನು ನೋಡಿದರು. ಆಗ ಅವರಿಗೆ ಪೂರ್ವಜನ್ಮದ ಸ್ಮೃತಿಯುಂಟಾಯಿತು. ಅವರು ಶ್ರೀಕೃಷ್ಣನೊಡನೆ ಪರಿಚಯವನ್ನು ಮಾಡಿಕೊಳ್ಳಲು ದಿನವೂ ಯಮುನೆಯ ದಡದಲ್ಲಿ ಸೇರುತ್ತಿದ್ದರು.

೧೫. ಒಂದು ದಿನ ಶ್ಯಾಮಾಂಗಿಯಾದ ಕಾಲಿಂದಿಯು ಅವರಿಗೆ ದರ್ಶನವನ್ನಿತ್ತಳು. ಹಾಗೂ ಬೇಕಾದ ವರವನ್ನು ಕೇಳಿರೆಂದು ಹೇಳಿದಳು.

೧೬. ಆಗ ಆ ಕನ್ಯೆಯರು ನಮಗೆ ನಂದರಾಜನ ಪುತ್ರನಾದ ಶ್ರೀಕೃಷ್ಣನು ಪತಿಯಾಗಲೆಂದು ಅನುಗ್ರಹಿಸು ಎಂದು ಕೇಳಿಕೊಂಡರು. ಕಾಲಿಂದಿಯು ತಥಾಸ್ತು ಎಂದು ಹೇಳಿ ಅಂತರ್ಧಾನಳಾದಳು.

ತಾಃ ಪ್ರಾಪ್ತಾ ವೃಂದಕಾರಣ್ಯೇ ಕಾರ್ತಿಕ್ಯಾಂ ರಾಸಮಂಡಲೇ ।
ತಾಭಿಃ ಸಾರ್ಧಂ ಹರೀ ರೇಮೇ ಸುರೀಭಿಃ ಸುರರಾಡಿವ ॥ ೧೭ ॥

**ಇತಿ ಶ್ರೀಮದ್ಗರ್ಗಸಂಹಿತಾಯಾಂ ಮಾಧುರ್ಯಖಂಡೇ ಋಷಿ
ರೂಪೋಪಾಖ್ಯಾನಂ ನಾಮ ದ್ವಿತೀಯೋಽಧ್ಯಾಯಃ**

---

೧೭. ಕಾರ್ತೀಕದಲ್ಲಿ ವೃಂದಕಾರಣ್ಯದ ರಾಸಮಂಡಲದಲ್ಲಿ ಅವರು ಶ್ರೀಕೃಷ್ಣನನ್ನು ಪಡೆದರು. ಇಂದ್ರನು ಅಪ್ಸರೆಯರೊಡನೆ ರಮಿಸಿದಂತೆ ಕೃಷ್ಣನು ಅವರೊಡನೆ ರಮಿಸಿದನು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಮಾಧುರ್ಯಖಂಡದಲ್ಲಿ ಋಷಿರೂಪೋಖ್ಯಾನವೆಂಬ
ಎರಡನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಮಾಧುರ್ಯಖಂಡೇ

ತೃತೀಯೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಮೈಥಿಲೀನಾಂ ಗೋಪಿಕಾನಾಮಾಖ್ಯಾನಂ ಶೃಣು ಮೈಥಿಲ ।
ದಶಾಶ್ವಮೇಧತೀರ್ಥಸ್ಯ ಫಲದಂ ಭಕ್ತಿವರ್ಧನಂ ॥ ೧ ॥

ಶ್ರೀರಾಮಸ್ಯ ವರಾಜ್ಜ್ಞಾತಾ ನವನಂದಗೃಹೇಷು ಯಾಃ ।
ಕಮನೀಯಂ ನಂದಸೂನುಂ ದೃಷ್ಟ್ವಾ ತಾ ಮೋಹಮಾಸ್ಥಿತಾಃ ॥ ೨ ॥

ಮೂರನೆಯ ಅಧ್ಯಾಯವು

೧. ನಾರದನು ಬಹುಲಾಶ್ವನನ್ನು ಕುರಿತಿಂತೆಂದನು :—ಎಲೈ ಮೈಥಿಲ, ಋಷಿರೂಪರಾದ ಗೋಪಿಯರ ಚರಿತ್ರೆಯನ್ನು ಹೇಳಿಯಾಯಿತು. ಈಗ ಮಿಥಿಲಾ ದೇಶೋತ್ಪನ್ನರಾದ ಗೋಪಿಯರ ಚರಿತ್ರೆಯನ್ನು ಹೇಳುವೆನು ಕೇಳು. ಇದು ಹತ್ತು ಅಶ್ವಮೇಧಯಾಗವನ್ನು ಮಾಡಿದ ಫಲವನ್ನು ಕೊಡುವುದು. ಕೃಷ್ಣನಲ್ಲಿ ಭಕ್ತಿಯನ್ನು ಹೆಚ್ಚಿಸುವುದು.

೨. ಇವರು ನವನಂದರ ಮನೆಗಳಲ್ಲಿ ಶ್ರೀರಾಮನ ವರದಿಂದ ಗೋಪಿಯರಾಗಿ ಹುಟ್ಟಿದರು. ಒಂದುಸಾರಿ ಸುಂದರನಾದ ನಂದಕುಮಾರನನ್ನು ನೋಡಿ ಅವನಲ್ಲಿ ಮೋಹಿತರಾದರು.

ಮಾರ್ಗಶೀರ್ಷೇ ಶುಭೇ ಮಾಸಿ ಚಕ್ರುಃ ಕಾತ್ಯಾಯಿನೀವ್ರತಂ ।
ಉಪಚಾರೈಃ ಷೋಡಶಭಿಃ ಕೃತ್ವಾ ದೇವೀಂ ಮಹೀಮಯೀಂ ॥ ೩ ॥

ಅರುಣೋದಯವೇಲಾಯಾಂ ಸ್ನಾತಾಃ ಶ್ರೀಯಮುನಾಜಲೇ ।
ನಿತ್ಯಂ ಸಮೇತಾ ಆಜಗ್ಮುರ್ಗಾಯಂತ್ಯೋ ಭಗವದ್ಗುಣಾನ್ ॥ ೪ ॥

ಏಕದಾ ತಾಃ ಸ್ವವಸ್ತ್ರಾಣಿ ತೀರೇ ನ್ಯಸ್ಯ ವ್ರಜಾಂಗನಾಃ ।
ವಿಜಹುರ್ಯಮುನಾತೋಯೇ ಕರಾಭ್ಯಾಂ ಸಿಂಚತೀರ್ಮಿಥಃ ॥ ೫ ॥

ತಾಸಾಂ ವಾಸಾಂಸಿ ಸನ್ನೀತ್ವಾ ಭಗವಾನ್ಪ್ರಾತರಾಗತಃ ।
ತ್ವರಂ ಕದಂಬಮಾರುಹ್ಯ ಚೌರವನ್ಮೌನಮಾಸ್ಥಿತಃ ॥ ೬ ॥

ತಾನ್ಯವೀಕ್ಷ್ಯಸ್ವವಾಸಾಂಸಿ ವಿಸ್ಮಿತಾಗೋಪಕನ್ಯಕಾಃ ।
ನೀಪಸ್ಥಿತಂ ವಿಲೋಕ್ಯಾಥ ಸಲಜ್ಜಾ ಜಹಸುರ್ನೃಪ ॥ ೭ ॥

---

೩. ಮಾರ್ಗಶೀರ್ಷದ ಶುಭತಿಂಗಳಲ್ಲಿ ಅವರೆಲ್ಲರೂ ಕಾತ್ಯಾಯಿನೀ ವ್ರತವನ್ನು ಮಾಡಿದರು. ಮಹೀಮಯಳಾದ ದೇವಿಯನ್ನು ಷೋಡಶೋಪಚಾರಗಳಿಂದ ಪೂಜಿಸಿದರು.

೪. ಅವರು ಪ್ರತಿದಿನವೂ ಅರುಣೋದಯಕ್ಕೆ ಸರಿಯಾಗಿ ಯಮುನೆಗೆ ಹೋಗಿ ಅಲ್ಲಿ ಸ್ನಾನಮಾಡುವರು. ಆ ಮೇಲೆ ಎಲ್ಲರೂ ಭಗವಂತನ ಗುಣಗಳನ್ನು ಗಾನ ಮಾಡುತ್ತಾ ಒಟ್ಟಿಗೆ ಬರುವರು.

೫. ಒಂದು ದಿನ ಅವರು ಯಮುನೆಗೆ ಸ್ನಾನಕ್ಕೆ ಹೋಗಿ ತಮ್ಮ ಸೀರೆಗಳನ್ನು ದಡದಲ್ಲಿ ಇಟ್ಟು ನೀರಿಗೆ ಇಳಿದರು. ಅಲ್ಲಿ ಪರಸ್ಪರವಾಗಿ ನೀರನ್ನು ಎರಚಾಡುತ್ತಾ ವಿಹರಿಸಿದರು.

೬. ಅದೇ ಸಮಯದಲ್ಲಿ ಶ್ರೀಕೃಷ್ಣನು ಅಲ್ಲಿಗೆ ಬಂದು ಅವರ ಸೀರೆಗಳನ್ನೆಲ್ಲಾ ತೆಗೆದುಕೊಂಡು ಬೇಗನೆ ಕದಂಬವೃಕ್ಷವನ್ನು ಹತ್ತಿ ಕಳ್ಳನಂತೆ ಸುಮ್ಮನೆ ಕುಳಿತು ಬಿಟ್ಟನು.

೭. ಜಲಕೇಳಿಯಾದನಂತರ ಬಂದು ನೋಡಲು ಅಲ್ಲಿ ಬಟ್ಟೆಗಳಿರಲಿಲ್ಲ. ಆಗ ಅವರು ಆಶ್ಚರ್ಯಗೊಂಡು ಅಲ್ಲಲ್ಲಿ ಹುಡುಕಲಾಗಿ ನೀಪವೃಕ್ಷದ ಮೇಲೆ ಕುಳಿತಿದ್ದ ಕೃಷ್ಣನನ್ನು ನೋಡಿ ಅತಿನಾಚಿಕೆಯಿಂದ ನಕ್ಕರು.

ಪ್ರತೀಚ್ಛಂತ್ಯಃ ಸ್ವವಾಸಾಂಸಿ ಸರ್ವಾ ಆಗತ್ಯ ಚಾತ್ರ ವೈ ।
ಅನ್ಯಥಾ ನ ಹಿ ದಾಸ್ಯಾಮಿ ವೃಕ್ಷಾತ್ಕೃಷ್ಣ ಉವಾಚ ಹ　　　　|| ೮ ||

ರಾಜಂತ್ಯಸ್ತಾಃ ಶೀತಜಲೇ ಹಸಂತ್ಯಃ ಪ್ರಾಹುರಾನತಾಃ　　　　|| ೯ ||

|| ಗೋಪ್ಯ ಊಚುಃ ||

ಹೇ ನಂದನಂದನ ಮನೋಹರ ಗೋಪರತ್ನ
　ಗೋಪಾಲವಂಶನವಹಂಸ ಮಹಾರ್ತಿಹಾರಿನ್ ।
ಶ್ರೀಶ್ಯಾಮಸುಂದರ ತವೋದಿತಮದ್ಯ ವಾಕ್ಯಂ
　ಕುರ್ಮಃ ಕಥಂ ವಿವಸನಾಃ ಕಿಲ ತೇಽಪಿ ದಾಸ್ಯಃ　　　　|| ೧೦ ||

ಗೋಪಾಂಗನಾವಸನಮುಣ್ಣವನೀತಹಾರಿ
　ಜಾತೋ ವ್ರಜೇಽತಿರಸಿಕಃ ಕಿಲ ನಿರ್ಭಯೋಽಸಿ ।
ವಾಸಾಂಸಿ ದೇಹಿ ನಹಿ ಚೇನ್ಮಧುರಾಧಿಪಾಯ
　ವಕ್ಷ್ಯಾಮಹೇಽನಯಮತೀವ ಕೃತಂ ತ್ವಯಾತ್ರ　　　　|| ೧೧ ||

೮-೯. ಎಲ್ಲರೂ ನಾಚಿಕೆಯಿಂದ ನೀರಿನಲ್ಲಿಯೇ ನಿಂತು ತಮ್ಮ ಸೀರೆಗಳನ್ನು ಬೇಡಿದರು. ಆಗ ಕೃಷ್ಣನು ಎಲ್ಲರೂ ಈ ಮರದ ಹತ್ತಿರಕ್ಕೆ ಬಂದರೆ ಕೊಡುವೆನು ಎನಲು, ಅವರು ನೀರಿನಲ್ಲೇ ನಿಂತು ನಗುನಗುತ್ತಾ ಇಂತೆಂದರು.

೧೦. ಎಲೈ ನಂದಕುಮಾರ, ಮನೋಹರನಾದ ನೀನು ಗೋಪರಲ್ಲಿ ರತ್ನ ಪ್ರಾಯನು. ಗೋಪಾಲರ ವಂಶಕ್ಕೆ ಹಂಸದಂತಿರುವವನು. ಮಹಾಕಷ್ಟಗಳನ್ನೆಲ್ಲಾ ನಿವಾರಿಸುವವನು. ಶ್ಯಾಮಸುಂದರನಾದ ನೀನು ಹೇಳಿದಂತೆ ನಾವು ಕೇಳಲು ಹೇಗೆ ತಾನೆ ಸಮರ್ಥರಿರುವೆವು ? ಏಕೆಂದರೆ ನಾವೀಗ ಸೀರೆಗಳಿಲ್ಲದೆ ನಿಂತಿರುವೆವು. ನಿನ್ನ ದಾಸಿಯರಲ್ಲವೇ ನಾವು. ನಮ್ಮ ಮಾನವನ್ನುಳಿಸು.

೧೧. ನೀನು ಗೋಪಾಂಗನೆಯರಾದ ನಮ್ಮ ಸೀರೆಗಳನ್ನು ಕದ್ದಿರುವೆ. ನಿನ್ನ ಸ್ವಭಾವವೇ ಹಾಗೆ. ಬೆಣ್ಣೆಯನ್ನು ಕದ್ದು ತಿನ್ನುವವನಷ್ಟೇ ನೀನು. ಅತಿರಸಕನಾಗಿ ಗೋಕುಲದಲ್ಲಿ ನಿರ್ಭಯನಾಗಿ ವ್ಯವಹರಿಸುವೆ. ನ್ಯಾಯವಾಗಿ ನಮ್ಮ ಸೀರೆಗಳನ್ನು ಕೊಟ್ಟುಬಿಡು. ಇಲ್ಲದಿದ್ದರೆ ನಾವು ನಂದರಾಜನಿಗೆ ಹೋಗಿ ತಿಳಿಸುವೆವು. ನೀನೀಗ ಅನ್ಯಾಯವನ್ನಾಚರಿಸುತ್ತಿರುವೆ.

॥ ಶ್ರೀ ಭಗವಾನುವಾಚ ॥

ದಾಸ್ಯೋ ಮನ್ಯೈವ ಯದಿ ಸುಂದರಮಂದಹಾಸಾ
ಇತ್ಥಂ ತು ನೈತ್ಯ ಕಿಲ ಚಾತ್ರ ಕದಂಬಮೂಲೆ ।
ನೋ ಚೇತ್ಸಮಸ್ತವಸನಾನಿ ನಯಾಮಿ ಗೇಹಾನ್
ತಸ್ಮಾತ್ಕರಿಷ್ಯಥ ಮನ್ಯೈವ ವಚೋಽವಿಲಂಬಾತ್ ॥ ೧೨ ॥

॥ ಶ್ರೀ ನಾರದ ಉವಾಚ ॥

ತದಾ ತಾ ನಿರ್ಗತಾಸ್ಸರ್ವಾ ಜಲಾದ್ಗೋಪ್ಯೋಽತಿವೇಪಿತಾಃ ।
ಆಗತಾ ಯೋನಿಮಾಚ್ಛಾದ್ಯ ಪಾಣಿಭ್ಯಾಂ ಶೀತಕರ್ಷಿತಾಃ ॥ ೧೩ ॥

ಕೃಷ್ಣದತ್ತಾನಿ ವಾಸಾಂಸಿ ದಧುಃ ಸರ್ವಾ ವ್ರಜಾಂಗನಾಃ ।
ಮೋಹಿತಾಶ್ಚಾಸ್ಥಿತಾಸ್ತತ್ರ ಕೃಷ್ಣೇ ಲಜ್ಜಾಯಿತೇಕ್ಷಣಾಃ ॥ ೧೪ ॥

ಜ್ಞಾತ್ವಾ ತಾಸಾಮಭಿಪ್ರಾಯಂ ಪರಮಪ್ರೇಮಲಕ್ಷಣಂ ।
ಆಹ ಮಂದಸ್ಮಿತಃ ಕೃಷ್ಣಃ ಸಮಂತಾದ್ವೀಕ್ಷ್ಯ ತಾ ವಚಃ ॥ ೧೫ ॥

---

೧೨. ಎಂದು ಹೇಳಲು, ಭಗವಂತನು ಹೇಳಿದನು :—ನೀವು ನನ್ನ ದಾಸಿಯರಷ್ಟೇ. ಹಾಗಿದ್ದಪಕ್ಷದಲ್ಲಿ ಎಲೈ ಸುಂದರಿಯರೇ, ನಗುನಗುತ್ತಾ ಈ ಕದಂಬವೃಕ್ಷದ ಕೆಳಕ್ಕೆ ಎಲ್ಲರೂ ಬನ್ನಿರಿ. ಹಾಗಾವರೆ ನಾನು ನಿಮಗೆ ಸೀರೆಗಳನ್ನು. ಕೊಡುವೆನು. ಇಲ್ಲದಿದ್ದಲ್ಲಿ ಈ ಸೀರೆಗಳನ್ನೆಲ್ಲಾ ತೆಗೆದುಕೊಂಡು ಮನೆಗೆ ಹೊರಟುಹೋಗುವೆನು. ಆದ್ದರಿಂದ ಬೇಗ ನಾನು ಹೇಳಿದಂತೆ ಕೇಳಿರಿ.

೧೩. ಎನ್ನಲು, ಗೋಪಿಯರು ಹೆದರಿ ಒಬ್ಬೊಬ್ಬರಾಗಿ, ಮರ್ಮಸ್ಥಳವನ್ನು ಕೈಗಳಿಂದ ಮುಚ್ಚಿಕೊಳ್ಳುತ್ತಾ ಬಗ್ಗಿಕೊಂಡು ಅತಿನಾಚಿಕೆಯಿಂದ ಅಲ್ಲಿಗೆ ಬಂದು ಸೇರಿದರು.

೧೪. ಆಗ ಕೃಷ್ಣನು ಸೀರೆಗಳನ್ನು ಕೊಟ್ಟನು. ಅವರೆಲ್ಲರೂ ಸೀರೆಗಳನ್ನುಟ್ಟುಕೊಂಡರು. ಆದರೆ ಶ್ರೀಕೃಷ್ಣನಲ್ಲಿ ಮೋಹಿತರಾಗಿ ನಾಚಿಕೆಯಿಂದಕೂಡಿದ ದೃಷ್ಟಿಯನ್ನು ಬೀರುತ್ತಾ ಅಲ್ಲಿಯೇ ನಿಂತರು.

೧೫. ಉತ್ಕೃಷ್ಟಪ್ರೇಮಸ್ವರೂಪವಾದ ಅವರ ಅಭಿಪ್ರಾಯವನ್ನು ತಿಳಿದು ಮುಗುಳ್ನಗೆ ನಗುತ್ತಾ ಕೃಷ್ಣನು ಅವರನ್ನು ಕುರಿತಿಂತೆಂದನು.

॥ ಶ್ರೀ ಭಗವಾನುವಾಚ ॥

ಭವತೀಭಿರ್ಮಾರ್ಗಶೀರ್ಷೇ ಕೃತಂ ಕಾತ್ಯಾಯನೀ ವ್ರತಂ ।
ಮದರ್ಥಂ ತಚ್ಚ ಸಫಲಂ ಭವಿಷ್ಯತಿ ನ ಸಂಶಯಃ ॥ ೧೬ ॥

ಪರಶ್ವೋಽಹನಿ ಚಾಟವ್ಯಂ ಕೃಷ್ಣಾತೀರೇ ಮನೋಹರೇ ।
ಯುಷ್ಮಾಭಿಶ್ಚ ಕರಿಷ್ಯಾಮಿ ರಾಸಂ ಪೂರ್ಣಮನೋರಥಂ ॥ ೧೭ ॥

ಇತ್ಯುಕ್ತ್ವಾಥ ಗತೇ ಕೃಷ್ಣೇ ಪರಿಪೂರ್ಣತಮೇ ಹರೌ ।
ಪ್ರಾಪ್ತಾನಂದಾ ಮಂದಹಾಸಾ ಗೋಪ್ಯಃ ಸರ್ವಾ ಗೃಹಾನ್ ಯಯುಃ ॥ ೧೮ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಮಾಧುರ್ಯಖಂಡೇ
ಮೈಥಿಲ್ಯುಪಾಖ್ಯಾನಂ ನಾಮ ತೃತೀಯೋಽಧ್ಯಾಯಃ

---

೧೬. ನೀವು ಮಾರ್ಗಶೀರ್ಷಮಾಸದಲ್ಲಿ ನನ್ನನ್ನು ಹೊಂದುವುದಕ್ಕೋಸ್ಕರವಾಗಿ ಕಾತ್ಯಾಯನೀವ್ರತವನ್ನು ಮಾಡಿದಿರಿ. ಅದು ಸಾರ್ಥಕವಾಗುವುದು. ಇದರಲ್ಲಿ ಸಂಶಯವಿಲ್ಲ.

೧೭. ನಾಡಿದ್ದು ಕೃಷ್ಣಾನದಿಯ ತೀರದಲ್ಲಿರುವ ಸುಂದರವಾದ ವನದಲ್ಲಿ ನಿಮ್ಮೊಡನೆ ನಾನು ರಾಸಕ್ರೀಡೆಯಾಡುವೆನು. ನಿಮ್ಮ ಮನೋರಥವನ್ನು ಪೂರ್ಣ ಮಾಡುವೆನು.

೧೮. ಈ ರೀತಿ ಹೇಳಿ ಪರಿಪೂರ್ಣತಮನಾದ ಶ್ರೀಕೃಷ್ಣನು ಹೊರಟುಹೋಗಲು ಗೋಪಿಯರು ಆನಂದದಿಂದ ಮುಗುಳ್ನಗೆ ನಗುತ್ತಾ ತಮ್ಮ ಮನೆಗೆ ಹೋದರು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಮಾಧುರ್ಯಖಂಡದಲ್ಲಿ ಮೈಥಿಲ್ಯುಪಾಖ್ಯಾನವೆಂಬ
ಮೂರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಮಾಧುರ್ಯಖಂಡೇ

ಚತುರ್ಥೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಕೌಶಲಾನಾಂ ಗೋಪಿಕಾನಾಂ ವರ್ಣನಂ ಶೃಣು ಮೈಥಿಲ ।
ಸರ್ವಪಾಪಹರಂ ಪುಣ್ಯಂ ಶ್ರೀಕೃಷ್ಣಚರಿತಾಮೃತಂ ॥ ೧ ॥

ನವೋಪನಂದಗೇಹೇಷು ಜಾತಾ ರಾಮವರಾದ್ವ್ರಜೇ ।
ಪರಿಣೀತಾ ಗೋಪಜನ್ಯೈ ರತ್ನಭೂಷಣಭೂಷಿತಾಃ ॥ ೨ ॥

ನಾಲ್ಕನೆಯ ಅಧ್ಯಾಯವು

೧. ನಾರದನು ಹೇಳಿದನು:—ಎಲೈ ಮೈಥಿಲ, ಮೈಥಿಲಗೋಪಿಯರ ಚರಿತ್ರೆಯನ್ನು ಹೇಳಿಯಾಯಿತು. ಈಗ ಕೌಶಲಗೋಪಿಯರ ಚರಿತ್ರೆಯನ್ನು ಹೇಳುವೆನು ಕೇಳು. ಇದು ಸರ್ವಪಾಪವನ್ನೂ ನಾಶಮಾಡಿ ಪುಣ್ಯವನ್ನುಂಟು ಮಾಡುವುದು. ಶ್ರೀಕೃಷ್ಣನ ಚರಿತೆಯಂತೆ ಅಮೃತಮಯವಾದುದು.

೨-೩. ಇವರು ನವನಂದರ ಮನೆಯಲ್ಲಿ ಶ್ರೀರಾಮಚಂದ್ರನ ವರದಿಂದ ಹುಟ್ಟಿದರು. ರತ್ನಾಭರಣಗಳಿಂದಲಂಕೃತರಾದ ಇವರಿಗೆ ಬೇಕಾದ ಗೋಪರನ್ನು ಕೊಟ್ಟು ಮದುವೆಯಾಗಿದ್ದಿತು. ಪೂರ್ಣಚಂದ್ರನಂತೆ ದಿನದಿನಕ್ಕೂ ಅಭಿವೃದ್ಧಿ

ಪೂರ್ಣಚಂದ್ರಪ್ರತೀಕಾಶಾ ನವಯೌವನಸಂಯುತಾಃ ।
ಪದ್ಮಿನ್ಯೋ ಹಂಸಗಮನಾಃ ಪದ್ಮಪತ್ರವಿಲೋಚನಾಃ　　|| ३ ||

ಜಾರಧರ್ಮೇಣ ಸುಸ್ನೇಹಂ ಸುದೃಢಂ ಸರ್ವತೋಽಧಿಕಂ ।
ಚಕ್ರುಃ ಕೃಷ್ಣೇ ನಂದಸುತೇ ಕಮನೀಯೇ ಮಹಾತ್ಮನಿ　　|| ೪ ||

ತಾಭಿಸ್ಸಾರ್ಧಂ ಸದಾ ಹಾಸ್ಯಂ ವ್ರಜವೀಥೀಷು ಮಾಧವಃ ।
ಸ್ಮಿತೈಃ ಪೀತಪಟಾದಾನೈಃ ಕರ್ಷಣೈಃ ಸ ಚಕಾರ ಹ　　|| ೫ ||

ದಧಿವಿಕ್ರಯಾರ್ಥಂ ಯಾಂತ್ಯಃ ಕೃಷ್ಣ ಕೃಷ್ಣೇತಿ ಚಾಬ್ರುವನ್ ।
ಕೃಷ್ಣೇ ಹಿ ಪ್ರೇಮಸಂಯುಕ್ತಾ ಭ್ರಮಂತ್ಯಃ ಕುಂಜಮಂಡಲೇ　　|| ೬ ||

ಖೇ ವಾಯೌ ಚಾಗ್ನಿಜಲಯೋರ್ಮಹ್ಯಾಂ ಜ್ಯೋತಿರ್ದಿಶಾಸು ಚ ।
ದ್ರುಮೇಷು ಜನವೃಂದೇಷು ತಾಸಾಂ ಕೃಷ್ಣೋ ಹಿ ಲಕ್ಷ್ಯತೇ　　|| ೭ ||

ಹೊಂದುತ್ತಾ ಯುವತಿಯರಾಗಿದ್ದರು. ಇವರೆಲ್ಲರೂ ಪದ್ಮಿನೀಜಾತಿಗೆ ಸೇರಿದವರು. ಪದ್ಮದಳದಂತೆ ವಿಶಾಲವಾದ ಕಣ್ಣುಗಳುಳ್ಳವರಾಗಿ ಸುಂದರಿಯರಾಗಿದ್ದರು. ಹಂಸದಂತೆ ಮಂದಗಮನೆಯರಾಗಿದ್ದರು.

೪. ಅವರು ಮದುವೆಯಾಗಿದ್ದರೂ ಸಹ ಮಹಾಮಹಿಮನೂ, ಸುಂದರನೂ ಆದ ಶ್ರೀಕೃಷ್ಣನಲ್ಲಿ ಜಾರಧರ್ಮದಿಂದ ದೃಢವಾದ ಪ್ರೇಮವನ್ನಿಟ್ಟಿದ್ದರು.

೫. ಶ್ರೀಕೃಷ್ಣನು ಗೋಕುಲದ ಬೀದಿಗಳಲ್ಲಿ ಅವರೊಡನೆ ಹಾಸ್ಯಮಾಡುತ್ತಾ ತನ್ನ ಪೀತಾಂಬರವನ್ನು ಅವರಿಗೆ ಹೊದ್ದಿಸುತ್ತಾ ಅವರ ವಸ್ತ್ರಗಳನ್ನು ಕಿತ್ತುಕೊಳ್ಳುತ್ತಾ ಅವರೊಡನೆ ವ್ಯವಹರಿಸುತ್ತಿದ್ದನು.

೬. ಮೊಸರು ಮಾರುವುದಕ್ಕೆ ಹೋಗುವಾಗಲೂ ಸಹ ಅವರು ಕೃಷ್ಣ, ಕೃಷ್ಣ ಎಂದು ಅವನ ನಾಮವನ್ನೇ ಉಚ್ಚರಿಸುತ್ತಾ ಕೃಷ್ಣನಲ್ಲೇ ದೃಢವಾದ ಪ್ರೇಮವನ್ನಿಟ್ಟು ಕುಂಜಮಂಡಲದಲ್ಲೆಲ್ಲಾ ಓಡಾಡುತ್ತಿದ್ದರು.

೭. ಅವರಿಗೆ ಅಂತರಿಕ್ಷ, ವಾಯು. ಅಗ್ನಿ, ಜಲ, ಪೃಥಿವಿ, ದಿಕ್ಕುಗಳು, ಮರಗಳು, ಜನಸಮೂಹ ಈ ಸ್ಥಳಗಳಲ್ಲಿ ಎಲ್ಲಿ ನೋಡಿದರೂ ಶ್ರೀಕೃಷ್ಣನೇ ಕಾಣಿಸುತ್ತಿದ್ದನು.

ಪ್ರೇಮಲಕ್ಷಣಸಂಯುಕ್ತಾ ಶ್ರೀಕೃಷ್ಣಹೃತಮಾನಸಾಃ ।
ಅಷ್ಟಭಿಃ ಸಾತ್ತ್ವಿಕೈರ್ಭಾವೈಃ ಸಂಪನ್ನಾಸ್ತಾಶ್ಚ ಯೋಷಿತಃ ॥ ೮ ॥

ಪ್ರೇಮ್ಣಾ ಪರಮಹಂಸಾನಾಂ ಪದವೀಂ ಸಮುಪಾಗತಾಃ ।
ಕೃಷ್ಣಾನಂದಾಃ ಪ್ರಭಾವಂತ್ಯೋ ವ್ರಜವೀಥೀಷು ತಾ ನೃಪ ॥ ೯ ॥

ಜಡಾಜಡಂ ನ ಜಾನಂತ್ಯೋ ಜಡೋನ್ಮತ್ತಪಿಶಾಚವತ್ ।
ಅಬ್ರುವಂತ್ಯೋ ಬ್ರುವಂತ್ಯೋ ವಾ ಗತಲಜ್ಜಾ ಗತವ್ಯಥಾಃ ॥ ೧೦ ॥

ಏವಂ ಕೃತಾರ್ಥತಾಂ ಪ್ರಾಪ್ತಾಸ್ತನ್ಮಯಾ ಯಾಶ್ಚ ಗೋಪಿಕಾಃ ।
ಬಲಾದಾಕೃಷ್ಯ ಕೃಷ್ಣಸ್ಯ ಚುಚುಂಬುರ್ಮುಖಪಂಕಜಂ ॥ ೧೧ ॥

---

೮. ಪ್ರೇಮದಿಂದ ಕೂಡಿದ ಅವರ ಮನಸ್ಸು ಸುಂದರನಾದ ಶ್ರೀಕೃಷ್ಣನಿಂದ ಅಪಹೃತವಾಗಿದ್ದಿತು. ಅವನನ್ನು ನೋಡಿದಾಗಲೆಲ್ಲಾ ಅವರು ಸ್ತಂಭ, ಪ್ರಳಯ, ರೋಮಾಂಚ, ಸ್ವೇದ, ವೈವರ್ಣ್ಯ, ವೇಪಥು, ಅಶ್ರು, ವೈಸ್ವರ್ಯ ಇವೇ ಮೊದಲಾದ ಎಂಟು ವಿಧವಾದ ಸಾತ್ವಿಕಭಾವಗಳಿಂದ ಕೂಡಿರುತ್ತಿದ್ದರು

೯. ಮಹಾಯೋಗಿಗಳು ಯಾವತರಹ ಪ್ರೇಮವನ್ನಿಟ್ಟು ಪರಮಾತ್ಮನ ಮಾರ್ಗವನ್ನು ಹುಡುಕುವರೋ ಅದೇ ತರಹ ಪ್ರೇಮವನ್ನಿಟ್ಟು ಈ ಗೋಪಿಯರು ಪರಮಹಂಸರಂತಾಗಿದ್ದರು. ಶ್ರೀಕೃಷ್ಣನ ಆನಂದದಿಂದ ಆನಂದವನ್ನು ಹೊಂದುತ್ತಾ ವ್ರಜಮಾರ್ಗದಲ್ಲಿ ಸಂಚರಿಸುತ್ತಿದ್ದರು.

೧೦. ಪರಮಾತ್ಮನ ಸ್ಮರಣದಲ್ಲಿಯೇ ತಲ್ಲೀನರಾದ ಅವರಿಗೆ ಇದು ಜಡ, ಇದು ಚೇತನ ಎಂಬ ಜ್ಞಾನವೇ ಇರುತ್ತಿರಲಿಲ್ಲ. ಅವರು ಜಡಪದಾರ್ಥದಂತೆಯೂ, ಹುಚ್ಚರಂತೆಯೂ, ಪಿಶಾಚಗಳಂತೆಯೂ ವ್ಯವಹರಿಸುತ್ತಿದ್ದರು. ಕೆಲವು ಸಮಯ ಮಾತನಾಡುವರು. ಕೆಲವು ವೇಳೆ ಮಾತನಾಡುತ್ತಲೇ ಇರಲಿಲ್ಲ. ಅವರಿಗೆ ಲಜ್ಜೆಯಾಗಲೀ ವ್ಯಥೆಯಾಗಲೀ ಇರುತ್ತಿರಲಿಲ್ಲ.

೧೧. ಈ ರೀತಿ ಕೃಷ್ಣನಲ್ಲೇ ತನ್ಮಯರಾಗಿ ಕೃತಾರ್ಥರಾದ ಆ ಗೋಪಿಯರು ಒಂದು ದಿನ ಶ್ರೀಕೃಷ್ಣನನ್ನು ತಮ್ಮೆಡೆಗೆ ಎಳೆದುಕೊಂಡು ಅವನ ಮುಖಕಮಲವನ್ನು ಬಲಾತ್ಕಾರವಾಗಿ ಚುಂಬಿಸಿದರು.

ತಾಸಾಂ ತಪಃ ಕಿಂ ಕಥಯಾಮಿ ರಾಜನ್
ಪೂರ್ಣೇ ಪರೇ ಬ್ರಹ್ಮಣಿ ವಾಸುದೇವೇ ।
ಯಾಶ್ಚಕ್ರಿರೇ ಪ್ರೇಮ ಹೃದಿಂದ್ರಿಯಾದ್ಯೈ-
ರ್ವಿಸೃಜ್ಯ ಲೋಕವ್ಯವಹಾರಮಾರ್ಗಂ ॥ ೧೨ ॥

ಯಾ ರಾಸರಂಗೇ ವಿನಿಧಾಯ ಬಾಹುಂ
ಕೃಷ್ಣಾಂಸಯೋಃ ಪ್ರೇಮವಿಭಿನ್ನಚಿತ್ತಾಃ ।
ಚಕ್ರುರ್ವಶೇ ಕೃಷ್ಣಮಲಂ ತಪಸ್ತ-
ದ್ವಕ್ತುಂ ನ ಶಕ್ತೋ ವದನೈಃ ಫಣೀಂದ್ರಃ ॥ ೧೩ ॥

ಯೋಗೇನ ಸಾಂಖ್ಯೇನ ಶುಭೇನ ಕರ್ಮಣಾ
ನ್ಯಾಯಾದಿವೈಶೇಷಿಕತತ್ತ್ವವಿತ್ತಮೈಃ ।
ಯತ್ಪ್ರಾಪ್ಯತೇ ತಚ್ಚ ಪದಂ ವಿದೇಹರಾಟ್
ಸಂಪ್ರಾಪ್ಯತೇ ಕೇವಲ ಭಕ್ತಿಭಾವತಃ ॥ ೧೪ ॥

---

೧೨. ಎಲೈ ರಾಜನೇ, ಪೂರ್ಣಬ್ರಹ್ಮಸ್ವರೂಪನಾದ ಶ್ರೀಕೃಷ್ಣನಲ್ಲಿ ಅವರು ಆಚರಿಸಿದ ತಪಸ್ಸನ್ನು ನಾನೆಂತು ಹೇಳಲಿ ? ಅವರು ಹೃದಯ ಇಂದ್ರಿಯಗಳಿಂದ ಅವರು ಪ್ರಕಟಿಸಿದ ಪ್ರೇಮವು ಲೋಕಾತೀತವಾದುದು.

೧೩. ರಾಸಕ್ರೀಡೆಯ ಸಮಯದಲ್ಲಿ ಅವರೆಲ್ಲರೂ ತಮ್ಮ ತೋಳುಗಳನ್ನು ಶ್ರೀಕೃಷ್ಣನ ಭುಜದ ಮೇಲಿಟ್ಟು ಪ್ರೇಮದಿಂದ ಚಿತ್ತವನ್ನು ಐಕ್ಯಮಾಡಿ ಶ್ರೀಕೃಷ್ಣನ ವಶರಾಗುವರು. ಈ ರೀತಿ ಕೃಷ್ಣನನ್ನು ಪಡೆಯಲು ಅವರು ಮಾಡಿದ ತಪಸ್ಸನ್ನು ವರ್ಣಿಸಲು ಆದಿಶೇಷನಿಗೂ ಸಾಮರ್ಥ್ಯವಿಲ್ಲ.

೧೪. ಎಲೈ ಬಹುಲಾಶ್ವ, ಯೋಗ, ಸಾಂಖ್ಯ, ಶುಭಕರ್ಮ, ನ್ಯಾಯ, ತರ್ಕ ಮುಂತಾದವುಗಳನ್ನು ಬಲ್ಲ ಜ್ಞಾನಿಗಳು ತಮ್ಮ ತಮ್ಮ ಮತಗಳ ಅನುಷ್ಠಾನದಿಂದ ಯಾವ ಸ್ಥಾನವನ್ನು ಪಡೆಯುವರೋ ಆ ಸ್ಥಾನವು ಕೇವಲ ಭಕ್ತಿಯಿಂದಲೇ ಸಿಕ್ಕುವುದು.

ಭಕ್ತ್ಯೈವ ವಶ್ಯೋ ಹರಿರಾದಿದೇವಃ
ಸದಾ ಪ್ರಮಾಣಂ ಕಿಲ ಚಾತ್ರ ಗೋಪ್ಯಃ ।
ಸಾಂಖ್ಯಂ ಚ ಯೋಗಂ ನ ಕೃತಂ ಕದಾಪಿ
ಪ್ರೇಮ್ಣೈವ ಯಸ್ಯ ಪ್ರಕೃತಿಂ ಗತಾಃ ಸ್ಯುಃ ॥ ೧೫ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಮಾಧುರ್ಯಖಂಡೇ
ಕೌಶಲೋಪಾಖ್ಯಾನಂ ನಾಮ ಚತುರ್ಥೋಽಧ್ಯಾಯಃ

---

೧೫. ಆದಿದೇವನಾದ ಹರಿಯನ್ನು ಸಾಕ್ಷಾತ್ಕಾರಮಾಡಿಕೊಳ್ಳಬೇಕಾದರೆ ಭಕ್ತಿಯೊಂದರಿಂದಲೇ ಸಾಧ್ಯವು. ಇದಕ್ಕೆ ಉದಾಹರಣೆ ಗೋಪಿಯರು. ಅವರು ಸಾಂಖತತ್ವವನ್ನಾಗಲೀ, ಯೋಗಸಿದ್ಧಿಯನ್ನಾಗಲೀ ಪಡೆದಿರಲಿಲ್ಲ. ಆದರೆ ಭಕ್ತಿಯನ್ನಿಟ್ಟಿದ್ದುದರಿಂದ ಶ್ರೀಕೃಷ್ಣನ ಸ್ಥಾನವನ್ನು ಪಡೆದರು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಮಾಧುರ್ಯಖಂಡದಲ್ಲಿ ಕೌಶಲಗೋಪಿಯರ ಉಪಾಖ್ಯಾನವೆಂಬ ನಾಲ್ಕನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಮಾಧುರ್ಯಖಂಡೇ

ಪಂಚಮೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅಯೋಧ್ಯಾವಾಸಿನೀನಾಂ ತು ಗೋಪೀನಾಂ ಶೃಣು ವರ್ಣನಂ ।
ಚತುಷ್ಪದಾರ್ಥದಂ ಸಾಕ್ಷಾತ್ಕೃಷ್ಣಪ್ರಾಪ್ತಿಕರಂ ಪರಂ ॥ ೧ ॥

ಸಿಂಧುದೇಶೇಷು ನಗರೀ ಚಂಪಕಾ ನಾಮ ಮೈಥಿಲ ।
ಬಭೂವ ತಸ್ಯಾಂ ವಿಮಲೋ ರಾಜಾ ಧರ್ಮಪರಾಯಣಃ ॥ ೨ ॥

ಐದನೆಯ ಅಧ್ಯಾಯವು

೧. ನಾರದನು ಹೇಳಿದನು :—ಎಲೈ ಮೈಥಿಲ, ಕೌಶಲಗೋಪಿಯರ ಚರಿತ್ರೆಯನ್ನು ಹೇಳಿಯಾಯಿತು. ಈಗ ಅಯೋಧ್ಯಾವಾಸಿ ಗೋಪಿಯರ ಚರಿತ್ರೆಯನ್ನು ಹೇಳುವೆನು ಕೇಳು. ಇದನ್ನು ಕೇಳುವುದರಿಂದ ಚತುರ್ವಿಧಪುರುಷಾರ್ಥಗಳು ಸಿಕ್ಕುವುವು. ಸಾಕ್ಷಾತ್ಕೃಷ್ಣನನ್ನು ಪಡೆಯಲು ಅನುಕೂಲವಾಗುವುದು.

೨. ಸಿಂಧುದೇಶದಲ್ಲಿ ಚಂಪಕವೆಂಬ ಪಟ್ಟಣವಿದೆ. ಅಲ್ಲಿ ವಿಮಲನೆಂಬ ರಾಜನಿದ್ದನು. ಅವನು ಕ್ಷತ್ರಧರ್ಮಪರಾಯಣನಾಗಿದ್ದನು.

ಕುಬೇರ ಇವಕೋಶಾಢ್ಯೋ ಮನಸ್ವೀ ಮೃಗರಾಡಿವ ।
ವಿಷ್ಣುಭಕ್ತಃ ಪ್ರಶಾಂತಾತ್ಮಾ ಪ್ರಹ್ಲಾದ ಇವ ಮೂರ್ತಿಮಾನ್ ॥ ೩ ॥

ಭಾರ್ಯಾಣಿ ಷಟ್ಸಹಸ್ರಾಣಿ ಬಭೂವುಸ್ತಸ್ಯ ಭೂಪತೇಃ ।
ರೂಪವಂತ್ಯಃ ಕಂಜನೇತ್ರಾ ವಂಧ್ಯಾತ್ವಂ ತಾಃ ಸಮಾಗತಾಃ ॥ ೪ ॥

ಅಪತ್ಯಂ ಕೇನ ಪುಣ್ಯೇನ ಭೂಯಾನ್ಮೇಽತ್ರ ಶುಭಂ ನೃಪ ।
ಏವಂ ಚಿಂತಯತಸ್ತಸ್ಯ ಬಹವೋ ವತ್ಸರಾ ಗತಾಃ ॥ ೫ ॥

ಏಕದಾ ಯಾಜ್ಞವಲ್ಕ್ಯಸ್ತು ಮುನೀಂದ್ರಸ್ತು ಸಮಾಗತಃ ।
ತಂ ನತ್ವಾಭ್ಯರ್ಚ್ಯ ವಿಧಿವನ್ನೃಪಸ್ತತ್ಸಂಮುಖೀ ಸ್ಥಿತಃ ॥ ೬ ॥

ಚಿಂತಾಕುಲಂ ನೃಪಂ ವೀಕ್ಷ್ಯ ಯಾಜ್ಞವಲ್ಕ್ಯೋ ಮಹಾಮುನಿಃ ।
ಸರ್ವಜ್ಞಃ ಸರ್ವವಿಚ್ಛಾಂತಃ ಪ್ರತ್ಯುವಾಚ ನೃಪೋತ್ತಮಂ ॥ ೭ ॥

---

೩. ಅವನು ಕುಬೇರನಂತೆ ಧನಸಮೂಹವುಳ್ಳವನಾಗಿಯೂ, ಸಿಂಹದಂತೆ ಸ್ವೇಚ್ಛಾವಿಹಾರಿಯಾಗಿಯೂ ಇದ್ದನು. ಸೌಮ್ಯನಾಗಿದ್ದನು. ವಿಷ್ಣುಭಕ್ತನಾಗಿ ಸಾಕ್ಷಾತ್ ಪ್ರಹ್ಲಾದನೋಪಾದಿಯಲ್ಲಿ ರಂಜಿಸುತ್ತಿದ್ದನು.

೪. ಅವನಿಗೆ ಆರುಸಾವಿರ ಜನ ಸುಂದರಿಯರಾದ ಪತ್ನಿಯರಿದ್ದರು. ಆದರೆ ಅವರೆಲ್ಲರೂ ಮಕ್ಕಳಿಲ್ಲದೆ ವಂಧ್ಯೆಯರಾಗಿದ್ದರು.

೫. ನನಗೆ ಯಾವ ಪುಣ್ಯದಿಂದ ಮಕ್ಕಳಾದೀತು. ಎಂದು ಚಿಂತಿಸುತ್ತಾ ಆ ವಿಮಲನು ಅನೇಕ ವರ್ಷಗಳನ್ನು ಕಳೆದನು.

೬. ಹೀಗೆ ಇರುತ್ತಿರಲು, ಒಂದು ಸಾರಿ ಯಾಜ್ಞವಲ್ಕ್ಯಮುನಿವರು ಆ ರಾಜನಲ್ಲಿಗೆ ಬಂದನು. ರಾಜನು ಅವನನ್ನು ಅರ್ಘ್ಯಪಾದ್ಯಾದಿಗಳಿಂದ ಪೂಜಿಸಿ ಅವನೆದುರಿಗೆ ಕುಳಿತನು.

೭. ಸರ್ವಜ್ಞನೂ, ಶಾಂತನೂ ಆದ ಆ ಮುನಿಯು ಚಿಂತಾಕುಲನಾದ ರಾಜನನ್ನು ನೋಡಿ ಅವನನ್ನು ಪ್ರಶ್ನಿಸಿದನು.

॥ ಯಾಜ್ಞವಲ್ಕ್ಯ ಉವಾಚ ॥

ರಾಜನ್ಕೃಶೋಽಸಿ ಕಸ್ಮಾತ್ತ್ವಂ ಕಾ ಚಿಂತಾ ತೇ ಹೃದಿ ಸ್ಥಿತಾ ।
ಸಪ್ತಸ್ವಂಗೇಷು ಕುಶಲಂ ದೃಶ್ಯತೇ ಸಾಂಪ್ರತಂ ತವ ॥ ೮ ॥

॥ ವಿಮಲ ಉವಾಚ ॥

ಬ್ರಹ್ಮನ್ತ್ವಂ ಕಿಂ ನ ಜಾನಾಸಿ ತಪಸಾ ದಿವ್ಯಚಕ್ಷುಷಾ ।
ತಥಾಪ್ಯಹಂ ವದಿಷ್ಯಾಮಿ ಭವತೋ ವಾಕ್ಯಗೌರವಾತ್ ॥ ೯ ॥

ಅನಪತ್ಯೇನ ದುಃಖೇನ ವ್ಯಾಪ್ತೋಽಹಂ ಮುನಿಸತ್ತಮ ।
ಕಿಂ ಕರೋಮಿ ತಪೋ ದಾನಂ ವದ ಯೇನ ಭವೇತ್ಪ್ರಜಾ ॥ ೧೦ ॥

॥ ಶ್ರೀ ನಾರದ ಉವಾಚ ॥

ಇತಿ ಶ್ರುತ್ವಾ ಯಾಜ್ಞವಲ್ಕ್ಯೋ ಧ್ಯಾನಸ್ಥಿಮಿತಲೋಚನಃ ।
ದೀರ್ಘಂ ದಧ್ಯೌ ಮುನಿಶ್ರೇಷ್ಠೋ ಭೂತಂ ಭವ್ಯಂ ವಿಚಿಂತಯನ್ ॥ ೧೧ ॥

---

೮. ಎಲೈ ರಾಜನೇ, ಅದೇಕೆ ನೀನು ಕೃಶನಾಗಿರುವೆ? ನಿನ್ನ ಹೃದಯದ ಯಾವ ಚಿಂತೆ ನಿನ್ನನ್ನಾರೀತಿ ಮಾಡಿದೆ? ಸ್ವಾಮಿ, ಅಮಾತ್ಯ, ರಾಷ್ಟ್ರ, ದುರ್ಗಾ ಇವೇ ಮೊದಲಾದ ಸಪ್ತ ರಾಜ್ಯಾಂಗಗಳಲ್ಲಿಯೂ ಸೌಖ್ಯವಾಗಿರುವುದಷ್ಟೆ!

೯. ಹೀಗೆನ್ನಲು ಆಗ ವಿಮಲನು ಹೇಳಿದನು:—ಮುನಿವರನೇ ನೀನು ತಪೋಬಲದಿಂದ ದಿವ್ಯಚಕ್ಷುಸ್ಸನ್ನು ಪಡೆದಿರುವವನು. ನಿನಗೆ ತಿಳಿಯದ ವಿಷಯ ಯಾವುದೂ ಇಲ್ಲ. ಆದರೂ ನಿನ್ನ ಮಾತಿಗೆ ಬೆಲೆಯಿಟ್ಟು ನಾನು ಹೇಳುವೆನು.

೧೦. ನಾನು ಮಕ್ಕಳಿಲ್ಲದ ದುಃಖದಿಂದ ಕೂಡಿರುವೆನು. ಈಗ ನಾನೇನು ಮಾಡಲಿ? ನನಗೆ ಮಕ್ಕಳಾಗುವ ಬಗೆ ಎಂತು? ಎಂಬುದನ್ನು ತಿಳಿಸು.

೧೧. ಎಂದು ಕೇಳಲು ಯಜ್ಞವಲ್ಕ್ಯಮುನಿಯು ಕಣ್ಮುಚ್ಚಿ ಯೋಚಿಸಿದನು. ಬಹಳ ಹೊತ್ತಿನವರೆಗೂ ಭೂತ, ಭವಿಷ್ಯತ್ ವಿಚಾರಗಳನ್ನೆಲ್ಲಾ ಸ್ಮರಿಸಿಕೊಂಡು ಇಂತೆಂದನು.

॥ ಯಾಜ್ಞವಲ್ಕ್ಯ ಉವಾಚ ॥

ಅಸ್ಮಿನ್ಜನ್ಮನಿ ರಾಜೇಂದ್ರ ಪುತ್ರೋ ನೈವ ಚ ನೈವ ಚ ।
ಪುತ್ರ್ಯಸ್ತವ ಭವಿಷ್ಯಂತಿ ಕೋಟಿಶೋ ನೃಪಸತ್ತಮ ॥ ೧೨ ॥

॥ ರಾಜೋವಾಚ ॥

ಪುತ್ರಂ ವಿನಾ ಪೂರ್ವಋಣಾನ್ನ ಕೋಽಪಿ
ಪ್ರಮುಚ್ಯತೇ ಭೂಮಿತಲೇ ಮುನೀಂದ್ರ ।
ಸದಾ ಹ್ಯಪುತ್ರಸ್ಯ ಗೃಹವ್ಯಥಾ ಸ್ಯಾತ್ಪರಂ
ತ್ವಿಹಾಮುತ್ರ ಸುಖಂ ನ ಕಿಂಚಿತ್ ॥ ೧೩ ॥

॥ ಯಾಜ್ಞವಲ್ಕ್ಯ ಉವಾಚ ॥

ಮಾ ಖೇದಂ ಕುರು ರಾಜೇಂದ್ರ ಪುತ್ರ್ಯೋ ದೇಯಾಸ್ತ್ವಯಾ ಖಲು ।
ಶ್ರೀಕೃಷ್ಣಾಯ ಭವಿಷ್ಯಾಯ ಪರಂ ದಾಯಾದಿಕೈಸ್ಸಹ ॥ ೧೪ ॥

ತೇನೈವ ಕರ್ಮಣಾ ತ್ವಂ ವೈ ದೇವರ್ಷಿಪಿತೃಣಾನೃಣಂ ।
ವಿಮುಕ್ತೋ ನೃಪಶಾರ್ದೂಲ ಪರಂ ಮೋಕ್ಷಮವಾಪ್ಸ್ಯಸಿ ॥ ೧೫ ॥

---

೧೨. ಎಲೈ ರಾಜೇಂದ್ರ, ನಿನಗೆ ಈ ಜನ್ಮದಲ್ಲಿ ಪುತ್ರನಾಗುವುದಿಲ್ಲ. ಆದರೆ ಕೋಟ್ಯಾನುಕೋಟಿ ಪುತ್ರಿಯರು ಹುಟ್ಟುವರು.

೧೩. ಹಾಗೆನ್ನಲು ರಾಜನು ಹೇಳಿದನು:—ಮುನಿಯೇ, ಈ ಪ್ರಪಂಚದಲ್ಲಿ ಪುತ್ರನನ್ನು ಪಡೆಯದೆ ಪಿತೃಋಣಾದಿಗಳಿಂದ ಯಾವನೂ ಮುಕ್ತನಾಗುವುದಿಲ್ಲ. ಪುತ್ರನಿಲ್ಲದವನ ಮನೆ ದುಃಖದಿಂದ ಕೂಡಿರುವುದು. ಅವನಿಗೆ ಈ ಲೋಕದಲ್ಲೂ ಸುಖವಿಲ್ಲ. ಮುಂದಿನ ಲೋಕದಲ್ಲೂ ಸುಖವಿಲ್ಲ.

೧೪. ಎನ್ನಲು ಯಾಜ್ಞವಲ್ಕ್ಯನು ಇಂತೆಂದನು:—ರಾಜನೇ, ದುಃಖ ಪಡಬೇಡ. ನಿನ್ನ ಪುತ್ರಿಯರನ್ನೆಲ್ಲಾ ಮುಂದೆ ಹುಟ್ಟುವ ಶ್ರೀಕೃಷ್ಣನಿಗೆ ನಿನ್ನ ಬಾಂಧವರ ಅಭಿಮತವನ್ನು ತೆಗೆದುಕೊಂಡು ಮದುವೆಮಾಡಿ ಕೊಟ್ಟುಬಿಡು.

೧೫. ಆ ರೀತಿ ಮಾಡಿದರೆ ನೀನು ದೇವ, ಋಷಿ, ಪಿತೃ ಋಣಗಳಿಂದ ವಿಮುಕ್ತನಾಗುವೆ. ಅಲ್ಲದೆ ಉತ್ಕೃಷ್ಟವಾದ ಮೋಕ್ಷವನ್ನೂ ಪಡೆಯುವೆ.

॥ ಶ್ರೀ ನಾರದ ಉವಾಚ ॥

ತದಾತಿಹರ್ಷಿತೋ ರಾಜಾ ಶ್ರುತ್ವಾ ವಾಕ್ಯಂ ಮಹಾಮುನೇಃ ।
ಪುನಃ ಪಪ್ರಚ್ಛ ಸಂದೇಹಂ ಯಾಜ್ಞವಲ್ಕ್ಯಂ ಮಹಾಮುನಿಂ ॥ ೧೬ ॥

॥ ರಾಜೋವಾಚ ॥

ಕಸ್ಮಿನ್ಕುಲೇ ಕುತ್ರ ದೇಶೇ ಭವಿಷ್ಯಚ್ಛ್ರೀಹರಿಃ ಸ್ವಯಂ ।
ಕೀದೃಗ್ರೂಪಶ್ಚ ಕಿಂ ವರ್ಣೋ ವರ್ಷೈರ್ಶ್ಚ ಕತಿಭಿರ್ಗತೈಃ ॥ ೧೭ ॥

॥ ಯಾಜ್ಞವಲ್ಕ್ಯ ಉವಾಚ ॥

ದ್ವಾಪರಸ್ಯ ಯುಗಸ್ಯಾಸ್ಯ ತವ ರಾಜ್ಯಾನ್ಮಹಾಭುಜ ।
ಅವಶೇಷೇ ವರ್ಷಶತೇ ತಥಾ ಪಂಚದಶೋ ನೃಪ ॥ ೧೮ ॥

ತಸ್ಮಿನ್ವರ್ಷೇ ಯದುಕುಲೇ ಮಥುರಾಯಾಂ ಯದೋಃ ಪುರೇ ।
ಭಾದ್ರೇ ಬುಧೇ ಕೃಷ್ಣಪಕ್ಷೇ ಧಾರ್ತರ್ಕ್ಷೇ ಹರ್ಷಣೇ ವೃಷೇ ॥ ೧೯ ॥

---

೧೬. ಅದನ್ನು ಕೇಳಿ ವಿಮಲನು ಸಂತೋಷಗೊಂಡನು. ಪುನಃ ಆ ಮುನಿಯನ್ನು ಕುರಿತು ಮತ್ತೊಂದು ಸಂದೇಹವನ್ನು ಕೇಳಿದನು.

೧೭. ನೀನು ಹೇಳಿದ ಆ ಹರಿಯು ಯಾವ ದೇಶದಲ್ಲಿ ಹುಟ್ಟುವನು ? ಅವನ ಕುಲವಾವುದು ? ಅವನ ರೂಪವೇನು ? ಅವನ ವರ್ಣವೆಂತಹುದು ? ಇನ್ನೆಷ್ಟು ವರ್ಷಗಳಲ್ಲಿ ಹುಟ್ಟುವನು ?

೧೮. ಎಂದು ಪ್ರಶ್ನಿಸಲು ಮುನಿಯು ಹೇಳಿದನು:—ಅವನು ದ್ವಾಪರ ಯುಗದಲ್ಲಿ ನಿನ್ನ ರಾಜ್ಯದಲ್ಲಿಯೇ ಹುಟ್ಟುವನು. ಈಗಿನಿಂದ ಒಂದುಸಾವಿರದ ಐನೂರು ವರ್ಷಗಳು ಕಳೆಯಲು ಅವನ ಉತ್ಪತ್ತಿಯಾಗುವುದು.

೧೯-೨೦. ಆ ವರ್ಷದಲ್ಲಿ ಯಾದವರ ಪಟ್ಟಣವಾದ ಮಥುರೆಯೆಂಬಲ್ಲಿ ಯದುಕುಲದಲ್ಲಿ ಹುಟ್ಟುವನು. ಭಾದ್ರಪದಮಾಸದ ಕೃಷ್ಣಪಕ್ಷದ ಅಷ್ಟಮಿಯ ರಾತ್ರಿ ದೇವಕಿಯಲ್ಲಿ ಶೌರಿ ಎಂಬುವನ ಮಂದಿರದಲ್ಲಿ ಜನಿಸುವನು. ಆಗ ರೋಹಿಣೀನಕ್ಷತ್ರ

ಬನೇಽಷ್ಟಮ್ಯಾಮರ್ಧರಾತ್ರೇ ನಕ್ಷತ್ರೇಶಮಹೋದಯೇ।
ಅಂಧಕಾರಾವೃತೇ ಕಾಲೇ ದೇವಕ್ಯಾಂ ಶೌರಿಮಂದಿರೇ ॥ ೨೦ ॥

ಭವಿಷ್ಯತಿ ಹರಿಃ ಸಾಕ್ಷಾತ್ತ್ಸರಣ್ಯಾಮಧ್ವರೇಽಗ್ನಿವತ್।
ಶ್ರೀವತ್ಸಾಂಕೋ ಘನಶ್ಯಾಮೋ ವನಮಾಲ್ಯತಿಸುಂದರಃ ॥ ೨೧ ॥

ಪೀತಾಂಬರಃ ಪದ್ಮನೇತ್ರೋ ಭವಿಷ್ಯತಿ ಚತುರ್ಭುಜಃ।
ತಸ್ಮೈ ದೇಯಾ ತ್ವಯಾ ಕನ್ಯಾ ಆಯುಸ್ತೇಽಸ್ತಿ ನ ಸಂಶಯಃ ॥ ೨೨ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಮಾಧುರ್ಯಖಂಡೇ
ಅಯೋಧ್ಯಾಪುರವಾಸಿನ್ಯುಪಾಖ್ಯಾನಂ ನಾಮ ಪಂಚಮೋಽಧ್ಯಾಯಃ

ವಿರುವುದು. ಹರ್ಷಣನಾಮಯೋಗವೂ. ಬವಕರಣವೂ ಇರುವುದು. ಅರ್ಧ ರಾತ್ರಿಯ ಸಮಯದಲ್ಲಿ ಚಂದ್ರನುದಯಿಸಿರುವನು. ಆದರೂ ಅಂಧಕಾರವು ಅತಿ ಯಾಗಿರುವುದು.

೨೧-೨೨. ಅವನ ಎದೆಯಲ್ಲಿ ಶ್ರೀವತ್ಸವೆಂಬ ಚಿಹ್ನೆಯಿರುವುದು. ಮೇಘದಂತೆ ನೀಲವರ್ಣನಾಗಿರುವನು. ತುಳಸಿಯ ಹಾರವನ್ನು ಧರಿಸಿ ಅತಿಸುಂದರನಾಗಿರುವನು. ಪೀತಾಂಬರವನ್ನುಡುವನು. ಪದ್ಮದಳದಂತೆ ಕಣ್ಣುಗಳು ವಿಶಾಲವಾಗಿರುವುವು. ಅವನಿಗೆ ನಿನ್ನ ಮಕ್ಕಳನ್ನು ಕೊಡು. ಅಲ್ಲಿಯವರೆಗೂ ನಿನಗಾಯುಸ್ಸಿರುವುದು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಮಾಧುರ್ಯಖಂಡದಲ್ಲಿ ಅಯೋಧ್ಯಾಪುರವಾಸಿನಿ
ಗೋಪಿಯರ ಉಪಾಖ್ಯಾನವೆಂಬ ಐದನೆಯ ಅಧ್ಯಾಯವು
ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಮಾಧುರ್ಯಖಂಡೇ

ಷಷ್ಠೋಽಧ್ಯಾಯಃ

॥ ನಾರದ ಉವಾಚ ॥

ಏವಮುಕ್ತ್ವಾ ಗತೇ ಸಾಕ್ಷಾದ್ಯಾಜ್ಞವಲ್ಕ್ಯೇ ಮಹಾಮುನೌ ।
ಅತೀವಹರ್ಷಮಾಪನ್ನೋ ವಿಮಲಶ್ಚಂಪಕಾಪತಿಃ ॥ ೧ ॥

ಅಯೋಧ್ಯಾಪುರವಾಸಿನ್ಯಃ ಶ್ರೀರಾಮಸ್ಯ ವರಾಚ್ಚ ಯಾಃ ।
ಬಭೂವುಸ್ತಸ್ಯ ಭಾರ್ಯಾಸು ತಾಸ್ಸರ್ವಾಃ ಕನ್ಯಕಾಃ ಶುಭಾಃ ॥ ೨ ॥

ವಿವಾಹಯೋಗ್ಯಾಸ್ತಾ ದೃಷ್ಟ್ವಾ ಚಿಂತಯಂಶ್ಚಂಪಕಾಪತಿಃ ।
ಯಾಜ್ಞವಲ್ಕ್ಯವಚಃ ಸ್ಮೃತ್ವಾ ದೂತಮಾಹ ನೃಪೇಶ್ವರಃ ॥ ೩ ॥

ಆರನೆಯ ಅಧ್ಯಾಯವು

೧. ನಾರದನು ಹೇಳಿದನು :—ಕನ್ಯೆಯರ ವೃತ್ತಾಂತವನ್ನು ಹೇಳಿ ಮಹಾಮುನಿಯಾದ ಯಾಜ್ಞವಲ್ಕ್ಯನು ಹೊರಟುಹೋದನು. ವಿಮಲನು ಅದನ್ನು ಕೇಳಿ ಅತ್ಯಾನಂದಭರಿತನಾದನು.

೨. ಶ್ರೀರಾಮನ ವರದಿಂದ ಹುಟ್ಟಿದ ಅಯೋಧ್ಯಾಪುರವಾಸಿನಿಯರಾದ ಗೋಪಿಯರು ಆ ವಿಮಲನ ಪತ್ನಿಯರಲ್ಲಿ ಹುಟ್ಟಿದರು.

೩. ಆ ಕನ್ಯೆಯರೆಲ್ಲರೂ ಕಾಲಕ್ರಮದಲ್ಲಿ ವಿವಾಹಕ್ಕೆ ಯೋಗ್ಯರಾದರು. ಅವರನ್ನು ನೋಡಿ ವಿಮಲನು ಯಾಜ್ಞವಲ್ಕ್ಯನ ಮಾತನ್ನು ಜ್ಞಾಪಿಸಿಕೊಂಡು ದೂತನನ್ನು ಕುರಿತಿಂತೆಂದನು.

|| ವಿಮಲ ಉವಾಚ ||

ಮಧುರಾಂ ಗಚ್ಛ ದೂತ ತ್ವಂ ಗತ್ವಾ ಶೌರೀಗೃಹಂ ಶುಭಂ ।
ದರ್ಶನೀಯಸ್ತ್ವಯಾ ಪುತ್ರೋ ವಸುದೇವಸ್ಯ ಸುಂದರಃ || ೪ ||

ಶ್ರೀವತ್ಸಾಂಕೋ ಘನಶ್ಯಾಮೋ ವನಮಾಲೋ ಚತುರ್ಭುಜಃ ।
ಯದಿ ಸ್ಯಾತ್ತರ್ಹಿ ದಾಸ್ಯಾಮಿ ತಸ್ಮೈ ಸರ್ವಾಃ ಸುಕನ್ಯಕಾಃ || ೫ ||

|| ನಾರದ ಉವಾಚ ||

ಇತಿ ವಾಕ್ಯಂ ತತಃ ಶ್ರುತ್ವಾ ದೂತೋಽಸೌ ಮಧುರಾಂ ಗತಃ ।
ಪಪ್ರಚ್ಛ ಸರ್ವಾಭಿಪ್ರಾಯಂ ಮಾಧುರಾಂಶ್ಚ ಮಹಾಜನಾನ್ || ೬ ||

|| ಮಾಧುರಾ ಊಚುಃ ||

ವಸುದೇವಸ್ಯ ಯೇ ಪುತ್ರಾಃ ಕಂಸೇನ ಬಹವೋ ಹತಾಃ ।
ಏಕಾವಶಿಷ್ಟಾವರಜಾ ಕನ್ಯಾ ಸಾಪಿ ದಿವಂ ಗತಾ || ೭ ||

---

೪. ಎಲೈ ದೂತ, ನೀನೀಗ ಮಧುರಾಪಟ್ಟಣಕ್ಕೆ ತೆರಳು. ಅಲ್ಲಿ ಶೌರಿಯ ಮನೆಗೆ ಹೋಗಬೇಕು. ಅವನ ಪುತ್ರನು ಸುಂದರನಾಗಿರುವನು. ಅವನನ್ನು ನೀನು ನೋಡಿಬರಬೇಕು.

೫. ಶ್ರೀವತ್ಸವೆಂಬ ಚಿಹ್ನೆಯಿರುವುದು. ಮೇಘದಂತೆ ಶ್ಯಾಮವರ್ಣನಾಗಿರುವನು. ತುಳಸಿಯ ಹಾರವನ್ನು ಧರಿಸಿರುವನು. ಅವನಿಗೆ ನಾಲ್ಕು ಭುಜಗಳಿರುವುವು. ಈ ರೀತಿಯಾಗಿ ಅವನಿದ್ದ ಪಕ್ಷದಲ್ಲಿ ನನ್ನ ಕನ್ಯೆಯರೆಲ್ಲರನ್ನೂ ಅವನಿಗೆ ಕೊಡುವೆನು.

೬. ಎಂದು ಹೇಳಲು, ದೂತನು ಅಲ್ಲಿಂದ ಮಧುರೆಗೆ ಹೊರಟನು. ಅಲ್ಲಿ ಮಧುರೆಯ ಜನರೆಲ್ಲರನ್ನೂ ಈ ವಿಷಯವಾಗಿ ವಿಚಾರಿಸಿದನು.

೭. ಅವರು ದೂತನನ್ನು ಕುರಿತಿಂತೆಂದರು :—ವಸುದೇವನಿಗೆ ಅನೇಕ ಪುತ್ರರಾದರು. ಅವರನ್ನೆಲ್ಲಾ ಕಂಸನು ಕೊಂದುಹಾಕಿದನು. ಒಬ್ಬಳು ಹೆಣ್ಣು ಮಗಳಿದ್ದಳು. ಅವಳೂ ಆಕಾಶಕ್ಕೆ ಹೊರಟುಹೋದಳು.

ವಸುದೇವೋಽಸ್ತಿ ಚಾತ್ರೈವ ಹ್ಯಪುತ್ರೋ ದೀನಮಾನಸಃ ।
ಇದಂ ನ ಕಥನೀಯಂ ಹಿ ತ್ವಯಾ ಕಂಸಭಯಂ ಪುರೇ ॥ ೮ ॥

ಶೌರಿಸಂತಾನವಾರ್ತಾಂ ಯೋ ವಕ್ತಿ ಚೇನ್ಮಧುರಾಪುರೇ ।
ತಂ ದಂಡಯತಿ ಕಂಸೋಽಸೌ ಶೌರ್ಯಷ್ಟಮಶಿಶೋ ರಿಪುಃ ॥ ೯ ॥

॥ ಶ್ರೀ ನಾರದ ಉವಾಚ ॥

ಜನವಾಕ್ಯಂ ತತಃ ಶ್ರುತ್ವಾ ದೂತೋ ವೈ ಚಂಪಕಾಪುರೀಂ ।
ಗತ್ವಾಥ ಕಥಯಾಮಾಸ ರಾಜ್ಞೇ ಕಾರಣಮದ್ಭುತಂ ॥ ೧೦ ॥

॥ ದೂತ ಉವಾಚ ॥

ಮಧುರಾಯಾಮಸ್ತಿ ಶೌರಿರನಪತ್ಯೋಽತಿದೀನವತ್ ।
ತತ್ಪುತ್ರಾಸ್ತು ಪುರಾ ಜಾತಾಃ ಕಂಸೇನ ನಿಹತಾಃ ಶ್ರುತಂ ॥ ೧೧ ॥

ಏಕಾವಶಿಷ್ಟಾ ಕನ್ಯಾಪಿ ಖಂ ಗತಾ ಕಂಸಹಸ್ತತಃ ।
ಏವಂ ಶ್ರುತ್ವಾ ಯದುಪುರಾನ್ನಿರ್ಗತೋಽಹಂ ಶನೈಃ ಶನೈಃ ॥ ೧೨ ॥

---

೮. ವಸುದೇವನೀಗ ಪುತ್ರನಿಲ್ಲದೆ ದುಃಖಿತನಾಗಿದ್ದಾನೆ. ಆದರೆ ನೀನು ಈ ವಿಷಯವನ್ನು ಈ ಊರಿನಲ್ಲಿ ಯಾರಿಗೂ ಹೇಳಬಾರದು. ಏಕೆಂದರೆ ಕಂಸನ ಭಯವಿರುವುದು.

೯. ಶೌರಿಯ ಪುತ್ರರ ವಿಷಯವನ್ನು ಮಧುರಾಪುರದಲ್ಲಿ ಯಾರಾದರೂ ಮಾತನಾಡಿದರೆ ಅವರನ್ನು ಕಂಸನು ಶಿಕ್ಷಿಸುವನು. ಏಕೆಂದರೆ ಶೌರಿಯ ಎಂಟನೆಯ ಮಗನು ಕಂಸನಿಗೆ ಶತ್ರುವು.

೧೦. ಎಂದು ಹೇಳಿದುದನ್ನು ಕೇಳಿ ದೂತನು ಅಲ್ಲಿಂದ ಚಂಪಕಾಪುರಿಗೆ ಹೋಗಿ ತನ್ನ ರಾಜನ ಹತ್ತಿರ ಕೇಳಿದ ವಿಷಯಗಳೆಲ್ಲವನ್ನೂ ತಿಳಿಸಿದನು.

೧೧-೧೨. ಪ್ರಭುವೇ, ಮಧುರೆಯಲ್ಲಿ ಶೌರಿಯಿರುವನು. ಅವನಿಗೆ ಹುಟ್ಟಿದ ಮಕ್ಕಳನ್ನೆಲ್ಲಾ ಕಂಸನು ಕೊಂದುಹಾಕಿದನು. ಅವನೀಗ ಮಕ್ಕಳಿಲ್ಲದೆ ದುಃಖಿತನಾಗಿರುವನು. ಒಬ್ಬಳು ಹೆಣ್ಣು ಮಗಳಿದ್ದಳು. ಅವಳನ್ನು ಕಂಸನು ಕೊಲ್ಲಲು ಪ್ರಯತ್ನಪಟ್ಟಾಗ ಅವನ ಕೈಯಿಂದ ಅವಳು ತಪ್ಪಿಸಿಕೊಂಡು ಆಕಾಶಕ್ಕೆ ಹಾರಿದಳು. ಇಷ್ಟು ವಿಷಯವನ್ನೂ ಅಲ್ಲಿಯ ಜನರು ಹೇಳಿದರು. ಅದನ್ನು ಕೇಳಿಕೊಂಡು ನಾನಿಲ್ಲಿಗೆ ಬಂದೆನು.

ಚರನ್ವೃಂದಾವನೇ ರಮ್ಯೇ ಕಾಲಿಂದೀನಿಕಟೇ ಶುಭೇ ।
ಅಕಸ್ಮಾಲ್ಲತಿಕಾವೃಂದೇ ದೃಷ್ಟಃ ಕಶ್ಚಿಚ್ಛಿಶುರ್ಮಯಾ ॥ ೧೩ ॥

ತಲ್ಲಕ್ಷಣಸಮೋ ರಾಜನ್ಗೋಗೋಪಗಣಮಧ್ಯತಃ ।
ಶ್ರೀವತ್ಸಾಂಕೋ ಘನಶ್ಯಾಮೋ ವನಮಾಲ್ಯತಿಸುಂದರಃ ॥ ೧೪ ॥

ದ್ವಿಭುಜೋ ಗೋಪಸೂನುಶ್ಚ ಪರಂ ತ್ವೇತದ್ವಿಲಕ್ಷಣಂ ।
ತ್ವಯಾ ಚತುರ್ಭುಜಶ್ಚೋಕ್ತೋ ವಸುದೇವಾತ್ಮಜೋ ಹರಿಃ ॥ ೧೫ ॥

ಕಿಂ ಕರ್ತವ್ಯಂ ವದ ನೃಪ ಮುನಿವಾಕ್ಯಂ ಮೃಷಾ ನಹಿ ।
ಯತ್ರ ಯತ್ರ ಯಥೇಚ್ಛಾ ತೇ ತತ್ರ ಮಾಂ ಪ್ರೇಷಯ ಪ್ರಭೋ ॥ ೧೬ ॥

॥ ಶ್ರೀ ನಾರದ ಉವಾಚ ॥

ಇತಿ ಚಿಂತಯತಸ್ತಸ್ಯ ವಿಸ್ಮಿತಸ್ಯ ನೃಪಸ್ಯ ಚ ।
ಗಜಾಹ್ವಯಾತ್ಸಿಂಧುದೇಶಾನ್ಜೇತುಂ ಭೀಷ್ಮಃ ಸಮಾಗತಃ ॥ ೧೭ ॥

---

೧೩. ಮಥುರೆಯಿಂದ ಹೊರಟ ನಾನು ವೃಂದಾವನದ ಮಾರ್ಗವಾಗಿ ಬರುತ್ತಲಿದ್ದೆನು. ಅಲ್ಲಿ ಅಕಸ್ಮಾತ್ ಒಂದು ಲತಾಕುಂಜದಲ್ಲಿ ಒಂದು ಶಿಶುವು ಕಾಣಿಸಿತು.

೧೪-೧೫. ಗೋಪಗೋಪಿಯರಲ್ಲೆಲ್ಲಾ ನೀನು ಹೇಳಿದ ಲಕ್ಷಣವುಳ್ಳವನು ಆ ಶಿಶು ಒಬ್ಬನೇ. ಶ್ರೀವತ್ಸವೆಂಬ ಚಿಹ್ನೆಯಿದ್ದಿತು. ಮೇಘದಂತೆ ಶ್ಯಾಮಾಂಗನು. ತುಳಸಿಯ ಹಾರದಿಂದ ಕೂಡಿ ಸುಂದರನಾಗಿರುವನು. ಆದರೆ ನೀನು ಹೇಳಿದಂತೆ ಅವನಿಗೆ ನಾಲ್ಕು ಭುಜಗಳಿಲ್ಲವು. ಕೇವಲ ಎರಡೇ ಭುಜವು. ಇದಂತೂ ನೀನು ಹೇಳಿದುದಕ್ಕೆ ವಿಲಕ್ಷಣವಾಗಿರುವುದು. ಅವನೇ ವಸುದೇವನ ಮಗನಾದ ಹರಿಯು.

೧೬. ರಾಜನೇ, ಈಗ ಏನು ಮಾಡಬೇಕು ? ಋಷಿವಾಕ್ಯವು ಎಂದಿಗೂ ಸುಳ್ಳಾಗುವುದಿಲ್ಲ. ಆದರೆ ಈಗ ಸುಳ್ಳಾದಂತಿದೆ. ಇದಕ್ಕೋಸ್ಕರ ನನ್ನನ್ನು ಎಲ್ಲಿಗೆ ಬೇಕಾದರೂ ಕಳುಹಿಸು. ನಾನು ಹೋಗಲು ಸಿದ್ಧನಿರುವೆನು. ಎನ್ನಲು,

೧೭. ಅದನ್ನು ಕೇಳಿ ರಾಜನಿಗೆ ಯೋಚನೆಯೂ, ಆಶ್ಚರ್ಯವೂ ಆಯಿತು. ಅದೇ ಸಮಯದಲ್ಲಿ ಭೀಷ್ಮನೆಂಬುವನು ಸಿಂಧುದೇಶವನ್ನು ಜಯಿಸಲು ಗಜ ಎಂಬ ತನ್ನ ದೇಶದಿಂದ ಅಲ್ಲಿಗೆ ಬಂದನು.

|| ವಿಮಲ ಉವಾಚ ||

ಯಾಜ್ಞವಲ್ಕ್ಯೇನ ಪೂರ್ವೋಕ್ತೋ ಮಥುರಾಯಾಂ ಹರಿಃ ಸ್ವಯಂ |
ವಸುದೇವಸ್ಯ ದೇವಕ್ಯಾಂ ಭವಿಷ್ಯತಿ ನ ಸಂಶಯಃ || ೧೮ ||

ನ ಜಾತೋ ವಸುದೇವಸ್ಯ ಸಕಾಶೇದ್ಯ ಹರಿಃ ಪದಃ |
ಋಷಿವಾಕ್ಯಂ ನೃಷಾ ನ ಸ್ಯಾತ್ಕಸ್ಮೈ ದಾಸ್ಯಾಮಿ ಕನ್ಯಕಾಃ || ೧೯ ||

ಮಹಾಭಾಗವತಸ್ಸಾಕ್ಷಾತ್ತ್ವಂ ಪರಾವರವಿತ್ತಮಃ |
ಜಿತೇಂದ್ರಿಯೋ ಬಾಲ್ಯಭಾವಾದ್ವೀರೋ ಧನ್ವೀ ವಸೂತ್ತಮಃ ||
ಏತದ್ವದ ಮಹಾಬುದ್ಧೇ ಕಿಂ ಕರ್ತವ್ಯಂ ಮಯಾತ್ರ ವೈ || ೨೦ ||

|| ಶ್ರೀ ನಾರದ ಉವಾಚ ||

ವಿಮಲಂ ಪ್ರಾಹ ಗಾಂಗೇಯೋ ಮಹಾಭಾಗವತಃ ಕವಿಃ |
ದಿವ್ಯದೃಗ್ಧರ್ಮತತ್ತ್ವಜ್ಞಃ ಶ್ರೀಕೃಷ್ಣಸ್ಯ ಪ್ರಭಾವವಿತ್ || ೨೧ ||

---

೧೮. ಆಗ ವಿಮಲನು ಭೀಷ್ಮನನ್ನು ಕುರಿತಿಂತೆಂದನು :—ಎಲೈ ಭೀಷ್ಮನೇ, ಹಿಂದೆ ಯಾಜ್ಞವಲ್ಕ್ಯಮುನಿಯು—ಹರಿಯು ದೇವಕೀವಸುದೇವರಲ್ಲಿ ಹುಟ್ಟುವನು. ಇದರಲ್ಲಿ ಸಂಶಯವಿಲ್ಲವೆಂದು ಹೇಳಿದ್ದನು.

೧೯. ಆದರೆ ಹರಿಯು ವಸುದೇವದೇವಕಿಯರಲ್ಲಿ ಹುಟ್ಟಲ್ಲ. ಋಷಿವಾಕ್ಯವು ಸುಳ್ಳಾಗುವುದೂ ಇಲ್ಲ. ಈಗೇನು ಮಾಡಲಿ? ನನ್ನ ಕನ್ಯೆಯರನ್ನು ಯಾರಿಗೆ ಕೊಡಲಿ?

೨೦. ನೀನು ಮಹಾಭಾಗವತನು, ಪರಾಪರಜ್ಞಾನಿಯು, ಬಾಲ್ಯದಿಂದಲೂ ಜಿತೇಂದ್ರಿಯನು, ವೀರನು, ಬಿಲ್ಲುಗಾರನು, ಧನಿಯು. ಆದುದರಿಂದ ನಾನೀಗ ಏನುಮಾಡಬೇಕೆಂದು ನನಗೆ ತಿಳಿಸು.

೨೧. ಎನ್ನಲು, ಆಗ ಧರ್ಮತತ್ವಜ್ಞಾನಿಯೂ, ಕವಿಯೂ, ದಿವ್ಯಜ್ಞಾನಿಯೂ ಆದ ಆ ಭೀಷ್ಮನು ಶ್ರೀಕೃಷ್ಣನ ಪ್ರಭಾವವನ್ನು ತಿಳಿದವನಾದುದರಿಂದ ವಿಮಲನನ್ನು ಕುರಿತಿಂತೆಂದನು.

|| ಭೀಷ್ಮ ಉವಾಚ ||

ಹೇ ರಾಜನ್ಗುಪ್ತಮಾಖ್ಯಾತಂ ವೇದವ್ಯಾಸಮುಖಾಚ್ಛ್ರುತಂ ।
ಸರ್ವಪಾಪಹರಂ ಪುಣ್ಯಂ ಶೃಣು ಹರ್ಷವಿವರ್ಧನಂ || ೨೨ ||

ದೇವಾನಾಂ ರಕ್ಷಣಾರ್ಥಾಯ ದೈತ್ಯಾನಾಂ ಹಿ ವಧಾಯ ಚ ||
ವಾಸುದೇವಗೃಹೇ ಜಾತಃ ಪರಿಪೂರ್ಣತಮೋ ಹರಿಃ || ೨೩ ||

ಅರ್ಧರಾತ್ರೇ ಕಂಸಭಯಾನ್ನೀತ್ವಾ ಶೌರಿಶ್ಚ ತಂ ತ್ವರಂ ।
ಗತ್ವಾ ಚ ಗೋಕುಲೇ ಪುತ್ರಂ ನಿಧಾಯ ಶಯನೇ ನೃಪ || ೨೪ ||

ಯಶೋದಾನಂದಯೋಃ ಪುತ್ರೀಂ ಮಾಯಾಂ ನೀತ್ವಾ ಪುರಂ ಯಯೌ ।
ವವೃಧೇ ಗೋಕುಲೇ ಕೃಷ್ಣೋ ಗುಪ್ತೋ ಜ್ಞಾತೋ ನ ಕೈರ್ನೃಪ || ೨೫ ||

---

೨೨. ಎಲೈ ರಾಜನೇ, ಶ್ರೀಕೃಷ್ಣನ ವಿಷಯವನ್ನು ವೇದವ್ಯಾಸರು ನನಗೆ ಹೇಳಿರುವರು. ಅದು ಬಹಳ ಗೋಪ್ಯವಾದುದು. ಸರ್ವಪಾಪಗಳನ್ನೂ ನಾಶಮಾಡುವುದು. ಪುಣ್ಯವನ್ನುಂಟುಮಾಡುವುದು. ಹರ್ಷವನ್ನು ಹೆಚ್ಚಿಸುವುದು.

೨೩. ಪರಿಪೂರ್ಣತಮನಾದ ಹರಿಯು ದೇವತೆಗಳನ್ನು ರಕ್ಷಿಸುವುದಕ್ಕೋಸ್ಕರವಾಗಿಯೂ, ದೈತ್ಯರನ್ನು ಕೊಲ್ಲುವುದಕ್ಕೋಸ್ಕರವಾಗಿಯೂ ವಸುದೇವನ ಮನೆಯಲ್ಲಿ ಅವತರಿಸಿದನು.

೨೪. ಅವನು ಅರ್ಧರಾತ್ರಿಯ ಸಮಯದಲ್ಲಿ ಹುಟ್ಟಿದನು. ಕಂಸನ ಭಯದಿಂದ ಅವನನ್ನು ತೆಗೆದುಕೊಂಡು ಗೋಕುಲಕ್ಕೆ ಹೋಗಿ ಅಲ್ಲಿ ಯಶೋದೆಯ ಹಾಸಿಗೆ ಮಲಗಿಸಿದನು.

೨೫. ಅಲ್ಲಿದ್ದ ಯಶೋದಾ-ನಂದರ ಪುತ್ರಿಯಾದ ಮಾಯಳನ್ನು ಎತ್ತಿಕೊಂಡು ತನ್ನೂರಿಗೆ ಬಂದುಬಿಟ್ಟನು. ಅಂದಿನಿಂದ ಕೃಷ್ಣನು ಗೋಕುಲದಲ್ಲಿಯೇ ಗುಪ್ತವಾಗಿ ಬೆಳೆಯುತ್ತಿರುವನು. ಯಾರಿಗೂ ಈ ವಿಷಯವು ಗೊತ್ತಿಲ್ಲ.

ಸೋಽದ್ಯೈವಂ ವೃಂದಕಾರಣ್ಯೇ ಹರಿರ್ಗೋಪಾಲವೇಷಧೃಕ್ |
ಏಕಾದಶಸಮಾಸ್ತತ್ರ ಗೂಢೋ ವಾಸಂ ಕರಿಷ್ಯತಿ ||
ದೈತ್ಯಂ ಕಂಸಂ ಘಾತಯಿತ್ವಾ ಪ್ರಕಟಃ ಸ ಭವಿಷ್ಯತಿ || ೨೬ ||

ಅಯೋಧ್ಯಾಪುರವಾಸಿನ್ಯಃ ಶ್ರೀರಾಮಸ್ಯ ವರಾಚ್ಚ ಯಾಃ |
ತಾಃ ಸರ್ವಾಸ್ತವ ಭಾರ್ಯಾಸು ಬಭೂವುಃ ಕನ್ಯಕಾಃ ಶುಭಾಃ || ೨೭ ||

ಗೂಢಾಯ ದೇವದೇವಾಯ ದೇಯಾಃ ಕನ್ಯಾಸ್ತ್ವಯಾ ಖಲು |
ನ ವಿಲಂಬಃ ಕ್ವಚಿತ್ಕಾರ್ಯೋ ದೇಹಃ ಕಾಲವಶೋಽಹ್ಯಯಂ || ೨೮ ||

ಇತ್ಯುಕ್ತ್ವಾಽಥ ಗತೇ ಭೀಷ್ಮೇ ಸರ್ವಜ್ಞೇ ಹಸ್ತಿನಾಪುರಂ |
ದೂತಂ ಸ್ವಂ ಪ್ರೇಷಯಾಮಾಸ ವಿಮಲೋ ನಂದಸೂನವೇ || ೨೯ ||

ಇತಿ ಶ್ರೀಮದ್ಗರ್ಗಸಂಹಿತಾಯಾಂ ಮಾಧುರ್ಯಖಂಡೇ
ಅಯೋಧ್ಯಾಪುರವಾಸಿನ್ಯುಪಾಖ್ಯಾನಂ ನಾಮ ಷಷ್ಠೋಽಧ್ಯಾಯಃ

---

೨೬. ಈಗ ಅವನು ವೃಂದಕಾರಣ್ಯದಲ್ಲಿ ಗೊಲ್ಲನ ವೇಷವನ್ನು ಧರಿಸಿ ಹನ್ನೊಂದು ವರ್ಷಗಳಿಂದಲೂ ಗೂಢವಾಗಿ ವಿಹರಿಸುತ್ತಾ ವಾಸಮಾಡುತ್ತಿರುವನು. ದೈತ್ಯನಾದ ಕಂಸನನ್ನು ಕೊಂದನಂತರ ಅವನು ಬಹಿರಂಗವಾಗಿ ಸಂಚರಿಸುವನು.

೨೭. ಶ್ರೀರಾಮನ ವರದಿಂದ ಹುಟ್ಟಿದ ಅಯೋಧ್ಯಾಪುರವಾಸಿನಿಯರಾದ ಗೋಪಿಯರು ಶ್ರೀಕೃಷ್ಣನ ಪತ್ನಿಯರಾಗುವರು. ಅವರು ಶುಭ ಕನ್ಯೆಯರು.

೨೮. ಆದುದರಿಂದ ಆ ನಿನ್ನ ಕನ್ಯೆಯರನ್ನು ದೇವದೇವನಾದ ಶ್ರೀಕೃಷ್ಣನಿಗೆ ಕೊಡಬೇಕು. ಜಾಗ್ರತೆಯಾಗಿ ಈ ಕೆಲಸವನ್ನು ಮಾಡಬೇಕು. ಏಕೆಂದರೆ ದೇಹವು ಕಾಲಕ್ಕೆ ವಶವಾಗಿ ಅದಕ್ಕೆ ಏನು ಸಂಭವಿಸುವುದೋ ?

೨೯. ಈ ರೀತಿ ಸರ್ವಜ್ಞನಾದ ಭೀಷ್ಮನು ಹೇಳಿ ಹಸ್ತಿನಾಪುರಕ್ಕೆ ಹೊರಟು ಹೋಗಲು ವಿಮಲನು ನಂದಕುಮಾರನ ವಿಷಯವನ್ನು ತಿಳಿದುಬರಲು ದೂತನನ್ನು ಕಳುಹಿಸಿದನು.

ಇಲ್ಲಿಗೆ ಶ್ರೀ ಗರ್ಗಸಂಹಿತೆಯ ಮಾಧುರ್ಯಖಂಡದಲ್ಲಿ ಅಯೋಧ್ಯಾಪುರವಾಸಿನಿಯರ ಉಪಾಖ್ಯಾನವೆಂಬ ಆರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಮಾಧುರ್ಯಖಂಡೇ

ಸಪ್ತಮೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅಥ ದೂತಃ ಸಿಂಧುದೇಶಾನ್ಮಧುರಾನ್ಪುನರಾಗತಃ ।
ಚರನ್ ವೃಂದಾವನೇ ಕೃಷ್ಣಾತೀರೇ ಕೃಷ್ಣಂ ದದರ್ಶ ಹ ॥ ೧ ॥

ಕೃಷ್ಣಂ ಪ್ರಣಮ್ಯ ರಹಸಿ ಕೃತಾಂಜಲಿಪುಟಃ ಶನೈಃ ।
ಪ್ರದಕ್ಷಿಣೀಕೃತ್ಯ ದೂತೋ ವಿಮಲೋಕ್ತಮುವಾಚ ಹ ॥ ೨ ॥

ಏಳನೆಯ ಅಧ್ಯಾಯವು

೧. ನಾರದನು ಬಹುಲಾಶ್ವನನ್ನು ಕುರಿತಿಂತೆಂದನು :—ಮೈಥಿಲ, ಕೇಳು. ರಾಜನ ಅಪ್ಪಣೆಯನ್ನು ಪಡೆದು ದೂತನು ಮಧುರಾಪಟ್ಟಣಕ್ಕೆ ಹೊರಟನು. ಹೋಗುತ್ತಾ ದಾರಿಯಲ್ಲಿ ವೃಂದಾವನದ ಹತ್ತಿರ ಯಮುನೆಯ ದಡದಲ್ಲಿ ಕೃಷ್ಣನನ್ನು ನೋಡಿದನು.

೨. ಗುಟ್ಟಾಗಿ ಕೃಷ್ಣನ ಹತ್ತಿರಕ್ಕೆ ಹೋದನು. ಅವನಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಅಂಜಲಿಬದ್ಧನಾಗಿ ನಿಂತುಕೊಂಡು ಮೆಲ್ಲಗೆ ವಿಮಲನು ಹೇಳಿದ ಮಾತನ್ನು ಹೇಳಿದನು.

|| ದೂತ ಉವಾಚ ||

ಸ್ವಯಂ ಪರಂ ಬ್ರಹ್ಮಪರಃ ಪರೇಶಃ
ಪರ್ವೈರದೃಶ್ಯಃ ಪರಿಪೂರ್ಣದೇವಃ ।
ಯಃ ಪುಣ್ಯಸಂಘೈಃ ಸತತಂ ಹಿ ದೂರ-
ಸ್ತಸ್ಮೈ ನಮಃ ಸಜ್ಜನಗೋಚರಾಯ || ೩ ||

ಗೋವಿಪ್ರದೇವಶ್ರುತಿಸಾಧುಧರ್ಮರಕ್ಷಾರ್ಥ-
ಮುದ್ಯೈವ ಯದೋಃ ಕುಲೇಜಃ ।
ಜಾತೋಽಸಿ ಕಂಸಾದಿವಧಾಯ ಯೋಽಸೌ
ತಸ್ಮೈ ನಮೋಽನಂತಗುಣಾರ್ಣವಾಯ || ೪ ||

ಅಹೋ ಪರಂ ಭಾಗ್ಯಮಲಂ ವ್ರಜೌಕಸಾಂ
ಧನ್ಯಂ ಕುಲಂ ನಂದವರಸ್ಯ ತೇ ಪಿತುಃ ।
ಧನ್ಯೋ ವ್ರಜೋ ಧನ್ಯಮರಣ್ಯಮೇತ-
ದ್ಯತ್ರೈವ ಸಾಕ್ಷಾತ್ಪ್ರಕಟಃ ಪರೋ ಹರಿಃ || ೫ ||

---

೩. ಸಾಕ್ಷಾತ್ಪರಬ್ರಹ್ಮಸ್ವರೂಪನೂ, ಪರೇಶನೂ ಆದ ಪರಮಾತ್ಮನವನು. ಸಾಮಾನ್ಯಜನರಿಗೆ ಅದೃಶ್ಯನು. ಪರಿಪೂರ್ಣನು. ಪುಣ್ಯಸಮುದಾಯಗಳಿಂದಲೂ ಅವನು ದೂರನು. ಸತ್ಪುರುಷರಿಗೆ ಮಾತ್ರ ಗೋಚರನಾಗುವ ಅಂತಹ ಪರಮಾತ್ಮನಿಗೆ ನಮಸ್ಕಾರವು.

೪. ಗೋ, ವಿಪ್ರರು, ದೇವತೆಗಳು, ವೇದಗಳು, ಸತ್ಪುರುಷರು, ಧರ್ಮ ಇವುಗಳನ್ನು ರಕ್ಷಿಸಲು ನೀನು ಯದುಕುಲದಲ್ಲಿ ಹುಟ್ಟಿರುವೆ. ಕಂಸಾದಿ ದುಷ್ಟರನ್ನು ಕೊಂದು ಲೋಕಕಲ್ಯಾಣವನ್ನೆಸಗುವೆ. ಅನಂತಗುಣಾಶ್ರಯನಾದ ಇಂತಹ ಶ್ರೀಕೃಷ್ಣನಿಗೆ ನಮಸ್ಕಾರವು.

೫. ನಿನ್ನನ್ನು ಹೊಂದಿದ ಗೋಪರೆಲ್ಲರೂ ಅದೃಷ್ಟಶಾಲಿಗಳು. ನಿನ್ನನ್ನು ಪಡೆದ ನಂದನು ಧನ್ಯನು. ನಂದನ ಕುಲವು ಪವಿತ್ರವಾಯಿತು. ಗೋಕುಲವು ಧನ್ಯವಾಯಿತು. ಈ ವೃಂದಾವನವು ಧನ್ಯವಾದುದು. ಈ ವೃಂದಾವನದಲ್ಲಿಯೇ ನೀನು ಬಹಿರಂಗನಾಗಿ ಕಾಣಿಸಿಕೊಂಡಿರುವೆ.

ಯದ್ರಾಧಿಕಾಸುಂದರಕಂಠರತ್ನಂ
ಕಸ್ತೂರಿಕಾಮೋದ ಇವ ಪ್ರಸಿದ್ಧಃ ।
ಯಶಶ್ಚ ತೇ ನಿರ್ಮಲಮಾಶು ಶುಕ್ಲೀ-
ಕರೋತಿ ಸರ್ವತ್ರಗತಂ ತ್ರಿಲೋಕೀಂ ॥ ೬ ॥

ಜಾನಾಸಿ ಸರ್ವಂ ಜನಚೈತ್ಯಭಾವಂ
ಕ್ಷೇತ್ರಜ್ಞ ಆತ್ಮಾ ಕೃತವೃಂದಸಾಕ್ಷೀ ।
ತಥಾಪಿ ವಕ್ಷ್ಯೇ ನೃಪವಾಕ್ಯಮುಕ್ತಂ
ಪರಂ ರಹಸ್ಯಂ ರಹಸಿ ಸ್ವಧರ್ಮಂ ॥ ೭ ॥

ಯಾ ಸಿಂಧುದೇಶೇಷು ಪುರೀ ಪ್ರಸಿದ್ಧಾ
ಶ್ರೀಚಂಪಕಾನಾಮ ಶುಭಾ ಯಥೈಂದ್ರೀ ।
ತತ್ಪಾಲಕೋಽಸೌ ವಿಮಲೋ ಯಥೇಂದ್ರ-
ಸ್ತ್ವತ್ಪಾದಪದ್ಮೇ ಕೃತಚಿತ್ತವೃತ್ತಿಃ ॥ ೮ ॥

---

೬. ನಿನ್ನ ಪರಿಶುದ್ಧವಾದ ಯಶಸ್ಸು ರಾಧೆಯ ಕಂಠಾಭರಣದಂತೆ ಅನರ್ಘ ವಾಗಿಯೂ, ಕಸ್ತೂರಿಯಂತೆ ಸರ್ವವ್ಯಾಪಿಯಾಗಿಯೂ ಇರುವುದು. ಇಂತಹ ಶುಭ್ರವಾದ ನಿನ್ನ ಕೀರ್ತಿಯು ಮೂರು ಲೋಕವನ್ನೇ ಬೆಳಗಿಸುತ್ತಿರುವುದು.

೭. ನೀನು ಕ್ಷೇತ್ರಜ್ಞನು, ಆತ್ಮಸಾಕ್ಷೀಭೂತನು. ಇಂತಹ ನೀನು ಜನರ ಮನಸ್ಸಿನಲ್ಲಿರುವುದನ್ನೆಲ್ಲಾ ತಿಳಿಯುವೆ. ಆದರೂ ನಾನೀಗ ವಿಮಲರಾಜನು ಹೇಳಿದ ಗುಟ್ಟಾದ ವಿಷಯವನ್ನು ತಿಳಿಸುವೆನು.

೮. ಸಿಂಧುದೇಶದಲ್ಲಿ ಚಂಪಕವೆಂಬ ಪಟ್ಟಣವಿರುವುದು. ಅದು ಅಮರಾವತಿ ಯಂತೆ ಪ್ರಸಿದ್ಧವಾಗಿರುವುದು. ಅದರ ರಾಜನು ವಿಮಲನೆಂಬುವನು. ಅವನು ಇಂದ್ರನಂತೆ ಪ್ರಸಿದ್ಧನಾಗಿರುವನು. ಅವನು ಯಾವಾಗಲೂ ನಿನ್ನ ಚರಣಕಮಲವನ್ನೇ ಧ್ಯಾನಿಸುತ್ತಿರುವನು.

ಸದಾ ಕೃತಂ ಯಜ್ಞಶತಂ ತ್ವದರ್ಥಂ
ದಾನಂ ತಪೋ ಬ್ರಾಹ್ಮಣಸೇವನಂ ಚ ।
ತೀರ್ಥಂ ಜಪಂ ಯೇನ ಸುಸಾಧನೇನ
ತಸ್ಮೈ ಪರಂ ದರ್ಶನಮೇವ ದೇಹಿ ॥ ೯ ॥

ತತ್ಕನ್ಯಕಾಃ ಪದ್ಮವಿಶಾಲನೇತ್ರಾಃ
ಪೂರ್ಣಂ ಪತಿಂ ತ್ವಾಂ ಮೃಗಯಂತ್ಯ ಆರಾತ್ ।
ಸದಾ ತ್ವದರ್ಥಂ ನಿಯಮವ್ರತಸ್ಥಾ-
ಸ್ತ್ವತ್ಪಾದಸೇವಾವಿಮಲೀಕೃತಾಂಗಾಃ ॥ ೧೦ ॥

ಗೃಹಾಣ ತಾಸಾಂ ವ್ರಜದೇವ ಪಾಣೀನ್
ದತ್ವಾ ಪರಂ ದರ್ಶನಮದ್ಭುತಂ ಸ್ವಂ ।
ಗಚ್ಛಾಶು ಸಿಂಧೂನ್ವಿಶದೀಕುರು ತ್ವಂ
ವಿಮೃಶ್ಯ ಕರ್ತವ್ಯಮಿದಂ ತ್ವಯಾ ಹಿ ॥ ೧೧ ॥

---

೯. ನಿನ್ನ ದರ್ಶನಕ್ಕೋಸ್ಕರವಾಗಿ ಅವನು ನೂರು ಯಜ್ಞಗಳನ್ನು ಮಾಡಿದನು. ಅನೇಕ ದಾನಗಳನ್ನು ಮಾಡಿದನು. ಬ್ರಾಹ್ಮಣರ ಸೇವೆಯನ್ನು ಮಾಡಿದನು. ತೀರ್ಥಯಾತ್ರೆಗಳನ್ನು ಮಾಡಿದನು. ನಿಯಮದಿಂದ ನಿನ್ನನ್ನೇ ಧ್ಯಾನಿಸಿದನು. ಆದರೂ ನೀನು ಅವನಿಗೆ ದರ್ಶನವನ್ನು ಕೊಡಲಿಲ್ಲ. ಈಗಲಾದರೂ ದರ್ಶನವನ್ನು ಕೊಡು.

೧೦. ಅವನಿಗೆ ಕನೇಕ ಕನ್ಯೆಯರಿರುವರು. ಅವರು ಪದ್ಮದಳದಂತೆ ವಿಶಾಲವಾದ ಕಣ್ಣುಗಳುಳ್ಳವರಾಗಿ ಅತಿಸುಂದರಿಯರಾಗಿರುವರು. ಪೂರ್ಣಸ್ವರೂಪನಾದ ನಿನ್ನನ್ನೇ ಪತಿಯೆಂದು ಭಾವಿಸಿ ನಿನ್ನನ್ನು ಅರಸುತ್ತಿರುವರು. ಯಾವಾಗಲೂ ವ್ರತ ನಿಯಮಗಳನ್ನು ಆಚರಿಸುತ್ತಾ ನಿನ್ನ ಪಾದಸೇವೆಯಿಂದ ಪವಿತ್ರರಾಗಿರುವರು.

೧೧. ದೇವ, ನೀನೀಗ ಸಿಂಧುದೇಶಕ್ಕೆ ನಡೆ. ಅವರಿಗೆ ದರ್ಶನವನ್ನಿತ್ತು ಅವರ ಪಾಣಿಗ್ರಹಣವನ್ನು ಮಾಡು. ಜಾಗ್ರತೆಯಾಗಿ ತೆರಳಿ ನಿನ್ನ ಸ್ವರೂಪವನ್ನು ಸ್ಪಷ್ಟಪಡಿಸು. ನಾನು ಹೇಳಿದುದನ್ನೆಲ್ಲಾ ವಿಮರ್ಶೆಮಾಡಿ ನಡೆಸು ಎಂದನು.

|| ಶ್ರೀ ನಾರದ ಉವಾಚ ||

ದೂತವಾಕ್ಯಂ ಚ ತಚ್ಛ್ರುತ್ವಾ ಪ್ರಸನ್ನೋ ಭಗವಾನ್ಹರಿಃ ।
ಕ್ಷಣಮಾತ್ರೇಣ ಗತವಾನ್ಸದೂತಶ್ಚಂಪಕಾಂ ಪುರೀಂ || ೧೨ ||

ವಿಮಲಸ್ಯ ಮಹಾಯಜ್ಞೇ ವೇದಧ್ವನಿಸಮಾಕುಲೇ ।
ಸ ದೂತಃ ಕೃಷ್ಣ ಆಕಾಶಾತ್ಸಹಸಾವತತಾರ ಹ || ೧೩ ||

ಶ್ರೀವತ್ಸಾಂಕಂ ಘನಶ್ಯಾಮಂ ಸುಂದರಂ ವನಮಾಲಿನಂ ।
ಪೀತಾಂಬರಂ ಪದ್ಮನೇತ್ರಂ ಯಜ್ಞವಾಟಾಗತಂ ಹರಿಂ || ೧೪ ||

ತಂ ದೃಷ್ಟ್ವಾ ಸಹಸೋತ್ಥಾಯ ವಿಮಲಃ ಪ್ರೇಮವಿಹ್ವಲಃ ।
ಪಪಾತ ಚರಣೋಪಾಂತೇ ರೋಮಾಂಚೀ ಸ ಕೃತಾಂಜಲಿಃ || ೧೫ ||

---

೧೨. ಈ ರೀತಿ ದೂತನು ಹೇಳಲು, ಅದನ್ನು ಕೇಳಿ ಹರಿಯು ಪ್ರಸನ್ನನಾಗಿ ಆ ಕ್ಷಣವೇ ಅಲ್ಲಿಂದ ಚಂಪಕಾಪುರಿಗೆ ತೆರಳಿದನು.

೧೩. ಅದೇ ಸಮಯದಲ್ಲಿ ವಿಮಲನು ಒಂದು ಮಹಾಯಜ್ಞವನ್ನು ಪ್ರಾರಂಭಿಸಿದ್ದನು. ವೇದಗಳ ಧ್ವನಿಯು ಎಲ್ಲೆಲ್ಲಿಯೂ ತುಂಬಿತ್ತು. ಆಗ ಶ್ರೀಕೃಷ್ಣನು ದೂತನೊಡನೆ ಅಲ್ಲಿಗೆ ಆಕಾಶದಿಂದ ಇಳಿದನು.

೧೪-೧೫. ಯಜ್ಞಸ್ಥಳಕ್ಕೆ ಬಂದ ಆ ಹರಿಯನ್ನು ನೋಡಿದನು. ಶ್ರೀವತ್ಸವೆಂಬ ಚಿಹ್ನೆ ಇದ್ದಿತು. ಮೇಘದಂತೆ ಶ್ಯಾಮವರ್ಣನೂ, ಸುಂದರನೂ ಆಗಿದ್ದನು. ತುಳಸಿಯ ಹಾರವನ್ನು ಧರಿಸಿದ್ದನು. ಪೀತಾಂಬರವನ್ನುಟ್ಟಿದ್ದನು. ಪದ್ಮದಳದಂತೆ ವಿಶಾಲವಾದ ನೇತ್ರಗಳಿದ್ದವು. ಈ ಚಿಹ್ನೆಗಳೆಲ್ಲವನ್ನೂ ನೋಡಿ ವಿಮಲನು ಜಾಗ್ರತೆಯಾಗಿ ಎದ್ದು ಅತಿಪ್ರೇಮದಿಂದ ಅವನ ಪಾದಕಮಲಗಳಿಗೆ ನಮಸ್ಕರಿಸಿದನು. ಪ್ರೇಮಾತಿಶಯದಿಂದ ಅವನಿಗೆ ರೋಮಾಂಚವಾಗಿದ್ದಿತು. ಅಂಜಲಿಬದ್ಧನಾಗಿ ಅವನನ್ನು ಸ್ವಾಗತಿಸಿದನು.

ಸಂಸ್ಥಾಪ್ಯ ಪೀಠಕೇ ದಿವ್ಯೇ ರತ್ನಹೇಮಖಚಿತ್ಪದೇ ।
ಸ್ತುತ್ವಾ ಸಂಪೂಜ್ಯ ವಿಧಿವದ್ರಾಜಾ ತತ್ಸಮ್ಮುಖೇ ಸ್ಥಿತಃ ॥ ೧೬ ॥

ಗವಾಕ್ಷೇಭ್ಯಃ ಪ್ರಪಶ್ಯಂತೀಃ ಸುಂದರೀರ್ವಿೀಕ್ಷ್ಯ ಮಾಧವಃ ।
ಉವಾಚ ವಿಮಲಂ ಕೃಷ್ಣೋ ಮೇಘಗಂಭೀರಯಾ ಗಿರಾ ॥ ೧೭ ॥

॥ ಶ್ರೀ ಭಗವಾನುವಾಚ ॥

ಮಹಾಮತೇ ವರಂ ಬ್ರೂಹಿ ಯತ್ತೇ ಮನಸಿ ವರ್ತತೇ ।
ಯಾಜ್ಞವಲ್ಕ್ಯಸ್ಯ ವಚಸಾ ಜಾತಂ ಮದ್ದರ್ಶನಂ ತವ ॥ ೧೮ ॥

॥ ವಿಮಲ ಉವಾಚ ॥

ಮನೋ ಮೇ ಭ್ರಮರೀಭೂತಂ ಸದಾ ತ್ವತ್ಪಾದಪಂಕಜೇ ।
ವಾಸಂ ಕುರ್ಯಾದ್ದೇವದೇವ ನಾನ್ಯೇಚ್ಛಾ ಮೇ ಕದಾಚನ ॥ ೧೯ ॥

---

೧೬. ಸುವರ್ಣರತ್ನಗಳಿಂದ ಖಚಿತವಾದ ದಿವ್ಯವಾದ ಪೀಠದಲ್ಲಿ ಅವನನ್ನು ಕುಳ್ಳಿರಿಸಿ ಅರ್ಘ್ಯಪಾದ್ಯಾದಿಗಳಿಂದ ಅವನನ್ನು ಪೂಜಿಸಿ ಅವನ ಮುಂದೆ ನಿಂತು ಸ್ತುತಿಸಿದನು.

೧೭. ಮಾಧವನು ಬಂದ ವಿಷಯವನ್ನು ಕೇಳಿ ವಿಮಲನ ಕನ್ಯೆಯರು ಕಿಟಕಿಗಳಿಂದ ಅವನನ್ನು ನೋಡುತ್ತಿದ್ದರು. ಆಗ ಮಾಧವನು ಅವರನ್ನು ನೋಡಿ ವಿಮಲನನ್ನು ಕುರಿತು ಮೇಘಧ್ವನಿಯಂತೆ ಗಂಭೀರವಾಗಿ ಇಂತೆಂದನು.

೧೮. ಎಲೈ ಮಹಾಮತಿಯೇ, ನಿನಗಿಷ್ಟವಾದ ವರವನ್ನು ಕೇಳಿಕೋ, ಯಾಜ್ಞವಲ್ಕ್ಯನ ಮಾತಿನಂತೆ ನಿನಗೆ ನನ್ನ ದರ್ಶನವಾಯಿತು.

೧೯. ಎಂದು ಹೇಳಲು ವಿಮಲನು ಹೇಳಿದನು :—ಸ್ವಾಮಿಯೇ ಯಾವಾಗಲೂ ನಿನ್ನ ಪಾದಕಮಲವನ್ನು ಹೊಂದಬೇಕೆಂದು ನನ್ನ ಮನಸ್ಸು ದುಂಬಿಯಂತೆ ಚಲಿಸುತ್ತಿರುವುದು. ಆದುದರಿಂದ ನಿನ್ನ ಪಾದಕಮಲದಲ್ಲಿ ನನ್ನ ಮನಸ್ಸು ಯಾವಾಗಲೂ ವಾಸಿಸುವಂತೆ ಅನುಗ್ರಹಿಸು. ನನಗೆ ಮತ್ತಾವ ಇಚ್ಛೆಯೂ ಇಲ್ಲ.

॥ ಶ್ರೀ ನಾರದ ಉವಾಚ ॥

ಇತ್ಯುಕ್ತ್ವಾ ವಿಮಲೋ ರಾಜಾ ಸರ್ವಂ ಕೋಶಧನಂ ಮಹತ್ ।
ದ್ವಿಪವಾಜಿರಥೈಸ್ಸಾರ್ಧಂ ಚಕ್ರ ಆತ್ಮನಿವೇದನಂ ॥ ೨೦ ॥

ಸಮರ್ಪ್ಯ ವಿಧಿನಾ ಸರ್ವಾಃ ಕನ್ಯಕಾ ಹರಯೇ ನೃಪ ।
ನಮಶ್ಚಕಾರ ಕೃಷ್ಣಾಯ ವಿಮಲೋ ಭಕ್ತವತ್ಸಲಃ ॥ ೨೧ ॥

ತದಾ ಜಯ ಜಯಾರಾವೋ ಬಭೂವ ಜನಮಂಡಲೇ ।
ವವೃಷುಃ ಪುಷ್ಪವರ್ಷಾಣಿ ದೇವತಾ ಗಗನಸ್ಥಿತಾಃ ॥ ೨೨ ॥

ತದೈವ ಕೃಷ್ಣಸಾರೂಪ್ಯಂ ಪ್ರಾಪ್ತೋಽನಂಗಸ್ಫುರದ್ದ್ಯುತಿಃ ।
ಶತಸೂರ್ಯಪ್ರತೀಕಾಶೋ ದ್ಯೋತಯನ್ಮಂಡಲಂ ದಿಶಾಂ ॥ ೨೩ ॥

ವೈನತೇಯಂ ಸಮಾರುಹ್ಯ ನತ್ವಾ ಶ್ರೀಗರುಡಧ್ವಜಂ ।
ಸಭಾರ್ಯಃ ಪಶ್ಯತಾಂ ನೃಣಾಂ ವೈಕುಂಠಂ ವಿಮಲೋ ಯಯೌ ॥ ೨೪ ॥

೨೦-೨೧. ಎಂದು ಹೇಳಿ ವಿಮಲನು ತನ್ನ ದ್ರವ್ಯಗಳೆಲ್ಲವನ್ನೂ, ಆನೆ, ಕುದುರೆ, ರಥ ಮುಂತಾದುವುಗಳೊಡನೆ ತನ್ನ ರಾಷ್ಟ್ರವನ್ನೂ ಶ್ರೀಕೃಷ್ಣನಿಗೆ ಅರ್ಪಿಸಿದನು. ಮತ್ತು ತನ್ನ ಕನ್ಯೆಯರನ್ನೆಲ್ಲಾ ವಿಧಿವತ್ತಾಗಿ ಶ್ರೀಹರಿಗೆ ಧಾರೆ ಎರೆದುಕೊಟ್ಟನು. ಅತಿಹರ್ಷದಿಂದ ಹರಿಗೆ ನಮಸ್ಕರಿಸಿ ತನ್ನ ಶರೀರವನ್ನೇ ಅರ್ಪಿಸಿದನು.

೨೨. ಆಗ ಜನರೆಲ್ಲರೂ ಜಯಜಯಾಕಾರವನ್ನು ಮಾಡಿದರು. ಅಂತರಿಕ್ಷದಲ್ಲಿ ನಿಂತು ದೇವತೆಗಳೆಲ್ಲರೂ ಪುಷ್ಪವೃಷ್ಟಿಯನ್ನು ಕರೆದರು.

೨೩-೨೪. ವಿಮಲನು ಶ್ರೀಕೃಷ್ಣನ ಸಾರೂಪ್ಯವನ್ನು ಹೊಂದಿ ನೂರುಸೂರ್ಯರಂತೆ ತೇಜಸ್ವಿಯಾಗಿ ದಿಕ್ಕುಗಳನ್ನು ಬೆಳಗುತ್ತಾ ಹೆಂಡತಿಯರೊಡನೆ ಗರುಡನನ್ನೇರಿ ಶ್ರೀಹರಿಯನ್ನು ನಮಸ್ಕರಿಸಿ ಜನರು ನೋಡುತ್ತಿರುವಂತೆಯೇ ವೈಕುಂಠಕ್ಕೆ ತೆರಳಿದನು.

ದತ್ವಾ ಮುಕ್ತಿಂ ನೃಪತಯೇ ಶ್ರೀಕೃಷ್ಣೋ ಭಗವಾನ್ಸ್ವಯಂ ।
ತತ್ಸುತಾಃ ಸುಂದರೀರ್ನೀತ್ವಾ ವ್ರಜಮಂಡಲಮಾಯಯೌ ॥ ೨೫ ॥

ತತ್ರ ಕಾಮವನೇ ರಮ್ಯೇ ದಿವ್ಯಮಂದಿರಸಂಯುತೇ ।
ಕ್ರೀಡಂತ್ಯಃ ಕಂದುಕೈಃ ಸರ್ವಾಸ್ತಸ್ಥುಃ ಕೃಷ್ಣಪ್ರಿಯಾಃ ಶುಭಾಃ ॥ ೨೬ ॥

ಯಾವತೀಶ್ಚ ಪ್ರಿಯಾ ಮುಖ್ಯಾಸ್ತಾವದ್ರೂಪಧರೋ ಹರಿಃ ।
ರರಾಜ ರಾಸೇ ವ್ರಜರಾಟ್ರಂಜಯನ್ತನ್ಮನಃ ಶುಭಃ ॥ ೨೭ ॥

ರಾಸೇ ವಿಮಲಪುತ್ರೀಣಾಮಾನಂದಜಲಬಿಂದುಭಿಃ ।
ಚ್ಯುತೈರ್ವಿಮಲಕುಂಡೋಽಭೂತ್ತೀರ್ಥಾನಾಂ ತೀರ್ಥಮುತ್ತಮಂ ॥ ೨೮ ॥

ದೃಷ್ಟ್ವಾ ಪೀತ್ವಾ ಚ ತಂ ಸ್ನಾತ್ವಾ ಪೂಜಯಿತ್ವಾ ನೃಪೇಶ್ವರ ।
ಭಿತ್ವಾ ಮೇರುಸಮಂ ಪಾಪಂ ಗೋಲೋಕಂ ಯಾತಿ ಮಾನವಃ ॥ ೨೯ ॥

---

೨೫. ಹರಿಯು ವಿಮಲನಿಗೆ ಮುಕ್ತಿಯನ್ನು ಕೊಟ್ಟು ಅವನ ಮಕ್ಕಳಾದ ಸುಂದರಿಯರನ್ನು ಕರೆದುಕೊಂಡು ವ್ರಜಮಂಡಲಕ್ಕೆ ಹೊರಟುಹೋದನು.

೨೬. ಅಲ್ಲಿ ಕಾಮವನವೆಂಬ ಸ್ಥಳದಲ್ಲಿ ಮನೋಹರವಾದ ಮಂದಿರಗಳಲ್ಲಿ ಆ ಕನ್ಯೆಯರು ಕೃಷ್ಣನಿಗೆ ಪ್ರೀತಿಪಾತ್ರರಾಗಿ ಚಂಡನ್ನಾಡುತ್ತಾ ವಿಹಾರಮಾಡಿದರು.

೨೭. ಹರಿಯು ಎಷ್ಟುಜನ ಸ್ತ್ರೀಯರಿರುವರೋ ಅಷ್ಟು ರೂಪಗಳನ್ನು ಧರಿಸಿ ಅವರೊಡನೆ ರಾಸಕ್ರೀಡೆಯಾಡುತ್ತಾ ಅವರ ಮನಸ್ಸನ್ನು ಆನಂದಪಡಿಸಿದನು.

೨೮. ಆ ರಾಸಕ್ರೀಡೆಯಾಡುವಾಗ ವಿಮಲನ ಪುತ್ರಿಯರ ಆನಂದಾಶ್ರುಗಳು ಬಿದ್ದ ಸ್ಥಳವು ವಿಮಲಕುಂಡವೆಂಬ ಒಂದು ತೀರ್ಥವಾಯಿತು. ಅದು ಎಲ್ಲಾ ತೀರ್ಥಗಳಿಗಿಂತ ಉತ್ತಮವಾದುದು.

೨೯. ಯಾರು ಆ ತೀರ್ಥವನ್ನು ನೋಡುವನೋ, ಅದನ್ನು ಪಾನಮಾಡುವನೋ, ಅದರಲ್ಲಿ ಸ್ನಾನಮಾಡುವನೋ, ಅದನ್ನು ಪೂಜಿಸುವನೋ ಅವನ ಮೇರುಸಮವಾದ ಪಾಪಗಳೂ ನಾಶವಾಗಿ ಅವನು ಗೋಲೋಕವನ್ನು ಪಡೆಯುವನು.

ಅಯೋಧ್ಯಾವಾಸಿನೀನಾಂ ತು ಕಥಾಂ ಯಃ ಶೃಣುಯಾನ್ನರಃ ।
ಸ ವ್ರಜೇದ್ಧಾಮ ಪರಮಂ ಗೋಲೋಕಂ ಯೋಗಿದುರ್ಲಭಂ ॥ ೩೦ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಮಾಧುರ್ಯಖಂಡೇ
ಅಯೋಧ್ಯಾಪುರವಾಸಿನ್ಯುಪಾಖ್ಯಾನಂ ನಾಮ
ಸಪ್ತಮೋಽಧ್ಯಾಯಃ

---

೩೦. ಯಾರು ಈ ಅಯೋಧ್ಯಾವಾಸಿನಿ ಗೋಪಿಯರ ಕಥೆಯನ್ನು ಕೇಳುವರೋ ಅವರು ಯೋಗಿಗಳಿಗೂ ದುರ್ಲಭವಾದ ಗೋಲೋಕವನ್ನು ಪಡೆಯುವರು.

ಇಲ್ಲಿಗೆ ಶ್ರೀ ಗರ್ಗಸಂಹಿತೆಯ ಮಾಧುರ್ಯಖಂಡದಲ್ಲಿ ಅಯೋಧ್ಯಾಪುರವಾಸಿನಿಯರ ಉಪಾಖ್ಯಾನವೆಂಬ ಏಳನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಮಾಧುರ್ಯಖಂಡೇ

ಅಷ್ಟಮೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಗೋಪೀನಾಂ ಯಜ್ಞಸೀತಾನಾಮಾಖ್ಯಾನಂ ಶೃಣು ಮೈಥಿಲ ।
ಸರ್ವಪಾಪಹರಂ ಪುಣ್ಯಂ ಕಾಮದಂ ಮಂಗಲಾಯನಂ ॥ ೧ ॥

ಉಶೀನರೋ ನಾಮ ದೇಶೋ ದಕ್ಷಿಣಸ್ಯಾಂ ದಿಶಿ ಸ್ಥಿತಃ ।
ಏಕದಾ ಯತ್ರ ಪರ್ಜನ್ಯೋ ನ ವವರ್ಷ ಸಮಾ ದಶ ॥ ೨ ॥

ಧನವಂತಸ್ತತ್ರ ಗೋಪಾ ಅನಾವೃಷ್ಟಿಭಯಾತುರಾಃ ।
ಸಕುಟುಂಬಾ ಗೋಧನೈಶ್ಚ ವ್ರಜಮಂಡಲಮಾಯಯುಃ ॥ ೩ ॥

ಎಂಟನೆಯ ಅಧ್ಯಾಯವು

೧. ನಾರದನು ಬಹುಲಾಶ್ವನನ್ನು ಕುರಿತಿಂತೆಂದನು :—ಎಲೈ ಮೈಥಿಲ, ಈಗ ಯಜ್ಞಸೀತರೆಂಬ ಗೋಪಿಯರ ಚರಿತ್ರೆಯನ್ನು ಹೇಳುವೆನು ಕೇಳು. ಇದನ್ನು ಕೇಳುವುದರಿಂದ ಸರ್ವಪಾಪಗಳೂ ನಾಶವಾಗುವುದಲ್ಲದೆ ಪುಣ್ಯವುಂಟಾಗುವುದು. ಇಷ್ಟಾರ್ಥವು ನೆರವೇರುವುದು. ಇದು ಮಂಗಳಪ್ರದವು.

೨. ದಕ್ಷಿಣದಿಕ್ಕಿನಲ್ಲಿ ಉಶೀನರವೆಂಬ ಪ್ರಸಿದ್ಧವಾದ ದೇಶವಿರುವುದು. ಅಲ್ಲೊಂದುಸಾರಿ ಹತ್ತು ವರ್ಷಗಳವರೆಗೂ ಮಳೆಯೇ ಬೀಳಲಿಲ್ಲ.

೩. ಬರವು ತಲೆದೋರಿತು. ಜನರೆಲ್ಲಾ ಹೆದರಿದರು. ಗೋಪರು ಭಯಾತುರರಾಗಿ ತಮ್ಮ ತಮ್ಮ ಕುಟುಂಬಗಳೊಡನೆಯೂ, ಗೋಧನಗಳೊಡನೆಯೂ ವ್ರಜಮಂಡಲಕ್ಕೆ ಬಂದು ಸೇರಿದರು.

ಪುಣ್ಯೇ ವೃಂದಾವನೇ ರಮ್ಯೇ ಕಾಲಿಂದೀನಿಕಟೇ ಶುಭೇ ।
ನಂದರಾಜಸಹಾಯೇನ ವಾಸಂ ತೇ ಚಕ್ರಿರೇ ನೃಪ ॥ ೪ ॥

ತೇಷಾಂ ಗೃಹೇಷು ಸಂಜಾತಾ ಯಜ್ಞಸೀತಾಶ್ಚ ಗೋಪಿಕಾಃ ।
ಶ್ರೀರಾಮಸ್ಯ ವರಾದ್ದಿವ್ಯಾ ದಿವ್ಯಯೌವನಭೂಷಿತಾಃ ॥ ೫ ॥

ಶ್ರೀಕೃಷ್ಣಂ ಸುಂದರಂ ದೃಷ್ಟ್ವಾ ಮೋಹಿತಾಸ್ತಾ ನೃಪೇಶ್ವರ ।
ವ್ರತಂ ಕೃಷ್ಣಪ್ರಸಾದಾರ್ಥಂ ಪ್ರಷ್ಟುಂ ರಾಧಾಂ ಸಮಾಯಯುಃ ॥ ೬ ॥

॥ ಗೋಪ್ಯ ಊಚುಃ ॥

ವೃಷಭಾನುಸುತೇ ದಿವ್ಯೇ ಹೇ ರಾಧೇ ಕಂಜಲೋಚನೇ ।
ಶ್ರೀಕೃಷ್ಣಸ್ಯ ಪ್ರಸಾದಾರ್ಥಂ ವದ ಕಿಂಚಿದ್ವ್ರತಂ ಶುಭಂ ॥ ೭ ॥

---

೪. ಅಲ್ಲಿಗೆ ಬಂದು ನಂದರಾಜನ ಸಹಾಯವನ್ನು ದೊರಕಿಸಿಕೊಂಡು ಕಾಲಿಂದೀನದಿಯ ದಡದಲ್ಲಿರುವ ಪುಣ್ಯತಮವಾದ ವೃಂದಾವನದಲ್ಲಿ ವಾಸಿಸಲು ಪ್ರಾರಂಭಿಸಿದರು.

೫. ಅವರ ಮನೆಗಳಲ್ಲಿ ಯಜ್ಞಸೀತಗೋಪಿಯರು ಶ್ರೀರಾಮನ ವರದಿಂದ ಹುಟ್ಟಿದರು. ಕಾಲಕ್ರಮವಾಗಿ ಅವರು ಯುವತಿಯರಾದರು. ಮನೋಹರೆಯ ರಾಗಿದ್ದರು.

೬. ಅವರು ಸುಂದರನಾದ ಶ್ರೀಕೃಷ್ಣನನ್ನು ನೋಡಿ ಅವನಲ್ಲಿ ಮೋಹಿತ ರಾದರು. ಅವನ ಅನುಗ್ರಹವನ್ನು ಸಂಪಾದಿಸಲು ಯಾವ ವ್ರತವನ್ನು ಮಾಡಬೇಕೆಂದು ಕೇಳಲು ರಾಧೆಯ ಹತ್ತಿರಕ್ಕೆ ಬಂದರು.

೭. ರಾಧೆಯನ್ನು ಕುರಿತಿಂತೆಂದರು :–ಎಲೌ ಕಂಜಲೋಚನೆಯಾದ ರಾಧೆಯೇ, ಶ್ರೀಕೃಷ್ಣನ ಅನುಗ್ರಹವನ್ನು ಪಡೆಯಲು ಯಾವುದಾದರೂ ಶುಭಕರವಾದ ಒಂದು ವ್ರತವನ್ನು ಹೇಳು.

ತವ ವಶ್ಯೋ ನಂದಸೂನುರ್ದೇವೈರಪಿ ಸುದುರ್ಗಮಃ ।
ತ್ವಂ ಜಗನ್ಮೋಹಿನೀ ರಾಧೇ ಸರ್ವಶಾಸ್ತ್ರಾರ್ಥಪಾರಗಾ ॥ ೮ ॥

॥ ಶ್ರೀ ರಾಧೋವಾಚ ॥

ಶ್ರೀಕೃಷ್ಣಸ್ಯ ಪ್ರಸಾದಾರ್ಥಂ ಕುರುತೈಕಾದಶೀವ್ರತಂ ।
ತೇನ ವಶ್ಯೋ ಹರಿಸ್ಸಾಕ್ಷಾದ್ಭವಿಷ್ಯತಿ ನ ಸಂಶಯಃ ॥ ೯ ॥

॥ ಗೋಪ್ಯ ಊಚುಃ ॥

ಸಂವತ್ಸರಸ್ಯ ದ್ವಾದಶ್ಯಾ ನಾಮಾನಿ ವದ ರಾಧಿಕೇ ।
ಮಾಸೇ ಮಾಸೇ ವ್ರತಂ ತಸ್ಯಾಃ ಕರ್ತವ್ಯಂ ಕೇನ ಭಾವತಃ ॥ ೧೦ ॥

॥ ಶ್ರೀ ರಾಧೋವಾಚ ॥

ಮಾರ್ಗಶೀರ್ಷೇ ಕೃಷ್ಣಪಕ್ಷೇ ಉತ್ಪನ್ನಾ ವಿಷ್ಣುದೇಹತಃ ।
ಮುಖೇಽಸುರವಧಾರ್ಥಾಯ ತಿಥಿರೇಕಾದಶೀ ವರಾ ॥ ೧೧ ॥

---

೮. ದೇವತೆಗಳಿಗೂ ವಶನಾಗದಿರುವ ನಂದಕುಮಾರನು ನಿನಗೆ ವಶನಾಗಿರುವನು. ನೀನು ಜಗನ್ಮೋಹಿನಿಯಲ್ಲವೇ. ಆದುದರಿಂದ ಅವನೂ ನಿನ್ನ ಮೋಹಿತನಾಗಿರುವನು. ನೀನು ಸರ್ವಶಾಸ್ತ್ರಪ್ರವೀಣೆಯು ಎಂದರು.

೯. ಅದನ್ನು ಕೇಳಿ ರಾಧೆಯು :—ಶ್ರೀಕೃಷ್ಣನ ಅನುಗ್ರಹವನ್ನು ಸಂಪಾದಿಸಬೇಕಾದರೆ ಏಕಾದಶೀವ್ರತವನ್ನು ಮಾಡಿರಿ. ಅದರಿಂದ ಖಂಡಿತ ಹರಿಯು ನಿಮ್ಮ ವಶನಾಗುವನು.

೧೦. ಎಂದು ಹೇಳಲು ಪುನಃ ಗೋಪಿಯರು ಕೇಳಿದರು :—ಎಲೌ ರಾಧೇ, ಒಂದು ಸಂವತ್ಸರದಲ್ಲಿ ಬರುವ ದ್ವಾದಶಿಗಳ ಪ್ರತಿಯೊಂದರ ಹೆಸರನ್ನು ಹೇಳು. ಪ್ರತಿತಿಂಗಳಲ್ಲಿಯೂ ಅದರ ವ್ರತವನ್ನು ಮಾಡಬೇಕಲ್ಲವೇ? ಯಾವ ಭಾವನೆಯಿಂದ ವ್ರತವನ್ನು ಮಾಡಬೇಕು? ತಿಳಿಸು.

೧೧. ಎನ್ನಲು ರಾಧೆಯಿಂತೆಂದಳು :—ಈ ಮಂಗಳಕರಳಾದ ಏಕಾದಶಿಯು ಮಾರ್ಗಶೀರ್ಷಕೃಷ್ಣಪಕ್ಷದಲ್ಲಿ ವಿಷ್ಣುವಿನ ಮುಖದಿಂದ ರಾಕ್ಷಸರನ್ನು ನಾಶಮಾಡಲು ಹುಟ್ಟಿದಳು.

ಮಾಸೇ ಮಾಸೇ ಪೃಥಗ್ಭೂತಾಸೌ ಚ ಸರ್ವವ್ರತೋತ್ತಮಾ ।
ತಸ್ಯಾಃ ಷಡ್ವಿಂಶತಿಂ ನಾಮ್ನಾಂ ವಕ್ಷ್ಯಾಮಿ ಹಿತಕಾಮ್ಯಯಾ ॥ ೧೨ ॥

ಉತ್ಪತ್ತಿಶ್ಚ ತಥಾ ಮೋಕ್ಷಾ ಸಫಲಾ ಚ ತತಃ ಪರಂ ।
ಪುತ್ರದಾ ಷಟ್ತಿಲಾ ಚೈವ ಜಯಾ ಚ ವಿಜಯಾ ತಥಾ ॥ ೧೩ ॥

ಆಮಲಕೀ ತತಃ ಪಶ್ಚಾನ್ನಾಮ್ನೈವ ಪಾಪಮೋಚಿನೀ ।
ಕಾಮದಾ ಚ ತತಃ ಪಶ್ಚಾತ್ಕಥಿತಾ ವೈ ವರೂಥಿನೀ ॥ ೧೪ ॥

ಮೋಹಿನೀ ಚಾಪರಾ ಪ್ರೋಕ್ತಾ ನಿರ್ಜಲಾ ಕಥಿತಾ ತತಃ ।
ಯೋಗಿನೀ ದೇವಶಯನೀ ಕಾಮಿನೀ ಚ ತತಃ ಪರಂ ॥ ೧೫ ॥

ಪವಿತ್ರಾ ಚಾಪ್ಯಜಾ ಪದ್ಮಾ ಇಂದಿರಾ ಚ ತತಃ ಪರಂ ।
ಪಾಶಾಂಕುಶಾ ರಮಾ ಚೈವ ತತಃ ಪಶ್ಚಾತ್ಪ್ರಬೋಧಿನೀ ॥ ೧೬ ॥

ಸರ್ವಸಂಪತ್ಪ್ರದಾ ಚೈವ ದ್ವೇ ಪ್ರೋಕ್ತೇ ಮಲಮಾಸಜೇ ।
ಏವಂ ಷಡ್ವಿಂಶತಿಂ ನಾಮ್ನಾಮೇಕಾದಶ್ಯಾಃ ಪಠೇಚ್ಚ ಯಃ ॥ ೧೭ ॥

---

೧೨. ಸರ್ವವ್ರತಗಳಿಗಿಂತಲೂ ಉತ್ತಮವಾದ ಈ ಏಕಾದಶೀವ್ರತವು ಪ್ರತಿ ತಿಂಗಳಲ್ಲಿಯೂ ಬೇರೆ ಬೇರೆ ಹೆಸರುಗಳಿಂದ ವ್ಯವಹರಿಸಲ್ಪಡುತ್ತಿರುವುದು. ಅದಕ್ಕೆ ಇಪ್ಪತ್ತಾರು ಹೆಸರುಗಳಿರುವುವು. ನಿನ್ನ ಹಿತದೃಷ್ಟಿಯಿಂದ ಅದನ್ನು ನಿನಗೆ ತಿಳಿಸುವೆನು.

೧೩-೧೭. ಉತ್ಪತ್ತಿ, ಮೋಕ್ಷಾ, ಸಫಲಾ, ಪುತ್ರದಾ, ಷಟ್ತಿಲಾ, ಜಯಾ, ವಿಜಯಾ, ಆಮಲಕೀ, ಪಾಪಮೋಚಿನೀ, ಕಾಮದಾ, ವರೂಥಿನೀ ಮೋಹಿನೀ, ನಿರ್ಜಲಾ, ಯೋಗಿನೀ, ದೇವಶಯನೀ, ಕಾಮಿನೀ,ಪವಿತ್ರಾ, ಅಜಾ, ಪದ್ಮಾ, ಇಂದಿರಾ, ಪಾಶಾಂಕುಶಾ, ರಮಾ, ಪ್ರಬೋಧಿನೀ, ಸರ್ವಸಂಪತ್ಪ್ರದಾ, ಮಲಜಾ, ಮಾಸಜಾ, ಈ ಇಪ್ಪತ್ತಾರೂ ಏಕಾದಶಿಯ ಹೆಸರುಗಳು.

ಸಂವತ್ಸರದ್ವಾದಶೀನಾಂ ಫಲಮಾಪ್ನೋತಿ ಸೋಽಪಿ ಹಿ ।
ಏಕಾದಶ್ಯಾಶ್ಚ ನಿಯಮಂ ಶೃಣುತಾಥ ವ್ರಜಾಂಗನಾಃ ॥ ೧೮ ॥

ಭೂಮಿಶಾಯೀ ದಶಮ್ಯಾಂ ತು ಚೈಕಭುಕ್ತೋ ಜಿತೇಂದ್ರಿಯಃ ।
ಏಕವಾರಂ ಜಲಂ ಪೀತ್ವಾ ಧೌತವಸ್ತ್ರೋಽತಿನಿರ್ಮಲಃ ॥
ಬ್ರಾಹ್ಮೇ ಮುಹೂರ್ತ ಉತ್ಥಾಯ ಚೈಕಾದಶ್ಯಾಂ ಹರಿಂ ನತಃ ॥ ೧೯ ॥

ಅಧಮಂ ಕೂಪಿಕಾಸ್ನಾನಂ ವಾಪ್ಯಾಂ ಸ್ನಾನಂ ತು ಮಧ್ಯಮಂ ।
ತಡಾಗೇ ಚೋತ್ತಮಂ ಸ್ನಾನಂ ನದ್ಯಾಃ ಸ್ನಾನಂ ತತಃ ಪರಂ ॥ ೨೦ ॥

ಏವಂ ಸ್ನಾತ್ವಾ ನರವರಃ ಕ್ರೋಧಲೋಭವಿವರ್ಜಿತಃ ।
ನ ಲಿಪ್ಯೇತ್ತದ್ದಿನೇ ನೀಚಾಂಸ್ತಥಾ ಪಾಖಂಡಿನೋ ನರಾನ್ ॥ ೨೧ ॥

---

೧೮. ಯಾರು ಈ ಏಕಾದಶಿಯ ಹೆಸರುಗಳನ್ನು ಪಠಿಸುವರೋ ಅವರು ಸಂವತ್ಸರದಲ್ಲಿ ಬರುವ ಪ್ರತಿಯೊಂದು ದ್ವಾದಶಿಯ ಫಲವನ್ನೂ ಪಡೆಯುವರು. ಇನ್ನು ಏಕಾದಶಿಯ ವ್ರತನಿಯಮವನ್ನು ಹೇಳುವೆನು ಕೇಳಿರಿ.

೧೯. ಏಕಾದಶೀವ್ರತವನ್ನಾಚರಿಸುವವನು ದಶಮಿಯ ದಿವಸ ಒಪ್ಪತ್ತು ಊಟಮಾಡಬೇಕು. ಜಿತೇಂದ್ರಿಯನಾಗಿ ನೆಲದ ಮೇಲೆ ಮಲಗಬೇಕು. ಒಂದೇ ಸಾರಿ ನೀರನ್ನು ಕುಡಿಯಬೇಕು. ಬಿಳುಪಾದ ಬಟ್ಟೆಗಳನ್ನು ಹಾಕಿಕೊಂಡು ಶುಚಿಯಾಗಿರಬೇಕು. ಅನಂತರ ಏಕಾದಶೀ ದಿನ ಉಷಃಕಾಲದಲ್ಲಿಯೇ ಎದ್ದು ಹರಿಯನ್ನು ನಮಸ್ಕರಿಸಬೇಕು.

೨೦. ಅನಂತರ ಸ್ನಾನಮಾಡಬೇಕು. ಕೊಳದಲ್ಲಿ ಸ್ನಾನಮಾಡುವುದು ಅಧಮ ಪಕ್ಷವು. ಭಾವಿಯಲ್ಲಿ ಸ್ನಾನಮಾಡುವುದು ಮಧ್ಯಮವು. ಕೆರೆಯಲ್ಲಿ ಸ್ನಾನಮಾಡುವುದು ಉತ್ತಮವಾದುದು. ನದಿಯಲ್ಲಿ ಸ್ನಾನಮಾಡುವುದು ಅತ್ಯುತ್ತಮವಾದುದು.

೨೧. ಈ ರೀತಿ ಸ್ನಾನಮಾಡಿದ ಮೇಲೆ ಕ್ರೋಧವನ್ನು ಬಿಡಬೇಕು. ಆಸೆಯನ್ನು ತ್ಯಜಿಸಬೇಕು. ಅಲ್ಲದೆ ನೀಚರನ್ನೂ, ನಾಸ್ತಿಕರನ್ನೂ ಮುಟ್ಟಬಾರದು.

ಮಿಥ್ಯಾವಾದರತಾಂಶ್ಚೈವ ತಥಾ ಬ್ರಾಹ್ಮಣನಿಂದಕಾನ್ ।
ಅನ್ಯಾಂಶ್ಚೈವ ದುರಾಚಾರಾನ್ನಗಮ್ಯಾಗಮನೇ ರತಾನ್ ॥ ೨೨ ॥

ಪರದ್ರವ್ಯಾಪಹಾರಾಂಶ್ಚ ಪರದಾರಾಭಿಗಾಮಿನಃ ।
ದುರ್ವೃತ್ತಾನ್ಭಿನ್ನಮರ್ಯಾದಾನ್ನಾಲಪೇತ್ಸ ವ್ರತೀ ನರಃ ॥ ೨೩ ॥

ಕೇಶವಂ ಪೂಜಯಿತ್ವಾ ತು ನೈವೇದ್ಯಂ ತತ್ರ ಕಾರಯೇತ್ ।
ದೀಪಂ ದದ್ಯಾದ್ಗೃಹೇ ತತ್ರ ಭಕ್ತಿಯುಕ್ತೇನ ಚೇತಸಾ ॥ ೨೪ ॥

ಕಥಾಂ ಶ್ರುತ್ವಾ ಬ್ರಾಹ್ಮಣೇಭ್ಯೋ ದದ್ಯಾತ್ಸ ದಕ್ಷಿಣಾಂ ಪುನಃ ।
ರಾತ್ರೌ ಜಾಗರಣಂ ಕುರ್ಯಾದ್ಗಾಯನ್ಕೃಷ್ಣಪದಾನಿ ಚ ॥ ೨೫ ॥

---

೨೨. ಸುಳ್ಳುಹೇಳುವದರಲ್ಲಿಯೇ ಆಸಕ್ತರಾಗಿರುವವರನ್ನೂ, ಬ್ರಾಹ್ಮಣ ದ್ವೇಷಿಗಳನ್ನೂ, ಇತರ ದುರಾಚಾರಿಗಳನ್ನೂ, ಅನ್ಯಸ್ತ್ರೀ ಸಮಾಗಮಮಾಡುವವರನ್ನೂ ಮುಟ್ಟಬಾರದು.

೨೩. ಪರದ್ರವ್ಯವನ್ನು ಅಪಹರಿಸುವವರನ್ನೂ, ಪರಸ್ತ್ರೀಯರಲ್ಲಿ ಆಸಕ್ತರಾದವರನ್ನೂ, ಕೆಟ್ಟನಡತೆಯುಳ್ಳವರನ್ನೂ ಗೌರವವಿಲ್ಲದೆ ವ್ಯವಹರಿಸುವವರನ್ನೂ ಮುಟ್ಟಬಾರದು. ಅವರ ಸಂಗಡ ಮಾತನಾಡಲೂ ಬಾರದು.

೨೪. ಹರಿಯನ್ನು ಪೂಜಿಸಿ ನೈವೇದ್ಯವನ್ನು ಮಾಡಬೇಕು. ಭಕ್ತಿಭಾವದಿಂದ ಮನೆಯಲ್ಲಿ ಒಂದು ಕಡೆ ದೀಪವನ್ನು ಇಡಬೇಕು.

೨೫. ಬ್ರಾಹ್ಮಣರಿಂದ ಏಕಾದಶಿಯ ಕಥೆಯನ್ನು ಕೇಳಿ ಅವರಿಗೆ ಉತ್ತಮವಾದ ದಕ್ಷಿಣೆಯನ್ನು ಕೊಡಬೇಕು. ರಾತ್ರೆಯಲ್ಲಾ ಶ್ರೀಕೃಷ್ಣನ ನಾಮಗಳನ್ನು ಗಾಯನ ಮಾಡುತ್ತಾ ಜಾಗರಣೆಮಾಡಬೇಕು.

ಕಾಂಸ್ಯಂ ಮಾಂಸಂ ಮಸೂರಾಂಶ್ಚ ಕೋದ್ರವಂ ಚಣಕಂ ತಥಾ ।
ಶಾಕಂ ಮಧು ಪರಾನ್ನಂ ಚ ಪುನರ್ಭೋಜನಮೈಥುನೇ ॥ ೨೬ ॥

ವಿಷ್ಣುವ್ರತೇ ಚ ಕರ್ತವ್ಯೇ ದಶಮ್ಯಾಂ ದಶ ವರ್ಜಯೇತ್ ।
ದ್ಯೂತಕ್ರೀಡಾಂ ಚ ನಿದ್ರಾಂ ಚ ತಾಂಬೂಲಂ ದಂತಧಾವನಂ ॥ ೨೭ ॥

ಪರಾಪವಾದಂ ಪೈಶುನ್ಯಂ ಸ್ತೇಯಂ ಹಿಂಸಾಂ ತಥಾ ರತಿಂ ।
ಕ್ರೋಧಾಢ್ಯಂ ಹ್ಯನೃತಂ ವಾಕ್ಯಮೇಕಾದಶ್ಯಾಂ ವಿವರ್ಜಯೇತ್ ॥ ೨೮ ॥

ಕಾಂಸ್ಯಂ ಮಾಂಸಂ ಚ ಕ್ಷೌದ್ರಂ ಚ ತೈಲಂ ವಿತಥಭೋಜನಂ ।
ಪುಷ್ಟಿಷಷ್ಟಿಮಸೂರಾಂಶ್ಚ ದ್ವಾದಶ್ಯಾಂ ಪರಿವರ್ಜಯೇತ್ ॥ ೨೯ ॥

ಅನೇನ ವಿಧಿನಾ ಕುರ್ಯಾದ್ದ್ವಾದಶೀವ್ರತಮುತ್ತಮಂ ॥ ೩೦ ॥

---

೨೬. ಏಕಾದಶೀವ್ರತಮಾಡುವವರು ದಶಮಿಯ ದಿನ ಕಂಚು, ಮಾಂಸ, ಕಡಲೆ, ಹಾರಕ, ಕಡಲೆ, ತರಕಾರಿ, ಸಿಹಿಯಾದ ತಿಂಡಿ, ಒಂದುಸಾರಿಯಲ್ಲದೆ ಮತ್ತೊಂದುಸಾರಿ ಊಟ, ಸ್ತ್ರೀಸಹವಾಸ ಇಷ್ಟನ್ನೂ ಬಿಡಬೇಕು.

೨೭-೨೮. ಏಕಾದಶಿಯ ದಿನ, ಪಗಡೆ ಮುಂತಾದುವುಗಳನ್ನಾಡುವುದು, ನಿದ್ರೆ ಮಾಡುವುದು, ತಾಂಬೂಲ, ದಂತಧಾವನ, ಇತರರನ್ನು ಅಪವಾದಮಾಡುವುದು, ಮೋಸ, ಕಳ್ಳತನ, ಸಂಭೋಗ, ಕ್ರೋಧದಿಂದ ಮಾತನಾಡುವುದು, ಸುಳ್ಳುಹೇಳುವುದು ಈ ಹತ್ತನ್ನೂ ಬಿಟ್ಟುಬಿಡಬೇಕು.

೨೯. ದ್ವಾದಶಿಯ ದಿನ, ಕಂಚು, ಮಾಂಸ, ಜೇನುತುಪ್ಪ, ಎಣ್ಣೆ, ಅಶುದ್ಧವಾದ ಊಟ, ಪುಷ್ಟಿಯನ್ನು ಕೊಡುವ ಆಹಾರ ಮತ್ತು ಕಡಲೆ ಇವಿಷ್ಟನ್ನೂ ಬಿಡಬೇಕು.

೩೦. ಈ ರೀತಿಯಾದ ನಿಯಮವನ್ನನುಸರಿಸಿ ಉತ್ತಮವಾದ ದ್ವಾದಶೀ ವ್ರತವನ್ನು ಮಾಡಬೇಕು.

|| ಗೋಪ್ಯ ಊಚುಃ ||

ಏಕಾದಶೀವ್ರತಸ್ಯಾಸ್ಯ ಕಾಲಂ ವದ ಮಹಾಮತೇ ।
ಕಿಂ ಫಲಂ ವದ ತಸ್ಯಾಸ್ತು ಮಾಹಾತ್ಮ್ಯಂ ವದ ತತ್ತ್ವತಃ || ೩೧ ||

|| ಶ್ರೀ ರಾಧೋವಾಚ ||

ದಶಮೀ ಪಂಚಪಂಚಾಶದ್ಘಟಿಕಾ ಚೇತ್ಪ್ರದೃಶ್ಯತೇ ।
ತರ್ಹಿ ಚೈಕಾದಶೀ ತ್ಯಾಜ್ಯಾ ದ್ವಾದಶೀಂ ಸಮುಪೋಷಯೇತ್ || ೩೨ ||

ದಶಮೀ ಪಲಮಾತ್ರೇಣ ತ್ಯಾಜ್ಯಾ ಚೈಕಾದಶೀತಿಥಿಃ ।
ಮದಿರಾಬಿಂದುಪಾತೇನ ತ್ಯಾಜ್ಯೋ ಗಂಗಾಘಟೋ ಯಥಾ || ೩೩ ||

ಏಕಾದಶೀ ಯದಾ ವೃದ್ಧಿಂ ದ್ವಾದಶೀ ಚ ಯದಾ ಗತಾ ।
ತದಾ ಪರಾಹ್ಯುಪೋಷ್ಯಾ ಸ್ಯಾತ್ಪೂರ್ವಾ ವೈ ದ್ವಾದಶೀವ್ರತೇ || ೩೪ ||

---

೩೧. ಎನ್ನಲು ಆಗ ಗೋಪಿಯರು ಪುನಃ ಕೇಳಿದರು. ಎಲೌ ಮಹಾ ಪ್ರಾಜ್ಞಳೇ, ಏಕಾದಶೀವ್ರತವನ್ನು ಮಾಡುವ ಸಮಯವಾವುದು? ಅದರಿಂದುಂಟಾಗುವ ಫಲವೇನು ? ಅದರ ಮಾಹಾತ್ಮ್ಯೆ ಏನು ? ಎಂಬುದನ್ನು ತಿಳಿಸು ಎನ್ನಲು,

೩೨-೩೩. ರಾಧೆ ಇಂತೆಂದಳು :—ಏಕಾದಶೀದಿನದಲ್ಲಿ ಐವತ್ತೈದು ಘಳಿಗೆ ದಶಮೀತಿಥಿ ಇದ್ದರೆ ಆ ದಿನ ಏಕಾದಶೀವ್ರತವನ್ನು ಮಾಡದೆ ಮರುದಿನ ದ್ವಾದಶೀ ಯಲ್ಲಿ ಉಪವಾಸ ಮಾಡಬೇಕು. ದಶಮೀತಿಥಿಯ ಸಂಬಂಧವು ಸ್ವಲ್ಪವಿದ್ದರೂ ಆ ದಿವಸ ಏಕಾದಶಿಯನ್ನಾಚರಿಸಕೂಡದು. ಗಂಗಾಜಲದಿಂದ ತುಂಬಿದ ಪಾತ್ರೆ ಯಲ್ಲಿ ಒಂದು ತೊಟ್ಟು ಹೆಂಡವು ಬಿದ್ದರೂ ಅದು ಅಯೋಗ್ಯವಾಗುವುದಲ್ಲವೇ ?

೩೪. ಒಂದು ದಿವಸದಲ್ಲಿ ಏಕಾದಶೀತಿಥಿಯೇ ಹೆಚ್ಚಾಗಿದ್ದು ಕೊನೆಯಲ್ಲಿ ದ್ವಾದಶೀ ತಿಥಿಯಿದ್ದರೆ ಆ ದಿವಸ ಉಪವಾಸಮಾಡಿ ಮಾರನೆಯ ದಿವಸ ದ್ವಾದಶೀ ವ್ರತವನ್ನು ಮಾಡಬೇಕು.

ಏಕಾದಶೀವ್ರತಸ್ಯಾಸ್ಯ ಫಲಂ ವಕ್ಷ್ಯೇ ವ್ರಜಾಂಗನಾಃ ।
ಯಸ್ಯ ಶ್ರವಣಮಾತ್ರೇಣ ವಾಜಪೇಯಫಲಂ ಭವೇತ್ ॥ ೩೫ ॥

ಅಷ್ಟಾಶೀತಿಸಹಸ್ರಾಣಿ ದ್ವಿಜಾನ್ಭೋಜಯತೇ ತು ಯಃ ।
ತತ್ಕೃತಂ ಫಲಮಾಪ್ನೋತಿ ದ್ವಾದಶೀವ್ರತಕೃನ್ನರಃ ॥ ೩೬ ॥

ಸಸಾಗರವನೋಪೇತಾಂ ಯೋ ದದಾತಿ ವಸುಂಧರಾಂ ।
ತತ್ಸಹಸ್ರಗುಣಂ ಪುಣ್ಯಮೇಕಾದಶ್ಯಾ ಮಹಾವ್ರತೇ ॥ ೩೭ ॥

ಯೇ ಸಂಸಾರಾರ್ಣವಮಗ್ನಾಃ ಪಾಪಪಂಕಸಮಾಕುಲೇ ।
ತೇಷಾಮುದ್ಧರಣಾರ್ಥಾಯ ದ್ವಾದಶೀವ್ರತಮುತ್ತಮಂ ॥ ೩೮ ॥

ರಾತ್ರೌ ಜಾಗರಣಂ ಕೃತ್ವೈಕಾದಶೀವ್ರತಕೃನ್ನರಃ ।
ನ ಪಶ್ಯತಿ ಯಮಂ ರೌದ್ರಂ ಯುಕ್ತಃ ಪಾಪಶತೈರಪಿ ॥ ೩೯ ॥

---

೩೫. ಎಲೌ ವ್ರಜಾಂಗನೆಯರೇ, ಏಕಾದಶೀವ್ರತದ ಫಲವನ್ನು ಹೇಳುವೆನು ಕೇಳಿರಿ. ಅದನ್ನು ಕೇಳುವುದರಿಂದ ವಾಜಪೇಯಯಾಗದ ಫಲವುಂಟಾಗುವುದು.

೩೬. ದ್ವಾದಶೀವ್ರತವನ್ನಾಚರಿಸಿದ ಮನುಷ್ಯನಿಗೆ ಎಂಭತ್ತೆಂಟು ಸಹಸ್ರ ಬ್ರಾಹ್ಮಣರಿಗೆ ಅನ್ನದಾನವನ್ನು ಮಾಡಿದರೆ ಯಾವ ಫಲವುಂಟಾಗುವುದೋ ಆ ಫಲವುಂಟಾಗುವುದು.

೩೭. ಏಕಾದಶೀ ಮಹಾವ್ರತವನ್ನು ಮಾಡಿದ ಮನುಜನಿಗೆ ಸಾಗರ ಅರಣ ಸಹಿತವಾದ ಭೂಮಂಡಲವನ್ನೆಲ್ಲಾ ದಾನಮಾಡಿದುದರಿಂದ ಉಂಟಾಗುವ ಪುಣ್ಯಕ್ಕಿಂತ ಸಾವಿರದಷ್ಟು ಜಾಸ್ತಿ ಪುಣ್ಯವುಂಟಾಗುವುದು.

೩೮. ಪಾಪವೆಂಬ ಪಂಕದಿಂದಾವೃತವಾದ ಸಂಸಾರವೆಂಬ ಸಾಗರದಲ್ಲಿ ಮುಳುಗಿ ದಡಕಾಣದೆ ಒದ್ದಾಡುತ್ತಿರುವ ಜನರನ್ನು ಉದ್ಧಾರಮಾಡಲು ಈ ದ್ವಾದಶೀ ಮಹಾವ್ರತವು ಏರ್ಪಟ್ಟಿರುವುದು.

೩೯. ಏಕಾದಶೀವ್ರತವನ್ನು ಮಾಡಿ ರಾತ್ರಿಯಲ್ಲಿ ಜಾಗರಣೆಮಾಡಿದವರು ನೂರಾರು ಪಾಪಗಳನ್ನು ಮಾಡಿದ್ದರೂ ಸಹ ಅವರಿಗೆ ಯಮನ ದರ್ಶನ ಸಹ, ಉಂಟಾಗುವುದಿಲ್ಲ.

ಪೂಜಯೇದ್ಯೋ ಹರಿಂ ಭಕ್ತ್ಯಾ ದ್ವಾದಶ್ಯಾಂ ತುಲಸೀದಲೈಃ ।
ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ ॥ ೪೦ ॥

ಅಶ್ವಮೇಧಸಹಸ್ರಾಣಿ ರಾಜಸೂಯಶತಾನಿ ಚ ।
ಏಕಾದಶ್ಯುಪವಾಸಸ್ಯ ಕಲಾಂ ನರ್ಹತಿ ಷೋಡಶೀಂ ॥ ೪೧ ॥

ದಶ ವೈ ಮಾತೃಕೇ ಪಕ್ಷೇ ತಥಾ ವೈ ದಶ ಪೈತೃಕೇ ।
ಪ್ರಿಯಾಯಾ ದಶಪಕ್ಷೇ ತು ಪುರುಷಾನುದ್ಧರೇನ್ನರಃ ॥ ೪೨ ॥

ಯಥಾ ಶುಕ್ಲಾಸ್ತಥಾ ಕೃಷ್ಣಾ ದ್ವಯೋಶ್ಚ ಸದೃಶಂ ಫಲಂ ।
ಧೇನುಃ ಶ್ವೇತಾ ಯಥಾ ಕೃಷ್ಣಾ ಉಭಯೋಃ ಸದೃಶಂ ಪಯಃ ॥ ೪೩ ॥

ಮೇರುಮಂದರಮಾತ್ರಾಣಿ ಪಾಪಾನಿ ಶತಜನ್ಮಸು ।
ಏಕಾ ಚೈಕಾದಶೀ ಗೋಪ್ಯೋ ದಹತೇ ತೂಲರಾಶಿವತ್ ॥ ೪೪ ॥

---

೪೦. ಯಾರು ದ್ವಾದಶಿಯ ದಿನ ತುಳಸೀದಳಗಳಿಂದ ಹರಿಯನ್ನು ಪೂಜಿಸುವರೋ ಅವರು ಪಾಪಮಾಡಿದರೂ ಸಹ ಕಮಲದ ಎಲೆಯ ಮೇಲಿನ ನೀರಿನಂತೆ ಪಾಪಕ್ಕೆ ಒಳಗಾಗಲಾರರು.

೪೧. ಸಹಸ್ರ ಅಶ್ವಮೇಧಗಳೂ, ನೂರು ರಾಜಸೂಯಗಳೂ ಸಹ ಏಕಾದಶೀ ಉಪವಾಸದ ಹದಿನಾರನೆಯ ಒಂದು ಭಾಗದಷ್ಟೂ ಸಮವಾಗಲಾರವು.

೪೨. ಏಕಾದಶೀ ದಿನ ಉಪವಾಸ ಮಾಡುವ ನರನು ತನ್ನ ಪಿತೃಗಳಲ್ಲಿ ಸಮವಾಗ ಎಂದರೆ ತಾಯಿ, ತಂದೆ, ಹೆಂಡತಿ, ಇವರ ಜನಕ ಪಿತೃಗಳಲ್ಲಿ ಹತ್ತು ತಲೆಯ ದಿನ ಪಿತೃಗಳನ್ನು ಉದ್ಧರಿಸುವನು.

೪೩. ಬಿಳುಪಾದ ಹಸುವಿನಿಂದಲೂ ಕಪ್ಪಾದ ಹಸುವಿನಿಂದಲೂ ಹೇಗೆ ಒಂದೇ ತರಹ ಹಾಲು ಬರುವುದೋ ಹಾಗೆ ಶುಕ್ಲಪಕ್ಷದ ಏಕಾದಶಿಯಿಂದಲೂ ಕೃಷ್ಣಪಕ್ಷದ ಏಕಾದಶಿಯಿಂದಲೂ ಒಂದೇ ಸಮನಾದ ಫಲವುಂಟಾಗುವುದು.

೪೪ ನೂರು ಜನ್ಮಗಳಿಂದಲೂ ಹೆಚ್ಚುತ್ತಿರುವ ಮೇರು-ಮಂದರದಷ್ಟು ಪಾಪಗಳನ್ನೂ ಒಂದೇ ಒಂದು ಏಕಾದಶಿಯು ಹತ್ತಿರಾಶಿಯಂತೆ ಸುಟ್ಟುಹಾಕಿ ಬಿಡುವುದು.

ವಿಧಿವದ್ವಿಧಿಹೀನಂ ವಾ ದ್ವಾದಶ್ಯಾಂ ದಾನಮೇವ ಚ ।
ಸ್ವಲ್ಪಂ ವಾ ಸುಕೃತಂ ಗೋಪ್ಯೋ ಮೇರುತುಲ್ಯಂ ಭವೇಚ್ಚ ತತ್ ॥ ೪೫ ॥

ಏಕಾದಶೀದಿನೇ ವಿಷ್ಣೋಃ ಶೃಣುತೇ ಯೋ ಹರೇಃ ಕಥಾಂ ।
ಸಪ್ತದ್ವೀಪವತೀ ದಾನೇ ಯತ್ಫಲಂ ಲಭತೇ ಚ ಸಃ ॥ ೪೬ ॥

ಶಂಖೋದ್ಧಾರೇ ನರಃ ಸ್ನಾತ್ವಾ ದೃಷ್ಟ್ವಾ ದೇವಂ ಗದಾಧರಂ ।
ಏಕಾದಶ್ಯುಪವಾಸಸ್ಯ ಕಲಾಂ ನಾರ್ಹತಿ ಷೋಡಶೀಂ ॥ ೪೭ ॥

ಪ್ರಭಾಸೇ ಚ ಕುರುಕ್ಷೇತ್ರೇ ಕೇದಾರೇ ಬದ್ರಿಕಾಶ್ರಮೇ ।
ಕಾಶ್ಯಾಂ ಚ ಶೂಕರಕ್ಷೇತ್ರೇ ಗ್ರಹಣೇ ಚಂದ್ರಸೂರ್ಯಯೋಃ ॥ ೪೮ ॥

ಸಂಕ್ರಾಂತೀನಾಂ ಚತುರ್ಲಕ್ಷಂ ದಾನಂ ದತ್ತಂ ಚ ಯನ್ನರೈಃ ।
ಏಕಾದಶ್ಯುಪವಾಸಸ್ಯ ಕಲಾಂ ನಾರ್ಹತಿ ಷೋಡಶೀಂ ॥ ೪೯ ॥

---

೪೫. ದ್ವಾದಶಿಯ ದಿನ ವಿಧಿಯನ್ನನುಸರಿಸಿಯೇ ಆಗಲೀ ಅಥವಾ ವಿಧಿಯನ್ನು ಬಿಟ್ಟೇ ಆಗಲೀ ದಾನಮಾಡಿದರೆ ಅದು ಸ್ವಲ್ಪವಾದರೂ ಸರಿಯೇ ಅದರಿಂದ ಮೇರುವಿನಷ್ಟು ಪುಣ್ಯವುಂಟಾಗುವುದು.

೪೬. ಏಕಾದಶಿಯ ದಿನ ಹರಿಯ ಕಥೆಯನ್ನು ಯಾರು ಕೇಳುವರೋ, ಅವರಿಗೆ, ಏಳು ದ್ವೀಪಗಳನ್ನು ದಾನಮಾಡಿದಷ್ಟು ಪುಣ್ಯವುಂಟಾಗುವುದು.

೪೭. ಶಂಖೋದ್ಧಾರ ತೀರ್ಥದಲ್ಲಿ ಸ್ನಾನಮಾಡಿ, ಗದಾಧರನ ದರ್ಶನವನ್ನು ಮಾಡುವುದು, ಏಕಾದಶೀ ಉಪವಾಸದ ಹದಿನಾರನೆಯ ಒಂದು ಭಾಗದಷ್ಟೂ ಬರಲಾರದು.

೪೮. ಪ್ರಭಾಸ, ಕುರುಕ್ಷೇತ್ರ, ಕೇದಾರ, ಬದರಿಕಾಶ್ರಮ, ಕಾಶಿ, ಶೂಕರಕ್ಷೇತ್ರ ಇವುಗಳಲ್ಲಿ ಚಂದ್ರಸೂರ್ಯಗ್ರಹಣ ಕಾಲದಲ್ಲಿ ಸ್ನಾನಮಾಡಿದರೆ ಎಷ್ಟು ಫಲ ಬರುವುದೋ ಅದು ಏಕಾದಶೀ ಉಪವಾಸದಿಂದ ಬರುವ ಫಲದ ಹದಿನಾರನೆಯ ಒಂದು ಭಾಗಕ್ಕೂ ಸಾಟಿಯಾಗಲಾರದು.

೪೯. ಸಂಕ್ರಾಂತಿಗಳಲ್ಲಿ ನಾಲ್ಕುಲಕ್ಷ ದಾನಮಾಡಿದರೆ ಬರುವ ಫಲವು, ಏಕಾದಶೀ ಉಪವಾಸದಿಂದ ಬರುವ ಫಲದ ಹದಿನಾರನೆಯ ಒಂದು ಭಾಗದಷ್ಟೂ ಇರಲಾರದು.

ನಾಗಾನಾಂ ಚ ಯಥಾ ಶೇಷಃ ಪಕ್ಷಿಣಾಂ ಗರುಡೋ ಯಥಾ ।
ದೇವಾನಾಂ ಚ ಯಥಾ ವಿಷ್ಣುರ್ವರ್ಣಾನಾಂ ಬ್ರಾಹ್ಮಣೋ ಯಥಾ ॥ ೫೦ ॥

ವೃಕ್ಷಾಣಾಂ ಚ ಯಥಾಶ್ವತ್ಥಃ ಪತ್ರಾಣಾಂ ತುಲಸೀ ಯಥಾ ।
ವ್ರತಾನಾಂ ಚ ತಥಾ ಗೋಪ್ಯೋ ವರಾ ಚೈಕಾದಶೀ ತಿಥಿಃ ॥ ೫೧ ॥

ದಶವರ್ಷಸಹಸ್ರಾಣಿ ತಪಸ್ತಪ್ಯತಿ ಯೋ ನರಃ ।
ತತ್ತುಲ್ಯಂ ಫಲಮಾಪ್ನೋತಿ ದ್ವಾದಶೀವ್ರತಕೃನ್ನರಃ ॥ ೫೨ ॥

ಇತ್ಥಮೇಕಾದಶೀನಾಂ ಚ ಫಲಮುಕ್ತಂ ವ್ರಜಾಂಗನಾಃ ।
ಕುರುತಾಶು ವ್ರತಂ ಯೂಯಂ ಕಿಂ ಭೂಯಃ ಶ್ರೋತುಮಿಚ್ಛಥ ॥ ೫೩ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಮಾಧುರ್ಯಖಂಡೇ ಏಕಾದಶೀ ಮಾಹಾತ್ಮ್ಯಂ ನಾಮಾಷ್ಟಮೋಽಧ್ಯಾಯಃ

೫೦-೫೧. ಸರ್ಪಗಳಲ್ಲಿ ಶೇಷನು ಹೇಗೆ ಶ್ರೇಷ್ಠನೋ, ಪಕ್ಷಿಗಳಲ್ಲಿ ಗರುಡನೂ ದೇವತೆಗಳಲ್ಲಿ ವಿಷ್ಣುವೂ, ಜಾತಿಗಳಲ್ಲಿ ಬ್ರಾಹ್ಮಣನೂ, ವೃಕ್ಷಗಳಲ್ಲಿ ಅಶ್ವತ್ಥವೂ, ಪತ್ರಗಳಲ್ಲಿ ತುಲಸಿಯೂ ಹೇಗೆ ಶ್ರೇಷ್ಠವೋ ಹಾಗೆ ವ್ರತಗಳಲ್ಲಿ ಈ ಏಕಾದಶೀ ವ್ರತವು ಶ್ರೇಷ್ಠವಾದುದು.

೫೨. ಹತ್ತು ಸಾವಿರ ವರ್ಷಗಳವರೆಗೆ ತಪಸ್ಸು ಮಾಡಿದರೆ ಯಾವ ಫಲ ಬರುವುದೋ ಅದೇ ಫಲವು ದ್ವಾದಶೀ ವ್ರತವನ್ನಾಚರಿಸುವುದರಿಂದ ಉಂಟಾಗುವುದು.

೫೩. ಎಲೌ ವ್ರಜಾಂಗನೆಯರೇ, ಈ ರೀತಿ ಏಕಾದಶೀ ವ್ರತದ ಫಲವನ್ನು ಹೇಳಿರುವೆನು. ನೀವೂ ಸಹ ಜಾಗ್ರತೆಯಾಗಿ ಈ ವ್ರತವನ್ನಾಚರಿಸಿ. ಮತ್ತೇನನ್ನು ಕೇಳಬೇಕೆಂದಿರುವಿರಿ ? ಎಂದಳು.

ಇಲ್ಲಿಗೆ ಶ್ರೀ ಗರ್ಗಸಂಹಿತೆಯ ಮಾಧುರ್ಯಖಂಡದಲ್ಲಿ ಏಕಾದಶೀಮಾಹಾತ್ಮೆ ಎಂಬ ಎಂಟನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಮಾಧುರ್ಯಖಂಡೇ

ನವಮೋಽಧ್ಯಾಯಃ

॥ ಗೋಪ್ಯ ಊಚುಃ ॥

ವೃಷಭಾನುಸುತೇ ಸುಭ್ರು ಸರ್ವಶಾಸ್ತ್ರಾರ್ಥಪಾರಗೇ।
ವಿಡಂಬಯಂತೀ ತ್ವಂ ವಾಚಾ ವಾಚಂ ವಾಚಸ್ಪತೇರ್ಮುನೇಃ ॥ ೧ ॥

ಏಕಾದಶೀವ್ರತಂ ರಾಧೇ ಕೇನ ಕೇನ ಪುರಾ ಕೃತಂ।
ತದ್ಬ್ರೂಹಿ ನೋ ವಿಶೇಷೇಣ ತ್ವಂ ಸಾಕ್ಷಾದ್ಜ್ಞಾನಶೇವಧಿಃ ॥ ೨ ॥

॥ ಶ್ರೀ ರಾಧೋವಾಚ ॥

ಆದೌ ದೇವೈಃ ಕೃತಂ ಗೋಪ್ಯೋ ವರಮೇಕಾದಶೀವ್ರತಂ।
ಭ್ರಷ್ಟರಾಜ್ಯಸ್ಯ ಲಾಭಾಯ ದೈತ್ಯಾನಾಂ ನಾಶನಾಯ ಚ ॥ ೩ ॥

ಒಂಭತ್ತನೆಯ ಅಧ್ಯಾಯವು

೧. ಗೋಪಿಯರು ಪುನಃ ರಾಧೆಯನ್ನು ಕುರಿತಿಂತೆಂದರು :—ಎಲೌ ವೃಷಭಾನುಪುತ್ರಿಯೇ, ನೀನು ಸರ್ವಶಾಸ್ತ್ರಜ್ಞಳು. ನಿನ್ನ ಮಾತಿನಿಂದ ಸರ್ವಜ್ಞನಾದ ಬೃಹಸ್ಪತಿಯ ಮಾತನ್ನೂ ಮೀರಿಸುತ್ತಿರುವೆ.

೨. ಈ ಏಕಾದಶೀವ್ರತವನ್ನು ಹಿಂದೆ ಯಾರು ಯಾರು ಮಾಡಿದರು ? ಎಂಬುದನ್ನು ವಿಸ್ತಾರವಾಗಿ ತಿಳಿಸು. ನೀನು ಜ್ಞಾನನಿಧಿಯು.

೩. ಎಂದು ಕೇಳಲು, ರಾಧೆಯು ಹೇಳಿದಳು :—ಎಲೌ ಗೋಪಿಯರೇ. ಹಿಂದೆ ಈ ವ್ರತವನ್ನು ದೇವತೆಗಳು ಕಳೆದುಹೋದ ತಮ್ಮ ರಾಜ್ಯವನ್ನು ಸಂಪಾದಿಸಲೂ ದೈತ್ಯರನ್ನು ನಾಶಮಾಡಲೂ ಸಹ ಆಚರಿಸಿದರು.

ವೈಶಂತೇನ ಪುರಾ ರಾಜ್ಞಾ ಕೃತಮೇಕಾದಶೀವ್ರತಂ ।
ಸ್ವಪಿತುಸ್ತಾರಣಾರ್ಥಾಯ ಯಮಲೋಕಗತಸ್ಯ ಚ ॥ ೪ ॥

ಅಕಸ್ಮಾಲ್ಲುಂಪಕೇನಾಪಿ ಜ್ಞಾತಿತ್ಯಕ್ತೇನ ಪಾಪಿನಾ ।
ಏಕಾದಶೀ ಕೃತಾ ಯೇನ ರಾಜ್ಯಂ ಲೇಭೇ ಸ ಲುಂಪಕಃ ॥ ೫ ॥

ಭದ್ರಾವತ್ಯಾಂ ಕೇತುಮತಾ ಕೃತಮೇಕಾದಶೀವ್ರತಂ ।
ಪುತ್ರಹೀನೇನ ಸದ್ವಾಕ್ಯಾತ್ಪುತ್ರಂ ಲೇಭೇ ಸ ಮಾನವಃ ॥ ೬ ॥

ಬ್ರಾಹ್ಮಣ್ಯೈರ್ದೇವಪತ್ನೀಭಿರ್ದತ್ತಮೇಕಾದಶೀವ್ರತಂ ।
ತೇನ ಲೇಭೇ ಸ್ವರ್ಗಸೌಖ್ಯಂ ಧನಧಾನ್ಯಂ ಚ ಮಾನುಷೀ ॥ ೭ ॥

ಪುಷ್ಪದಂತೀಮಾಲ್ಯವಂತೌ ಶಕ್ರಶಾಪಾತ್ಪಿಶಾಚತಾಂ ।
ಪ್ರಾಪ್ತೌ ಕೃತಂ ವ್ರತಂ ತಾಭ್ಯಾಂ ಪುನರ್ಗಂಧರ್ವತಾಂ ಗತೌ ॥ ೮ ॥

---

೪. ಹಿಂದೆ ವೈಶಂತನೆಂಬ ರಾಜನು ಈ ವ್ರತವನ್ನು ಯಮಲೋಕದಲ್ಲಿ ನರಳುತ್ತಿರುವ ತನ್ನ ತಂದೆಯನ್ನು ಉದ್ಧರಿಸಲು ಮಾಡಿದನು.

೫. ಪಾಪಿಯಾದ ಲುಂಪಕನೆಂಬುವನು ಜ್ಞಾತಿಗಳಿಂದ ಬಿಡಲ್ಪಟ್ಟಿದ್ದರೂ, ಪಾಪಿಯಾಗಿದ್ದರೂ ಏಕಾದಶೀವ್ರತವನ್ನು ಮಾಡಿದುದರಿಂದ ರಾಜ್ಯವನ್ನು ಪಡೆದನು.

೬. ಭದ್ರಾವತಿಯಲ್ಲಿ ಕೇತುಮಂತನೆಂಬುವನು ಪುತ್ರರಿಲ್ಲದೆ ಅವಕ್ಕೋಸ್ಕರ ಈ ಏಕಾದಶೀವ್ರತವನ್ನು ಮಾಡಿದನು. ಆಗ ಅವನಿಗೆ ಮಕ್ಕಳಾದರು.

೭. ದೇವಪತ್ನಿಯರು ಒಬ್ಬ ಬ್ರಾಹ್ಮಣಿಗೆ ಈ ಏಕಾದಶೀವ್ರತವನ್ನು ಉಪದೇಶಿಸಿದರು. ಅದರಿಂದ ಅವಳು ಸ್ವರ್ಗಸೌಖ್ಯವನ್ನೂ ಪಡೆದಳು. ಧನಧಾನ್ಯವನ್ನೂ ಪಡೆದಳು.

೮. ಪುಷ್ಪದಂತೀ, ಮಾಲ್ಯವಂತ ಎಂಬಿಬ್ಬ ಗಂಧರ್ವರು ಇಂದ್ರನ ಶಾಪದಿಂದ ಪಿಶಾಚಿಯ ಜನ್ಮವನ್ನು ಪಡೆದರು. ಅನಂತರ ಏಕಾದಶೀವ್ರತವನ್ನು ಮಾಡಿ ಪುನಃ ಗಂಧರ್ವರಾದರು.

ಪುರಾ ಶ್ರೀರಾಮಚಂದ್ರೇಣ ಕೃತಮೇಕಾದಶೀವ್ರತಂ ।
ಸಮುದ್ರೇ ಸೇತುಬಂಧಾರ್ಥಂ ರಾವಣಸ್ಯ ವಧಾಯ ಚ ॥ ೯ ॥

ಲಯಾಂತೇ ಚ ಸಮುತ್ಪನ್ನಾ ಧಾತ್ರೃವೃಕ್ಷತಲೇ ಸುರಾಃ ।
ಏಕಾದಶೀವ್ರತಂ ಚಕ್ರುಃ ಸರ್ವಕಲ್ಯಾಣಹೇತವೇ ॥ ೧೦ ॥

ವ್ರತಂ ಚಕಾರ ಮೇಧಾವೀ ದ್ವಾದಶ್ಯಾಃ ಪಿತೃವಾಕ್ಯತಃ ।
ಅಪ್ಸರಃ ಸ್ಪರ್ಶದೋಷೇಣ ಭುಕ್ತೋಽಭೂನ್ನಿರ್ಮಲದ್ಯುತಿಃ ॥ ೧೧ ॥

ಗಂಧರ್ವೋ ಲಲಿತಃ ಪಾತ್ನ್ಯಾಗತಃ ಶಾಪಾತ್ಸರಕ್ಷಸಾಂ ।
ಏಕಾದಶೀವ್ರತೇನಾಪಿ ಪುನರ್ಗಂಧರ್ವತಾಂ ಗತಃ ॥ ೧೨ ॥

ಏಕಾದಶೀವ್ರತೇನಾಪಿ ಮಾಂಧಾತಾ ಸ್ವರ್ಗತಿಂ ಗತಃ ।
ಸಗರಶ್ಚ ಕಕುತ್ಸ್ಥಶ್ಚ ಮುಚುಕುಂದೋ ಮಹಾಮುನಿಃ ॥ ೧೩ ॥

---

೯. ಪೂರ್ವದಲ್ಲಿ ಶ್ರೀರಾಮಚಂದ್ರನು ಸಮುದ್ರಕ್ಕೆ ಸೇತುವೆಯನ್ನು ಕಟ್ಟಲೂ, ರಾವಣನನ್ನು ವಧೆಮಾಡಲೂ ಈ ಏಕಾದಶೀವ್ರತವನ್ನು ಮಾಡಿದನು.

೧೦. ಪ್ರಳಯಕಾಲಾನಂತರದಲ್ಲಿ ಹುಟ್ಟಿದ ಒಂದು ನೆಲ್ಲಿಯ ಮರದ ಕೆಳಗೆ ದೇವತೆಗಳೆಲ್ಲರೂ ಸೇರಿ ಸರ್ವರಿಗೂ ಮಂಗಳವಾಗಲೆಂಬ ಉದ್ದೇಶದಿಂದ ಈ ಏಕಾದಶೀ ವ್ರತವನ್ನು ಆಚರಿಸಿದರು.

೧೧. ಮೇಧಾವೀ ಎಂಬುವನು ಅಪ್ಸರಸೆಯನ್ನು ಮುಟ್ಟಿದ ದೋಷಪ್ರಾಯಶ್ಚಿತ್ತಾರ್ಥವಾಗಿ ತಂದೆಯ ಮಾತಿನಂತೆ ದ್ವಾದಶೀವ್ರತವನ್ನು ಮಾಡಿದನು. ಆಗವನು ಪರಿಶುದ್ಧನಾದನು.

೧೨. ಲಲಿತನೆಂಬ ಗಂಧರ್ವನು ತನ್ನ ಪತ್ನಿಯ ಶಾಪದಿಂದ ರಾಕ್ಷಸನಾಗಿದ್ದನು. ಏಕಾದಶೀವ್ರತವನ್ನು ಮಾಡಲು ಪುನಃ ಅವನಿಗೆ ಗಂಧರ್ವಜನ್ಮವು ಬಂದಿತು.

೧೩. ಏಕಾದಶೀವ್ರತವನ್ನು ಮಾಡಿದುದರಿಂದ ಮಾಂಧಾತಾ, ಸಗರ, ಕಕುತ್ಸ್ಥ, ಮುಚುಕುಂದ ಮುಂತಾದವರಿಗೆಲ್ಲಾ ಸ್ವರ್ಗವುಂಟಾಯಿತು.

ದುಂಧುಮಾರಾದಯಶ್ಚಾನ್ಯೇ ರಾಜಾನೋ ಬಹವಸ್ತಥಾ ।
ಬ್ರಹ್ಮಕಪಾಲನಿರ್ಮುಕ್ತೋ ಬಭೂವ ಭಗವಾನ್ಭವಃ ॥ ೧೪ ॥

ಧೃಷ್ಟಬುದ್ಧಿರ್ವೈಶ್ಯಪುತ್ರೋ ಜ್ಞಾತಿತ್ಯಕ್ತೋ ಮಹಾಖಲಃ ।
ಏಕಾದಶೀವ್ರತಂ ಕೃತ್ವಾ ವೈಕುಂಠಂ ಸಂಜಗಾಮ ಹ ॥ ೧೫ ॥

ರಾಜ್ಞಾ ಋಕ್ಮಾಂಗದೇನಾಪಿ ಕೃತಮೇಕಾದಶೀವ್ರತಂ ।
ತೇನ ಭೂಮಂಡಲಂ ಭುಕ್ತ್ವಾ ವೈಕುಂಠಂ ಸಪುರೋ ಯಯೌ ॥ ೧೬ ॥

ಅಂಬರೀಷೇಣ ರಾಜ್ಞಾಪಿ ಕೃತಮೇಕಾದಶೀವ್ರತಂ ।
ನಾಸ್ಪೃಶ್ಯದ್ಬ್ರಹ್ಮಶಾಪೋಽಪಿ ಯೋ ನ ಪ್ರತಿಹತಃ ಕ್ವಚಿತ್ ॥ ೧೭ ॥

ಹೇಮಮಾಲೀ ನಾಮ ಯಕ್ಷಃ ಕುಷ್ಠೀ ಧನದಶಾಪತಃ ।
ಏಕಾದಶೀವ್ರತಂ ಕೃತ್ವಾ ಚಂದ್ರತುಲ್ಯೋ ಬಭೂವ ಹ ॥ ೧೮ ॥

---

೧೪. ದುಂಧುಮಾರನೇ ಮುಂತಾದ ಅನೇಕ ರಾಜರುಗಳು ಏಕಾದಶೀವ್ರತವನ್ನಾಚರಿಸಿ ಸ್ವರ್ಗವನ್ನು ಪಡೆದರು. ಅಷ್ಟೇಕೆ ? ಸಾಕ್ಷಾತ್ ಶಿವನೇ ಈ ವ್ರತವನ್ನಾಚರಿಸಿ ಬ್ರಹ್ಮಕಪಾಲದಿಂದ ವಿನಿರ್ಮುಕ್ತನಾದನು.

೧೫. ಮಹಾನೀಚನೂ, ಬಂಧುಗಳಿಂದ ಬಿಡಲ್ಪಟ್ಟವನೂ ಆದ ವೈಶ್ಯಪುತ್ರ ದುಷ್ಟಬುದ್ಧಿ ಎಂಬುವನು ಏಕಾದಶೀವ್ರತವನ್ನಾಚರಿಸಿ ವೈಕುಂಠವನ್ನು ಪಡೆದನು.

೧೬. ರುಕ್ಮಾಂಗದನೆಂಬ ರಾಜನು ಏಕಾದಶೀವ್ರತವನ್ನು ಆಚರಿಸಿದನು. ಅದರಿಂದ ಅವನು ಅಖಿಲಭೋಗಗಳನ್ನೂ ಅನುಭವಿಸಿ ತನ್ನ ಪುರಜನರೊಡನೆ ವೈಕುಂಠವನ್ನು ಪಡೆದನು.

೧೭. ಅಂಬರೀಷರಾಜನು ಏಕಾದಶೀವ್ರತವನ್ನು ಮಾಡಿದನು. ಅದರಿಂದ ಅವನಿಗೆ ಬ್ರಹ್ಮಶಾಪವೂ ತಗಲಲಿಲ್ಲ.

೧೮. ಹೇಮಮಾಲಿ ಎಂಬ ಯಕ್ಷನು ಕುಬೇರನ ಶಾಪದಿಂದ ಕುಷ್ಠರೋಗಿಯಾಗಿದ್ದನು. ಏಕಾದಶೀವ್ರತವನ್ನು ಮಾಡಿದುದರಿಂದ ಚಂದ್ರನಿಗೆ ಸಮಾನನಾದನು.

ಮಹೀಜಿತಾ ನೃಪೇಣಾಪಿ ಕೃತಮೇಕಾದಶೀವ್ರತಂ ।
ತೇನ ಪುತ್ರಂ ಶುಭಂ ಲಬ್ಧ್ವಾ ವೈಕುಂಠಂ ಸ ಜಗಾಮ ಹ ॥ ೧೯ ॥

ಹರಿಶ್ಚಂದ್ರೇಣ ರಾಜ್ಞಾಪಿ ಕೃತಮೇಕಾದಶೀವ್ರತಂ ।
ತೇನ ಲಬ್ಧ್ವಾ ಮಹೀರಾಜ್ಯಂ ವೈಕುಂಠಂ ಸಪುರೋ ಯಯೌ ॥ ೨೦ ॥

ಶ್ರೀಶೋಭನೋ ನಾಮ ಪುರಾ ಕೃತೇ ಯುಗೇ
ಜಾಮಾತೃಕೋಽಭೂನ್ಮುಚುಕುಂದಭೂಭೃತಃ ।
ಏಕಾದಶೀಂ ಯಃ ಸಮುಪೋಷ್ಯ ಭಾರತೇ
ಪ್ರಾಪ್ತಃ ಸ ದೇವೈಃ ಕಿಲ ಮಂದರಾಚಲೇ ॥ ೨೧ ॥

ಅದ್ಯಾಪಿ ರಾಜ್ಯಂ ಕುರುತೇ ಕುಬೇರವತ್
ರಾಜ್ಞಾ ಯುತೋಽಸೌ ಕಿಲ ಚಂದ್ರಭಾಗಯಾ ।
ಏಕಾದಶೀಂ ಸರ್ವತಿಥೀಶ್ವರೀಂ ಪರಾಂ
ಜಾನೀಥ ಗೋಪ್ಯೋ ನಹಿ ತತ್ಸಮಾನ್ಯಾ ॥ ೨೨ ॥

---

೧೯. ಮಹೀಜಿತನೆಂಬ ರಾಜನು ಏಕಾದಶೀವ್ರತವನ್ನು ಮಾಡಿದುದರಿಂದ ಅವನಿಗೆ ಒಳ್ಳೆಯ ಮಗನಾದನು. ಮತ್ತು ಅವನಿಗೆ ಸ್ವರ್ಗವು ಸಿಕ್ಕಿತು.

೨೦. ಹರಿಶ್ಚಂದ್ರನು ಏಕಾದಶೀವ್ರತವನ್ನಾಚರಿಸಿದುದರಿಂದ ಅವನಿಗೆ ರಾಜ್ಯವು ಸಿಕ್ಕಿತು. ಮತ್ತು ಅವನು ತನ್ನ ಪುರಜನರೊಡನೆ ವೈಕುಂಠಕ್ಕೆ ಹೋದನು.

೨೧. ಕೃತಯುಗದಲ್ಲಿ ಶ್ರೀ ಶೋಭನನೆಂಬ ರಾಜನಿದ್ದನು. ಅವನು ಮುಚುಕುಂದನೆಂಬ ರಾಜನ ಅಳಿಯನು. ಅವನು ಭಾರತದಲ್ಲಿ ಏಕಾದಶೀವ್ರತವನ್ನಾಚರಿಸಿ ಉಪೋಷ್ಯಮಾಡಿದುದರಿಂದ ಅವನಿಗೆ ಮಂದರಾಚಲವೆಂಬ ಸ್ಥಾನವು ರಾಜ್ಯವಾಳಲು ಪ್ರತ್ಯೇಕವಾಗಿ ದೇವತೆಗಳಿಂದ ದೊರೆಯಿತು.

೨೨. ಈಗಲೂ ಅವನು ಚಂದ್ರಭಾಗೆ ಎಂಬ ರಾಣಿಯಿಂದೊಡಗೂಡಿ ಕುಬೇರನಂತೆ ವೈಭವಶಾಲಿಯಾಗಿ ರಾಜ್ಯವಾಳುತ್ತಿರುವನು. ಎಲೌ ಗೋಪಿಯರೇ, ಈ ಏಕಾದಶಿಯು ಎಲ್ಲಾ ತಿಥಿಗಳಿಗಿಂತಲೂ ಮುಖ್ಯವೂ ಮತ್ತು ಶ್ರೇಷ್ಠವೂ ಆಗಿರುವುದು. ಇದಕ್ಕೆ ಸಮಾನವಾದುದಾವುದೂ ಇಲ್ಲ.

॥ ಶ್ರೀ ನಾರದ ಉವಾಚ ॥

ಇತಿ ರಾಧಾಮುಖಾಚ್ಛ್ರುತ್ವಾ ಯಜ್ಞಸೀತಾಶ್ಚ ಗೋಪಿಕಾಃ ।
ಏಕಾದಶೀವ್ರತಂ ಚಕ್ರುರ್ವಿಧಿವತ್ಕೃಷ್ಣಲಾಲಸಾಃ ॥ ೨೩ ॥

ಏಕಾದಶೀದಿನೇನಾಪಿ ಪ್ರಸನ್ನಃ ಶ್ರೀಹರಿಃ ಸ್ವಯಂ ।
ಮಾರ್ಗಶೀರ್ಷೇ ಪೂರ್ಣಿಮಾಯಾಂ ರಾಸಂ ತಾಭಿಶ್ಚಕಾರ ಹ ॥ ೨೪ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಮಾಧುರ್ಯಖಂಡೇ ಏಕಾದಶೀ ಮಾಹಾತ್ಮ್ಯಂ ನಾಮ ನವಮೋಽಧ್ಯಾಯಃ

---

೨೩. ಎಂದು ಹೇಳಲು, ಯಜ್ಞಸೀತಾಗೋಪಿಯರು ರಾಧೆಯ ಮಾತಿನಂತೆ ಕೃಷ್ಣನನ್ನು ಪಡೆಯಬೇಕೆಂಬ ಆಸೆಯಿಂದ ಏಕಾದಶೀವ್ರತವನ್ನು ಮಾಡಿದರು.

೨೪. ಏಕಾದಶೀ ದಿನವೇ ಶ್ರೀಹರಿಯು ಅವರಿಗೆ ಪ್ರಸನ್ನನಾದನು. ಮಾರ್ಗಶೀರ್ಷದ ಹುಣ್ಣಿಮೆಯದಿನ ಅವರೊಡನೆ ರಾಸಕ್ರೀಡೆಯನ್ನಾಡಿದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಮಾಧುರ್ಯಖಂಡದಲ್ಲಿ ಏಕಾದಶೀಮಹಾತ್ಮೆ ಎಂಬ ಒಂಭತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಮಾಧುರ್ಯಖಂಡೇ

ದಶಮೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಪುಲಿಂದಕಾನಾಂ ಗೋಪೀನಾಂ ಕರಿಷ್ಯೇ ವರ್ಣನಂ ಹ್ಯತಃ ।
ಸರ್ವಪಾಪಹರಂ ಪುಣ್ಯಮದ್ಭುತಂ ಭಕ್ತಿವರ್ಧನಂ ॥ ೧ ॥

ಪುಲಿಂದಾ ಉದ್ಭಟಾಃ ಕೇಚಿದ್ವಿಂಧ್ಯಾದ್ರಿವನವಾಸಿನಃ ।
ವಿಲುಂಪಂತೋ ರಾಜವಸು ದೀನಾನಾಂ ನ ಕದಾಚನ ॥ ೨ ॥

ಕುಪಿತಸ್ತೇಷು ಬಲವಾನ್ವಿಂಧ್ಯದೇಶಾಧಿಪೋ ಬಲೀ ।
ಅಕ್ಷೌಹಿಣೀಭ್ಯಾಂ ತಾನ್ಸರ್ವಾನ್ಪುಲಿಂದಾನ್ಸ ರುರೋಧ ಹ ॥ ೩ ॥

ಹತ್ತನೆಯ ಅಧ್ಯಾಯವು

೧. ನಾರದನು ಬಹುಲಾಶ್ವನನ್ನು ಕುರಿತಿಂತೆಂದನು :—ಎಲೈ ಮೈಥಿಲ, ಈಗ ನಾನು ಪುಲಿಂದಕಗೋಪಿಯರ ವಿಷಯವನ್ನು ಹೇಳುವೆನು. ಅದನ್ನು ಕೇಳುವುದರಿಂದ ಪಾಪಗಳು ನಾಶವಾಗಿ ಪುಣ್ಯವುಂಟಾಗುವುದು. ಪರಮಾತ್ಮನಲ್ಲಿ ಭಕ್ತಿಯು ಹೆಚ್ಚುವುದು.

೨. ವಿಂಧ್ಯಾಂದ್ರಿಯ ಕಾಡುಗಳಲ್ಲಿ ಪ್ರಚಂಡರಾದ ಕೆಲವು ಬೇಟೆಗಾರರು ವಾಸಮಾಡುತ್ತಿದ್ದರು. ಅವರು ರಾಜರ ಬೊಕ್ಕಸಗಳನ್ನೆಲ್ಲಾ ಲೂಟಿಮಾಡುತ್ತಿದ್ದರು. ಆದರೆ ದೀನರಾದವರ ತಂಟೆಗೆ ಹೋಗುತ್ತಿರಲಿಲ್ಲ.

೩. ಈ ಕೃತ್ಯಗಳಿಂದ ವಿಂಧ್ಯದೇಶದ ರಾಜನು ಅವರ ವಿಷಯದಲ್ಲಿ ಅತಿ ಕೋಪಗೊಂಡವನಾಗಿ ಒಂದು ಅಕ್ಷೌಹಿಣೀ ಸೈನ್ಯದೊಡನೆ ಹೊರಟು ಆ ಬೇಟೆಗಾರರನ್ನು ಎದುರಿಸಿದದು.

ಯುಯುಧುಸ್ತೇಽಪಿ ಖಡ್ಗೈಶ್ಚ ಕುಂತೈಃ ಶೂಲೈಃ ಪರಶ್ವಧೈಃ ।
ಶಕ್ತ್ಯೃಷ್ಟಿಭಿರ್ಭುಶುಂಡೀಭಿಶ್ಶರೈಃ ಕತಿ ದಿನಾನಿ ಚ ॥ ೪ ॥

ಪತ್ರಂ ತೇ ಪ್ರೇಷಯಾಮಾಸುಃ ಕಂಸಾಯ ಯದುಭೂಭೃತೇ ।
ಕಂಸಪ್ರಣೋದಿತೋ ದೈತ್ಯಃ ಪ್ರಲಂಬೋ ಬಲವಾಂಸ್ತಥಾ ॥ ೫ ॥

ಯೋಜನದ್ವಯಮುಚ್ಚಾಂಗಂ ಕಾಲಮೇಘಸಮದ್ಯುತಿಂ ।
ಕಿರೀಟಕುಂಡಲಧರಂ ಸರ್ಪಹಾರವಿಭೂಷಿತಂ ॥ ೬ ॥

ಪಾದಯೋಃ ಶೃಂಖಲಾಯುಕ್ತಂ ಗದಾಪಾಣಿಂ ಕೃತಾಂತವತ್ ।
ಲಲಜ್ಜಿಹ್ವಂ ಘೋರರೂಪಂ ಪಾತಯಂತಂ ಗಿರೀನ್ದ್ರುಮಾನ್ ॥ ೭ ॥

ಕಂಪಯಂತಂ ಭುವಂ ವೇಗಾತ್ಪ್ರಲಂಬಂ ಯುದ್ಧದುರ್ಮದಂ ।
ದೃಷ್ಟ್ವಾ ಪ್ರಧರ್ಷಿತೋ ರಾಜಾ ಸಸೈನ್ಯೋ ರಣಮಂಡಲಂ ॥ ೮ ॥

---

೪. ಅವರೂ ಸಹ ಹೆದರದೆ ಖಡ್ಗ, ಕುಂತ, ಶೂಲ, ಕೊಡಲಿ, ಶಕ್ತಿ, ಯಷ್ಟಿ ಭುಶುಂಡಿ, ಬಾಣ ಮುಂತಾದ ಆಯುಧಗಳಿಂದ ರಾಜನೊಡನೆ ಅನೇಕ ದಿನಗಳವರೆಗೆ ಯುದ್ಧ ಮಾಡಿದರು

೫. ಆಗ ಅವರು ತಮಗೆ ಸಹಾಯಮಾಡಲು ಕಂಸನಿಗೆ ಪತ್ರವನ್ನು ಬರೆದು ಕಳುಹಿಸಿದರು. ಕಂಸನು ಒಪ್ಪಿ ಪ್ರಲಂಬನೆಂಬ ದೈತ್ಯನನ್ನು ಕಳುಹಿಸಿಕೊಟ್ಟನು.

೬-೭. ಅವನು ಎರಡುಯೋಜನದಷ್ಟು ಎತ್ತರವಾಗಿದ್ದನು. ಪ್ರಳಯಕಾಲದ ಮೇಘದಂತೆ ಕಪ್ಪಾಗಿಯೂ, ಭಯಂಕರವಾಗಿಯೂ ಇದ್ದನು. ಕಿರೀಟ, ಕುಂಡಲ ಗಳನ್ನು ಧರಿಸಿ ಸರ್ಪಗಳನ್ನು ಹಾರರೂಪದಲ್ಲಿ ಹಾಕಿಕೊಂಡಿದ್ದನು. ಪಾದಗಳಲ್ಲಿ ಸರಪಳಿಗಳನ್ನು ಧರಿಸಿದ್ದನು. ಎದುರಿಗೆ ಸಿಕ್ಕಿದ ಪರ್ವತಗಳನ್ನೂ ಉರುಳಿಸಿಕೊಂಡು ಬರುತ್ತಿದ್ದನು. ಅವನ ನಡಿಗೆಗೆ ಭೂಮಿಯೇ ನಡುಗುತ್ತಿತ್ತು. ಯುದ್ಧದಿಂದ ಮದಿಸಿ ಭಯಂಕರನಾಗಿ ಬರುತ್ತಿದ್ದನು.

೮-೯. ಆಗ ರಾಜನು ಈ ಭಯಂಕರನಾದ ಪ್ರಲಂಬನನ್ನು ನೋಡಿ ಹೆದರಿ ತನ್ನ ಸೈನ್ಯದೊಡನೆ, ಸಿಂಹವನ್ನು ನೋಡಿ ಆನೆಯು ಓಡುವಂತೆ ಓಡಿಹೋದನು.

ತ್ಯಕ್ತ್ವಾ ದುದ್ರಾವ ಸಹಸಾ ಸಿಂಹಂ ವೀಕ್ಷ್ಯ ಗಜೋ ಯಥಾ ।
ಪ್ರಲಂಬಸ್ತಾನ್ಸಮಾನೀಯ ಮಧುರಾಮಾಯಯೌ ಪುನಃ　　　॥ ೯ ॥

ಪುಲಿಂದಾಸ್ತೇಪಿ ಕಂಸಸ್ಯ ಭೃತ್ಯತ್ವಂ ಸಮುಪಾಗತಾಃ ।
ಸಕುಟುಂಬಾಃ ಕಾಮಗಿರೌ ವಾಸಂ ಚಕ್ರುರ್ನೃಪೇಶ್ವರ　　　॥ ೧೦ ॥

ತೇಷಾಂ ಗೃಹೇಷು ಸಂಜಾತಾಃ ಶ್ರೀರಾಮಸ್ಯ ವರಾತ್ಪರಾತ್ ।
ಪುಲಿಂದ್ಯಃ ಕನ್ಯಕಾ ದಿವ್ಯರೂಪಿಣ್ಯಃ ಶ್ರೀರಿವಾರ್ಚಿತಾಃ　　　॥ ೧೧ ॥

ತದ್ದರ್ಶನಸ್ಮರರುಜಃ ಪುಲಿಂದ್ಯಃ ಪ್ರೇಮವಿಹ್ವಲಾಃ ।
ಶ್ರೀಮತ್ಪಾದರಜೋ ಧೃತ್ವಾ ಧ್ಯಾಯಂತ್ಯಸ್ತಮಹರ್ನಿಶಂ　　　॥ ೧೨ ॥

ತಾಶ್ಚಾಪಿ ರಾಸೇ ಸಂಪ್ರಾಪ್ತಾಃ ಶ್ರೀಕೃಷ್ಣಂ ಪರಮೇಶ್ವರಂ ।
ಪರಿಪೂರ್ಣತಮಂ ಸಾಕ್ಷಾದ್ಗೋಲೋಕಾಧಿಪತಿಂ ಪ್ರಭುಂ　　　॥ ೧೩ ॥

ಅನಂತರ ಪ್ರಲಂಬನು ಆ ಬೇಟೆಗಾರರನ್ನು ಕರೆದುಕೊಂಡು ಮಧುರೆಗೆ ಹಿಂತಿರುಗಿದನು.

೧೦. ಆ ಬೇಟೆಗಾರರು ಕಂಸನ ಭೃತ್ಯರಾದರು. ತಮ್ಮ ಸಂಸಾರಗಳೊಡನೆ ಕಾಮಗಿರಿ ಎಂಬ ಸ್ಥಳದಲ್ಲಿ ವಾಸಮಾಡಲು ಪ್ರಾರಂಭಿಸಿದರು.

೧೧. ಅವರ ಮನೆಗಳಲ್ಲಿ, ಶ್ರೀರಾಮನ ವರದಿಂದ ಪೂಜ್ಯಳಾದ ಲಕ್ಷ್ಮಿಯೋಪಾದಿಯಲ್ಲಿ ಪುಲಿಂದ ಕನ್ಯೆಯರು ಹುಟ್ಟಿದರು. ಅವರೆಲ್ಲರೂ ಸುಂದರಿಯರಾಗಿದ್ದರು.

೧೨. ಅವರೆಲ್ಲರೂ ಶ್ರೀಕೃಷ್ಣನನ್ನು ನೋಡಿದ ಕೂಡಲೇ ಕಾಮಜ್ವರದಿಂದ ಪೀಡಿತರಾಗಿ ಅವನನ್ನು ಪ್ರೇಮಿಸುತ್ತಾ ಅವನನ್ನು ಪಡೆಯುವುದಕ್ಕೆ ವಿಹ್ವಲರಾದರು. ಶ್ರೀಹರಿಯ ಪಾದಧೂಳನ್ನು ಧರಿಸಿ ಹಗಲು ರಾತ್ರಿಗಳು ಅವನನ್ನೇ ಧ್ಯಾನಿಸುತ್ತಿದ್ದರು.

೧೩. ಕೊನೆಗೆ ಪರಮೇಶ್ವರನೂ, ಪರಿಪೂರ್ಣತಮನೂ, ಗೋಲೋಕಾಧಿಪತಿಯೂ ಆದ ಆ ಹರಿಯನ್ನ ರಾಸಕ್ರೀಡೆಯಲ್ಲಿ ಪಡೆದು ಆನಂದಿಸಿದರು.

ಶ್ರೀಕೃಷ್ಣಚರಣಾಂಭೋಜರಜೋ ದೇವೈಃ ಸುದುರ್ಲಭಂ।
ಅಹೋ ಭಾಗ್ಯಂ ಪುಲಿಂದೀನಾಂ ತಾಸಾಂ ಪ್ರಾಪ್ತಂ ವಿಶೇಷತಃ ॥ ೧೪ ॥

ಯಃ ಪಾರಮೇಷ್ಟ್ಯಮಖಿಲಂ ನ ಮಹೇಂದ್ರಧಿಷ್ಣ್ಯಂ
ನೋ ಸಾರ್ವಭೌಮಮನಿಶಂ ನ ರಸಾಧಿಪತ್ಯಂ।
ನೋ ಯೋಗಸಿದ್ಧಿಮಭಿತೋ ನ ಪುನರ್ಭವಂ ವಾ
ವಾಂಛಂತ್ಯಲಂ ಪರಮಪಾದರಜಃ ಸುಭಕ್ತಃ ॥ ೧೫ ॥

ನಿಷ್ಕಿಂಚನಾಃ ಸ್ವಕೃತಕರ್ಮಫಲೈರ್ವಿರಾಗಾ
ಯತ್ತತ್ಪದಂ ಹರಿಜನಾ ಮುನಯೋ ಮಹಾಂತಃ।
ಭಕ್ತಾ ಜುಷಂತಿ ಹರಿಪಾದರಜಃ ಪ್ರಸಕ್ತಾ
ಅನ್ಯೇ ವದಂತಿ ನ ಸುಖಂ ಕಿಲ ನೈರಪೇಕ್ಷ್ಯಂ ॥ ೧೬ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಮಾಧುರ್ಯಖಂಡೇ
ಪುಲಿಂದಕೋಪಾಖ್ಯಾನಂ ನಾಮ ದಶಮೋಽಧ್ಯಾಯಃ

---

೧೪. ಶ್ರೀಕೃಷ್ಣನ ಪಾದಕಮಲದ ಧೂಳಿಯು ದೇವತೆಗಳಿಗೂ ಸಹ ದುರ್ಲಭವಾದುದು. ಅಂತಹ ಧೂಳಿಯನ್ನು ಪಡೆದ ಪುಲಿಂದಕನ್ಯೆಯರ ಭಾಗ್ಯವೇ ಭಾಗ್ಯವು.

೧೫. ಸುಭಕ್ತನು ಮಹೇಂದ್ರಸ್ಥಾನವನ್ನಪೇಕ್ಷಿಸುವುದಿಲ್ಲ. ಅವನಿಗೆ ಸಾರ್ವಭೌಮನಾಗಬೇಕೆಂಬ ಆಶೆಯೂ ಇಲ್ಲ. ರಾಸಾಧಿಪತ್ಯವು ಅವನಿಗೆ ಬೇಡ. ಅವನಿಗೆ ಯೋಗಸಿದ್ಧಿಯು ಇಷ್ಟವಿಲ್ಲ. ಸಂಸಾರದ ತೊಂದರೆ ಅವನಿಗಿಷ್ಟವಿಲ್ಲ. ಪುನರ್ಜನ್ಮವು ಅವನಿಗ ಬೇಡ. ಆದರೆ ಯಾವುದರಿಂದ ಬ್ರಹ್ಮಸ್ವರೂಪ ಉಂಟಾಗುವುದೋ ಅಂತಹ ಹರಿಯ ಪಾದರಜಸ್ಸನ್ನು ಮಾತ್ರ ಅವನಪೇಕ್ಷಿಸುವನು.

೧೬. ಸರ್ವಸ್ವವನ್ನೂ ತ್ಯಾಗಮಾಡಿರುವ, ತಾವು ಮಾಡಿದ ಕೆಲಸದಿಂದ ಫಲವನ್ನಪೇಕ್ಷಿಸದಿರುವ ಹರಿಭಕ್ತರಾದ ಮುನಿಜನರು ಆ ಹರಿಯ ಪಾದಧೂಳಿಯನ್ನಪೇಕ್ಷಿಸಿ ಅವನ ಪಾದಗಳನ್ನು ಹೊಂದುವರು. ಅವರೇ ಮಹಾತ್ಮರು. ಮತ್ತೆ ಕೆಲವರು ಸುಖವೂ ಇಲ್ಲವು, ಅಪೇಕ್ಷೆಯನ್ನುಂಟುಮಾಡುವುದೂ ಇಲ್ಲವೆಂದು ಹೇಳುವರು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಮಾಧುರ್ಯಖಂಡದಲ್ಲಿ ಪುಲಿಂದಕೋಪಾಖ್ಯಾನ
ವೆಂಬ ಹತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಮಾಧುರ್ಯಖಂಡೇ

ಏಕಾದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅನ್ಯಾಸಾಂ ಚೈವ ಗೋಪೀನಾಂ ವರ್ಣನಂ ಶೃಣು ಮೈಥಿಲ ।
ಸರ್ವಪಾಪಹರಂ ಪುಣ್ಯಂ ಹರಿಭಕ್ತಿವಿವರ್ಧನಂ ॥ ೧ ॥

ನೀತಿವಿನ್ಮಾರ್ಗದಃ ಶುಕ್ಲಃ ಪತಂಗೋ ದಿವ್ಯವಾಹನಃ ।
ಗೋಪೇಷ್ಟಶ್ಚ ವ್ರಜೇ ರಾಜನ್ಜಾತಾ ಷಡ್ವೃಷಭಾನವಃ ॥ ೨ ॥

ತೇಷಾಂ ಗೃಹೇಷು ಸಂಜಾತಾ ಲಕ್ಷ್ಮೀಪತಿವರಾತ್ಪ್ರಜಾಃ ।
ರಮಾ ವೈಕುಂಠವಾಸಿನ್ಯಃ ಶ್ರೀಸಖ್ಯೋಽಪಿ ಸಮುದ್ರಜಾಃ ॥ ೩ ॥

ಹನ್ನೊಂದನೆಯ ಅಧ್ಯಾಯವು

೧. ನಾರದನು ಹೇಳಿದನು:—ಎಲೈ ಬಹುಲಾಶ್ವನೇ, ಬೇರೆ ಗೋಪಿಕಾ ಸ್ತ್ರೀಯರ ಉತ್ಪತ್ತಿಯನ್ನು ಹೇಳುವೆನು ಕೇಳು. ಇದನ್ನು ಕೇಳುವುದರಿಂದ ಪಾಪಗಳೆಲ್ಲಾ ನಾಶವಾಗುವುವು. ಶ್ರೀಕೃಷ್ಣಪರಮಾತ್ಮನಲ್ಲಿ ಭಕ್ತಿಯು ಹೆಚ್ಚಾಗಿ ಪುಣ್ಯವು ದೊರಕುವುದು.

೨. ನೀತಿವಿತ್, ಮಾರ್ಗದ, ಶುಕ್ಲ, ಪತಂಗ, ದಿವ್ಯವಾಹನ, ಗೋಪೇಷ್ಟ ಎಂಬ ಆರುಜನ ವೃಷಭಾನುಗಳು ಗೋಕುಲದಲ್ಲಿ ಹುಟ್ಟಿದರು.

೩. ಅವರ ಮನೆಗಳಲ್ಲಿ ಲಕ್ಷ್ಮೀಪತಿಯಾದ ನಾರಾಯಣನ ವರದಿಂದ ಪ್ರಜೆಗಳು ಹುಟ್ಟಿದರು. ರಮೆಯು, ವೈಕುಂಠವಾಸಿಗಳು, ರಮೆಯ ಸಖಿಯರು ಮತ್ತು ಸಮುದ್ರದಲ್ಲಿ ಹುಟ್ಟಿದವರು ಇವರೆಲ್ಲರೂ ವೃಷಭಾನುಗಳ ಮನೆಯಲ್ಲಿ ಹುಟ್ಟಿದವರು.

ಊರ್ಧ್ವಂ ವೈಕುಂಠವಾಸಿನ್ಯಸ್ತದಾ ಜನಪದಾಶ್ರಿತಾಃ ।
ಶ್ರೀಲೋಕಾಚಲವಾಸಿನ್ಯಃ ಶ್ರೀಸಖ್ಯೋಽಪಿ ಸಮುದ್ರಜಾಃ ॥ ೪ ॥

ಚಿಂತಯಂತ್ಯಸ್ಸದಾ ಶ್ರೀಮದ್ಗೋವಿಂದಚರಣಾಂಬುಜಂ ।
ಶ್ರೀಕೃಷ್ಣಸ್ಯ ಪ್ರಸಾದಾರ್ಥಂ ತಾಭಿರ್ಮಾಘವ್ರತಂ ಕೃತಂ ॥ ೫ ॥

ಮಾಘಸ್ಯ ಶುಕ್ಲಪಂಚಮ್ಯಾಂ ವಸಂತಾದೌ ಹರಿಃ ಸ್ವಯಂ ।
ತಾಸಾಂ ಪ್ರೇಮಪರೀಕ್ಷಾರ್ಥಂ ಕೃಷ್ಣೋ ವೈ ತದ್ಗೃಹಾನ್ಗತಃ ॥ ೬ ॥

ವ್ಯಾಘ್ರಚರ್ಮಾಂಬರಂ ಬಿಭ್ರನ್ಜಟಾಮುಕುಟಮಂಡಿತಃ ।
ವಿಭೂತಿಧೂಸರೋ ವೇಣುಂ ವಾದಯನ್ಮೋಹಯನ್ಜಗತ್ ॥ ೭ ॥

ತಾಸಾಂ ವೀಥೀಷು ಸಂಪ್ರಾಪ್ತಂ ವೀಕ್ಷ್ಯ ಗೋಪ್ಯೋಽಪಿ ಸರ್ವತಃ ।
ಆಯಯೌ ದರ್ಶನಂ ಕರ್ತುಂ ಮೋಹಿತಾಃ ಪ್ರೇಮವಿಹ್ವಲಾಃ ॥ ೮ ॥

---

೪. ಮೊದಲು ವೈಕುಂಠದಲ್ಲಿ ವಾಸವಾಗಿದ್ದ ಅವರು ದೇಶಗಳಲ್ಲಿ ಅವತರಿಸಿ ವಾಸಮಾಡಿದರು. ಶ್ರೀಸಖಿಯರೂ ಸಮುಪ್ರದಲ್ಲಿ ಹುಟ್ಟಿದ ಸಖಿಯರೂ ಲೋಕ ಪರ್ವತಗಳಲ್ಲಿ ವಾಸಮಾಡಿದರು.

೫. ಅವರು ಯಾವಾಗಲೂ ಶ್ರೀಕೃಷ್ಣನ ಪಾದಾರವಿಂದಗಳನ್ನೇ ಧ್ಯಾನಿಸುತ್ತಿದ್ದರು. ಅವನ ಅನುಗ್ರಹಕ್ಕೋಸ್ಕರವಾಗಿ ಅವರು ಮಾಘವ್ರತವನ್ನು ಮಾಡಿದರು.

೬. ಅದರಿಂದ ಪ್ರಸನ್ನನಾದ ಶ್ರೀಹರಿಯು ಮಾಘಮಾಸದ ಶುಕ್ಲಪಕ್ಷದ ಪಂಚಮಿಯದಿನ ಅವರ ಪ್ರೇಮವನ್ನು ಪರೀಕ್ಷೆಮಾಡಲು ಅವರ ಮನೆಗಳಿಗೆ ತೆರಳಿದನು.

೭. ಹುಲಿಯ ಚರ್ಮವನ್ನು ಹೊದೆದನು. ತಲೆಯಲ್ಲಿ ಜಟೆಗಳು ಶೋಭಿಸುತ್ತಿದ್ದವು. ಮೈಗೆಲ್ಲಾ ವಿಭೂತಿಯನ್ನು ಬಳಿದುಕೊಂಡನು. ಇಂತಹ :ವೇಷವನ್ನು ಧರಿಸಿ ಕೊಳಲನ್ನು ಬಾರಿಸುತ್ತಾ ಜನಗಳನ್ನು ಮೋಹಗೊಳಿಸುತ್ತಾ ಅವರಲ್ಲಿಗೆ ಹೊರಟನು.

೮. ಗೋಪಿಯರು ತಮ್ಮ ಬೀದಿಯಲ್ಲಿ ಬರುತ್ತಿರುವ ಶ್ರೀಕೃಷ್ಣನನ್ನು ನೋಡಿ ವಿಹ್ವಲರಾಗಿ ಅವನ ದರ್ಶನಕ್ಕೋಸ್ಕರ ಬಂದರು.

ಅತೀವ ಸುಂದರಂ ದೃಷ್ಟ್ವಾ ಯೋಗಿನಂ ಗೋಪಕನ್ಯಕಾಃ ।
ಊಚುಃ ಪರಸ್ಪರಂ ಸರ್ವಾಃ ಪ್ರೇಮಾನಂದಸಮಾಕುಲಾಃ　　॥ ೯ ॥

॥ ಗೋಪ್ಯ ಊಚುಃ ॥

ಕೋಽಯಂ ಶಿಶುರ್ನಂದಸುತಾಕೃತಿರ್ವಾ
ಕಸ್ಯಾಪಿ ಪುತ್ರೋ ಧನಿನೋ ನೃಪಸ್ಯ ।
ನಾರೀಕುವಾಗ್ಬಾಣವಿಭಿನ್ನಮರ್ಮಾ
ಜಾತೋ ವಿರಕ್ತೋ ಗತಕೃತ್ಯಕರ್ಮಾ　　॥ ೧೦ ॥

ಅತೀವರಮ್ಯಃ ಸುಕುಮಾರದೇಹೋ
ಮನೋಜವದ್ವಿಶ್ವಮನೋಹರೋಽಯಂ ।
ಅಹೋ ಕಥಂ ಜೀವತಿ ಚಾಸ್ಯ ಮಾತಾ
ಪಿತಾ ಚ ಭಾರ್ಯಾ ಭಗಿನೀ ವಿನೈನಂ　　॥ ೧೧ ॥

---

೯. ಅತಿಸುಂದರನಾದ ಆ ಯೋಗಿಯನ್ನು ಆ ಗೋಪಿಕನ್ಯೆಯರೆಲ್ಲರೂ ಒಂದೇ ಸಮನೆ ನೋಡಿದರು. ಅನಂತರ ಪ್ರೇಮಾನಂದದಿಂದ ಕೂಡಿ ಮಾತನಾಡಿಕೊಂಡರು.

೧೦. ಈ ಹುಡುಗನು ಯಾರಿರಬಹುದು ? ಇವನಾಕೃತಿಯು ನಂದನ ಮಗನಾದ ಶ್ರೀಕೃಷ್ಣನಂತೆಯೇ ಇರುವುದು. ಅಥವಾ ಧನವಂತನಾದ ಯಾವುದೋ ರಾಜನ ಮಗನೇನಾದರೂ ಇರಬಹುದೇ ? ಇಷ್ಟು ಸುಂದರನಾದ ಇವನು ವಿರಕ್ತನಾಗಲು ಕಾರಣವೇನಿರಬಹುದು ? ಬಹುಶಃ ನಾರಿಯರ ಮಾತುಗಳೆಂಬ ಕೆಟ್ಟ ಬಾಣಗಳ ಹೊಡೆತದಿಂದ ಮರ್ಮಸ್ಥಾನವು ಪೆಟ್ಟಾಗಲು ಅದಕ್ಕೆ ಹೆದರಿ ಉಳಿದ ಕೆಲಸಗಳನ್ನು ದೂರಮಾಡಿ ವಿರಕ್ತನಾಗಿರಬಹುದು.

೧೧. ಇವನು ಅತಿರಮ್ಯನಾಗಿರುವನು. ಇವನ ದೇಹವು ಬಹಳ ಮೃದುವಾಗಿರುವುದು. ಮನ್ಮಥನಂತೆ ಲೋಕದ ಜನಗಳ ಮನಸ್ಸನ್ನೆಲ್ಲಾ ಅಪಹರಿಸುತ್ತಿರುವನು. ಇಂತಹ ಸುಂದರನಾದ ಇವನನ್ನು ಬಿಟ್ಟು ಇವನ ತಾಯಿ, ತಂದೆ, ಪತ್ನಿ, ಸಹೋದರಿಯರು ಹೇಗೆತಾನೆ ಜೀವಿಸಿರುವರು ?

ಏವಂ ತಾಃ ಸರ್ವತೋ ಯೂಥೀಭೂತ್ವಾ ಸರ್ವಾ ವ್ರಜಾಂಗನಾಃ ।
ಪಪ್ರಚ್ಛುಸ್ತಂ ಯೋಗಿವರಂ ವಿಸ್ಮಿತಾಃ ಪ್ರೇಮವಿಹ್ವಲಾಃ ॥ ೧೨ ॥

॥ ಗೋಪ್ಯ ಊಚುಃ ॥

ಕಸ್ತ್ವಂ ಯೋಗಿನ್ನಾಮ ಕಿಂ ತೇ ಕುತ್ರ ವಾಸಸ್ತು ತೇ ಮುನೇ ।
ಕಾ ವೃತ್ತಿಸ್ತವ ಕಾ ಸಿದ್ಧಿರ್ವದ ನೋ ವದತಾಂ ವರ ॥ ೧೩ ॥

॥ ಸಿದ್ಧ ಉವಾಚ ॥

ಯೋಗೇಶ್ವರೋಽಹಂ ಮೇ ವಾಸಃ ಸದಾ ಮಾನಸರೋವರೇ ।
ನಾಮ್ನಾ ಸ್ವಯಂಪ್ರಕಾಶೋಽಹಂ ನಿರನ್ನಃ ಸ್ವಬಲಾತ್ಸದಾ ॥ ೧೪ ॥

ಸ್ವಾರ್ಥೇ ಪರಮಹಂಸಾನಾಂ ಯಾಮ್ಯಹಂ ಹೇ ವ್ರಜಾಂಗನಾಃ ।
ಭೂತಂ ಭವ್ಯಂ ವರ್ತಮಾನಂ ವೇದ್ಮ್ಯಹಂ ದಿವ್ಯದರ್ಶನಃ ॥ ೧೫ ॥

---

೧೨. ಈ ರೀತಿಯಾಗಿ ಆ ವ್ರಜಾಂಗನೆಯರು ಅವನ ವಿಷಯವಾಗಿ ಮಾತನಾಡುತ್ತಾ ಅವನನ್ನು ಸುತ್ತುವರೆದು ಪ್ರೇಮವಿಹ್ವಲರಾಗಿ ಆಶ್ಚರ್ಯಪಡುತ್ತಾ ಆ ಯೋಗಿವರನನ್ನು ಕೇಳಿದರು.

೧೩. ಎಲೈ ವಾಗ್ಮಿಯಾದ ಯೋಗಿಯೇ, ನಿನ್ನ ಹೆಸರೇನು ? ನೀನೆಲ್ಲಿ ವಾಸ ಮಾಡಿಕೊಂಡಿವೆ ? ನಿನ್ನ ಕೆಲಸವೇನು ? ನೀನು ಯಾವ ಸಿದ್ಧಿಯನ್ನು ಪಡೆಯಬೇಕೆಂದಿರುವೆ ? ಇವೆಲ್ಲವನ್ನೂ ನಮಗೆ ತಿಳಿಸು.

೧೪. ಎಂದು ಹೇಳಲು, ಆ ಸಿದ್ಧನು ವ್ರಜಾಂಗನೆಯರನ್ನು ಕುರಿತು ಹೇಳಿದನು :—ನಾನೊಬ್ಬ ಯೋಗೀಶ್ವರನು. ನನ್ನ ಹೆಸರು ಸ್ವಯಂಪ್ರಕಾಶನೆಂದು. ನನ್ನ ವಾಸವು ಮಾನಸಸರೋವರದಲ್ಲಿ. ನನ್ನ ಶಕ್ತಿಯಿಂದ ಯಾವಾಗಲೂ ಅನ್ನವಿಲ್ಲದೇ ಜೀವಿಸುವೆನು.

೧೫. ಪರಮಹಂಸರಾದ ಯೋಗೀಶ್ವರರಿಗೆ ಇಷ್ಟವಾದ ಪ್ರಯೋಜನವನ್ನರಸಿ ಹೊರಟಿರುವೆನು. ಭೂತ, ಭವಿಷ್ಯತ್, ವರ್ತಮಾನ ಮುಂತಾದ ಜ್ಞಾನವನ್ನು ತಿಳಿದಿರುವೆನು. ದಿವ್ಯದರ್ಶನನಾಗಿರುವೆನು.

ಉಚ್ಚಾಟನಂ ಮಾರಣಂ ಚ ಮೋಹನಂ ಸ್ತಂಭನಂ ತಥಾ ।
ಜಾನಾಮಿ ಮಂತ್ರವಿದ್ಯಾಭಿರ್ವಶೀಕರಣಮೇವ ಚ　　　॥ ೧೬ ॥

॥ ಗೋಪ್ಯ ಊಚುಃ ॥

ಯದಿ ಜಾನಾಸಿ ಯೋಗಿಸ್ತ್ವಂ ವಾರ್ತಾಂ ಕಾಲತ್ರಯೋದ್ಭವಂ ।
ಕಿಂ ವರ್ತತೇ ನೋ ಮನಸಿ ವದ ತರ್ಹಿ ಮಹಾಮತೇ　　　॥ ೧೭ ॥

॥ ಸಿದ್ಧ ಉವಾಚ ॥

ಭವತೀನಾಂ ಚ ಕರ್ಣಾಂತೇ ಕಥನೀಯಮಿದಂ ವಚಃ ।
ಯುಷ್ಮದಾಜ್ಞಯಾ ವಾ ವಕ್ಷ್ಯೇ ಸರ್ವೇಷಾಂ ಶೃಣ್ವತಾಮಿಹ　　　॥ ೧೮ ॥

॥ ಗೋಪ್ಯ ಊಚುಃ ॥

ಸತ್ಯಂ ಯೋಗೇಶ್ವರೋಽಸಿ ತ್ವಂ ತ್ರಿಕಾಲಜ್ಞೋ ನ ಸಂಶಯಃ ।
ವಶೀಕರಣಮಂತ್ರೇಣ ಸದ್ಯಃ ಪಠನಮಾತ್ರತಃ　　　॥ ೧೯ ॥

ಯದಿ ಸೋಽತ್ರೈವ ಚಾಯಾತಿ ಚಿಂತಿತೋ ಯೋಽಸ್ತಿ ವೈ ಮುನೇ ।
ತಾ ದಮನ್ಯಾಮಹೇ ತ್ವಾಂ ವೈ ಮಂತ್ರಿಣಾಂ ಪ್ರವರಂ ಪರಂ　　　॥ ೨೦ ॥

---

೧೬. ಉಚ್ಚಾಟನ, ಮಾರಣ, ಮೋಹನ, ಸ್ತಂಭನ, ವಶೀಕರಣ ಮುಂತಾದ ವಿದ್ಯೆಗಳೆಲ್ಲಾ ನನಗೆ ಬರುವುದು.

೧೭. ಎನ್ನಲು, ಆಗ ಗೋಪಿಯರು ಎಲೈ ಯೋಗಿಯೇ, ನಿನಗೆ ತ್ರಿಕಾಲಗಳ ಜ್ಞಾನವೂ ಇದ್ದ ಪಕ್ಷದಲ್ಲಿ ನಮ್ಮ ಮನಸ್ಸಿನಲ್ಲೇನಿರುವುದೆಂಬುದನ್ನು ಹೇಳು ಎಂದರು.

೧೮. ಆಗ ಸಿದ್ಧನು ನೀವು ಕೇಳಿದುದು ರಹಸ್ಯವಾದುದು. ನಿಮ್ಮ ಕಿವಿಗಳಲ್ಲಿ ಹೇಳಬೇಕಾದುದು. ಆದರೂ ನಿಮ್ಮ ಅಪ್ಪಣೆಯಂತೆ ಎಲ್ಲರೂ ಕೇಳುವ ಹಾಗೆ ಹೇಳುವೆನು ಎಂದನು.

೧೯-೨೦. ಆಗ ಗೋಪಿಯರು ಎಲೈ ಯೋಗಿವರ್ಯನೇ, ನೀನು ಖಂಡಿತ ವಾಗಿಯೂ ತ್ರಿಕಾಲಜ್ಞಾನಿಯು. ನಿನ್ನ ಹತ್ತಿರ ವಶೀಕರಣಮಂತ್ರವಿರುವುದಲ್ಲವೆ ? ಅದನ್ನು ಜಪಿಸಿದ ತಕ್ಷಣ ಮನಸ್ಸಿನಲ್ಲಿ ಯಾರನ್ನು ಯೋಚಿಸುತ್ತಿರುವೆವೋ ಅವನು ಬಂದುಬಿಡಬೇಕು. ಹಾಗಾದರೆ ನೀನು ಮಂತ್ರಜ್ಞಾನಿಯು ಎಂದರು.

॥ ಸಿದ್ಧ ಉವಾಚ ॥

ದುರ್ಲಭೋ ದುರ್ಘಟೋ ಭಾವೋ ಯುಷ್ಮಾಭಿರ್ಗದಿತಃ ಸ್ತ್ರಿಯಃ ।
ತಥಾಪ್ಯಹಂ ಕರಿಷ್ಯಾಮಿ ವಾಕ್ಯಂ ನ ಚಲತೇ ಸತಾಂ ॥ ೨೧ ॥

ನಿಮೀಲಯತ ನೇತ್ರಾಣಿ ಮಾ ಶೋಚಂ ಕುರುತ ಸ್ತ್ರಿಯಃ ।
ಭವಿಷ್ಯತಿ ನ ಸಂದೇಹೋ ಯುಷ್ಮಾಕಂ ಕಾರ್ಯಮೇವ ಚ ॥ ೨೨ ॥

॥ ಶ್ರೀ ನಾರದ ಉವಾಚ ॥

ತಥೇತಿ ಮೀಲಿತಾಕ್ಷೀಷು ಗೋಪೀಷು ಭಗವಾನ್ಹರಿಃ ।
ವಿಹಾಯ ತದ್ಯೋಗಿರೂಪಂ ಬಭೌ ಶ್ರೀನಂದನಂದನಃ ॥ ೨೩ ॥

ನೇತ್ರಾಣ್ಯುನ್ಮೀಲ್ಯ ದದೃಶುಃ ಸಾನಂದಂ ನಂದನಂದನಂ ।
ವಿಸ್ಮಿತಾಸ್ತತ್ರ ಭಾವಜ್ಞಾ ಹರ್ಷಿತಾಃ ಮೋಹಮಾಗತಾಃ ॥ ೨೪ ॥

---

೨೧. ಅದನ್ನು ಕೇಳಿ ಸಿದ್ಧನು ಎಲೈ ಸ್ತ್ರೀಯರೇ, ನಿಮ್ಮ ಅಭಿಪ್ರಾಯವು ಬಹಳ ಗಂಭೀರವಾದುದು, ದುರ್ಲಭವಾದುದು. ಆದರೂ ನಾನು ನಿಮ್ಮ ಮಾತನ್ನು ನಡೆಸುವೆನು. ಸತ್ಪುರುಷರು ಆಡಿದ ಮಾತು ಎಂದಿಗೂ ಸುಳ್ಳಾಗುವುದಿಲ್ಲ.

೨೨. ನಿಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳಿರಿ. ವ್ಯಥೆಪಡಬೇಡಿರಿ. ನಿಮ್ಮ ಕಾರ್ಯವು ಖಂಡಿತವಾಗಿಯೂ ನೆರವೇರುವುದು. ಇದರಲ್ಲಿ ಸಂದೇಹವಿಲ್ಲ ಎಂದನು.

೨೩. ನಾರದನು ಹೇಳಿದನು :—ಎಲೈ ಬಹುಲಾಶ್ವನೇ, ಅವನ ಮಾತಿನಂತೆ ಗೋಪಿಯರೆಲ್ಲರೂ ತಮ್ಮ ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡರು. ಆಗ ಕೃಷ್ಣನು ಸಿದ್ಧ ರೂಪವನ್ನು ತೊರೆದು ನಂದನ ಮಗನ ವೇಷದಲ್ಲಿ ಮನೋಹರನಾಗಿ ನಿಂತನು.

೨೪. ಸ್ವಲ್ಪಹೊತ್ತಿನಲ್ಲಿಯೆ ಗೋಪಿಯರು ಕಣ್ಣುಗಳನ್ನು ಬಿಟ್ಟರು. ಎದುರಿಗೆ ನಿಂತಿರುವ ಮನಮೋಹಕನಾದ ನಂದಕುಮಾರನನ್ನು ನೋಡಿ ಆನಂದಪಟ್ಟರು. ಅವನ ಪ್ರಭಾವಕ್ಕೆ ಸಂತೋಷಗೊಂಡು ಅವನಲ್ಲಿ ಮೋಹಗೊಂಡರು.

ಮಾಘಮಾಸೇ ಮಹಾರಾಸೇ ಪುಣ್ಯೇ ವೃಂದಾವನೇ ವನೇ ।
ತಾಭಿಸ್ಸಾರ್ಧಂ ಹರೀ ರೇಮೇ ಸುರೀಭಿಸ್ಸುರರಾಡಿವ || ೨೫ ||

ಇತಿ ಶ್ರೀಮದ್ಗರ್ಗಸಂಹಿತಾಯಾಂ ಮಾಧುರ್ಯಖಂಡೇ
ಏಕಾದಶೋಽಧ್ಯಾಯಃ

---

೨೫. ಪುಣ್ಯತಮವಾದ ಅದೇ ಮಾಘಮಾಸದಲ್ಲಿ ವೃಂದಾವನವೆಂಬ ರಮ್ಯವಾದ ಉದ್ಯಾನದಲ್ಲಿ ಶ್ರೀಕೃಷ್ಣನು ಆ ಸ್ತ್ರೀಯರ ಮಧ್ಯದಲ್ಲಿ ಆಟವಾಡುತ್ತಾ ಇಂದ್ರನು ದೇವತಾಸ್ತ್ರೀಯರುಗಳೊಡನೆ ಕ್ರೀಡಿಸಿದಂತೆ ರಾಸಕ್ರೀಡೆಯಾಡಿದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಮಾಧುರ್ಯಖಂಡದಲ್ಲಿ
ಹನ್ನೊಂದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಮಾಧುರ್ಯಖಂಡೇ

ದ್ವಾದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಇದಂ ಮಯಾ ತೇ ಕಥಿತಂ ಗೋಪೀನಾಂ ಚರಿತಂ ಶುಭಂ ।
ಅನ್ಯಾಸಾಂ ಚೈವ ಗೋಪೀನಾಂ ವರ್ಣನಂ ಶೃಣು ಮೈಥಿಲ । ॥ ೧ ॥

ವೀತಿಹೋತ್ರಾಗ್ನಿಭುಕ್ಸಾಂಬಃ ಶ್ರೀಕರೋ ಗೋಪತಿಃ ಶ್ರುತಃ ।
ವ್ರಜೇಶಃ ಪಾವನಃ ಶಾಂತ ಉಪನಂದಾ ವ್ರಜೇಭವಾಃ ॥ ೨ ॥

ಧನವಂತೋ ರೂಪವಂತಃ ಪುತ್ರವಂತೋ ಬಹುಶ್ರುತಾಃ।
ಶೀಲಾದಿಗುಣಸಂಪನ್ನಾಃ ಸರ್ವೇ ದಾನಪರಾಯಣಾಃ ॥ ೩ ॥

ಹನ್ನೆರಡನೆಯ ಅಧ್ಯಾಯವು

೧. ನಾರದನು ಹೇಳಿದನು:—ಎಲೈ ಬಹುಲಾಶ್ವನೇ, ಗೋಪಿಕಾಸ್ತ್ರೀಯರ ಶುಭವಾದ ಚರಿತ್ರೆಯನ್ನು ಹೇಳಿರುವೆನು. ಇನ್ನೂ ಉಳಿದ ಗೋಪಿಯರ ಚರಿತ್ರೆಯನ್ನು ಹೇಳುವೆನು ಕೇಳು.

೨-೩. ವೀತಿಹೋತ್ರ, ಅಗ್ನಿಭುಕ್, ಸಾಂಬ, ಶ್ರೀಕರ, ಗೋಪತಿ, ವ್ರಜೇಶಃ ಪಾವನ, ಶಾಂತ, ಉಪನಂದ, ಎಂಬುವರು ಗೋಕುಲದಲ್ಲಿ ಹುಟ್ಟಿದರು. ಇವರೆಲ್ಲರೂ ಧನವಂತರಾಗಿಯೂ ರೂಪ, ವಿದ್ಯೆ, ಶೀಲ, ದಾನ ಮುಂತಾದ ಗುಣಗಳಿಂದ ಕೂಡಿದವರಾಗಿದ್ದರು.

ತೇಷಾಂ ಗೃಹೇಷು ಸಂಜಾತಾಃ ಕನ್ಯಕಾ ದೇವವಾಕ್ಯತಃ ।
ಕಾಶ್ಚಿದ್ದಿವ್ಯಾ ಅದಿವ್ಯಾಶ್ಚ ತಥಾ ತ್ರಿಗುಣವೃತ್ತಯಃ ॥ ೪ ॥

ಭೂಮಿಗೋಪ್ಯಶ್ಚ ಸಂಜಾತಾಃ ಪುಣ್ಯೈರ್ನಾನಾವಿಧೈಃ ಕೃತೈಃ ।
ತಾರಾಧಿಕಾ ಸಹಚರ್ಯಃ ಸಖ್ಯೋಽಭೂವನ್ವಿದೇಹರಾಟ್ ॥ ೫ ॥

ಏಕದಾ ಮಾನಿನೀಂ ರಾಧಾಂ ತಾಃ ಸರ್ವಾ ವ್ರಜಗೋಪಿಕಾಃ ।
ಊಚುರ್ವೀಕ್ಷ್ಯ ಹರಿಂ ಪ್ರಾಪ್ತಂ ಹೋಲಿಕಾಯಾ ಮಹೋತ್ಸವೇ ॥ ೬ ॥

॥ ಗೋಪ್ಯ ಊಚುಃ ॥

ರಂಭೋರು ಚಂದ್ರವದನೇ ಮಧುಮಾನಿನೀಶೇ
ರಾಧೇ ವಚಃ ಸುಲಲಿತಂ ಲಲನೇ ಶೃಣು ತ್ವಂ ।
ಶ್ರೀಹೋಲಿಕೋತ್ಸವವಿಹಾರಮಲಂ ವಿಧಾತು-
ಮಾಯಾತಿ ತೇ ಪುರವನೇ ವ್ರಜಭೂಷಣೋಽಯಂ ॥ ೭ ॥

---

೪. ಇವರುಗಳ ಮನೆಗಳಲ್ಲಿ ದೇವತೆಗಳ ಮಾತಿನಂತೆ ಅನೇಕ ಕನ್ಯೆಯರು ಹುಟ್ಟಿದರು. ಅವರಲ್ಲಿ ಕೆಲವರು ದೇವಾಂಶಸಂಭೂತರು, ಕೆಲವರು ದೇವಾಂಶರಲ್ಲದವರು, ಇನ್ನೂ ಕೆಲವರು ಸತ್ವರಜಸ್ತಮೋಗುಣಗಳಿಂದ ಕೂಡಿದವರು.

೫. ಇವರೆಲ್ಲರೂ ನಾನಾವಿಧವಾದ ಪುಣ್ಯಗಳಿಗನುಸಾರವಾಗಿ ಭೂಮಿಯಲ್ಲಿ ಗೋಪಿಯರಾಗಿ ಹುಟ್ಟಿದರು. ಇವರು ಇಪ್ಪತ್ತೇಳುಜನರಿಗಿಂತ ಜಾಸ್ತಿಯಾಗಿದ್ದರು. ಇವರೆಲ್ಲರೂ ರಾಧೆಗೆ ಸಖಿಯರಾದರು.

೬. ಈ ಸಖಿಯರು ಒಂದು ದಿನ ಹೋಳೀಹಬ್ಬದ ದಿವಸ ಕೋಪಿಸಿಕೊಂಡಿರುವ ರಾಧೆಯ ಸಮೀಪಕ್ಕೆ ಬಂದು ಆಗತಾನೇ ಬಂದಿರುವ ಶ್ರೀಕೃಷ್ಣನನ್ನು ನೋಡಿ ರಾಧೆಯನ್ನು ಕುರಿತು ಹೇಳಿದರು.

೭. ಎಲೌ ರಂಭೋರು ರಾಧೇ, ಚಂದ್ರವದನೇ, ನಮ್ಮ ಸುಲಲಿತವಾದ ಮಾತನ್ನು ಕೇಳು. ನೀನು ಮಧುಮಾನಿನಿಯರಿಗೆ ಒಡೆಯಳು. ಇಂದು ಹೋಲಿಕೋತ್ಸವವು. ಊರಲುದ್ಯಾನದಲ್ಲಿ ಹೋಳಿಯನ್ನಾಡಬೇಕು. ಇದನ್ನು ತೃಪ್ತಿಪಡಿಸಲು ವ್ರಜಕ್ಕೆ ಭೂಷಣನಾದ ಶ್ರೀಕೃಷ್ಣನು ಅಲ್ಲಿಗೆ ಬರುವನು.

ಶ್ರೀಯೌವನೋನ್ಮದವಿಘೂರ್ಣಿತಲೋಚನೋಽಸೌ
ನೀಲಾಲಕಾಲಿಕಲಿತಾಂ ಸಕಪೋಲಗೋಲಃ ।
ಸತ್ಪೀತಕಂಚುಕಘನಾಂತಮಶೇಷಮಾರಾ-
ದಾಚಾಲಯನ್ಧ್ವನಿಮತಾ ಸ್ವಪದಾರುಣೇನ ॥ ೮ ॥

ಬಾಲಾರ್ಕಮೌಲಿವಿಮಲಾಂಗದಹಾರಮುದ್ಯ-
ದ್ವಿದ್ಯುತ್ಕ್ಷಿಪನ್ಮಕರಕುಂಡಲಮಾದಧಾನಃ ।
ಪೀತಾಂಬರೇಣ ಜಯತಿ ದ್ಯುತಿಮಂಡಲೋಽಸೌ
ಭೂಮಂಡಲೇ ಸಧನುಷೇವ ಘನೋ ದಿವಿಸ್ಥಃ ॥ ೯ ॥

ಆಬೀರಕುಂಕುಮರಸೈಶ್ಚ ವಿಲಿಪ್ತದೇಹೋ
ಹಸ್ತೇಗೃಹೀತನವಸೇಚನಯಂತ್ರ ಆರಾತ್ ।
ಪ್ರೇಕ್ಷಂಸ್ತವಾಶು ಸಖಿ ವಾಟಮತೀವ ರಾಧೇ
ತ್ವದ್ರಾಸರಂಗರಸಕೇಲಿರತಃ ಸ್ಥಿತಸ್ಸಃ ॥ ೧೦ ॥

---

೮. ಸಂಪನ್ಸಮೃದ್ಧಿಯಾದ ಯೌವನವು ತುಂಬಿತುಳುಕಾಡುತ್ತಿರುವುದು. ತಾರುಣ್ಯಕ್ಕೆ ಸರಿಯಾದ ಮದ. ಆ ಮದದಿಂದ ಅವನ ಕಣ್ಣುಗಳು ಚಂಚಲವಾಗಿರುವುವು. ಅವನ ಕಪೋಲಗಳಲ್ಲಿ ಕಪ್ಪಾದ ಮುಂಗುರುಗಳು ಬಾಗಿ ಬಂದಿರುವುವು. ತಲೆಯ ಕೂದಲು ಭುಜದವರೆಗೂ ಮುಟ್ಟಸವಾಗಿರುವುವು. ಹಳದಿಯಾದ ಕವಚವನ್ನು ಧರಿಸಿ ಪ್ರಕಾಶಿಸುತ್ತಿರುವನು. ಕಾಲನ್ನಿಡುವಾಗ ಕಾಲ್ಗಡಗದ ಧ್ವನಿಯು ಕೇಳಿಬರುವುದು.

೯. ಬಾಲಾರ್ಕನಂತೆ ಪ್ರಕಾಶಿಸುತ್ತಿರುವನು. ಮುತ್ತಿನಹಾರಗಳಿಂದಲೂ, ಭುಜಕೀರ್ತಿಗಳಿಂದಲೂ, ಅಲಂಕೃತನಾಗಿರುವನು. ಮೊಸಳೆಯ ಆಕಾರದಂತಿರುವ ಕರ್ಣಭೂಷಣಗಳಿಂದ ರಂಜಿಸುತ್ತಿರುವನು. ಪೀತಾಂಬರವನ್ನುಟ್ಟು ಮನೋಹರನಾಗಿರುವನು. ತೇಜೋರೂಪನಾದ ಇವನನ್ನು ನೋಡಿದರೆ ಆಕಾಶದಲ್ಲಿ ಕಾಮನ ಬಿಲ್ಲಿನಿಂದ ಕೂಡಿರುವ ಮೋಡವೇನಾದರೂ ಭೂಮಂಡಲದಲ್ಲಿರುವುದೋ ಎಂಬಂತೆ ಪ್ರಕಾಶಿಸುತ್ತಿರುವನು.

೧೦. ಆಬೀರಕುಂಕುಮರಸವನ್ನು ಮೈಗೆಲ್ಲಾ ಲೇಪಿಸಿಕೊಂಡಿರುವನು. ಹೋಳಿಯನ್ನು ಆಡಲು ಹೊಸದಾದ ಪಿಚಕಾರಿಯನ್ನು ಕೈಯಲ್ಲಿ ಹಿಡಿದುಕೊಂಡಿರುವನು. ಉದ್ಯಾನದಲ್ಲಿ ನಿನ್ನನ್ನೇ ನಿರೀಕ್ಷಿಸುತ್ತಾ ರಾಸಕ್ರೀಡೆಯಾಡಲು ಸಿದ್ಧನಾಗಿರು

ನಿರ್ಗಚ್ಛ ಪಾಲ್ಗು ನಿಮಿಷೇಣ ವಿಹಾಯ ಮಾನಂ
ದಾತವ್ಯಮದ್ಯ ಚ ಯಶಃ ಕಿಲ ಹೋಲಿಕಾಯೈ ।
ಕರ್ತವ್ಯಮಾಶು ನಿಜಮಂದಿರರಂಗವಾರಿ-
ಪಾಟೀರ ಪಂಕಮಕರಂದಚಯಂ ಚ ತೂರ್ಣಂ ॥ ೧೧ ॥

ಉತ್ತಿಷ್ಠ ಗಚ್ಛ ಸಹಸಾ ನಿಜಮಂಡಲೀಭಿ
ರ್ಯತ್ರಾಸ್ತಿ ಸೋಽಪಿ ಕಿಲ ತತ್ರ ಮಹಾಮತೇ ತ್ವಂ ।
ಏತಾದೃಶೋಽಪಿ ಸಮಯೋ ನ ಕದಾಪಿ ಲಭ್ಯಃ
ಪ್ರಕ್ಷಾಲಿತಂ ಕರತಲಂ ವಿದಿತಂ ಪ್ರವಾಹೇ ॥ ೧೨ ॥

॥ ಶ್ರೀ ನಾರದ ಉವಾಚ ॥

ಅಥ ಮಾನವತೀ ರಾಧಾ ಮಾನಂ ತ್ಯಕ್ತ್ವಾ ಸಮುತ್ಥಿತಾ ।
ಸಖೀಸಂಘೈಃ ಪರಿವೃತಾ ಪ್ರಕರ್ತುಂ ಹೋಲಿಕೋತ್ಸವಂ ॥ ೧೩ ॥

ವನು. ರಾಧೇ, ಬೇಗ ನಡೆ. ನಿನ್ನೊಡನೆ ರಾಸಕ್ರೀಡೆಯನ್ನು ಆಡಲು ಆಶಿಸುತ್ತಾ ಉದ್ಯಾನದಲ್ಲಿರುವನು.

೧೧. ರಾಧೇ, ಕೋಪವನ್ನು ಬಿಡು. ಜಾಗ್ರತೆಯಾಗಿ ಹೊರಡು. ಇಂದು ಹೋಲಿಕೋತ್ಸವವಾದುದರಿಂದ ಆನಂದವಾಗಿರಬೇಕು. ಕೀರ್ತಿಯು ಹರಡಬೇಕು.

೧೨. ಏಳೇಳು, ಜಾಗ್ರತೆಯಾಗಿ ನಿನ್ನ ಸಖಿಯರೊಡನೆ ಆ ಶ್ರೀಕೃಷ್ಣನ ಬಳಿಗೆ ನಡೆ. ನೀನು ಮೇಧಾವಿಯಲ್ಲವೇ. ಕೋಪವನ್ನು ಬಿಡು. ಇಂತಹ ಸಂತೋಷಸಮಯವು ಇನ್ನೆಂದೂ ದೊರಕಲಾರದು. ನೀರು ಸಿಕ್ಕಿದಾಗ ಕೈಗಳನ್ನು ತೊಳದುಕೊಳ್ಳಬೇಕಷ್ಟೆ.

೧೩. ಎಲೈ ಬಹುಲಾಶ್ವನೇ, ಆಮೇಲೆ ರಾಧೆಯು ಕೋಪವನ್ನು ಬಿಟ್ಟು ಸಖಿಯರೊಡಗೂಡಿ ಹೋಳಿಯನ್ನಾಡಲು ಹೊರಟಳು.

ಶ್ರೀಖಂಡಾಗರುಕಸ್ತೂರಿಹರಿದ್ರಾಕುಂಕುಮದ್ರುವೈಃ ।
ಪೂರಿತಾಭಿರ್ದೃತೀಭಿಶ್ಚ ಸಂಯುಕ್ತಾಸ್ತಾ ವ್ರಜಾಂಗನಾಃ ॥ ೧೪ ॥

ರಕ್ತಹಸ್ತಾಃ ಪೀತವಸ್ತ್ರಾಃ ಕೂಜನ್ನೂಪುರಮೇಖಲಾಃ ।
ಗಾಯಂತ್ಯೋ ಹೋಲಿಕಾಗೀತೀರ್ಗಾಲೀಭಿರ್ಹಾಸ್ಯಸಂಧಿಭಿಃ ॥ ೧೫ ॥

ಅಬೀರಾರುಣಚೂರ್ಣಾನಾಂ ಮುಷ್ಟಿಭಿಸ್ತಾ ಇತಸ್ತತಃ ।
ಕುರ್ವಂತ್ಯಶ್ಚಾರುಣಂ ಭೂಮಿಂ ದಿಗಂತಂ ಚಾಂಬರಂ ತಥಾ ॥ ೧೬ ॥

ಕೋಟಿಶಃ ಕೋಟಿಶಸ್ತತ್ರ ಸ್ಫುರಂತ್ಯಾಭೀರಮುಷ್ಟಯಃ ।
ಸುಗಂಧಾರುಣಚೂರ್ಣಾನಾಂ ಕೋಟಿಶಃ ಕೋಟಿಶಸ್ತಥಾ ॥ ೧೭ ॥

---

೧೪. ಆ ವ್ರಜಾಂಗನೆಯರೆಲ್ಲರೂ, ಪಚ್ಚಕರ್ಪೂರ, ಅಗರು, ಕಸ್ತೂರಿ, ಅರಿಶಿನ, ಕುಂಕುಮ, ಕೇಸರಿ ಮುಂತಾದುವುಗಳನ್ನು ಬೆರೆಸಿದ ನೀರನ್ನು ತುಂಬಿದ ಪಿಚಕಾರಿಗಳನ್ನು ಹಿಡಿದುಕೊಂಡು ಹೋಳಿಯಾಡಲು ಸಿದ್ಧರಾದರು.

೧೫. ಸ್ತ್ರೀಯರು ಕುಂಕುಮದ ನೀರನ್ನು ಕೈಗೆಲ್ಲಾ ತೆಗೆದುಕೊಂಡುದರಿಂದ ಅವರ ಕೈಗಳು ಕೆಂಪಾಗಿದ್ದವು. ಅರಿಶಿನ ಬಣ್ಣದ ವಸ್ತ್ರಗಳನ್ನು ಉಟ್ಟು ನರ್ತನ ಮಾಡುತ್ತಿದ್ದರು. ಕಾಲ್ಗಳ ವಿನ್ಯಾಸದಿಂದ ಕಾಲಿನ ಕಾಡಗಗಳ ಝುಣ್, ಝುಣ್ ಶಬ್ದವು ಕೇಳಿಬರುತ್ತಿತ್ತು. ಹೋಳಿಕಾ ಸಂಗೀತಗಳನ್ನು ಹಾಡುತ್ತಿದ್ದರು. ಹಾಸ್ಯಮಯವಾದ ಗಾದೆಗಳನ್ನು ಗೀತರೂಪದಲ್ಲಿ ಹಾಡುತ್ತಿದ್ದರು.

೧೬. ಕೆಂಪಾದ ಅಬೀರ ಕುಂಕುಮದ ಪುಡಿಯನ್ನು ಮುಷ್ಟಿಗಳಲ್ಲಿ ಹಿಡಿದುಕೊಂಡು ಪರಸ್ಪರವಾಗಿ ಎರಚಾಡುತ್ತಿದ್ದರು. ಇದರಿಂದ ಭೂಮಿಯೆಲ್ಲಾ ಕೆಂಪಾಗಿ ಕಾಣಿಸುತ್ತಿತ್ತು. ದಿಗಂತವೂ, ಆಕಾಶವೂ, ಎಲ್ಲೆಲ್ಲೂ ಕೆಂಪಾಗಿ ಕಾಣುತ್ತಿತ್ತು.

೧೭. ಅಬೀರ ಕುಂಕುಮದ ಪುಡಿಯನ್ನು ಹಿಡಿದುಕೊಂಡಿರುವ ಕೋಟ್ಯಾನುಕೋಟಿ ಮುಷ್ಟಿಗಳು ಎಲ್ಲೆಲ್ಲೂ ಪ್ರಕಾಶಿಸುತ್ತಿದ್ದವು. ಘಮಘಮಿಸುತ್ತಿರುವ ಕೆಂಪಾದ ಪುಡಿಯನ್ನು ಬಗಸೆ ಬಗಸೆಯಲ್ಲಿ ಹಿಡಿದಿರುವ ಕೋಟ್ಯಾನುಕೋಟಿ ಜನರು ಆನಂದದಿಂದ ಆಡುತ್ತಿದ್ದರು.

ಸರ್ವತೋ ಜಗೃಹುಃ ಕೃಷ್ಣಂ ಕರಾಭ್ಯಾಂ ವ್ರಜಗೋಪಿಕಾಃ ।
ಯಥಾ ಮೇಘಂ ಚ ದಾಮಿನ್ಯಃ ಸಂಧ್ಯಾಯಾಂ ಶ್ರಾವಣಸ್ಯ ಚ ॥ ೧೮ ॥

ತನ್ಮುಖಂ ಚ ವಿಲಿಂಪಂತ್ಯೋಽಥಾಬೀರಾರುಣವೃಷ್ಟಿಭಿಃ ।
ಕುಂಕುಮಾಕ್ತದೃತೀಭಿಸ್ತಮಾರ್ದ್ರೀಚಕ್ರುರ್ವಿಧಾನತಃ ॥ ೧೯ ॥

ಭಗವಾನಪಿ ತತ್ರೈವ ಯಾವತೀರ್ವ್ರಜಯೋಷಿತಃ ।
ಧೃತ್ವಾ ರೂಪಾಣಿ ತಾವಂತಿ ವಿಜಹಾರ ನೃಪೇಶ್ವರ ॥ ೨೦ ॥

ರಾಧಯಾ ಶುಶುಭೇ ತತ್ರ ಹೋಲಿಕಾಯಾ ಮಹೋತ್ಸವೇ ।
ವರ್ಷಾಸಂಧ್ಯಾಕ್ಷಣೇ ಕೃಷ್ಣಃ ಸೌದಾಮಿನ್ಯಾ ಘನೋ ಯಥಾ ॥ ೨೧ ॥

---

೧೮. ಗೋಪಿಕಾಸ್ತ್ರೀಯರೆಲ್ಲರೂ ಕೃಷ್ಣನನ್ನು ಸುತ್ತುವರೆದು ಅವನನ್ನು ಹಿಡಿದುಕೊಳ್ಳುತ್ತಿದ್ದರು. ಶ್ರಾವಣಮಾಸದ ಸಂಧ್ಯಾಕಾಲದಲ್ಲಿ ಮಿಂಚುಗಳು ಮೇಘಗಳನ್ನಾವರಿಸುವಂತೆ ವ್ರಜಾಂಗನೆಯರು ಶ್ರೀಕೃಷ್ಣನನ್ನು ಸುತ್ತುವರೆಯುತ್ತಿದ್ದರು.

೧೯. ಅಬೀರ ಕುಂಕುಮದ ಪುಡಿಯನ್ನು ಶ್ರೀಕೃಷ್ಣನ ಮುಖಕ್ಕೆ ಎರಚುತ್ತಿದ್ದರು. ಕುಂಕುಮದ ನೀರನ್ನು ತುಂಬಿಕೊಂಡ ಪಿಚಕಾರಿಗಳಿಂದ ಶ್ರೀಕೃಷ್ಣನನ್ನು ಹೊಡೆದು ನೆನೆಯಿಸುತ್ತಿದ್ದರು.

೨೦. ಶ್ರೀಕೃಷ್ಣನು ಎಷ್ಟು ಜನ ವ್ರಜಾಂಗನೆಯರಿರುವರೋ ಅಷ್ಟು ವಿಧವಾದ ರೂಪಗಳನ್ನು ಧರಿಸಿ ಅವರೆಲ್ಲರೊಡನೆ ಆಟವಾಡುತ್ತಿದ್ದನು.

೨೧. ಆ ಹೋಳಿಕೋತ್ಸವದಲ್ಲಿ ರಾಧೆಯೊಡಗೂಡಿ ಕ್ರೀಡಿಸುತ್ತಿರುವ ಕೃಷ್ಣನು ವರ್ಷಾಕಾಲದಲ್ಲಿ ಮಿಂಚಿನಿಂದ ಕೂಡಿದ ಸಂಧ್ಯಾಸಮಯದ ಕಪ್ಪಾದ ಮೋಡವು ಪ್ರಕಾಶಿಸಿದಂತೆ ಪ್ರಕಾಶಿಸಿದನು.

ಕೃಷ್ಣೋಽಪಿ ತದ್ಧಸ್ತಕೃತಾಕ್ತನೇತ್ರೋ
ದತ್ವಾ ಸ್ವಕೀಯಂ ನವಮುತ್ತರೀಯಂ।
ತಾಭ್ಯೋ ಯಯೌ ನಂದಗೃಹಂ ಪರೇಶೋ
ದೇವೇಷು ವರ್ಷತ್ಸು ಚ ಪುಷ್ಪವರ್ಷಂ ॥ ೨೨ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಮಾಧುರ್ಯಖಂಡೇ
ದಿವ್ಯಾತ್ರಿಗುಣವೃತ್ತಿಭೂಮಿಗೋಪ್ಯುಪಾಖ್ಯಾನಂ
ನಾಮ ದ್ವಾದಶೋಽಧ್ಯಾಯಃ

---

೨೨. ರಾಧೆಯು ತನ್ನ ಕೈಯಿಂದ ಶ್ರೀಕೃಷ್ಣನ ಕಣ್ಣುಗಳಿಗೆ ಅಂಜನವನ್ನು ಹಚ್ಚಿದಳು. ಅವನು ತನ್ನ ಮೇಲುಹೊದಿಕೆಯನ್ನು ರಾಧೆಯ ಕೈಗೆ ಕೊಟ್ಟನು. ಈ ರೀತಿ ಮುಂದೆ ಶ್ರೀಕೃಷ್ಣನು, ಅವನ ಉತ್ತರೀಯವನ್ನು ಹಿಡಿದುಕೊಂಡು ರಾಧೆಯೂ ನಂದಗೃಹಕ್ಕೆ ಹೊರಟರು. ದೇವತೆಗಳು ಪುಷ್ಪವೃಷ್ಟಿಯನ್ನು ಕರೆದರು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಮಾಧುರ್ಯಖಂಡದಲ್ಲಿ ದಿವ್ಯಾತ್ರಿಗುಣವೃತ್ತಿ ಭೂಮಿಗೋಪ್ಯುಪಾಖ್ಯಾನವೆಂಬ ಹನ್ನೆರಡನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಮಾಧುರ್ಯಖಂಡೇ

ತ್ರಯೋದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಅಥ ದೇವಾಂಗನಾನಾಂ ಚ ಗೋಪೀನಾಂ ವರ್ಣನಂ ಶೃಣು ।
ಚತುಷ್ಪದಾರ್ಥದಂ ನೄಣಾಂ ಭಕ್ತಿವರ್ಧನಮುತ್ತಮಂ ॥ ೧ ॥

ಬಭೂವ ಮಾಲವೇ ದೇಶೇ ಗೋಪೋ ನಂದೋ ದಿವಸ್ಪತಿಃ ।
ಭಾರ್ಯಾಸಹಸ್ರಸಂಯುಕ್ತೋ ಧನವಾನ್ನೀತಿಮಾನ್ಪರಃ ॥ ೨ ॥

ತೀರ್ಥಯಾತ್ರಾಪ್ರಸಂಗೇನ ಮಥುರಾಯಾಂ ಸಮಾಗತಃ ।
ನಂದರಾಜಂ ವ್ರಜಾಧೀಶಂ ಶ್ರುತ್ವಾ ಶ್ರೀಗೋಕುಲಂ ಯಯೌ ॥ ೩ ॥

ಹದಿಮೂರನೆಯ ಅಧ್ಯಾಯವು

೧. ನಾರದನು ಹೇಳಿದನು :—ಎಲೈ ಬಹುಲಾಶ್ವನೇ ಕೇಳು, ಈಗ ನಾನು ದೇವತಾಸ್ತ್ರೀಯರಾದ ಗೋಪಿಕಾಸ್ತ್ರೀಯರ ವರ್ಣನೆಯನ್ನು ಹೇಳುವೆನು. ಇದನ್ನು ಕೇಳುವುದರಿಂದ ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧಪುರುಷಾರ್ಥಗಳು ಸಿದ್ಧಿಸುವುವು. ಮತ್ತು ಶ್ರೀಹರಿಯಲ್ಲಿ ಭಕ್ತಿಯು ಹೆಚ್ಚುವುದು.

೨. ರಾಜನೇ, ಮಾಲವವೆಂಬ ದೇಶವಿರುವುದು. ಅದರಲ್ಲಿ ನಂದನೆಂಬ ಹೆಸರುಳ್ಳ ಗೋಪನು ಇದ್ದನು. ಅವನಿಗೆ ಸಾವಿರಜನ ಹೆಂಡತಿಯರು. ಅವನು ಧನವಂತನಾಗಿಯೂ, ನೀತಿವಂತನಾಗಿಯೂ ಇದ್ದನು.

೩. ಒಂದು ಸಾರಿ ಅವನು ತೀರ್ಥಯಾತ್ರೆಯನ್ನು ಮಾಡುತ್ತಾ ಮಥುರಾ ನಗರಿಗೆ ಬಂದನು. ಅಲ್ಲಿ, ಗೋಕುಲಕ್ಕೆ ರಾಜನಾದ ನಂದನ ಪ್ರಸಿದ್ಧಿಯನ್ನು ಕೇಳಿ ಗೋಕುಲಕ್ಕೆ ಬಂದನು.

ಮಿಲಿತ್ವಾ ಗೋಪರಾಜಂ ಸ ದೃಷ್ಟ್ವಾ ವೃಂದಾವನಶ್ರಿಯಂ।
ನಂದರಾಜಾಜ್ಞಯಾ ತತ್ರ ವಾಸಂ ಚಕ್ರೇ ಮಹಾಮನಾಃ ॥ ೪ ॥

ಯೋಜನದ್ವಯಮಾಶ್ರಿತ್ಯ ಘೋಷಂ ಚಕ್ರೇ ಗವಾಂ ಪುನಃ।
ಮುದಂ ಪ್ರಾಪ ವ್ರಜೇ ರಾಜನ್ಜ್ಞಾತಿಭಿಸ್ಸ ದಿವಸ್ಪತಿಃ ॥ ೫ ॥

ತಸ್ಯ ದೇವಲವಾಕ್ಯೇನ ಸರ್ವಾ ದೇವಜನಸ್ತ್ರಿಯಃ।
ಜಾತಾಃ ಕನ್ಯಾ ಮಹಾದಿವ್ಯಾ ಜ್ವಲದಗ್ನಿಶಿಖೋಪಮಾಃ ॥ ೬ ॥

ಶ್ರೀಕೃಷ್ಣಂ ಸುಂದರಂ ದೃಷ್ಟ್ವಾ ಮೋಹಿತಾಃ ಕನ್ಯಕಾಶ್ಚ ತಾಃ।
ದಾಮೋದರಸ್ಯ ಪ್ರಾಪ್ತ್ಯರ್ಥಂ ಚಕ್ರುರ್ಮಾಘವ್ರತಂ ಪರಂ ॥ ೭ ॥

ಅರ್ಧೋದಯೇಽರ್ಕೇ ಯಮುನಾಂ ನಿತ್ಯಂ ಸ್ನಾತ್ವಾ ವ್ರಜಾಂಗನಾಃ।
ಉಚ್ಚೈರ್ಜಗುಃ ಕೃಷ್ಣಲೀಲಾಂ ಪ್ರೇಮಾಸ್ಪದಸಮಾಕುಲಾಃ ॥ ೮ ॥

---

೪. ಗೋಪರಾಜನಾದ ನಂದನನ್ನು ಸಂಧಿಸಿ ಮಾತುಕತೆಗಳನ್ನಾಡಿದನು. ವೃಂದಾವನಕ್ಕೆ ತೆರಳಿ ಅಲ್ಲಿನ ಸೊಬಗನ್ನು ನೋಡಿ ಆನಂದಪಟ್ಟನು. ಅನಂತರ ನಂದರಾಜನ ಅಪ್ಪಣೆಯಂತೆ ಆ ಗೋಕುಲದಲ್ಲಿಯೇ ವಾಸವಾಡಲು ಪ್ರಾರಂಭಿಸಿದನು.

೫. ಅಲ್ಲಿಯೇ ಎರಡು ಯೋಜನದ ದೂರ ಒಂದು ಹಳ್ಳಿಯನ್ನು ಸ್ಥಾಪಿಸಿದನು. ಅಲ್ಲಿ ಅನೇಕ ಹಸುಗಳನ್ನಿರಿಸಿದನು. ಮತ್ತು ತನ್ನ ಜ್ಞಾತಿಗಳೊಡಗೂಡಿ ಅಲ್ಲಿಯೇ ವಾಸವಾಡುತ್ತಾ ಆನಂದದಿಂದಿದ್ದನು

೬. ಹೀಗಿರುತ್ತಿರಲು ಅವನಿಗೆ ಒಬ್ಬ ದೇವತಾರಾಧಕನ ಮಾತಿನಂತೆ ದೇವತಾ ಸ್ತ್ರೀಯರು ತಮ್ಮ ಅಂಶಗಳಿಂದ ಹುಟ್ಟಿದರು. ಅವರು ದಿವ್ಯಸ್ವರೂಪವುಳ್ಳವರಾಗಿಯೂ, ಉರಿಯುತ್ತಿರುವ ಅಗ್ನಿಜ್ವಾಲೆಯಂತೆ ಪ್ರಜ್ವಲಿಸುವವರಾಗಿಯೂ ಇದ್ದರು.

೭. ಆ ಕನ್ಯೆಯರು ಶ್ರೀಕೃಷ್ಣನ ಸುಂದರ ರೂಪವನ್ನು ನೋಡಿ ಮೋಹಿತರಾಗಿ ಅವನನ್ನು ಪಡೆಯಲು ಶ್ರೇಷ್ಠವಾದ ಮಾಘವ್ರತವನ್ನು ಮಾಡಿದರು.

೮. ಅದಕ್ಕೋಸ್ಕರವಾಗಿ ಅವರು ಅರ್ಧೋದಯ ಪುಣ್ಯಕಾಲದಲ್ಲಿ ದಿನವೂ ಯಮುನಾನದಿಗೆ ಹೋಗಿ ಸ್ನಾನವಾಡುತ್ತಿದ್ದರು. ಮತ್ತು ಶ್ರೀಕೃಷ್ಣನಲ್ಲಿ ಮೋಹಿತರಾಗಿ ಅವನ ಲೀಲೆಗಳನ್ನು ಘಟ್ಟಿಯಾಗಿ ಹೇಳುತ್ತಾ ತದೇಕ ಧ್ಯಾನರಾಗಿದ್ದರು.

ತಾಸಾಂ ಪ್ರಸನ್ನಃ ಶ್ರೀಕೃಷ್ಣೋ ವರಂ ಬ್ರೂಹೀತ್ಯುವಾಚ ಹ ।
ತಾ ಊಚುಸ್ತಂ ಪರಂ ನತ್ವಾ ಕೃತಾಂಜಲಿಪುಟಾಃ ಶನೈಃ ॥ ೯ ॥

ಗೋಪೀಶ್ವರಾಣಾಂ ಕಿಲ ದುರ್ಲಭಸ್ತ್ವಂ
ಸರ್ವೇಶ್ವರಃ ಕಾರಣಕಾರಣೋಽಸಿ ।
ತ್ವಂ ನೇತ್ರಗಾಮೀ ಭವತಾತ್ಸದಾ ನೋ
ವಂಶೀಧರೋ ಮನ್ಮಥ ಮನ್ಮಥಾಂಗಃ ॥ ೧೦ ॥

ತಥಾಸ್ತು ಚೋಕ್ತ್ವಾ ಹರಿರಾದಿದೇವ-
ಸ್ತಾಸಾಂ ತು ಯೋ ದರ್ಶನಮಾತತಾನ ।
ಭೂಯಾತ್ಸದಾ ತೇ ಹೃದಿ ನೇತ್ರಮಾರ್ಗೇ
ತಥಾ ಸ ಆಹೂತ ಇವಾಶು ಚಿತ್ತೇ ॥ ೧೧ ॥

ಪರಿಪೂರ್ಣತಮಸ್ಸಾಕ್ಷಾಚ್ಛ್ರೀಕೃಷ್ಣೋ ನಾನ್ಯ ಏವ ಹಿ ।
ಏಕಕಾರ್ಯಾರ್ಥಮಾಗತ್ಯ ಕೋಟಿಕಾರ್ಯಂ ಚಕಾರ ಹ ॥ ೧೨ ॥

---

೯. ಅದರಿಂದ ಶ್ರೀಕೃಷ್ಣನು ಅವರಿಗೆ ಪ್ರಸನ್ನನಾದನು. ಪ್ರತ್ಯಕ್ಷನಾಗಿ ಬಂದು ನಿಮಗೆ ಬೇಕಾದ ವರವನ್ನು ಕೇಳಿರೆಂದು ಹೇಳಿದನು. ಆಗವರು ಅವನನ್ನು ನಮಸ್ಕರಿಸಿ ಅಂಜಲಿಬದ್ಧರಾಗಿ ಅವನನ್ನು ಕುರಿತು ಮೆಲ್ಲಗೆ ಹೇಳಿದರು.

೧೦. ಎಲೈ ಮನ್ಮಥಾಂಗನಾದ ಪರಮಾತ್ಮನೆ,, ನೀನು ಗೋಪೀಶ್ವರರಿಗೂ ದುರ್ಲಭನಾದವನು. ಸರ್ವರಿಗೂ ಪ್ರಭುವು. ಕಾರಣಗಳಿಗೆಲ್ಲಾ ಕಾರಣಸ್ವರೂಪನು. ಮುರುಳಿಯನ್ನು ಧರಿಸಿದ ಸುಂದರನು. ಇಂತಹ ನೀನು ನಮ್ಮ ಕಣ್ಣುಗಳೆದುರಿಗೆ ಯಾವಾಗಲೂ ಪ್ರತ್ಯಕ್ಷನಾಗಿರಬೇಕು.

೧೧. ಎಂದವರು ಕೇಳಿಕೊಳ್ಳಲು ಆದಿದೇವನಾದ ಕೃಷ್ಣನು ಹಾಗೆಯೇ ಆಗಲೆಂದು ಹೇಳಿ ವ್ರಜಾಂಗನೆಯರಿಗೆ ಯಾವಾಗಲೂ ಪ್ರತ್ಯಕ್ಷನಾಗಿಯೇ ಇದ್ದನು. ಅಂತಹ ಪರಮಾತ್ಮನು ಈಗ ನಿನ್ನ ಹೃದಯ ಮತ್ತು ನೇತ್ರಗಳಿಗೆ ಕರೆಯಲ್ಪಟ್ಟು ಬಂದವನಂತೆ ಗೋಚರನಾಗಲಿ.

೧೨. ಪರಿಪೂರ್ಣಸ್ವರೂಪನಾದವನು ಸಾಕ್ಷಾತ್ ಶ್ರೀಕೃಷ್ಣನೇ ಹೊರತು ಬೇರೆ ಯಾರೂ ಇಲ್ಲವು. ಇಂತಹ ಮಹಾನುಭಾವನು ಯಾವುದೋ ಒಂದು ಕಾರ್ಯಕ್ಕೋಸ್ಕರವಾಗಿ ಭೂಮಿಯಲ್ಲಿ ಅವತರಿಸಿ ಕೋಟ್ಯಾನುಕೋಟಿ ಕಾರ್ಯಗಳನ್ನೆಸಗಿದನು.

ಪರಿಕರೀಕೃತಪೀತಪಟಂ ಹರಿಂ
ಶಿಖಿಕಿರೀಟನತೀಕೃತಕಂಧರಂ ।
ಲಕುಟವೇಣುಕರಂ ಚಲಕುಂಡಲಂ
ಪಟುತರಂ ನಟವೇಷಧರಂ ಭಜೇ ॥ ೧೩ ॥

ಭಕ್ತ್ಯೈವ ವಶ್ಯೋ ಹರಿರಾದಿದೇವ
ಸ್ತದಾ ಪ್ರಮಾಣಂ ಕಿಲ ಚಾತ್ರ ಗೋಪ್ಯಃ ।
ಸಾಂಖ್ಯಂ ಚ ಯೋಗಂ ನ ಕೃತಂ ಕದಾದಿ
ಪ್ರೇಮ್ಣೈವ ಯಸ್ಯ ಪ್ರಕೃತಿಂ ಗತಾಸ್ಸ್ಯಃ ॥ ೧೪ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಮಾಧುರ್ಯಖಂಡೇ
ದೇವಜನಸ್ತ್ರ್ಯುಪಾಖ್ಯಾನಂ ನಾಮ
ತ್ರಯೋದಶೋಽಧ್ಯಾಯಃ

---

೧೩. ನೀಲಿಯ ವಸ್ತ್ರವನ್ನು ಉಟ್ಟು ಪೀತಾಂಬರವನ್ನು ಅದರ ಮೇಲೆ ಸೊಂಟಕ್ಕೆ ಬಿಗಿದಿರುವನು. ನವಿಲುಗರಿಗಳಿಂದ ರಂಜಿತವಾದ ಕಿರೀಟವನ್ನಿಟ್ಟು ಕೊಂಡಿರುವನು. ಅದರಿಂದ ಕತ್ತು ಸ್ವಲ್ಪ ಬಗ್ಗಿರುವುದು. ಕೈಯಲ್ಲಿ ಕೊಳಲನ್ನು ಹಿಡಿದುಕೊಂಡಿರುವನು. ಅದನ್ನು ಬಾರಿಸುವಾಗ ಕಿವಿಗಿಟ್ಟಿರುವ ಕರ್ಣಕುಂಡಲಗಳು ಅಲುಗಾಡಿ ಮಿಣುಗುವುವು. ಇಂತಹ ಮನಮೋಹಕನಾದ, ನಟವೇಷಧಾರಿಯಾದ ಆ ಕೃಷ್ಣನನ್ನು ಧ್ಯಾನಿಸುವೆನು.

೧೪. ಆದಿದೇವನಾದ ಹರಿಯನ್ನು ಸಾಕ್ಷಾತ್ಕಾರಮಾಡಿಕೊಳ್ಳಬೇಕಾದರೆ ಭಕ್ತಿಯೊಂದರಿಂದಲೇ ಸಾಧ್ಯವು. ಈ ವಿಷಯಕ್ಕೆ ಗೋಪಿಯರೇ ಸಾಕ್ಷಿ. ಅವರು ಸಾಂಖ್ಯತತ್ವವಾದ ಪುರುಷ ಪ್ರಕೃತಿ ವಿಷಯಗಳಿಗೆ ಗಮನಕೊಡದೆ ಕೇವಲ ಪ್ರೇಮ ದಿಂದಲೇ ಶ್ರೀಕೃಷ್ಣನಲ್ಲಿ ಐಕ್ಯರಾದರು,

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಮಾಧುರ್ಯಖಂಡದಲ್ಲಿ ದೇವತಾಸ್ತ್ರೀಯರಾದ
ಗೋಪಿಯರ ಚರಿತ್ರೆ ಎಂಬ ಹದಿಮೂರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಮಾಧುರ್ಯಖಂಡೇ

ಚತುರ್ದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ಜಾಲಂಧರೀಣಾಂ ಗೋಪೀನಾಂ ಜನ್ಮಾನಿ ಶೃಣು ಮೈಥಿಲ ।
ಕರ್ಮಾಣಿ ಚ ಮಹಾರಾಜ ಪಾಪಘ್ನಾನಿ ನೃಣಾಂ ಸದಾ ॥ ೧ ॥

ರಾಜನ್ಸಪ್ತನದೀತೀರೇ ರಂಗಪತ್ತನಮುತ್ತಮಂ ।
ಸರ್ವಸಂಪದ್ಯುತಂ ದೀರ್ಘಂ ಯೋಜನದ್ವಯವರ್ತುಲಂ ॥ ೨ ॥

ರಂಗೋಜಿಸ್ತತ್ರ ಗೋಪಾಲಃ ಪುರಾಧೀಶೋ ಮಹಾಬಲಃ ।
ಪುತ್ರಪೌತ್ರೈಸ್ಸಮಾಯುಕ್ತೋ ಧನಧಾನ್ಯಸಮೃದ್ಧಿಮಾನ್ ॥ ೩ ॥

ಹದಿನಾಲ್ಕನೆಯ ಅಧ್ಯಾಯವು

೧. ನಾರದನು ಹೇಳಿದನು :—ಎಲೈ ಮಿಥಿಲಾಧಿಪನಾದ ಬಹುಲಾಶ್ವನೇ, ಈಗ ನಾನು ಜಲದಿಂದ ಉತ್ಪನ್ನರಾಗಿರತಕ್ಕ ಜಾಲಂಧರೀ ಗೋಪಿಯರ ಉತ್ಪತ್ತಿಯನ್ನೂ ಅವರ ಕಾರ್ಯಗಳನ್ನೂ ಹೇಳುವೆನು ಕೇಳು. ಇದನ್ನು ಕೇಳುವುದರಿಂದ ಜನರ ಪಾಪಗಳೆಲ್ಲವೂ ನಾಶವಾಗುವುವು.

೨. ಸಪ್ತನದೀತೀರದಲ್ಲಿ ಶ್ರೇಷ್ಠವಾದ ರಂಗಪಟ್ಟಣವೆಂಬ ಊರಿರುವುದು. ಅದು ಸರ್ವಸಂಪದ್ಯುಕ್ತವಾಗಿರುವುದು. ಅದರ ವಿಸ್ತಾರವು ಎರಡು ಯೋಜನವು.

೩. ಆ ಊರಿಗೆ ರಂಗೋಜಿ ಎಂಬ ಗೋಪಾಲನು ರಾಜನು. ಅವನು ಮಹಾಶೂರನು. ಪುತ್ರಪೌತ್ರರಿಂದೊಡಗೂಡಿ ಸುಖವಾಗಿದ್ದನು. ಅವನಿಗೆ ಧನಧಾನ್ಯಗಳ ಸಮೃದ್ಧಿಯು ಅಪಾರವಾಗಿತ್ತು.

ಹಸ್ತಿನಾಪುರನಾಥಾಯ ಧೃತರಾಷ್ಟ್ರಾಯ ಭೂಪತೇಃ ।
ಹೈಮಾನಾಮರ್ಬುದಶತಂ ವಾರ್ಷಿಕಂ ಸ ದದೌ ಸದಾ ॥ ೪ ॥

ಏಕದಾ ತತ್ರ ವರ್ಷಾಂತೇ ವ್ಯತೀತೇ ಕಿಲ ಮೈಥಿಲ ।
ವಾರ್ಷಿಕಂ ತು ಕರಂ ರಾಜ್ಞೇ ಸ ದದೌ ಸ ಮದೋತ್ಕಟಃ ॥ ೫ ॥

ಮಿಲನಾರ್ಥಂ ನ ಚಾಯಾತೇ ರಂಗೋಜೌ ಗೋಪನಾಯಕೇ ।
ವೀರಾ ದಶಸಹಸ್ರಾಣಿ ಧೃತರಾಷ್ಟ್ರಪ್ರಣೋದಿತಾಃ ॥ ೬ ॥

ಬದ್ಧ್ವಾ ತಂ ದಾಮಭಿಃ ಗೋಪಮಾಜಗ್ಮುಸ್ತೇ ಗಜಾಹ್ವಯಂ ।
ಕತಿವರ್ಷಾಣಿ ರಂಗೋಜಿಃ ಕಾರಾಗಾರೇ ಸ್ಥಿತೋಽಭವತ್ ॥ ೭ ॥

ಸನ್ನಿರುದ್ಧಸ್ತಾಡಿತೋಽಪಿ ಲೋಭೀ ಭೀರುರ್ನ ಚಾಭವತ್ ।
ನ ದದೌ ಸ ಧನಂ ಕಿಂಚಿದ್ಧೃತರಾಷ್ಟ್ರಾಯ ಭೂಭೃತೇ ॥ ೮ ॥

---

೪. ಆ ರಂಗೋಜಿಯು ಹಸ್ತಿನಾವತಿಯ ರಾಜನಾದ ಧೃತರಾಷ್ಟ್ರನಿಗೆ ನೂರು ಅರ್ಬುದ ಸುವರ್ಣವನ್ನು ಪ್ರತಿವರ್ಷವೂ ಕಾಣಿಕೆಯಾಗಿ ಕೊಡುತ್ತಿದ್ದನು.

೫. ಹೀಗಿರುತ್ತಿರಲು ಒಂದು ಸಾರಿ ವರ್ಷವು ಕಳೆದರೂ ಸಹ ಆ ರಂಗೋಜಿಯು ಐಶ್ವರ್ಯದಿಂದ ಮದಿಸಿ ಧೃತರಾಷ್ಟ್ರನಿಗೆ ಕೊಡಬೇಕಾದ ಕಪ್ಪವನ್ನು ಕೊಡಲೇ ಇಲ್ಲ.

೬. ಹೇಳಿ ಕಳುಹಿಸಿದರೂ ಅವನನ್ನು ನೋಡಲೂ ಬರಲಿಲ್ಲ. ಆಗ ಧೃತರಾಷ್ಟ್ರನು ಕೋಪಗೊಂಡು ಅವನನ್ನು ಹಿಡಿತರುವಂತೆ ಅಪ್ಪಣೆ ಮಾಡಿದನು. ಅವನ ಅಪ್ಪಣೆಯಂತೆ ಹತ್ತುಸಹಸ್ರ ವೀರರು ಹೊರಟು ಅವನನ್ನು ಹಗ್ಗಗಳಿಂದ ಕಟ್ಟಿ ಹಸ್ತಿನಾವತಿಗೆ ತಂದರು.

೭-೮. ಅನೇಕ ವರ್ಷಗಳ ಕಾಲ ರಂಗೋಜಿಗೆ ಕಾರಾಗೃಹದ ಶಿಕ್ಷೆಯಾಯಿತು. ಅಲ್ಲಿ ಕೂಡಿ ಅವನನ್ನು ಹೊಡೆದು ವಿವಿಧವಾಗಿ ಹಿಂಸಿಸಿದರೂ ಸಹ ಆ ಲೋಭಿಯು ಹೆದರಲೂ ಇಲ್ಲ. ಧನವನ್ನು ಕೊಡಲೂ ಇಲ್ಲ.

ಕಾರಾಗಾರಾನ್ಮಹಾಭೀಮಾತ್ಕದಾಚಿತ್ಸ ಪಲಾಯಿತಃ ।
ರಾತ್ರೌ ರಂಗಪುರಂ ಪ್ರಾಗಾದ್ರಂಗೋಜಿರ್ಗೋಪನಾಯಕಃ ॥ ೯ ॥

ಪುನಸ್ತಂ ಹಿ ಸಮಾಹರ್ತುಂ ಧೃತರಾಷ್ಟ್ರಪ್ರಣೋದಿತಂ ।
ಅಕ್ಷೌಹಿಣೀತ್ರಯಂ ರಾಜನ್ಸಮರ್ಥಬಲವಾಹನಂ ॥ ೧೦ ॥

ತೇನ ಸಾರ್ಧಂ ಸ ಬಾಣೌಘೈಸ್ತೀಕ್ಷ್ಣಧಾರೈಃ ಸ್ಫುರತ್ಪ್ರಭೈಃ ।
ಯುಯುಧೇ ದಂಶಿತೋ ಯುದ್ಧೇ ಧನುಷ್ಟಂಕಾರಯನ್ಮುಹುಃ ॥ ೧೧ ॥

ಶತ್ರುಭಿಶ್ಛಿನ್ನಕವಚಶ್ಛಿನ್ನಧನ್ವಾ ಹತಸ್ವಕಃ ।
ಪುರಮೇತ್ಯ ವ್ಯಧಂ ಚಕ್ರೇ ರಂಗೋಜಿಃ ಕತಿಭಿರ್ದಿನೈಃ ॥ ೧೨ ॥

---

೯. ಹೀಗಿರಲು ಒಂದು ದಿನ ರಾತ್ರಿ ರಂಗೋಜಿಯು ಅತಿ ಸಾಹಸದಿಂದ ಆ ಕಾರಾಗಾರದಿಂದ ತಪ್ಪಿಸಿಕೊಂಡು ತನ್ನೂರಾದ ರಂಗಪುರಕ್ಕೆ ಓಡಿಹೋದನು.

೧೦. ಅದನ್ನು ನೋಡಿ ಧೃತರಾಷ್ಟ್ರನು ಪುನಃ ಅವನನ್ನು ಹಿಡಿತರುವಂತೆ ಅಪ್ಪಣೆಮಾಡಿದನು. ಅದರಂತೆ ಮೂರು ಅಕ್ಷೌಹಿಣೀ ಸೈನ್ಯವು ಸಮರ್ಥವಾದ ಕಾಲಾಳು, ವಾಹನ ಮುಂತಾದ ಸೌಕರ್ಯಗಳೊಡನೆ ರಂಗಪುರಕ್ಕೆ ತೆರಳಿತು.

೧೧. ಆಗ ರಂಗೋಜಿಯು ಬಂದ ಸೈನ್ಯದೊಡನೆ ಯುದ್ಧಮಾಡಲನುವಾದನು. ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತಾ, ಆಗಾಗ್ಗೆ ಧನುಷ್ಟಂಕಾರವನ್ನು ಮಾಡುತ್ತಾ ಬಹಳ ಕೋಪದಿಂದ ಯುದ್ಧಮಾಡಿದನು.

೧೨. ಹೀಗೆ ಯುದ್ಧಮಾಡುತ್ತಿರಲು ಶತ್ರುಗಳ ಏಟಿನಿಂದ ಆ ರಂಗೋಜಿಯ ಕವಚವು ಹರಿದುಹೋಯಿತು. ಧನುಸ್ಸು ಮುರಿಯಿತು. ಅವನು ಹೆದರಿ ಊರೊಳಕ್ಕೆ ಓಡಿಹೋದನು. ಹಾಗೂ ಕೆಲವು ದಿನಗಳವರೆಗೆ ನಿಂತನು.

ಅನಾಥಃ ಶರಣಂ ಚೇಚ್ಛನ್ಕಂಸಾಯ ಯದುಭೂಭೃತೇ ।
ದೂತಂ ಸ್ವಂ ಪ್ರೇಷಯಾಮಾಸ ರಂಗೋಜಿಃ ಭಯಪೀಡಿತಃ ॥ ೧೩ ॥

ದೂತಸ್ತು ಮಧುರಾಮೇತ್ಯ ಸಭಾಂ ಗತ್ವಾ ನತಾನನಃ ।
ಕೃತಾಂಜಲಿಶ್ಚೊಗ್ರಸೇನೀಂ ನತ್ವಾ ಪ್ರಾಹ ಗಿರಾರ್ದ್ರಯಾ ॥ ೧೪ ॥

ರಂಗೋಜಿರ್ನಾಮ ನೃಪ ರಂಗಪತ್ತನೇ
ಗೋಪ್ತೋಽಸ್ತಿ ನೀತಿಜ್ಞವರಃ ಪುರಾಧಿಪಃ ।
ಸ್ವಶತ್ರುಸಂರುದ್ಧಪುರೋ ಮಹಾಧಿಭೃ-
ದಲಬ್ಧನಾಥಃ ಶರಣಂ ಗತಸ್ತವ ॥ ೧೫ ॥

ತ್ವಂ ದೀನದುಃಖಾರ್ತಿಹರೋ ಮಹೀತಲೇ
ಭೌಮಾದಿಸಂಗೀತಗುಣೋ ಮಹಾಬಲಃ ।
ಸುರಾಸುರಾನುದ್ಭಟಭೂಮಿಪಾಲಕಾ
ನ್ವಿಜಿತ್ಯ ಯುದ್ಧೇ ಸುರರಾಡಿವ ಸ್ಥಿತಃ ॥ ೧೬ ॥

---

೧೩. ಭಯಪೀಡಿತನಾಗಿ ತನ್ನ ಸಹಾಯಕ್ಕೆ ಯಾರೂ ಇಲ್ಲದಿರುವುದನ್ನು ನೋಡಿ ಸಹಾಯಕ್ಕೋಸ್ಕರವಾಗಿ ಕಂಸರಾಜನಿಗೆ ತನ್ನ ದೂತನ ಮೂಲಕ ಸಂದೇಶವನ್ನು ಕಳುಹಿಸಿದನು.

೧೪. ದೂತನು ಸಂದೇಶವನ್ನು ತೆಗೆದುಕೊಂಡು ಮಧುರೆಗೆ ಹೋದನು. ಅಲ್ಲಿ ಕಂಸನ ಸಭೆಗೆ ತೆರಳಿ ಕತ್ತನ್ನು ಬಗ್ಗಿಸಿ ನಿಂತು ಅಂಜಲಿಬದ್ಧನಾಗಿ ಹೇಳಿದನು.

೧೫. ರಂಗಪತ್ತನದಲ್ಲಿ ರಂಗೋಜಿ ಎಂಬ ಪ್ರಭುವಿರುವನು. ಅವನು ಗೋಪನು. ನೀತಿಜ್ಞರಲ್ಲಿ ಶ್ರೇಷ್ಠನು. ಅವನಿಗೀಗ ಬಹಳ ತೊಂದರೆ ಬಂದೊದಗಿರುವುದು. ಅವನ ಶತ್ರುಗಳು ಅವನ ಪಟ್ಟಣವನ್ನು ಮುತ್ತಿರುವರು. ಅವನಿಗೆ ಸಹಾಯಕರಾರೂ ಇಲ್ಲ. ಆದುದರಿಂದ ಮಹಾಪ್ರಭೂ, ತಮ್ಮನ್ನು ಸಹಾಯಕರನ್ನಾಗಿ ಬರಲು ಕೋರಿರುವನು.

೧೬. ನೀನು ದುಃಖಿಗಳ ದುಃಖವನ್ನು ಪರಿಹಾರಮಾಡುವವನು. ಮಹಾಬಲಶಾಲಿಯು. ಭೂಲೋಕದಲ್ಲಿ ಪ್ರಸಿದ್ಧ ಪರಾಕ್ರಮಿಗಳಾದ ಅನೇಕ ದೇವಾಸುರರನ್ನು ಯುದ್ಧದಲ್ಲಿ ಜಯಿಸಿ ದೇವೇಂದ್ರನಂತೆ ಪ್ರಕಾಶಿಸುತ್ತಿರುವೆ.

ಚಂದ್ರಂ ಚಕೋರಶ್ಚ ರವಿಂ ಕುಶೇಶಯಃ
ಯಥಾ ಶರಚ್ಛೀಕರಮೇವ ಚಾತಕಃ ।
ಕ್ಷುಧಾತುರೋಽನ್ನಂ ಚ ಜಲಂ ತೃಷಾತುರಃ
ಸ್ಮರತ್ಯಸೌ ಶತ್ರುಭಯೇ ತಥಾ ತವ ॥ ೧೭ ॥

॥ ಶ್ರೀ ನಾರದ ಉವಾಚ ॥

ಇತ್ಥಂ ಶ್ರುತ್ವಾ ವಚಸ್ತಸ್ಯ ಕಂಸೋ ವೈ ದೀನವತ್ಸಲಃ ।
ದೈತ್ಯಕೋಟಿಸಮಾಯುಕ್ತೋ ಪುನೋ ಗಂತುಂ ಸಮಾದಧೇ ॥ ೧೮ ॥

ಗೋಮೂತ್ರಚಯಸಿಂಧೂರಕಸ್ತೂರೀಪತ್ರಭೃನ್ಮುಖಂ ।
ವಿಂಧ್ಯಾದ್ರಿಸದೃಶಂ ಶ್ಯಾಮಂ ಮದನಿರ್ಝರಸಂಯುತಂ ॥ ೧೯ ॥

ಪಾದೇ ಚ ಶೃಂಖಲಾಜಾಲಂ ನದಂತಂ ಘನವದ್ಭೃಶಂ ।
ದ್ವಿಪಂ ಕುವಲಯಾಪೀಡಂ ಸಮಾರುಹ್ಯ ಮದೋತ್ಕಟಃ ॥ ೨೦ ॥

---

೧೭. ಚಕೋರಪಕ್ಷಿಯು ಚಂದ್ರನನ್ನು ಹೇಗೆ ಸ್ಮರಿಸಿಕೊಳ್ಳುವುದೋ ಕಮಲವು ಸೂರ್ಯನನ್ನೂ, ಚಾತಕವು ಶರತ್ಕಾಲದ ಶೈತ್ಯವನ್ನೂ, ಹಸಿದವನು ಅನ್ನವನ್ನೂ, ಬಾಯಾರಿಕೆಯುಳ್ಳವನು ಜಲವನ್ನೂ, ಹೇಗೆ ಸ್ಮರಿಸಿಕೊಳ್ಳುವರೋ ಹಾಗೆಯೇ ರಂಗೋಜಿಯೂ ಈ ಶತ್ರುಭಯ ಸಮಯದಲ್ಲಿ ನಿನ್ನನ್ನೇ ಸ್ಮರಿಸಿಕೊಳ್ಳುತ್ತಿರುವನು.

೧೮. ಎಲೈ ಬಹುಲಾಶ್ವನೇ, ಈ ರೀತಿ ಆ ದೂತನು ಹೇಳಲು ಅದನ್ನು ಕೇಳಿ ಕಂಸನು ದೈತ್ಯರನ್ನೆಲ್ಲಾ ಸೇರಿಸಿ ಮಂತ್ರಾಲೋಚನೆಯನ್ನು ಮಾಡಿ ರಂಗೋಜಿಯ ಸಹಾಯಕ್ಕೆ ಹೊರಡಲು ಸಿದ್ಧನಾದನು.

೧೯-೨೦. ಅನಂತರ ಕುವಲಯಾಪೀಡವೆಂಬ ಒಂದು ಮದಿಸಿದಾನೆಯನ್ನೇರಿ ಹೊರಟನು. ಆ ಆನೆಯ ಮುಖವು ಸಿಂಧೂರ, ಕಸ್ತೂರಿ, ಮುಂತಾದುವುಗಳಿಂದ ಚಿತ್ರಿಸಲ್ಪಟ್ಟಿತ್ತು. ವಿಂಧ್ಯಪರ್ವತದಂತೆ ದೊಡ್ಡದಾಗಿಯೂ, ಕಪ್ಪಾಗಿಯೂ, ಕಾಣಿಸುತ್ತಿತ್ತು. ಕುಂಭಸ್ಥಳಗಳಿಂದ ಮದೋದಕವು ಸುರಿಯುತ್ತಿತ್ತು. ಕಾಲುಗಳಲ್ಲಿ ದೊಡ್ಡ ದೊಡ್ಡ ಸರಪಳಿಗಳನ್ನು ಹಾಕಿದ್ದುದರಿಂದ ಕಾಲಿಡುವಾಗ ಮೇಘದ ಶಬ್ದದಂತೆ ಶಬ್ದವಾಗುತ್ತಿತ್ತು.

ಚಾಣೂರಮುಷ್ಟಿಕಾದ್ಯೈಶ್ಚ ಕೇಶೀವ್ಯೋಮವೃಷಾಸುರೈಃ ।
ಸಹಸಾ ದಂಶಿತಃ ಕಂಸಃ ಪ್ರಯಯೌ ರಂಗಪತ್ತನೇ ॥ ೨೧ ॥

ಯದೂನಾಂ ಚ ಕುರೂಣಾಂ ಚ ಬಲಯೋಸ್ತು ಪರಸ್ಪರಂ ।
ಬಾಣೈಃಖಡ್ಗೈಸ್ತ್ರಿಶೂಲೈಶ್ಚ ಘೋರಂ ಯುದ್ಧಂ ಬಭೂವ ಹ ॥ ೨೨ ॥

ಬಾಣಾಂಧಕಾರೇ ಸಂಜಾತೇ ಕಂಸೋ ನೀತ್ವಾ ಮಹಾಗದಾಂ ।
ವಿವೇಶ ಕುರುಸೇನಾಸು ವನೇ ವೈಶ್ವಾನರೋ ಯಥಾ ॥ ೨೩ ॥

ರಥಾನ್ಮಮರ್ದ ಪಾದಾಭ್ಯಾಂ ಪಾರ್ಷ್ಣಿಘಾತೇನ ಘೋಟಕಾನ್ ।
ಗಜೇ ಗಜಂ ತಾಡಯಿತ್ವಾ ಗಜಾನ್ಪ್ರೋನ್ನೀಯ ಚಾಂಘ್ರಿಷು ॥ ೨೪ ॥

---

೨೧. ಚಾಣೂರ, ಮುಷ್ಟಿಕ, ಕೇಶಿ, ವ್ಯೋಮ, ವೃಷ, ಮುಂತಾದ ರಾಕ್ಷಸರುಗಳೊಡಗೂಡಿ ಕಂಸನು ಜಾಗ್ರತೆಯಾಗಿಯೇ ರಂಗಪತ್ತನವನ್ನು ಸೇರಿದನು.

೨೨. ಯದುವೀರರೂ, ಕುರುಸೈನಿಕರೂ ಪರಸ್ಪರವಾಗಿ ಬಾಣ, ಖಡ್ಗ, ತ್ರಿಶೂಲ, ಮುಂತಾದ ಆಯುಧಗಳನ್ನು ಪ್ರಯೋಗಿಸುತ್ತಾ ಘೋರಯುದ್ಧವನ್ನು ಮಾಡಿದರು.

೨೩. ಈ ರೀತಿ ಬಾಣಗಳ ವರ್ಷಧಾರೆಯಿಂದ ಆಕಾಶವೆಲ್ಲವೂ ಬಾಣಗಳಿಂದ ತುಂಬಿ ಕತ್ತಲಾಗಲು ಕಂಸನು ಒಂದು ದೊಡ್ಡ ಗದೆಯನ್ನು ತೆಗೆದುಕೊಂಡು ಅಗ್ನಿಯು ವನವನ್ನು ಪ್ರವೇಶಿಸುವಂತೆ ಕುರುಸೇನೆಯೊಳಕ್ಕೆ ಭಯಂಕರನಾಗಿ ನುಗ್ಗಿದನು.

೨೪. ಕಾಲುಗಳಿಂದ ರಥಗಳನ್ನೊದ್ದನು. ಅವೆಲ್ಲವೂ ಚೂರುಚೂರಾಯಿತು. ಮೊಳಕೈಗಳಿಂದ ಕುದುರೆಗಳನ್ನು ಹೊಡೆದನು. ಅವು ಬಿದ್ದುರುಳಿದುವು. ಆನೆಗಳನ್ನು ಹಿಡಿದೆತ್ತಿ ಆನೆಗಳ ಮೇಲೆ ಬಿಸುಟನು. ಕಾಲುಗಳಿಂದ ಆನೆಗಳನ್ನು ಒದೆದು ಕೆಡಹುತ್ತಿದ್ದನು.

ಕಾಂಶ್ಚಿದ್ವೀರಾನ್ಸಕವಚಾನ್ಗದಯಾ ವಜ್ರಕಲ್ಪಯಾ ।
ಪಾತಯಾಮಾಸ ಭೂಪೃಷ್ಠೇ ವಜ್ರೇಣೇಂದ್ರೋ ಯಥಾ ಗಿರಿಂ ॥ ೨೫ ॥

ಸ್ಕಂಧಯೋಃ ಕಕ್ಷಯೋರ್ಧೃತ್ವಾ ಸನೀಡಾನ್ರತ್ನಕಂಬಲಾನ್ ।
ಕಾಂಶ್ಚಿದ್ಬಲಾದ್ಭ್ರಾಮಯಿತ್ವಾ ಚಿಕ್ಷೇಪ ಗಗನೇ ಬಲೀ ॥ ೨೬ ॥

ಗಜಾನ್ಶುಂಡಾಸು ಚೋನ್ನೀಯ ಲೋಲಘಂಟಾಸಮಾವೃತಾನ್ ।
ಚಿಕ್ಷೇಪ ಸಮ್ಮುಖೇ ರಾಜನ್ಯುದ್ಧೇ ವ್ಯೋಮಾಸುರೋ ಬಲೀ ॥ ೨೭ ॥

ರಥಾನ್ಗೃಹೀತ್ವಾ ಸಾಶ್ವಾಂಶ್ಚ ಶೃಂಗಾಭ್ಯಾಂ ಭ್ರಾಮಯನ್ಮುಹುಃ ।
ಚಿಕ್ಷೇಪ ದಿಕ್ಷು ಬಲವಾನ್ದೈತ್ಯೋ ದುಷ್ಟೋ ವೃಷಾಸುರಃ ॥ ೨೮ ॥

ಬಲಾತ್ಪಶ್ಚಿಮಪಾದಾಭ್ಯಾಂ ವೀರಾನಶ್ವಾನಿತಸ್ತತಃ ।
ಪಾತಯಾಮಾಸ ರಾಜೇಂದ್ರ ಕೇಶೀ ದೈತ್ಯಾಧಿಪೋ ಬಲೀ ॥ ೨೯ ॥

---

೨೫. ಆನೆಗಳನ್ನು ಹಿಡಿದು ಅವುಗಳನ್ನು ಅನೇಕ ವೀರರ ಮೇಲೆ ಎಸೆಯುತ್ತಿದ್ದನು. ವಜ್ರಾಯುಧದ ಏಟಿನಿಂದ ಪರ್ವತಗಳು ಉರುಳಿದಂತೆ ಅನೇಕರು ಭೂಮಿಯ ಮೇಲೆ ಬಿದ್ದರು.

೨೬. ಕೆಲವು ಆನೆಗಳನ್ನು ರತ್ನಗಂಬಳಿಗಳ ಸಮೇತವಾಗಿ ಭುಜ ಮತ್ತು ಮುಂಗಾಲುಗಳ ಸಂದುಗಳಲ್ಲಿ ಹಿಡಿದು ಗರಗರನೆ ತಿರುಗಿಸಿ ಆಕಾಶಕ್ಕೆ ಎಸೆಯುತ್ತಿದ್ದನು.

೨೭. ವ್ಯೋಮಾಸುರನು ಆನೆಗಳನ್ನು ಸೊಂಡಲುಗಳಲ್ಲಿ ಹಿಡಿದು ಗರಗರನೆ ತಿರುಗಿಸಿ ದೂರಕ್ಕೆ ಎಸೆಯುತ್ತಿದ್ದನು. ತಿರುಗಿಸುವಾಗ ಅವುಗಳ ಕತ್ತಿನ ಗಂಟೆಯು ಅಲುಗಾಡುತ್ತಿತ್ತು.

೨೮. ವೃಷಾಸುರನು ಕುದುರೆಗಳ ಸಹಿತವಾಗಿ ರಥಗಳನ್ನು ಹಿಡಿದು ತಿರುಗಿಸಿ ಬಲವಾಗಿ ದೂರಕ್ಕೆಸೆದನು.

೨೯. ಬಲಶಾಲಿಯಾದ ಕೇಶಿಯು ತನ್ನ ಹಿಂಗಾಲಿನಿಂದ ಸೈನಿಕರನ್ನೂ ರಥಗಳನ್ನೂ ಒದೆದು ಒದೆದು ಕೆಳಕ್ಕೆ ಕೆಡವುತ್ತಿದ್ದನು.

ಏವಂ ಭಯಂಕರಂ ಯುದ್ಧಂ ದೃಷ್ಟ್ವಾ ವೈ ಕುರುಸೈನಿಕಾಃ ।
ಶೇಷಾ ಭಯಾತುರಾ ವೀರಾ ಜಗ್ಮುಸ್ತೇಽಪಿ ದಿಶೋ ದಶ ॥ ೩೦ ॥

ರಂಗೋಜಿಂ ಸಕುಟುಂಬಂ ತಂ ನೀತ್ವಾ ಕಂಸೋಽಥ ದೈತ್ಯರಾಟ್ ।
ಮಥುರಾಂ ಪ್ರಯಯೌ ವೀರೋ ನಾದಯನ್ದುಂದುಭೀನ್ಮೃಧೈಃ ॥ ೩೧ ॥

ಶ್ರುತ್ವಾ ಪರಾಜಯಂ ಸ್ವಸ್ಯ ಕೌರವಾಃ ಕ್ರೋಧಮೂರ್ಛಿತಾಃ ।
ದೈತ್ಯಾನಾಂ ಸಮಯಂ ದೃಷ್ಟ್ವಾ ಸರ್ವೇ ವೈ ಮೌನಮಾಸ್ಥಿತಾಃ ॥ ೩೨ ॥

ಪುರಂ ಬರ್ಹಿಷದಂ ನಾಮ ವ್ರಜಸೀಮ್ನಿ ಮನೋಹರಂ ।
ರಂಗೋಜಯೇ ದದೌ ಕಂಸೋ ದೈತ್ಯನಾಮಧಿಪೋ ಬಲೀ ॥ ೩೩ ॥

ವಾಸಂ ಚಕಾರ ತತ್ರೈವ ರಂಗೋಜಿರ್ಗೋಪನಾಯಕಃ ।
ಬಭೂವುಸ್ತಸ್ಯ ಭಾರ್ಯಾಸು ಜಾಲಂಧರ್ಯೋ ಹರೇರ್ವರಾತ್ ॥ ೩೪ ॥

---

೩೦. ಈ ಭಯಂಕರ ಯುದ್ಧವನ್ನು ನೋಡಿ ಕುರುಸೈನಿಕರೆಲ್ಲಾ ಹೆದರಿದರು. ಸತ್ತುಳಿದ ಜನರೆಲ್ಲರೂ ಹೆದರಿ ದಿಕ್ಕಾಪಾಲಾಗಿ ಓಡಿಹೋದರು.

೩೧. ಆಮೇಲೆ ಕಂಸನು ರಂಗೋಜಿಯನ್ನು ಅವನ ಪರಿವಾರ ಸಮೇತವಾಗಿ ಕರೆದುಕೊಂಡು ಜಯದುಂದುಭಿಗಳು ಮೊಳಗುತ್ತಿರಲು ಮಥುರೆಗೆ ಹೋಗಿ ಸೇರಿದನು.

೩೨. ತಮಗೆ ಪರಾಜಯವಾದುದನ್ನು ಕೇಳಿ ಕೌರವರಿಗೆ ಅತಿಕೋಪ ಬಂದಿತು. ಆದರೇನು, ನಿರುಪಾಯರಾಗಿ ಎಲ್ಲರೂ ಇದು ದೈತ್ಯರಿಗೆ ಸರಿಯಾದ ಕಾಲವೆಂದು ತಿಳಿದು ಸುಮ್ಮನಾದರು.

೩೩. ದೈತ್ಯರಾಜನಾದ ಕಂಸನು ಗೋವಾಸದ ಎಲ್ಲೆಯಲ್ಲಿರುವ ಅತಿ ಮನೋಹರವಾದ ಬರ್ಹಿಷದವೆಂಬ ಪಟ್ಟಣವನ್ನು ರಂಗೋಜಿಗೆ ಬಹುಮಾನವಾಗಿ ಅರ್ಪಿಸಿದನು.

೩೪. ಆಗ ರಂಗೋಜಿಯು ರಂಗಪುರವನ್ನು ಬಿಟ್ಟು ಬರ್ಹಿಷದದಲ್ಲಿಯೇ ವಾಸಮಾಡಲು ಪ್ರಾರಂಭಿಸಿದನು. ಅಲ್ಲಿಯೇ ರಾಜ್ಯವಾಳಿದನು. ಆ ಸಮಯದಲ್ಲಿ ಶ್ರೀಕೃಷ್ಣನ ವರದಿಂದ ಅವನ ಹೆಂಡತಿಯರಲ್ಲಿ ಜಾಲಂಧರೀಗೋಪಿಯರು ಹುಟ್ಟಿದರು.

ಪರಿಣೀತಾ ಗೋಪಜನ್ಯೈ ರೂಪಯೌವನಭೂಷಿತಾಃ ।
ಜಾರಧರ್ಮೇಣ ಸುಸ್ನೇಹಂ ಶ್ರೀಕೃಷ್ಣೇ ತಾಃ ಪ್ರಚಕ್ರಿರೇ ॥ ೩೫ ॥

ಚೈತ್ರಮಾಸೇ ಮಹಾರಾಸೇ ತಾಭಿಸ್ಸಾಕಂ ಹರಿಸ್ಸ್ವಯಂ ।
ಪುಣ್ಯೇ ವೃಂದಾವನೇ ರಮ್ಯೇ ರೇಮೇ ವೃಂದಾವನೇಶ್ವರಃ ॥ ೩೬ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಮಾಧುರ್ಯಖಂಡೇ
ಜಾಲಂಧರ್ಯುಪಾಖ್ಯಾನಂ ನಾಮ ಚತುರ್ದಶೋಽಧ್ಯಾಯಃ

---

೩೫. ಸುಂದರಿಯರೂ, ಯುವತಿಯರೂ ಆದ ಅವರನ್ನು ಗೋಪಾಲಕರಿಗ ಕೊಟ್ಟು ಮದುವೆಯಾಗಿದ್ದಿತು. ಆದರೂ ಅವರು ಜಾರಧರ್ಮವನ್ನವಲಂಬಿಸಿ ಶ್ರೀಕೃಷ್ಣನಲ್ಲಿ ಪ್ರಣಯವುಳ್ಳವರಾದರು.

೩೬. ಚೈತ್ರಮಾಸದ ರಮಣೀಯಕಾಲದಲ್ಲಿ ರಾಸಕ್ರೀಡೆಯಾಡುವ ಸಮಯದಲ್ಲಿ ಶ್ರೀಕೃಷ್ಣನು ಆ ಜಾಲಂಧರೀಗೋಪಿಯರೊಡನೆ ಮನೋಹರವಾದ ವೃಂದಾವನದಲ್ಲಿ ರಾಸಕ್ರೀಡೆಯಾಡಿದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಮಾಧುರ್ಯಖಂಡದಲ್ಲಿ ಜಾಲಂಧರೀ
ಗೋಪಿಯರ ಉಪಾಖ್ಯಾನವೆಂಬ ಹದಿನಾಲ್ಕನೆಯ
ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಮಾಧುರ್ಯಖಂಡೇ

ಪಂಚದಶೋಽಧ್ಯಾಯಃ

॥ ಶ್ರೀ ನಾರದ ಉವಾಚ ॥

ವ್ರಜೇ ಶೋಣಪುರಾಧೀಶೋ ಗೋಪೋ ನಂದೋ ಧನೀ ಮಹಾನ್ ।
ಭಾರ್ಯಾಃಪಂಚಸಹಸ್ರಾಣಿ ಬಭೂವುಸ್ತಸ್ಯ ಮೈಥಿಲ ॥ ೧ ॥

ಜಾತಾ ಮತ್ಸ್ಯವರಾತ್ತಾಸ್ತು ಸಮುದ್ರೇ ಗೋಪಕನ್ಯಕಾಃ ।
ತಥಾನ್ಯಾಶ್ಚ ತ್ರಿವಾಚಾಪಿ ಪೃಥಿವ್ಯಾ ದೋಹನಾನ್ನೃಪ ॥ ೨ ॥

ಬರ್ಹಿಷ್ಮತೀಪುರಂಧ್ರ್ಯೋ ಯಾ ಜಾತಾ ಜಾತಿಸ್ಮರಾಃ ಪರಾಃ ।
ತಥಾನ್ಯಾಪ್ಸರಸೋಽಭೂವನ್ ವರಾನ್ನಾರಾಯಣಸ್ಯ ಚ ॥ ೩ ॥

ಹದಿನೈದನೆಯ ಅಧ್ಯಾಯವು

೧. ನಾರದನು ಹೇಳಿದನು :—ಎಲೈ ಬಹುಲಾಶ್ವನೇ, ಗೋಕುಲದಲ್ಲಿ ಶೋಣಪುರಕ್ಕಧಿಪತಿಯಾದ ನಂದನೆಂಬ ಗೋಪನು ಇದ್ದನು. ಅವನು ಧನವಂತನು. ಅವನಿಗೆ ಐದುಸಾವಿರಜನ ಹೆಂಡತಿಯರಿದ್ದರು.

೨. ಅವರಲ್ಲಿ ಕೆಲವರು ಮತ್ಸ್ಯರೂಪಿ ವಿಷ್ಣುವಿನ ವರದಿಂದ ಸಮುದ್ರದಲ್ಲಿ ಹುಟ್ಟಿದವರು. ಮತ್ತೆ ಕೆಲವರು ತ್ರಿವಾಚನು ಪೃಥಿವಿಯನ್ನು ಕರೆದಾಗ ಹುಟ್ಟಿದವರು.

೩. ಕೆಲವರು ಬರ್ಹಿಷ್ಮತೀಪುರದಲ್ಲಿ ಜನಿಸಿದ ಅಂಗನೆಯರು. ಅವರಿಗೆ ಹಿಂದಿನ ಜನ್ಮದ ನೆನಪಿದ್ದಿತು. ಮತ್ತೆ ಕೆಲವರು ನಾರಾಯಣನ ವರದಿಂದ ಹುಟ್ಟಿದ ಅಪ್ಸರೆಯರು.

ತಥಾ ಸುತಲವಾಸಿನ್ಯೋ ವಾಮನಸ್ಯ ವರಾತ್ ಸ್ತ್ರಿಯಃ ।
ತಥಾ ನಾಗೇಂದ್ರಕನ್ಯಾಶ್ಚ ಜಾತಾಃ ಶೇಷವರಾತ್ ಪರಾತ್ ॥ ೪ ॥

ತಾಭ್ಯೋ ದುರ್ವಾಸಸಾ ದತ್ತಂ ಕೃಷ್ಣಾ ಪಂಚಾಂಗಮದ್ಭುತಂ ।
ತೇನ ಸಂಪೂಜ್ಯ ಯಮುನಾಂ ವವ್ರಿರೇ ಶ್ರೀಪತಿಂ ವರಂ ॥ ೫ ॥

ಏಕದಾ ಶ್ರೀಹರಿಸ್ತಾಭಿರ್ವೃಂದಾರಣ್ಯೇ ಮನೋಹರೇ ।
ಯಮುನಾನಿಕಟೇ ದಿವ್ಯೇ ಪುಂಸ್ಕೋಕಿಲತರುವ್ರಜೇ ॥ ೬ ॥

ಮಧುಪಧ್ವನಿಸಂಯುಕ್ತೇ ಕೂಜತ್ಕೋಕಿಲಸಾರಸೇ ।
ಮಧುಮಾಸೇ ಮಂದವಾಯೌ ವಸಂತಲತಿಕಾವೃತೇ ॥ ೭ ॥

---

೪. ವಾಮನರೂಪಿ ವಿಷ್ಣುವಿನ ವರದಿಂದ ಹುಟ್ಟಿ, ಸುತಲಲೋಕದಲ್ಲಿ ವಾಸವಾಗಿರುವವರು ಕೆಲವರು. ಆದಿಶೇಷನ ವರದಿಂದ ಹುಟ್ಟಿದ ನಾಗಕನ್ಯೆಯರು ಕೆಲವರು.

೫. ಇವರೆಲ್ಲರೂ ದುರ್ವಾಸನಿಂದ ಉಪದೇಶಿಸಲ್ಪಟ್ಟ ಕೃಷ್ಣಾಪಂಚಾಂಗವೆಂಬ ಮಂತ್ರವನ್ನು ಜಪಿಸಿ ಯಮುನೆಯನ್ನು ಪೂಜಿಸಿ ಅದರ ಮಹಿಮೆಯಿಂದ ಶ್ರೀಕೃಷ್ಣನನ್ನು ಪಡೆದರು.

೬. ಒಂದಾನೊಂದು ದಿನ ಶ್ರೀಕೃಷ್ಣನು ಯಮುನಾನದಿಯ ದಡದಲ್ಲಿರುವ ಅತಿರಮಣೀಯವಾಗಿರುವ ವೃಂದಾವನದಲ್ಲಿ ಈ ಅಂಗನೆಯರೊಡನೆ ಕ್ರೀಡಿಸಿದನು.

೭. ಆ ಸಮಯದಲ್ಲಿ ವಸಂತಋತುವು ಪ್ರಾಪ್ತವಾಗಿತ್ತು. ಮರಗಳೆಲ್ಲಾ ಚಿಗುರಿ ಮನೋಹರವಾಗಿದ್ದವು. ಅವುಗಳ ಮೇಲೆ ಕುಳಿತು ಕೋಗಿಲೆಗಳು ಕೂಗುತ್ತಿದ್ದವು. ನೀರ್ವಕ್ಕಿಗಳು ಧ್ವನಿಮಾಡುತ್ತಿದ್ದವು. ಮಂದಮಾರುತವು ಬೀಸುತ್ತಿತ್ತು. ಮಲ್ಲಿಗೆಬಳ್ಳಿಗಳು ಚಿಗುರಿ ಪುಷ್ಪಿತವಾಗಿದ್ದವು. ಅದರ ವಾಸನೆಗೆ ಎಲ್ಲೆಲ್ಲೂ ದುಂಬಿಗಳು ಝೇಂಕಾರಮಾಡುತ್ತಾ ಹಾರಾಡುತ್ತಿದ್ದವು.

ದೋಲೋತ್ಸವಂ ಸಮಾರೇಭೇ ಹರಿರ್ಮದನಮೋಹನಃ ।
ಕದಂಬವೃಕ್ಷೇ ರಹಸಿ ಕಲ್ಪವೃಕ್ಷಮನೋಹರೇ ॥ ೮ ॥

ಕಾಲಿಂದೀಜಲಕಲ್ಲೋಲಕೋಲಾಹಲಸಮಾಕುಲೇ ।
ತದ್ದೋಲಾಖೇಲನಂ ಚಕ್ರುಸ್ತಾ ಗೋಪ್ಯಃ ಪ್ರೇಮವಿಹ್ವಲಾಃ ॥ ೯ ॥

ರಾಧಯಾ ಕೀರ್ತಿಸುತಯಾ ಚಂದ್ರಕೋಟಿಪ್ರಕಾಶಯಾ ।
ರೇಜೇ ವೃಂದಾವನೇ ಕೃಷ್ಣೋ ಯಥಾ ರತ್ಯಾ ರತೀಶ್ವರಃ ॥ ೧೦ ॥

ಏವಂ ಪ್ರಾಪ್ತಾಶ್ಚ ಯಾಸ್ಸರ್ವಾಃ ಶ್ರೀಕೃಷ್ಣಂ ನಂದನಂದನಂ ।
ಪರಿಪೂರ್ಣತಮಂ ಸಾಕ್ಷಾತ್ತಾಸಾಂ ಕಿಂ ವರ್ಣ್ಯತೇ ತಪಃ ॥ ೧೧ ॥

ನಾಗೇಂದ್ರಕನ್ಯಾ ಯಾಃ ಸರ್ವಾಶ್ಚೈತ್ರಮಾಸೇ ಮನೋಹರೇ ।
ಬಲಭದ್ರಂ ಹರಿಂ ಪ್ರಾಪ್ತಾ ಕೃಷ್ಣಾತೀರೇ ತು ತಾಃ ಶುಭಾಃ ॥ ೧೨ ॥

---

೮. ಕಲ್ಪವೃಕ್ಷದಂತಿರುವ ಕದಂಬವೃಕ್ಷಗಳಲ್ಲಿ ಉಯ್ಯಾಲೆಯನ್ನು ಕಟ್ಟಿ ರಹಸ್ಯವಾಗಿ ಮನ್ಮಥನಂತಿರುವ ಕೃಷ್ಣನು ಆ ಗೋಪಿಯರೊಡನೆ ಉಯ್ಯಾಲೆಯಾಡಿದನು.

೯. ಗೋಪಿಯರೂ ಸಹ ಆ ಯಮುನಾನದಿಯ ದಡದಲ್ಲಿ, ಯಮುನೆಯ ಅಲೆಗಳ ಶಬ್ದವು ಮನೋಹರವಾಗಿ ಕೇಳುತ್ತಿರಲು ಪ್ರೇಮಪೂರಿತರಾಗಿ ಉಯ್ಯಾಲೆಗಳನ್ನಾಡಿದರು.

೧೦. ಕೃಷ್ಣನು ಕೀರ್ತಿಯ ಮಗಳಾದ, ಕೋಟಿಚಂದ್ರಪ್ರಕಾಶಳಾದ ರಾಧೆಯೊಡನೆ ಮನ್ಮಥನು ರತಿಯೊಡನೆ ಕ್ರೀಡಿಸಿದಂತೆ ವೃಂದಾವನದಲ್ಲಿ ಕ್ರೀಡಿಸಿದನು.

೧೧. ಈ ರೀತಿ ಗೋಪಿಯರೆಲ್ಲರೂ ನಂದನ ಮಗನಾದ, ಪರಿಪೂರ್ಣತಮನಾದ ಶ್ರೀಕೃಷ್ಣನನ್ನು ಸಾಕ್ಷಾತ್ತಾಗಿ ಪಡೆದರು. ಇಂಥವರ ಚರಿತ್ರೆಯನ್ನು ಹೇಗೆ ತಾನೆ ವರ್ಣಿಸಲಾದೀತು ?

೧೨. ನಾಗೇಂದ್ರ ಕನ್ಯೆಯರೂ ಸಹ ಮನೋಹರವಾದ ಚೈತ್ರಮಾಸದಲ್ಲಿ ಕೃಷ್ಣಾನದಿಯ ತೀರದಲ್ಲಿ ಬಲಭದ್ರನನ್ನೂ ಹರಿಯನ್ನೂ ಪಡೆದರು.

ಇದಂ ಮಯಾ ತೇ ಕಥಿತಂ ಗೋಪೀನಾಂ ಚರಿತಂ ಶುಭಂ ।
ಸರ್ವಪಾಪಹರಂ ಪುಣ್ಯಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೩ ॥

॥ ಬಹುಲಾಶ್ವ ಉವಾಚ ॥

ಯಮುನಾಯಾಶ್ಚ ಪಂಚಾಂಗಂ ದತ್ತಂ ದುರ್ವಾಸಸಾ ಮುನೇ ।
ಗೋಪೀಭ್ಯೋ ಯೇನ ಗೋವಿಂದಃ ಪ್ರಾಪ್ತಸ್ತದ್ಬ್ರೂಹಿ ಮಾಂ ಪ್ರಭೋ ॥

॥ ಶ್ರೀ ನಾರದ ಉವಾಚ ॥

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ ।
ಯಸ್ಯ ಶ್ರವಣಮಾತ್ರೇಣ ಪಾಪಹಾನಿಃ ಪರಾ ಭವೇತ್ ॥ ೧೫ ॥

ಅಯೋಧ್ಯಾಧಿಪತಿಃ ಶ್ರೀಮಾನ್ ಮಾಂಧಾತಾ ರಾಜಸತ್ತಮಃ ।
ಮೃಗಯಾಂ ವಿಚರನ್ ಪ್ರಾಪ್ತಃ ಸೌಭರೇರಾಶ್ರಮಂ ಶುಭಂ ॥ ೧೬ ॥

---

೧೩. ಎಲೈ ಬಹುಲಾಶ್ವನೇ, ಗೋಪಿಕಾಸ್ತ್ರೀಯರ ಶುಭಚರಿತ್ರೆಯನ್ನು ಹೇಳಿರುವೆನು. ಇದು ಮಂಗಳಪ್ರದವಾದುದು. ಇದನ್ನು ಕೇಳಿದವರ ಪಾಪಗಳೆಲ್ಲವೂ ನಾಶವಾಗುವುವು. ಪುಣ್ಯವನ್ನುಂಟುವಾಡುವುದು. ಮತ್ತೇನನ್ನು ಕೇಳಬೇಕೆಂದಿರುವೆ? ಕೇಳು ಎಂದನು.

೧೪. ಬಹುಲಾಶ್ವನು ಕೇಳಿದನು :—ಎಲೈ ಮುನಿವರನೇ, ಯಮುನಾ ಪಂಚಾಂಗವೆಂಬ ಮಂತ್ರವನ್ನು ದುರ್ವಾಸನು ಗೋಪಿಯರಿಗೆ ಉಪದೇಶಿಸಿದನು. ಅದರಿಂದ ಗೋಪಿಯರಿಗೆ ಗೋವಿಂದನ ಸಾನ್ನಿಧ್ಯವು ಸಿಕ್ಕಿತು ಎಂದು ಹೇಳಿದೆಯಲ್ಲವೇ, ಯಮುನಾಪಂಚಾಂಗವೆಂದರೇನು ? ಅದರ ವಿಷಯವನ್ನು ನನಗೆ ತಿಳಿಸು.

೧೫. ಎನ್ನಲು ನಾರದನು ಅದನ್ನು ಹೇಳಲು ಪ್ರಾರಂಭಿಸಿದನು :— ಈ ಯಮುನಾಪಂಚಾಂಗದ ವಿಷಯದಲ್ಲಿ ಪುರಾತನವಾದ ಮುಂದೆ ಹೇಳುವ ಇತಿಹಾಸವಿರುವುದೆಂದು ಹೇಳುವರು. ಅದನ್ನು ಕೇಳಿದುದರಿಂದ ಪಾಪಗಳೆಲ್ಲವೂ ನಾಶವಾಗುವುವು.

೧೬. ಒಂದುಸಾರೆ ಅಯೋಧ್ಯಾಧಿಪತಿಯಾದ ಮಾಂಧಾತನೆಂಬ ರಾಜನು ಬೇಟೆಗೆ ಹೋಗಿದ್ದನು. ಸಂಚರಿಸುತ್ತಾ ಸೌಭರಿಋಷಿಯ ಆಶ್ರಮಕ್ಕೆ ಬಂದನು.

ವೃಂದಾವನೇ ಸ್ಥಿತಂ ಸಾಕ್ಷಾತ್ಕೃಷ್ಣಾತೀರೇ ಮನೋಹರೇ ।
ನತ್ವಾ ಜಾಮಾತರೋ ರಾಜಾ ಸೌಭರಿಂ ಪ್ರಾಹ ಮಾನದಃ ॥ ೧೭ ॥

॥ ಮಾಂಧಾತೋವಾಚ ॥

ಭಗವನ್ ಸರ್ವವಿತ್ಸಾಕ್ಷಾತ್ ತ್ವಂ ಪರಾವರಸತ್ತಮ ।
ಲೋಕಾನಾಂ ತಮಸೋಂಧಾನಾಂ ದಿವ್ಯಸೂರ್ಯ ಇವಾಪರಃ ॥ ೧೮ ॥

ಇಹಲೋಕೇ ಭವೇದ್ರಾಜ್ಯಂ ಸರ್ವಸಿದ್ಧಿಸಮನ್ವಿತಂ ।
ಅಮುತ್ರ ಕೃಷ್ಣಸಾರೂಪ್ಯಂ ಯೇನ ಸ್ಯಾತ್ತದ್ವದಾಶು ಮೇ ॥ ೧೯ ॥

॥ ಸೌಭರಿರುವಾಚ ॥

ಯಮುನಾಯಾಶ್ಚ ಪಂಚಾಂಗಂ ವದಿಷ್ಯಾಮಿ ತವಾಗ್ರತಃ ।
ಸರ್ವಸಿದ್ಧಿಕರಂ ಶಶ್ವತ್ಕೃಷ್ಣಸಾರೂಪ್ಯಕಾರಣಂ ॥ ೨೦ ॥

---

೧೭. ಆ ಸ್ಥಳವು ಯಮುನಾನದಿಯ ದಡದಲ್ಲಿರುವ ಮನೋಹರವಾದ ವೃಂದಾವನವಾಗಿದ್ದಿತು. ಅಲ್ಲಿಗೆ ಬಂದ ಮಾಂಧಾತನು ಸೌಭರಿ ಋಷಿಯನ್ನು ನಮಸ್ಕರಿಸಿ ಇಂತೆಂದನು.

೧೮-೧೯. ಭಗವನ್, ನೀನು ಸರ್ವಜ್ಞನು. ಪರಾವರಜ್ಞಾನಿಯು. ಅಜ್ಞಾನಾಂಧಕಾರದಿಂದ ಮುಳುಗಿರುವ ಲೋಕಗಳಿಗೆ ಸೂರ್ಯನಂತಿರುವವನು. ಈ ಲೋಕದಲ್ಲಿ ಸರ್ವಸಂಪತ್ಸಮೃದ್ಧವಾದ ರಾಜ್ಯವು ದೊರಕಿರುವುದು. ಆದರೆ ಪರಲೋಕದಲ್ಲಿ ಅದೆಲ್ಲಿ ಬರಬೇಕು? ಅದಕ್ಕೋಸ್ಕರ ಶ್ರೀಕೃಷ್ಣನ ಸಾರೂಪ್ಯವನ್ನು ಪಡೆಯಲು ಯತ್ನಿಸಬೇಕು. ಯಾವ ರೀತಿ ಅದನ್ನು ಪಡೆಯಬಹುದು? ಎಂಬುದನ್ನು ದಯವಿಟ್ಟು ತಿಳಿಸು.

೨೦. ಎಂಬುದಾಗಿ ಕೇಳಲು ಆಗ ಸೌಭರಿಯು ಹೇಳಿದನು:—ಎಲೈ ರಾಜನೇ, ಯಮುನಾಪಂಚಾಂಗವೆಂಬುದನ್ನು ನಿನಗೆ ತಿಳಿಸುವೆನು. ಅದರಿಂದಲೇ ಸರ್ವವೂ ಸಿದ್ಧಿಸುವುವು. ಶ್ರೀಕೃಷ್ಣನ ಸಾರೂಪ್ಯ ಮೋಕ್ಷವೂ ದೊರಕುವುದು.

ಯಾವತ್ಸೂರ್ಯ ಉದೇತಿ ಸ್ಮ ಯಾವಚ್ಚ ಪ್ರತಿತಿಷ್ಠತಿ ।
ತಾವದ್ರಾಜ್ಯಪ್ರದಂ ಚಾತ್ರ ಶ್ರೀಕೃಷ್ಣವಶಕಾರಕಂ ॥ ೨೧ ॥

ಕವಚಂ ಸ್ತವನಂ ನಾಮ್ನಾಂ ಸಹಸ್ರಂ ಪಟಲಂ ತಥಾ ।
ಪದ್ಧತಿಂ ಸೂರ್ಯವಂಶೇಂದ್ರ ಪಂಚಾಂಗಾನಿ ವಿದುರ್ಬುಧಾಃ ॥ ೨೨ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಮಾಧುರ್ಯಖಂಡೇ
ಪಂಚದಶೋಽಧ್ಯಾಯಃ

---

೨೧. ಎಲ್ಲಿಯವರೆಗೆ ಸೂರ್ಯನು ಉದಯಿಸುತ್ತಿರುವನೋ ಮತ್ತು ಶಾಶ್ವತವಾಗಿರುವನೋ ಅಲ್ಲಿಯವರೆಗೂ ಈ ಯಮುನಾಪಂಚಾಂಗದ ಪ್ರಭಾವವಿರುವುದು. ಅಲ್ಲಿಯವರೆಗೂ ಇದು ರಾಜ್ಯಪ್ರದವಾದುದು. ಮತ್ತು ಶ್ರೀಕೃಷ್ಣನ ಸಾನ್ನಿಧ್ಯವನ್ನು ದೊರಕಿಸಿಕೊಡುವುದು.

೨೨. ಅದರಲ್ಲಿ ನಾಲ್ಕು ಪಂಚಾಂಗಗಳಿರುವುವು. ಯಮುನಾಕವಚ, ಯಮುನಾಸ್ತವನ, ಯಮುನಾಸಹಸ್ರನಾಮ, ಯಮುನಾಪಟಲಪದ್ಧತಿ ಎಂದು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಮಾಧುರ್ಯಖಂಡದಲ್ಲಿ
ಹದಿನೈದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಮಾಧುರ್ಯಖಂಡೇ

ಷೋಡಶೋಽಧ್ಯಾಯಃ

॥ ಮಾಂಧಾತೋವಾಚ ॥

ಯಮುನಾಯಾಃ ಕೃಷ್ಣರಾಜ್ಞ್ಯಾಃ ಕವಚಂ ಸರ್ವತೋಽಮಲಂ ।
ದೇಹಿ ಮಹ್ಯಂ ಮಹಾಭಾಗ ಧಾರಯಿಷ್ಯಾಮ್ಯಹಂ ಸದಾ ॥ ೧ ॥

॥ ಸೌಭರಿರುವಾಚ ॥

ಯಮುನಾಯಾಶ್ಚ ಕವಚಂ ಸರ್ವರಕ್ಷಾಕರಂ ನೃಣಾಂ ।
ಚತುಷ್ಪದಾರ್ಥದಂ ಸಾಕ್ಷಾಚ್ಛೃಣುರಾಜನ್ಮಹಾಮತೇ ॥ ೨ ॥

ಹದಿನಾರನೆಯ ಅಧ್ಯಾಯವು

೧. ಮಾಂಧಾತನು ಸೌಭರಿಯನ್ನು ಕುರಿತು ಕೇಳಿದನು :—ಎಲೈ ಮಹಾತ್ಮನೇ, ಕೃಷ್ಣನ ರಾಣಿಯಾದ ಯಮುನೆಯ ಪವಿತ್ರವಾದ ಕವಚವನ್ನು ನನಗೆ ಅನುಗ್ರಹಿಸು. ನಾನದನ್ನು ಯಾವಾಗಲೂ ಧರಿಸುವೆನು.

೨. ಎಂದು ಕೇಳಲು ಸೌಭರಿಯು ಇಂತೆಂದನು :—ಎಲೈ ಮಹಾಬುದ್ಧಿಶಾಲಿಯಾದ ರಾಜನೇ, ಕೇಳು. ಈ ಯಮುನಾಕವಚವು ಮನುಜರನ್ನು ಸರ್ವವಿಧದಿಂದಲೂ ರಕ್ಷಿಸುವುದು. ಧರ್ಮಾರ್ಥಕಾಮಮೋಕ್ಷಗಳನ್ನು ದೊರಕಿಸಿಕೊಡುವುದು.

ಕೃಷ್ಣಾಂ ಚತುರ್ಭುಜಾಂ ಶ್ಯಾಮಾಂ ಪುಂಡರೀಕದಲೇಕ್ಷಣಾಂ ।
ರಥಸ್ಥಾಂ ಸುಂದರೀಂ ಧ್ಯಾತ್ವಾ ಧಾರಯೇತ್ಕವಚಂ ತತಃ ॥ ೩ ॥

ಸ್ನಾತಃ ಪೂರ್ವಮುಖೋ ಮೌನೀ ಕೃತಸಂಧ್ಯಃ ಕುಶಾಸನೇ ।
ಕುಶೈರ್ಬದ್ಧಶಿಖೋ ವಿಪ್ರಃ ಪಠೇದ್ವೈ ಸ್ವಸ್ತಿಕಾಸನಃ ॥ ೪ ॥

ಯಮುನಾ ಮೇ ಶಿರಃ ಪಾತು ಕೃಷ್ಣಾ ನೇತ್ರದ್ವಯಂ ಸದಾ ।
ಶ್ಯಾಮಾ ಭ್ರೂಭಂಗದೇಶಂ ಚ ನಾಸಿಕಾಂ ನಾಕವಾಸಿನೀ ॥ ೫ ॥

ಕಪೋಲೌ ಪಾತು ಮೇ ಸಾಕ್ಷಾತ್ಪರಮಾನಂದರೂಪಿಣೀ ।
ಕೃಷ್ಣವಾಮಾಂಸಸಂಭೂತಾ ಪಾತು ಕರ್ಣದ್ವಯಂ ಮಮ ॥ ೬ ॥

ಅಧರೌ ಪಾತು ಕಾಲಿಂದೀ ಚಿಬುಕಂ ಸೂರ್ಯಕನ್ಯಕಾ ।
ಯಮಸ್ವಸಾ ಕಂಧರಾಂ ಚ ಹೃದಯಂ ಮೇ ಮಹಾನದೀ ॥ ೭ ॥

---

೩. ಕವಚವನ್ನು ಧರಿಸುವ ಮೊದಲು ಚತುರ್ಭುಜಗಳಿಂದ ಕೂಡಿದವಳೂ, ಯುವತಿಯೂ, ಕಮಲದಳದಂತೆ ಕಣ್ಣುಗಳುಳ್ಳವಳೂ, ರಥದಲ್ಲಿ ಕುಳಿತಿರುವವಳೂ, ಸುಂದರಿಯೂ ಆದ ಯಮುನೆಯನ್ನು ಧ್ಯಾನಮಾಡಿ ಅನಂತರ ಕವಚವನ್ನು ಧರಿಸಬೇಕು.

೪. ಕವಚವನ್ನು ಧರಿಸುವ ಬ್ರಾಹ್ಮಣನು ಸ್ನಾನಮಾಡಿದನಂತರ ಪೂರ್ವ ಮುಖವಾಗಿ ದರ್ಭೆಗಳಿಂದ ಮಾಡಿರುವ ಸ್ವಸ್ತಿಕಾಸನದಲ್ಲಿ ಕುಳಿತು, ಸಂಧ್ಯಾವಂದನೆ ಯನ್ನು ಮಾಡಬೇಕು. ದರ್ಭೆಗಳಿಂದ ಶಿಖೆಯನ್ನು ಕಟ್ಟಿ ಈ ರೀತಿ ಹೇಳಬೇಕು.

೫. ಯಮುನೆಯು ನನ್ನ ಶಿರಸ್ಸನ್ನು ರಕ್ಷಿಸಲಿ. ಕೃಷ್ಣೆಯು ನನ್ನ ಎರಡು ಕಣ್ಣುಗಳನ್ನು ಕಾಪಾಡಲಿ. ಶ್ಯಾಮೆಯು ಹುಬ್ಬಿನ ನಡುವೆ ಪ್ರದೇಶವನ್ನು ರಕ್ಷಿಸಲಿ, ನಾಕವಾಸಿನಿಯು ನನ್ನ ನಾಸಿಕೆಯನ್ನು ಕಾಪಾಡಲಿ.

೬-೭. ಸಾಕ್ಷಾತ್ಪರಮಾನಂದರೂಪಿಣಿಯು ಕೆನ್ನೆಗಳನ್ನೂ, ಕೃಷ್ಣವಾಮಾಂಸ ಸಂಭೂತಳು ಎರಡು ಕಿವಿಗಳನ್ನೂ ಕಾಪಾಡಲಿ. ಕಾಲಿಂದಿಯು ತುಟಿಗಳನ್ನೂ ಸೂರ್ಯಕನ್ನಿಕೆಯು ಗಲ್ಲವನ್ನೂ ರಕ್ಷಿಸಲಿ. ಯಮುನ ಮಗಳು ನನ್ನ ಕತ್ತನ್ನೂ, ಮಹಾನದಿಯು ನನ್ನ ಹೃದಯವನ್ನು ರಕ್ಷಿಸಲಿ.

ಕೃಷ್ಣಪ್ರಿಯಾ ಪಾತು ಪೃಷ್ಠಂ ತಟಿನೀ ಮೇ ಭುಜದ್ವಯಂ ।
ಶ್ರೋಣೀತಟಂ ಚ ಸುಶ್ರೋಣೀ ಕಟಿಂ ಮೇ ಚಾರುದರ್ಶನಾ ॥ ೮ ॥

ಊರುದ್ವಯಂ ತು ರಂಭೋರು ಜಾನುನೀ ತ್ವಂಘ್ರಿಭೇದಿನೀ ।
ಗುಲ್ಫೌ ರಾಸೇಶ್ವರೀ ಪಾತು ಪಾದೌ ಪಾಪಾಪಹಾರಿಣೀ ॥ ೯ ॥

ಅಂತರ್ಬಹಿರಧಶ್ಚೋರ್ಧ್ವಂ ದಿಶಾಸು ವಿದಿಶಾಸು ಚ ।
ಸಮಂತಾತ್ಪಾತು ಜಗತಃ ಪರಿಪೂರ್ಣತಮಪ್ರಿಯಾ ॥ ೧೦ ॥

ಇದಂ ಶ್ರೀಯಮುನಾಯಾಶ್ಚ ಕವಚಂ ಪರಮಾದ್ಭುತಂ ।
ದಶವಾರಂ ಪಠೇದ್ಭಕ್ತ್ಯಾ ನಿರ್ಧನೋ ಧನವಾನ್ಭವೇತ್ ॥ ೧೧ ॥

ತ್ರಿಭಿರ್ಮಾಸೈಃ ಪಠೇದ್ಧೀಮಾನ್ ಬ್ರಹ್ಮಚಾರೀ ಮಿತಾಶನಃ ।
ಸರ್ವರಾಜ್ಯಾಧಿಪತ್ಯತ್ವಂ ಪ್ರಾಪ್ಯತೇ ನಾತ್ರ ಸಂಶಯಃ ॥ ೧೨ ॥

---

೮. ಕೃಷ್ಣಪ್ರಿಯಳು ನನ್ನ ಬೆನ್ನನ್ನೂ, ತಟನಿಯು ನನ್ನ ಭುಜಗಳನ್ನೂ ರಕ್ಷಿಸಲಿ. ಸುಶ್ರೋಣಿಯು ನನ್ನ ಶ್ರೋಣಿಗಳನ್ನೂ ಚಾರುದರ್ಶನೆಯು ನನ್ನ ಸೊಂಟವನ್ನೂ ಕಾಪಾಡಲಿ.

೯. ರಂಭೋರುವು ತೊಡೆಗಳನ್ನೂ, ಅಂಘ್ರಿಭೇದಿನಿಯು ಮೊಳಕಾಲಗಳನ್ನೂ, ರಾಸೇಶ್ವರಿಯು ಮುಂಗಾಲಿನ ಗಂಟುಗಳನ್ನೂ, ಪಾಪಾಪಹಾರಿಣಿಯು ಪಾದಗಳನ್ನೂ ಕಾಪಾಡಲಿ.

೧೦. ನನ್ನ ಒಳಗೆ, ಹೊರಗೆ, ಮೇಲೆ, ಕೆಳಗೆ, ದಿಕ್ಕು, ವಿದಿಕ್ಕುಗಳಲ್ಲಿ, ಸುತ್ತಲೂ, ಎಲ್ಲೆಲ್ಲಿಯೂ ಸಹ ಪರಿಪೂರ್ಣತಮನಪ್ರಿಯೆಯು ಕಾಪಾಡಲಿ.

೧೧. ಈ ಪರಮಾಶ್ಚರ್ಯಕರವಾದ ಯಮುನೆಯ ಕವಚವನ್ನು ಧನಹೀನನಾದವನು ದಿನದಲ್ಲಿ ಹತ್ತುಸಾರಿ ಭಕ್ತಿಯಿಂದ ಪಠಿಸಿದರೆ ಧನವಂತನಾಗುವನು.

೧೨. ಬುದ್ಧಿವಂತನಾದವನು ಈ ಕವಚವನ್ನು, ಬ್ರಹ್ಮಚರ್ಯೆಯಿಂದಲೂ, ಮಿತಾಹಾರವನ್ನು ಸೇವಿಸುತ್ತಲೂ, ಮೂರುತಿಂಗಳ ಕಾಲ ಪಠಿಸಿದರೆ ಅವನಿಗೆ ಸರ್ವರಾಜ್ಯಾಧಿಪತ್ಯವು ಲಭಿಸುವುದು. ಇದರಲ್ಲಿ ಸಂಶಯವಿಲ್ಲ.

ದಶೋತ್ತರಶತಂ ನಿತ್ಯಂ ತ್ರಿಮಾಸಾವಧಿ ಭಕ್ತಿತಃ ।
ಯಃ ಪಠೇತ್ಪ್ರಯತೋ ಭೂತ್ವಾ ತಸ್ಯ ಕಿಂ ಕಿಂ ನ ಜಾಯತೇ ॥ ೧೩ ॥

ಯಃ ಪಠೇತ್ಪ್ರಾತರುತ್ಥಾಯ ಸರ್ವತೀರ್ಥಫಲಂ ಲಭೇತ್ ।
ಅಂತೇ ವ್ರಜೇತ್ಪರಂ ಧಾಮ ಗೋಲೋಕಂ ಯೋಗಿದುರ್ಲಭಂ ॥ ೧೪ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಮಾಧುರ್ಯಖಂಡೇ
ಯಮುನಾಕವಚಂ ನಾಮ ಷೋಡಶೋಽಧ್ಯಾಯಃ

---

೧೩. ಮೂರು ತಿಂಗಳವರೆಗೆ ಪ್ರತಿನಿತ್ಯವೂ ನೂರಹತ್ತು ಸಾರಿ ಭಕ್ತಿಯಿಂದ ಪ್ರಯತ್ನಪೂರ್ವಕವಾಗಿ ಪಠಿಸಿದವನಿಗೆ, ಯಾವುದು ತಾನೆ ಸಿದ್ಧಿಸಲಾರದು ?

೧೪. ಪ್ರಾತಃಕಾಲದಲ್ಲಿ ಎದ್ದು ಈ ಕವಚವನ್ನು ಪಠಿಸಿದರೆ ಎಲ್ಲಾ ತೀರ್ಥಗಳಲ್ಲಿಯೂ ಸ್ನಾನಮಾಡಿದ ಫಲವು ಬರುವುದು. ಕೊನೆಗೆ ಯೋಗಿಗಳಿಗೂ ದುರ್ಲಭವಾದ ಪವಿತ್ರವಾದ ಗೋಲೋಕವನ್ನು ಹೊಂದಬಹುದು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಮಾಧುರ್ಯಖಂಡದಲ್ಲಿ ಯಮುನಾಕವಚವೆಂಬ ಹದಿನಾರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಮಾಧುರ್ಯಖಂಡೇ

ಸಪ್ತದಶೋಽಧ್ಯಾಯಃ

॥ ಮಾಂಧಾತೋವಾಚ ॥

ಯಮುನಾಯಾಃ ಸ್ತವಂ ದಿವ್ಯಂ ಸರ್ವಸಿದ್ಧಿಕರಂ ಪರಂ ।
ಸೌಭರೇ ಮುನಿಶಾರ್ದೂಲ ವದ ಮಾಂ ಕೃಪಯಾ ತ್ವರಂ ॥ ೧ ॥

॥ ಶ್ರೀ ಸೌಭರಿರುವಾಚ ॥

ಮಾರ್ತಾಂಡಕನ್ಯಕಾಯಾಸ್ತು ಸ್ತವಂ ಶೃಣು ಮಹಾಮತೇ ।
ಸರ್ವಸಿದ್ಧಿಕರಂ ಭೂಮೌ ಚಾತುರ್ವರ್ಗ್ಯಫಲಪ್ರದಂ ॥ ೨ ॥

ಕೃಷ್ಣವಾಮಾಂಸಭೂತಾಯೈ ಕೃಷ್ಣಾಯೈ ಸತತಂ ನಮಃ ।
ನಮಃ ಶ್ರೀಕೃಷ್ಣರೂಪಿಣ್ಯೈ ಕೃಷ್ಣೇ ತುಭ್ಯಂ ನಮೋ ನಮಃ ॥ ೩ ॥

ಹದಿನೇಳನೆಯ ಅಧ್ಯಾಯವು

೧. ಮಾಂಧಾತನು ಸೌಭರಿಯನ್ನು ಕುರಿತಿಂತೆಂದನು :—ಎಲೈ ಮುನಿವರನೇ, ಸರ್ವಸಿದ್ಧಿಕರವೂ, ದಿವ್ಯವೂ, ಆದ ಯಮುನೆಯ ಸ್ತೋತ್ರವನ್ನು ದಯವಿಟ್ಟು ನನಗೆ ತಿಳಿಸು.

೨. ಎಂದು ಕೇಳಲು ಶ್ರೀ ಸೌಭರಿಯು ಇಂತೆಂದನು :—ಎಲೈ ಮಹಾಮತಿಯೇ, ಸೂರ್ಯಕನ್ನಿಕೆಯಾದ ಯಮುನೆಯ ಸ್ತೋತ್ರವನ್ನು ಹೇಳುವೆನು ಕೇಳು. ಅದು ಸರ್ವಾರ್ಥಸಿದ್ಧಿಯನ್ನುಂಟುಮಾಡುವುದು. ಚತುರ್ವರ್ಗಫಲಪ್ರದವಾದುದು.

೩. ಕೃಷ್ಣನ ವಾಮಭುಜದಿಂದ ಹುಟ್ಟಿದ ಯಮುನೆಗೆ ಸರ್ವದಾ ನಮಸ್ಕಾರವು. ನೀನು ಶ್ರೀಕೃಷ್ಣನ ಸ್ವರೂಪಳು. ಇಂತಹ ನಿನಗೆ ನಮಸ್ಕಾರವು.

ಯಃ ಪಾಪಪಂಕಾಂಬುಕಲಂಕಕುತ್ಸಿತಃ
ಕಾಮೀ ಕುಧೀಃ ಸತ್ಸು ಕಲಿಂ ಕರೋತಿ ಹಿ ।
ವೃಂದಾವನಂ ಧಾಮ ದದಾತಿ ತಸ್ಮೈ
ನದನ್ಮಿಲಿಂದಾದಿಕಲಿಂದನಂದಿನೀ　　　　॥ ೪ ॥

ಕೃಷ್ಣೇ ಸಾಕ್ಷಾತ್ಕೃಷ್ಣರೂಪಾ ತ್ವಮೇವ
ವೇಗಾವರ್ತೇ ವರ್ತತೇ ಮತ್ಸ್ಯರೂಪೀ ।
ಊರ್ಮಾವೂರ್ಮೌ ಕೂರ್ಮರೂಪೀ ಸದಾ ತೇ
ಬಿಂದೌ ಬಿಂದೌ ಭಾತಿ ಗೋವಿಂದದೇವಃ　　　　॥ ೫ ॥

ವಂದೇ ಲೀಲಾವತೀಂ ತಾಂ ಸಘನಘನನಿಭಾಂ ಕೃಷ್ಣವಾಮಾಂಸಭೂತಾ
ವೇಗಂ ವೈ ವೈರಜಾಖ್ಯಂ ಸಕಲಜಲಚಯಂ ಖಂಡಯಂತೀಂ ಬಲಾತ್ಸ್ವತ್ ।

---

೪. ಪಾಪಗಳಿಂದ ದೂಷಿತನಾದರೂ, ಕಾಮಿಯಾದರೂ, ದುರ್ಬುದ್ಧಿಯಾದರೂ, ಸತ್ಪುರುಷರೊಡನೆ ಜಗಳವಾಡುವವನಾದರೂ ಸರಿಯೆ, ಯಮುನೆಯಲ್ಲಿ ಸ್ನಾನವಮಾಡಿದರೆ ಕಲಿಂದಪುತ್ರಿಯಾದ ಯಮುನೆಯು ಅವನಿಗೆ ಪವಿತ್ರವಾದ ವೃಂದಾವನವನ್ನು ದೊರಕಿಸುವಳು.

೫. ಎಲೌ ಕೃಷ್ಣೆಯೇ, ನೀನು ಸಾಕ್ಷಾತ್ಕೃಷ್ಣನ ಸ್ವರೂಪಳು. ಮತ್ಸ್ಯರೂಪಿಯಾದ ಹರಿಯು ನಿನ್ನ ವೇಗವಾದ ಸುಳಿಗಳಲ್ಲಿ ಸಂಚರಿಸುವನು. ನಿನ್ನ ಪ್ರತಿಯೊಂದು ಅಲೆಗಳಲ್ಲೂ ಕೂರ್ಮರೂಪಿಯಾದ ಹರಿಯು ಇರುವನು. ನಿನ್ನ ಪ್ರತಿಯೊಂದು ಜಲಬಿಂದುಗಳಲ್ಲಿಯೂ ಗೋವಿಂದನು ಪ್ರಕಾಶಿಸುತ್ತಿರುವನು. ಆದುದರಿಂದ ನೀನು ಹರಿಯ ಸ್ವರೂಪಳು.

೬. ಶ್ರೀಕೃಷ್ಣನ ವಾಮಾಂಸದಲ್ಲಿ ಹುಟ್ಟಿ ದೊಡ್ಡ ಮೇಘಗಳಂತೆ ಕಪ್ಪಾಗಿಯೂ, ಸಾಂದ್ರವಾಗಿಯೂ, ಲೀಲೆಯಿಂದ ಹರಿಯುತ್ತಿರುವ ಯಮುನೆಗೆ ನಮಸ್ಕಾರವು. ತನ್ನ ವೇಗದಿಂದ ವಿರಜಾನದಿಯು ವೇಗವನ್ನೂ ಕಡಿಮೆಮಾಡಿ ನೀರಿನ ಸಮೂಹವನ್ನು ತಳ್ಳುತ್ತಾ ಹರಿಯುತ್ತಿರುವ, ಪ್ರಪಂಚವನ್ನೆಲ್ಲಾ ಸುತ್ತಿಕೊಂಡು ಎದುರಿಗೆ

ಭಿತ್ವಾ ಬ್ರಹ್ಮಾಂಡಮಾರಾತ್ಸುರನಗರನಗಾನ್ಗಂಡಶೈಲಾದಿದುರ್ಗಾನ್
ಭಿತ್ವಾ ಭೂಖಂಡಮಧ್ಯೇ ತಟನಿಧೃತವತೀಮೂರ್ಮಿಮಾಲಾಂ ಪ್ರಯಾಂತೀಂ

ದಿವ್ಯಂ ಕೌ ನಾಮಧೇಯಂ ಶ್ರುತಮಥ ಯಮುನೇ ದಂಡಯತ್ವಾದ್ರಿತುಲ್ಯಂ
ಪಾಪವ್ಯೂಹಂ ತ್ವಖಂಡಂ ವಸತು ಮಮ ಗಿರಾಮಂಡಲೇ ತು ಕ್ಷಣಂ ತತ್ ।
ದಂಡ್ಯಾಂಶ್ಚಾಕಾರ್ಯದಂಡ್ಯಾನ್ಸಕೃದಪಿ ವಚಸಾ ಖಂಡಿತಂ ಯದ್ಗೃಹೀತಂ
ಭ್ರಾತುರ್ಮಾರ್ತಂಡಸೂನೋರಟತಿ ಪುರಿ ದೃಢಸ್ತೇ ಪ್ರಚಂಡೇತಿದಂಡಃ ॥ ೭ ॥

ರಜ್ಜುರ್ವಾ ವಿಷಯಾಂಧಕೂಪತರಣೇ ಪಾಪಾಖುದರ್ವೀಕರೀ
ವೇಣ್ಯುಷ್ಣಿಕ್ಚ ವಿರಾಜಮೂರ್ತಿಶಿರಸೋ ಮಾಲಾಸ್ತಿ ವಾ ಸುಂದರೀ ।

ಸಿಕ್ಕಿದ ದೇವಲೋಕ ಸರ್ಪ ಮುಂತಾದುವುಗಳನ್ನೂ ದೊಡ್ಡ ದೊಡ್ಡ ಪರ್ವತಗಳನ್ನೆಲ್ಲಾ ಚೂರುಮಾಡಿ ಹರಿಯುತ್ತಿರುವ, ಭೂಮಂಡಲವನ್ನು ಭೇದಿಸಿ, ಅದರ ಮಧ್ಯದಲ್ಲಿ ದಡವನ್ನು ಕಟ್ಟಿ ಅನೇಕ ಅಲೆಗಳಿಂದ ಕೂಡಿ ಹರಿಯುತ್ತಿರುವ ಯಮುನೆಗೆ ನಮಸ್ಕಾರವು.

೭. ಎಲೈ ಯಮುನೆಯೇ, ಲೋಕದಲ್ಲಿ ನಿನ್ನ ಹೆಸರು ಅತಿ ಪ್ರಸಿದ್ಧವಾದುದು ಅಂತಹ ನೀನು ಪರ್ವತದಂತೆ ಅತಿ ದೊಡ್ಡದಾಗಿರುವ ನನ್ನ ಪಾಪಗಳನ್ನೆಲ್ಲಾ ನಾಶ ಮಾಡು. ನನ್ನ ವಾಙ್ಮಂಡಲದಲ್ಲಿ ಕ್ಷಣಕಾಲವಿದ್ದು ವಾಕ್ಕುಗಳನ್ನು ಪವಿತ್ರವನ್ನಾಗಿ ಮಾಡು. ಅಕಾರ್ಯಗಳನ್ನು ಮಾಡಿ ದಂಡನೆಗೆ ಯೋಗ್ಯರಾದವರನ್ನು ಅವರು ಒಂದು ಸಾರಿಯಾದರೂ ನಿನ್ನ ನಾಮವನ್ನುಚ್ಚರಿಸಿದರೆ ಅನುಗ್ರಹಿಸುವೆ.

೮. ಸ್ರಕ್ಚಂದನಾದಿ ವಿಷಯಗಳೆಂಬ ಅಂಧಕೂಪದಲ್ಲಿ ಬಿದ್ದು ಒದ್ದಾಡುತ್ತಿರುವ ಮನುಜನಿಗೆ ಹಡಗಿನೋಪಾದಿಯಲ್ಲಿರುವವಳು. ಹಾಗೂ ಅದನ್ನು ಕಟ್ಟುವ ಹಗ್ಗದಂತಿರುವಳು. ಪಾಪವೆಂಬ ಮೂಷಿಕಗಳನ್ನು ನಾಶಮಾಡುವುದಕ್ಕೋಸ್ಕರ ದರ್ವಿಯನ್ನು ಹಿಡಿದು ಸಿದ್ಧಳಾಗಿರುವಳು. ಮನುಜರಿಗೆ ಜಡೆಯಂತೆಯೂ, ತಲೆಯಲ್ಲಿ ಧರಿಸುವ ಪಾಗಿನಂತೆಯೂ, ಶಿರೋಮಾಲೆಯಂತೆಯೂ ಇರುವಳು. ಇದಕ್ಕಿಂತಲೂ

ಧನ್ಯಂ ಭ್ಯಾಗ್ಯಮತಃಪರಂ ಭುವಿ ನೃಣಾಂ ಯತ್ರಾದಿಕೃದ್ವಲ್ಲಭಾ
ಗೋಲೋಕೇಪ್ಯತಿದುರ್ಲಭಾತಿಶುಭಗಾ ಭಾತ್ಯದ್ವಿತೀಯಾ ನದೀ || ೮ ||

ಗೋಪೀಗೋಕುಲಗೋಪಕೇಳಿಕಲಿತೇ ಕಾಲಿಂದಿಕೃಷ್ಣಪ್ರಭೇ
ತ್ವತ್ಕೂಲೇ ಜಲಲೋಲಗೋಲವಿಚಲತ್ಕಲ್ಲೋಲಕೋಲಾಹಲಃ |
ತ್ವತ್ಕಾಂತಾರಕುತೂಹಲಾಲಿಕುಲಕೃಜ್ಝಂಕಾರಕೇಕಾಕುಲಃ
ಕೂಜತ್ಕೋಕಿಲಸಂಕುಲೋ ವ್ರಜಲತಾಲಂಕಾರಭೃತ್ಪಾತು ಮಾಂ || ೯ ||

ಭವಂತಿ ಜಿಹ್ವಾಸ್ತನುರೋಮತುಲ್ಯಾ
ಗಿರೋ ಯದಾ ಭೂಸಿಕತಾ ಇವಾಶು |
ತದಪ್ಯಲಂ ಯಾತಿ ನತೇ ಗುಣಾಂತಂ
ಸಂತೋ ಮಹಾಂತಃ ಕಿಲ ಶೇಷತುಲ್ಯಾಃ || ೧೦ ||

ಭಾಗ್ಯವಿನ್ನಾವುದು ಬೇಕು. ಭೂಲೋಕದ ಜನರೇ ಧನ್ಯರು. ಆದಿಪುರುಷನ ವಲ್ಲಭಳಾಗಿ ಮೆರೆಯುತ್ತಿರುವಳು. ಆ ಆದಿಪುರುಷನೂ ಭೂಮಿಯಲ್ಲವತರಿಸಿರುವನು. ಅತಿದುರ್ಲಭಳಾದ ಯಮುನೆಯು ಅದ್ವಿತೀಯವಾದ ನದಿಯಾಗಿ ಶುಭವನ್ನುಂಟು ಮಾಡುತ್ತಾ ಗೋಲೋಕದಲ್ಲಿ ಹರಿಯುತ್ತಿರುವಳು.

೯. ಎಲೌ ಕೃಷ್ಣವರ್ಣೆಯಾದ ಕಾಲಿಂದಿ, ನಿನ್ನ ದಡದಲ್ಲಿ ಗೋಕುಲದ ಗೋಪಗೋಪಿಯರೆಲ್ಲಾ ಆನಂದವಾಗಿ ಆಟವಾಡುವರು. ಅದರಿಂದ ಆ ಪ್ರದೇಶಗಳು ಸುಂದರವಾಗಿರುವುವು. ಏರಿಏರಿ ಬಂದ ಅಲೆಗಳು ದಡಕ್ಕೆ ಅಪ್ಪಳಿಸುವುದರಿಂದ ಅದರ ಶಬ್ದವು ಅತಿ ಮಧುರವಾಗಿ ಕೇಳಿಬರುವುದು. ನಿನ್ನ ಅಕ್ಕಪಕ್ಕದ ಕಾಡಿನಲ್ಲಿ ಅರಳಿರುವ ಪುಷ್ಪಗಳ ಮಧುವನ್ನು ಕುಡಿಯಲು ದುಂಬಿಗಳು ಝೇಂಕಾರಮಾಡುತ್ತಾ ಇರುವುವು. ಕೋಕಿಲಗಳು ಆನಂದದಿಂದ ಕೂಗುತ್ತಿರುವುವು. ನವಿಲುಗಳು ಕೇಕಾ ರವವನ್ನು ಮಾಡುತ್ತಿರುವುವು. ಇವುಗಳಿಂದ ಕೂಡಿ ವ್ರಜಲತೆಗಳನ್ನೇ ಅಲಂಕಾರ ವಾಗಿ ಧರಿಸಿರುವ ಸುಂದರಿಯಾದ ನೀನು ನನ್ನನ್ನು ರಕ್ಷಿಸು.

೧೦. ಶರೀರದ ರೋಮಗಳ ಸಂಖ್ಯೆಯಷ್ಟು ನಾಲಿಗೆಗಳನ್ನು ಪಡೆದಿದ್ದರೂ ಭೂಮಿಯ ಧೂಳಿನಷ್ಟು ಮಾತುಗಳು ಸ್ವಾಧೀನವಾಗಿದ್ದರೂ ಸಹ ನಿನ್ನ ಗುಣಗಳನ್ನು ವರ್ಣನೆಮಾಡಲು ಸಾಧ್ಯವಿಲ್ಲ. ಮಹಾತ್ಮರಾದ ಸತ್ಪುರುಷರು ಆದಿಶೇಷನಂತೆ ಸಹಸ್ರನಾಲಿಗೆಗಳನ್ನುಳ್ಳವರಾದರೂ ಸಹ ನಿನ್ನ ಗುಣಗಳು ವರ್ಣನಾತೀತವಾದವು.

ಕಲಿಂದಗಿರಿನಂದಿನೀಸ್ತವ ಉಷಸ್ಯಯಂ ವಾ ಪರಃ
ಶ್ರುತಶ್ಚ ಯದಿ ಪಾಠಿತೋ ಭುವಿ ತನೋತಿ ಸನ್ಮಂಗಲಂ ।
ಜನೋಽಪಿ ಯದಿ ಧಾರಯೇತ್ಕಿಲ ಪಠೇಚ್ಚ ಯೋ ನಿತ್ಯಶಃ
ಸ ಯಾತಿ ಪರಮಂ ಪದಂ ನಿಜನಿಕುಂಜಲೀಲಾವೃತಂ ॥ ೧೧ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಮಾಧುರ್ಯಖಂಡೇ
ಶ್ರೀಯಮುನಾಸ್ತವೋ ನಾಮ ಸಪ್ತದಶೋಽಧ್ಯಾಯಃ

---

೧೧. ಕಲಿಂದಪರ್ವತನ ಪುತ್ರಿಯಾದ ಈ ಯಮುನೆಯ ಸ್ತೋತ್ರವನ್ನು ಪ್ರಾತಃಕಾಲದಲ್ಲಿ ಎದ್ದು ಓದಿದರೂ, ಅಥವಾ ಓದಿಸಿ ಕೇಳಿದರೂ ಅದರಿಂದ ಸನ್ಮಂಗಳವಾಗುವುದು. ಪ್ರತಿನಿತ್ಯವೂ ಇದನ್ನು ಪಾರಾಯಣಮಾಡಿದರೆ ಉತ್ತಮ ಸ್ಥಾನವಾದ ಲತಾಕುಂಜಗಳಿಂದಲಂಕೃತವಾದ ಗೋಲೋಕವು ಸಿಕ್ಕುವುದು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಮಾಧುರ್ಯಖಂಡದಲ್ಲಿ ಶ್ರೀಯಮುನಾಸ್ತವವೆಂಬ ಹದಿನೇಳನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಮಾಧುರ್ಯಖಂಡೇ

ಅಷ್ಟಾದಶೋಽಧ್ಯಾಯಃ

॥ ಮಾಂಧಾತೋವಾಚ ॥

ಕೃಷ್ಣಾಯಾಃ ಪಟಲಂ ಪುಣ್ಯಂ ಕಾಮದಂ ಪದ್ಧತಿಂ ತಥಾ ।
ವದ ಮಾಂ ಮುನಿಶಾರ್ದೂಲ ತ್ವಂ ಸಾಕ್ಷಾಜ್ಜ್ಞಾನಶೇವಧಿಃ ॥ ೧ ॥

॥ ಸೌಭರಿರುವಾಚ ॥

ಪಟಲಂ ಪದ್ಧತಿಂ ವಕ್ಷ್ಯೇ ಯಮುನಾಯಾ ಮಹಾಮತೇ ।
ಕೃತ್ವಾ ಶ್ರುತ್ವಾಽಥ ಜಪ್ತ್ವಾ ವಾ ಜೀವನ್ಮುಕ್ತೋ ಭವೇನ್ನರಃ ॥ ೨ ॥

ಪ್ರಣವಂ ಪೂರ್ವಮುದ್ಧೃತ್ಯ ಮಾಯಾಬೀಜಂ ತತಃ ಪರಂ ।
ರಮಾಬೀಜಂ ತತಃ ಕೃತ್ವಾ ಕಾಮಬೀಜಂ ವಿಧಾನತಃ ॥ ೩ ॥

ಹದಿನೆಂಟನೆಯ ಅಧ್ಯಾಯವು

೧. ಮಾಂಧಾತನು ಸೌಭರಿಯನ್ನು ಕುರಿತು ಹೇಳಿದನು:—ಎಲೈ ಮುನಿವರನೇ, ನೀನು ಜ್ಞಾನನಿಧಿಯು. ಯಮುನೆಯ ಪಟಲವನ್ನೂ, ಪದ್ಧತಿಯನ್ನೂ ದಯವಿಟ್ಟು ತಿಳಿಸು. ಅದರಿಂದ ಇಷ್ಟಾರ್ಥವೆಲ್ಲಾ ನೆರವೇರುವುದು.

೨. ಎನ್ನಲು, ಸೌಭರಿಯಿಂತೆಂದನು :—ಎಲೈ ಮಹಾಜ್ಞಾನಿಯೇ, ಯಮುನಾಪಟಲವನ್ನೂ, ಪದ್ಧತಿಯನ್ನೂ ಹೇಳುವೆನು. ಅದನ್ನು ಕೇಳಿ, ಜಪಿಸಿದರೆ ಮನುಜನು ಜೀವನ್ಮುಕ್ತನಾಗುವನು.

೩. ಯಮುನಾಪಟಲಪದ್ಧತಿಯನ್ನು ತಿಳಿಯುವವನು ಮೊದಲು ಓಂಕಾರವನ್ನುಚ್ಚರಿಸಬೇಕು. ಅನಂತರ ಮಾಯಾಬೀಜಮಂತ್ರವನ್ನೂ, ರಮಾಬೀಜಮಂತ್ರವನ್ನೂ, ಕಾಮಬೀಜಮಂತ್ರವನ್ನೂ ವಿಧಿಪೂರ್ವಕವಾಗಿ ಉಚ್ಚರಿಸಬೇಕು.

ಕಾಲಿಂದೀತಿ ಚತುರ್ಥ್ಯಂತೇ ದೇವೀಪದಮತಃಪರಂ ।
ನಮಃ ಪಶ್ಚಾತ್ಸಂವಿಧಾರ್ಯ ಜಪೇನ್ಮಂತ್ರಮಿಮಂ ನರಃ ॥ ೪ ॥

ಜಪ್ತ್ವೈಕಾದಶಲಕ್ಷಾಣಿ ಮಂತ್ರಸಿದ್ಧಿರ್ಭವೇದ್ಭುವಿ ।
ಜನೈಃ ಪ್ರಾರ್ಥ್ಯಾಶ್ಚ ಯೇ ಕಾಮಾಃ ಸರ್ವೇ ಪ್ರಾಪ್ಯಾಃ ಸ್ವತಶ್ಚ ತೇ ॥ ೫ ॥

ವಿಧಾಯ ಷೋಡಶದಳಂ ಪದ್ಮಂ ಸಿಂಹಾಸನೇ ಶುಭೇ ।
ಕರ್ಣಿಕಾಯಾಂ ಚ ಕಾಲಿಂದೀಂ ನ್ಯಸೇಚ್ಛ್ರೀಕೃಷ್ಣಸಂಯುತಾಂ ॥ ೬ ॥

ಜಾಹ್ನವೀಂ ವಿರಜಾಂ ಕೃಷ್ಣಾಂ ಚಂದ್ರಭಾಗಾಂ ಸರಸ್ವತೀಂ ।
ಗೋಮತೀಂ ಕೌಶಿಕೀಂ ವೇಣೀಂ ಸಿಂಧುಗೋದಾವರೀಂ ತಥಾ ॥ ೭ ॥

ವೇದಸ್ಮೃತಿಂ ವೇತ್ರವತೀಂ ಶತದ್ರುಸರಯೂಂ ತಥಾ ।
ಪೂಜಯೇನ್ನಾಮವಶ್ರೇಷ್ಠ ಋಷಿಕುಲ್ಯಾಂ ಕಕುದ್ಮಿನೀಂ ॥
ಪೃಥಕ್ಪೃಥಕ್ ತದ್ದಲೇಷು ನಾಮೋಚ್ಚಾರ್ಯ ವಿಧಾನತಃ ॥ ೮ ॥

---

೪. ಕಾಲಿಂದೀ ಎಂಬ ಪದದ ಚತುರ್ಥ್ಯಂತವನ್ನೂ, ದೇವೀಪದದ ಚತುರ್ಥ್ಯಂತವನ್ನೂ ಉಚ್ಚರಿಸಿ ಅದಕ್ಕೆ ನಮಃ ಎಂದು ಸೇರಿಸಬೇಕು. ಅಂದರೆ ಕಾಲಿಂದ್ಯೈನಮಃ, ದೇವ್ಯೈನಮಃ ಎಂದು ಹೇಳುತ್ತಾ ಮುಂದೆ ಹೇಳುವ ಮಂತ್ರವನ್ನು ಜಪಿಸಬೇಕು.

೫. ಆ ಮಂತ್ರವನ್ನು ಹನ್ನೊಂದುಲಕ್ಷಸಾರಿ ಜಪಿಸಿದರೆ ಜಪಿಸಿದವರಿಗೆ ಮಂತ್ರಸಿದ್ಧಿಯಾಗುವುದು. ಅದರಿಂದ ಅವರಿಗೆ ಇಷ್ಟವಾದುದು ತಮ್ಮಿಷ್ಟಿಗೆ ತಾವೇ ಸಿದ್ಧಿಸುವುದು.

೬. ಶುಭವಾದ ಸಿಂಹಾಸನದಲ್ಲಿ ಷೋಡಶದಳಪದ್ಮವನ್ನು ಬರೆದು ಅದರ ಮಧ್ಯದ ಕರ್ಣಿಕೆಯಲ್ಲಿ ಶ್ರೀಕೃಷ್ಣಸಹಿತಳಾದ ಕಾಳಿಂದಿಯನ್ನು ಪ್ರತಿಷ್ಠಿಸಬೇಕು.

೭-೮. ಅನಂತರ ಆ ಕಮಲದ ಪ್ರತಿಯೊಂದು ದಳಗಳಲ್ಲಿಯೂ ಜಾಹ್ನವಿ, ವಿರಜಾ, ಕೃಷ್ಣಾ, ಚಂದ್ರಭಾಗಾ, ಸರಸ್ವತಿ, ಗೋಮತಿ, ಕೌಶಿಕೀ, ವೇಣೀ, ಸಿಂಧು, ಗೋದಾವರೀ, ವೇದಸ್ಮೃತಿ, ವೇತ್ರವತೀ, ಶತದ್ರು, ಸರಯೂ, ಋಷಿಕುಲ್ಯಾ, ಕಕುದ್ಮತೀ ಈ ನದಿಗಳನ್ನು ನಾಮೋಚ್ಚಾರಣೆಮಾಡುತ್ತಾ ಪೂಜಿಸಬೇಕು.

ವೃಂದಾವನಂ ಗೋವರ್ಧನಂ ವೃಂದಾಂ ಚ ತುಲಸೀಂ ತಥಾ ।
ಚತುರ್ದಿಕ್ಷು ವಿಧಾಯಾಶು ಪೂಜಯೇನ್ನಾಮಭಿಃ ಪೃಥಕ್ ॥ ೯ ॥

ಓಂ ನಮೋ ಭಗವತ್ಯೈ ಕಲಿಂದನಂದಿನ್ಯೈ ಸೂರ್ಯಕನ್ಯ ಕಾಯ್ಯೈ ಯಮಭಗಿನ್ಯೈ ಶ್ರೀಕೃಷ್ಣಪ್ರಿಯಾಯ್ಯೈ ಯೂಥೀ ಭೂತಾಯ್ಯೈ ಸ್ವಾಹಾ । ಅನೇನ ಮಂತ್ರೇಣಾವಾಹನಾದಿಷೋಡ ಶೋಪಚಾರಾನ್ಸಮಾಹಿತ ಉಪಾಹರೇತ್ ॥ ೧೦ ॥

ಇತ್ಯೇವಂ ಪಟಲಂ ವಿದ್ಧಿ ತುಭ್ಯಂ ವಕ್ಷ್ಯಾಮಿ ಪದ್ಧತಿಂ ।
ಯಾವತ್ಸಂಪೂರ್ಣತಾಂ ಯಾತಿ ಪುರಶ್ಚರಣಮೇವ ಹಿ ॥ ೧೧ ॥

ತಾವದ್ಭವೇದ್ಬ್ರಹ್ಮಚಾರೀ ಜಪೇನ್ಮೌನವ್ರತೋ ದ್ವಿಜಃ ।
ಯವಭೋಜೀ ಭೂಮಿಶಾಯೀ ಪತ್ರಭುಕ್ಜಿತಮಾನಸಃ ॥ ೧೨ ॥

ಕಾಮಂ ಕ್ರೋಧಂ ತಥಾ ಲೋಭಂ ಮೋಹಂ ದ್ವೇಷಂ ವಿಸೃಜ್ಯ ಸಃ ।
ಭಕ್ತ್ಯಾ ಪರಮಯಾ ರಾಜನ್ವರ್ತಮಾನಸ್ತು ದೇಶಿಕಃ ॥ ೧೩ ॥

---

೯. ಪದ್ಮದ ನಾಲ್ಕುದಿಕ್ಕುಗಳಲ್ಲಿಯೂ ಕ್ರಮವಾಗಿ ವೃಂದಾವನ, ಗೋವರ್ಧನ ವೃಂದಾ, ತುಳಸಿ ಇವರುಗಳನ್ನು ಪ್ರತಿಷ್ಠಿಸಿ ಬೇರೆಬೇರೆಯಾಗಿ ಪೂಜಿಸಬೇಕು.

೧೦. ' ಓಂನಮೋ ಭಗವತ್ಯೈ, ಕಲಿಂದನಂದಿನ್ಯೈ, ಸೂರ್ಯಕನ್ಯಕಾಯ್ಯೈ, ಯಮಭಗಿನ್ಯೈ, ಶ್ರೀಕೃಷ್ಣಪ್ರಿಯಾಯ್ಯೈ, ಯೂಥೀಭೂತಾಯ್ಯೈಸ್ವಾಹಾ ' ಎಂಬ ಮಂತ್ರವನ್ನು ಹೇಳಿ ಆವಾಹನವೇ ಮೊದಲಾದ ಷೋಡಶೋಪಚಾರಗಳಿಂದ ಯಮುನೆಯನ್ನು ಪೂಜಿಸಬೇಕು.

೧೧. ಇದಕ್ಕೆ ಪಟಲವೆಂದು ಹೆಸರು. ಈಗ ಪದ್ಧತಿಯನ್ನು ಹೇಳುವೆನು. ಮೇಲೆ ಹೇಳಿದ ಮಂತ್ರಪುರಶ್ಚರಣೆಯು ಮುಗಿಯುವವರೆಗೂ ದ್ವಿಜನು ಬ್ರಹ್ಮಚರ್ಯವನ್ನು ಕಾಪಾಡಿಕೊಂಡಿರಬೇಕು. ಯಾರ ಸಂಗಡವೂ ಮಾತನಾಡದೆ ಮಂತ್ರವನ್ನು ಜಪಿಸುತ್ತಿರಬೇಕು.

೧೨-೧೩. ಗೋಧಿಯಿಂದ ಮಾಡಿದ ಪದಾರ್ಥವನ್ನು ಸೇವಿಸಬೇಕು. ಭೂಮಿಯಲ್ಲಿ ಮಲಗಬೇಕು. ಎಲೆಯಲ್ಲಿ ಊಟಮಾಡಬೇಕು. ಜಿತೇಂದ್ರಿಯನಾಗಿರಬೇಕು. ಕಾಮ, ಕ್ರೋಧ, ಲೋಭ, ಮೋಹ, ದ್ವೇಷ ಮುಂತಾದವುಗಳನ್ನು ಬಿಡಬೇಕು.

ಬ್ರಾಹ್ಮೇ ಮುಹೂರ್ತ ಉತ್ಥಾಯ ಧ್ಯಾತ್ವಾ ದೇವೀಂ ಕಲಿಂದಜಾಂ।
ಅರುಣೋದಯವೇಲಾಯಾಂ ನದ್ಯಾಂ ಸ್ನಾನಂ ಸಮಾಚರೇತ್ ॥ ೧೪ ॥

ಮಧ್ಯಾಹ್ನೇ ಚಾಪಿ ಸಂಧ್ಯಾಯಾಂ ಸಂಧ್ಯಾವಂದನತತ್ಪರಃ।
ಸಮಾಪ್ತೇ ನಿಯಮೇ ರಾಜನ್ಕಾಲಿಂದೀತೀರಮಾಸ್ಥಿತಃ ॥ ೧೫ ॥

ದಶಲಕ್ಷಂ ಬ್ರಾಹ್ಮಣಾನಾಂ ಸಪುತ್ರಾಣಾಂ ಮಹಾತ್ಮನಾಂ।
ಪೂಜಯಿತ್ವಾ ಗಂಧಪುಷ್ಪೈರ್ದತ್ವಾ ತೇಭ್ಯಃ ಸುಭೋಜನಂ ॥ ೧೬ ॥

ವಸ್ತ್ರಭೂಷಣಸೌವರ್ಣಪಾತ್ರಾಣಿ ಪ್ರಸ್ಫುರಂತಿ ಚ।
ದಕ್ಷಿಣಾಶ್ಚ ಶುಭಾ ದತ್ಯಾತ್ತತಃ ಸಿದ್ಧಿರ್ಭವೇತ್ಫಲು ॥ ೧೭ ॥

---

೧೪. ಪರಮಭಕ್ತಿಯಿಂದ ಪೂಜಿಸಬೇಕು. ಉಷಃಕಾಲದಲ್ಲಿ ಎದ್ದು ಯಮುನಾದೇವಿಯನ್ನು ಧ್ಯಾನಿಸಿ ಅರುಣೋದಯಕ್ಕೆ ಸರಿಯಾಗಿ ನದಿಗೆ ಹೋಗಿ ಸ್ನಾನಮಾಡಬೇಕು.

೧೫. ಮಧ್ಯಾಹ್ನ ಮತ್ತು ಸಾಯಂಕಾಲಗಳಲ್ಲಿ ಸಂಧ್ಯಾವಂದನೆಯನ್ನು ಮಾಡುತ್ತಾ ನಿಯಮವಾಗಿ ಮಂತ್ರವನ್ನು ಜಪಿಸಬೇಕು. ನಿಯಮಿತದಿನವು ಮುಗಿದನಂತರ ಕಾಳಿಂದೀನದಿಯತೀರಕ್ಕೆ ಹೋಗಿ,

೧೬. ಅಲ್ಲಿ ಹತ್ತುಲಕ್ಷ ಬ್ರಾಹ್ಮಣರನ್ನೂ, ಅವರ ಪುತ್ರರನ್ನೂ, ಮಹಾತ್ಮರಾದವರನ್ನೂ ಗಂಧಪುಷ್ಪಾಕ್ಷತಾದಿಗಳಿಂದ ಪೂಜಿಸಿ ಅವರಿಗೆ ಒಳ್ಳೆಯ ಭೋಜನವನ್ನು ಮಾಡಿಸಬೇಕು.

೧೭. ವಸ್ತ್ರ, ಭೂಷಣ, ಸುವರ್ಣಪಾತ್ರೆಗಳು, ಶುಭವಾದ ದಕ್ಷಿಣೆ ಇವುಗಳನ್ನೆಲ್ಲಾ ದಾನಮಾಡಿದರೆ ಅಂಥವನಿಗೆ ಮಂತ್ರಸಿದ್ಧಿಯಾಗುವುದು.

ಇತಿ ತೇ ಪದ್ಧತಿಃ ಪ್ರೋಕ್ತಾ ಮಯಾ ರಾಜನ್ಮಹಾಮತೇ ।
ಕುರು ತ್ವಂ ನಿಯಮಂ ಸರ್ವಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೮ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಮಾಧುರ್ಯಖಂಡೇ
ಪಟಲಪದ್ಧತಿವರ್ಣನಂ ನಾಮಾಷ್ಟಾದಶೋಽಧ್ಯಾಯಃ

---

೧೮. ಎಲೈ ಮಹಾಜ್ಞಾನಿಯಾದ ರಾಜನೇ, ಯಮುನಾಪದ್ಧತಿಯನ್ನು ಹೇಳಿಯಾಯಿತು. ನೀನು ನಿಯಮವನ್ನನುಸರಿಸಿ ಇದನ್ನಾಚರಿಸು. ಮತ್ತೇನನ್ನು ಕೇಳಬೇಕೆಂದಿರುವೆ ? ಎಂದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಮಾಧುರ್ಯಖಂಡದಲ್ಲಿ ಪಟಲಪದ್ಧತಿವರ್ಣನ ವೆಂಬ ಹದಿನೆಂಟನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಮಾಧುರ್ಯಖಂಡೇ

ಏಕೋನವಿಂಶೋಽಧ್ಯಾಯಃ

॥ ಮಾಂಧಾತೋವಾಚ ॥

ನಾಮ್ನಾಂ ಸಹಸ್ರಂ ಕೃಷ್ಣಾಯಾಃ ಸರ್ವಸಿದ್ಧಿಕರಂ ಪರಂ ।
ವದ ಮಾಂ ಮುನಿಶಾರ್ದೂಲ ತ್ವಂ ಸರ್ವಜ್ಞೋ ನಿರಾಮಯಃ ॥ ೧ ॥

॥ ಸೌಭರಿರುವಾಚ ॥

ನಾಮ್ನಾಂ ಸಹಸ್ರಂ ಕಾಲಿಂದ್ಯಾ ಮಾಂಧಾತಸ್ತೇ ವದಾಮ್ಯಹಂ ।
ಸರ್ವಸಿದ್ಧಿಕರಂ ದಿವ್ಯಂ ಶ್ರೀಕೃಷ್ಣವಶಕಾರಕಂ ॥ ೨ ॥

ಹತ್ತೊಂಭತ್ತನೆಯ ಅಧ್ಯಾಯವು

೧. ಮಾಂಧಾತನು ಸೌಭರಿಯನ್ನು ಪ್ರಶ್ನೆಮಾಡಿದನು :—ಎಲೈ ಮುನಿವರನೇ, ನೀನು ಸರ್ವಜ್ಞನು, ನಿರಾಮಯನು. ಈಗ ನನಗೆ ಸರ್ವಸಿದ್ಧಿಕರವಾದ ಯಮುನೆಯ ಸಹಸ್ರನಾಮಗಳನ್ನು ತಿಳಿಸು.

೨. ಎನ್ನಲು, ಸೌಭರಿಯು ಹೇಳಿದನು :—ಎಲೈ ಮಾಂಧಾತನೇ, ಕಾಲಿಂದಿಯ ಸಹಸ್ರನಾಮಗಳನ್ನು ಹೇಳುವೆನು ಕೇಳು. ಅದರಿಂದ ಸರ್ವ ಇಷ್ಟಾರ್ಥಗಳೂ ಸಿದ್ಧಿಸುವುವು. ಅದು ಶ್ರೀಕೃಷ್ಣನು ವಶವಾಗುವಂತೆ ಮಾಡುವುದು.

ಓಂ ಅಸ್ಯ ಶ್ರೀಕಾಲಿಂದೀಸಹಸ್ರನಾಮಸ್ತೋತ್ರಮಹಾಮಂತ್ರಸ್ಯ। ಸೌಭರಿಋಷಿಃ। ಶ್ರೀಯಮುನಾ ದೇವತಾ। ಅನುಷ್ಟುಪ್ ಛಂದಃ ಮಾಯಾಬೀಜಮಿತಿ ಕೀಲಕಂ। ರಾಮಬೀಜಮಿತಿ ಶಕ್ತಿಃ। ಶ್ರೀ ಕಲಿಂದನಂದಿನೀ ಪ್ರಸಾದಸಿದ್ಧ್ಯರ್ಥೇ ಜಪೇ ವಿನಿಯೋಗಃ ॥

ಅಥ ಧ್ಯಾನಂ

ಶ್ಯಾಮಾಮಂಭೋಜನೇತ್ರಾಂ ಸಘನಘನರುಚಿಂ ರತ್ನಮಂಜೀರಕೂಜತ್
ಕಾಂಚೀಕೇಯೂರಯುಕ್ತಾಂ ಕನಕಮಣಿಮಯೇ ಬಿಭ್ರತೀಂ ಕುಂಡಲೇ ದ್ವೇ
ಭ್ರಾಜನ್ನ್ರೀನೀಲವಸ್ತ್ರಸ್ಫುರದಜಲಚಲದ್ವಾರಭಾರಾಂ ಮನೋಜ್ಞಾಂ
ಧ್ಯಾಯೇ ಮಾರ್ತಾಂಡಪುತ್ರೀಂ ತನುಕಿರಣಚಯೋದ್ದೀಪ್ತದೀಪಾಭಿರಾಮಾಂ

ಇತಿ ಧ್ಯಾನಂ

ಈ ಕಾಲಿಂದೀಸಹಸ್ರನಾಮಸ್ತೋತ್ರಮಹಾಮಂತ್ರಕ್ಕೆ ಸೌಭರಿಯೇ ಋಷಿಯು. ಶ್ರೀಯಮುನೆಯು ದೇವತೆಯು. ಅನುಷ್ಟುಪ್‌ಛಂದಸ್ಸು ಎಂಬುದಾಗಿ ಋಷಿ, ದೇವತೆ ಛಂದಸ್ಸುಗಳನ್ನು ಹೇಳಿ ಅನಂತರ ಮಾಯಾಬೀಜವು ಕೀಲಕವು, ರಮಾಬೀಜವು ಶಕ್ತಿಯು ಎಂದು ಕೀಲಕಶಕ್ತಿಗಳನ್ನು ಹೇಳಿ ಶ್ರೀಕಲಿಂದನಂದಿನಿಯಾದ ಯಮುನೆಯ ಅನುಗ್ರಹವು ನನಗುಂಟಾಗಲಿ ಎಂದು ಜಪಿಸಿ,

೩. ಈರೀತಿ ಧ್ಯಾನಮಾಡಬೇಕು. ಯಮುನೆಯು ಕೃಷ್ಣವರ್ಣೆಯು. ಕಮಲದಂತೆ ಕಣ್ಣುಗಳಿರುವುವು. ಶರೀರಕಾಂತಿಯು ದೊಡ್ಡ ದೊಡ್ಡ ಮೇಘಗಳ ಕಾಂತಿಯಂತೆ ಹೊಳೆಯುತ್ತಿರುವುದು. ರತ್ನಗಳನ್ನು ಮೆಟ್ಟಿ ಮಾಡಿರುವ ಚಿನ್ನದ ಡಾಬು ಸೊಂಟದಲ್ಲಿ ಪ್ರಕಾಶಿಸುತ್ತಿರುವುದು. ಭುಜಕೀರ್ತಿಗಳು ಭುಜಗಳನ್ನಲಂಕರಿಸಿರುವುವು. ಚಿನ್ನ, ಮುತ್ತು ರತ್ನಗಳಿಂದ ಮಾಡಿರುವ ಓಲೆಗಳು ಕಿವಿಗಳನ್ನಲಂಕರಿಸಿರುವುವು. ನೀಲವಾದ ವಸ್ತ್ರವನ್ನುಟ್ಟು ಗಂಭೀರಳಾಗಿ ಮನೋಹರಳಾಗಿ ಕಾಣುವಳು. ತನ್ನ ಶರೀರಕಾಂತಿಯಿಂದ ಪ್ರಕಾಶಮಯಳಾದ ಇಂತಹ ಸೂರ್ಯಸುತೆ ಯಮುನೆಯನ್ನು ಧ್ಯಾನಮಾಡುವೆನು.

ಓಂ ಕಾಲಿಂದೀ ಯಮುನಾ ಕೃಷ್ಣಾ ಕೃಷ್ಣರೂಪಾ ಸನಾತನೀ ।
ಕೃಷ್ಣವಾಮಾಂಸಸಂಭೂತಾ ಪರಮಾನಂದರೂಪಿಣೀ ॥ ೪ ॥

ಗೋಲೋಕವಾಸಿನೀ ಶ್ಯಾಮಾ ವೃಂದಾವನವಿನೋದಿನೀ ।
ರಾಧಾಸಖೀ ರಾಸಲೀಲಾ ರಾಸಮಂಡಲಮಂಡನೀ ॥ ೫ ॥

ನಿಕುಂಜಮಾಧವೀ ವಲ್ಲೀ ರಂಗವಲ್ಲೀ ಮನೋಹರಾ ।
ಶ್ರೀರಾಸಮಂಡಲೀಭೂತಾ ಯೂಥೀಭೂತಾ ಹರಿಪ್ರಿಯಾ ॥ ೬ ॥

ಗೋಲೋಕತಟಿನೀ ದಿವ್ಯಾ ನಿಕುಂಜತಲವಾಸಿನೀ ।
ದೀರ್ಘೋರ್ಮಿವೇಗಗಂಭೀರಾ ಪುಷ್ಪಪಲ್ಲವವಾಹಿನೀ ॥ ೭ ॥

ಘನಶ್ಯಾಮಾ ಮೇಘಮಾಲಾ ಬಲಾಕಾಪದ್ಮಮಾಲಿನೀ ।
ಪರಿಪೂರ್ಣತಮಾ ಪೂರ್ಣಾ ಪೂರ್ಣಬ್ರಹ್ಮಪ್ರಿಯಾ ವರಾ ॥ ೮ ॥

---

೪. ಧ್ಯಾನಮಾಡಿದನಂತರ ಸಹಸ್ರನಾಮಗಳನ್ನು ಜಪಿಸಬೇಕು :–ಕಾಲಿಂದೀ, ಯಮುನಾ, ಕೃಷ್ಣರೂಪಾ, ಸನಾತನೀ, ಕೃಷ್ಣವಾಮಾಂಸಸಂಭೂತಾ ಪರಮಾನಂದ ರೂಪಿಣೀ ।

೫-೬. ಗೋಲೋಕವಾಸಿನಿಯು, ಶ್ಯಾಮಾ, ವೃಂದಾವನದ ಜನಗಳನ್ನಾನಂದ ಪಡಿಸುವಳು, ರಾಧಾಸಖಿಯು. ರಾಸಕ್ರೀಡೆಯಲ್ಲಿ ಕ್ರೀಡಾಸ್ವರೂಪಳು. ರಾಸ ಮಂಡಲದಲ್ಲಿ ರಂಜಿಸುವವಳು. ರಾಸಲತಾಮಂಟಪಕ್ಕೆ ಮಲ್ಲಿಗೆಯ ಬಳ್ಳಿಯಂತಿರು ವವಳು. ರಂಗವಲ್ಲಿಯು, ಮನೋಹರಳು, ಶ್ರೀರಾಸದಲ್ಲಿ ಮಂಡಲೀಭೂತಳಾಗಿರು ವವಳು. ಯೂಥೀಭೂತಳು ಹರಿಪ್ರಿಯಳು.

೭-೮. ಗೋಲೋಕವೇ ದಡವಾಗಿ ಉಳ್ಳವಳು. ದಿವ್ಯಸ್ವರೂಪಳು. ಲತಾ ಮಂಟಪದ ಹತ್ತಿರ ಇರುವವಳು. ದೀರ್ಘದೀರ್ಘವಾದ ಅಲೆಗಳ ವೇಗದಿಂದ ಗಂಭೀರಳಾಗಿರುವವಳು. ಪುಷ್ಪ, ಎಲೆ ಮುಂತಾದುವುಗಳೊಡನೆ ಹರಿಯುವವಳು. ಮೇಘದಂತೆ ಕಪ್ಪಾಗಿರುವವಳು. ಮೇಘವನ್ನೇ ಮಾಲಿಕೆಯನ್ನಾಗಿ ಉಳ್ಳವಳು. ನೀರ್ವಕ್ಕಿಗಳನ್ನೂ, ಪದ್ಮಗಳನ್ನೂ ಹೊಂದಿರುವವಳು. ಪರಿಪೂರ್ಣತಮಳು. ಪೂರ್ಣಸ್ವರೂಪಿಣಿಯು. ಪೂರ್ಣಬ್ರಹ್ಮನಾದ ಹರಿಯ ಪ್ರಿಯಳು. ಶ್ರೇಷ್ಠಳು.

ಮಹಾವೇಗವತೀ ಸಾಕ್ಷಾನ್ನಿಕುಂಜದ್ವಾರನಿರ್ಗತಾ ।
ಮಹಾನದೀ ಮಂದಗತಿರ್ವಿರಜಾವೇಗಭೇದಿನೀ ॥ ೯ ॥

ಅನೇಕಬ್ರಹ್ಮಾಂಡಗತಾ ಬ್ರಹ್ಮದ್ರವಸಮಾಕುಲಾ ।
ಗಂಗಾಮಿಶ್ರಾ ನಿರ್ಜಲಾಭಾ ನಿರ್ಮಲಾ ಸರಿತಾಂ ವರಾ ॥ ೧೦ ॥

ರತ್ನಬದ್ಧೋಭಯತಟೀ ಹಂಸಪದ್ಮಾದಿಸಂಕುಲಾ ।
ನದೀ ನಿರ್ಮಲಪಾನೀಯಾ ಸರ್ವಬ್ರಹ್ಮಾಂಡಪಾವಿನೀ ॥ ೧೧ ॥

ವೈಕುಂಠಪರಿಖೀಭೂತಾ ಪರಿಖಾ ಪಾಪಹಾರಿಣೀ ।
ಬ್ರಹ್ಮಲೋಕಗತಾ ಬ್ರಾಹ್ಮೀ ಸ್ವರ್ಗಾ ಸ್ವರ್ಗನಿವಾಸಿನೀ ॥ ೧೨ ॥

ಉಲ್ಲಸಂತೀ ಪ್ರೋತ್ಪತಂತೀ ಮೇರುಮಾಲಾ ಮಹೋಜ್ಜ್ವಲಾ ।
ಶ್ರೀಗಂಗಾಭಾ ಶಿಖರಿಣೀ ಗಂಡಶೈಲವಿಭೇದಿನೀ ॥ ೧೩ ॥

೯-೧೦. ಮಹಾವೇಗದಿಂದ ಹರಿಯುವವಳು. ಲತಾಮಂಟಪದ ದ್ವಾರದಿಂದ ಹೊರಟಿರುವವಳು. ಮಹಾನದಿಯು. ನಿಧಾನವಾಗಿ ಹರಿಯುವವಳು. ವೇಗದಿಂದ ವಿರಜಾನದಿಯ ವೇಗವನ್ನಡಗಿಸಿರುವವಳು. ಅನೇಕ ಬ್ರಹ್ಮಾಂಡಗಳಲ್ಲಿ ಸಂಚರಿಸುವವಳು. ಬ್ರಹ್ಮದ್ರವವೆಂಬ ನದಿಯೊಡನೆ ಸೇರುವವಳು. ಗಂಗೆಯ ಜೊತೆಯಲ್ಲಿ ಬೆರೆಯುವವಳು. ನೀರಿದ್ದರೂ ನೀರಿಲ್ಲದಂತೆ ಅತಿಸ್ವಚ್ಛವಾಗಿ ಕಾಣುವವಳು. ಪರಿಶುದ್ಧಳು. ನದಿಗಳಲ್ಲೆಲ್ಲಾ ಉತ್ತಮಳು.

೧೧-೧೨. ರತ್ನಗಳಿಂದಕೂಡಿರುವ ಉಭಯದಡಗಳನ್ನುಳ್ಳವಳು. ಹಂಸ, ಪದ್ಮ ಇವುಗಳ ಸಮೂಹದಿಂದ ಕೂಡಿರುವವಳು. ನಿರ್ಮಲವಾಗಿಯೂ, ಕುಡಿಯಲು ಯೋಗ್ಯವಾಗಿಯೂ ಇರುವ ನೀರುಳ್ಳನದಿಯು. ಸರ್ವಬ್ರಹ್ಮಾಂಡಗಳನ್ನೂ ಪವಿತ್ರವನ್ನಾಗಿ ಮಾಡುವವಳು. ವೈಕುಂಠವನ್ನೇ ಕಂದಕವನ್ನಾಗಿ ಉಳ್ಳವಳು. ಪಾಪಹಾರಿಣಿಯು. ಬ್ರಹ್ಮಲೋಕಕ್ಕೆ ಹೋಗುವವಳು. ಬ್ರಾಹ್ಮಿಯು. ಸ್ವರ್ಗಲೋಕಕ್ಕೆ ತೆರಳುವವಳು. ಸ್ವರ್ಗವಾಸಿನಿಯು.

೧೩-೧೪. ಯಾವಾಗಲೂ ಆನಂದಮಯಳು. ಎತ್ತರದಿಂದ ಬೀಳುವವಳು. ಮೇರುಪರ್ವತವನ್ನೇ ಮಾಲೆಯಾಗಿ ಉಳ್ಳವಳು. ಅತಿಪ್ರಕಾಶಶಾಲಿನಿಯು.. ಗಂಗೆಯಂತೆ ಕಾಂತಿಯುಳ್ಳವಳು. ಪರ್ವತದ ಶಿಖರಗಳಿಂದ ಹರಿಯುವವಳು. ಗಂಡವೆಂಬ

ದೇಶಾನ್ಪುನಂತೀ ಗಚ್ಛಂತೀ ವಹಂತೀ ಭೂಮಿಮಧ್ಯಗಾ ।
ಮಾರ್ತಂಡತನುಜಾ ಪುಣ್ಯಾ ಕಾಲಿಂದೀ ಗಿರಿನಂದಿನೀ ॥ ೧೪ ॥

ಯಮುಸ್ಸಸಾ ಮಂದಹಾಸಾ ಸುದ್ವಿಜಾರಚಿತಾಂಬರಾ ।
ನೀಲಾಂಬರಾ ಪದ್ಮಮುಖೀ ಚರಂತೀ ಚಾರುದರ್ಶನಾ ॥ ೧೫ ॥

ರಂಭೋರುಃ ಪದ್ಮನಯನಾ ಮಾಧವೀ ಪ್ರಮದೋತ್ತಮಾ ।
ತಪಶ್ಚರಂತೀ ಸುಶ್ರೋಣೀ ಕೂಜನ್ನೂಪುರಮೇಖಲಾ ॥ ೧೬ ॥

ಜಲಸ್ಥಿತಾ ಶ್ಯಾಮಲಾಂಗೀ ಖಾಂಡವಾಭಾ ವಿಹಾರಿಣೀ ।
ಗ್ಲಾಂಢೀವಿಭಾಷಿಣೀ ವನ್ಯಾ ಶ್ರೀಕೃಷ್ಣಂ ವರಮಿಚ್ಛತೀ ॥ ೧೭ ॥

ದ್ವಾರಕಾಗಮನಾ ರಾಜ್ಞೀ ಪಟ್ಟರಾಜ್ಞೀ ಪರಂಗತಾ ।
ಮಹಾರಾಜ್ಞೀ ರತ್ನಭೂಷಾ ಗೋಮತೀತೀರಚಾರಿಣೀ ॥ ೧೮ ॥

ಪರ್ವತವನ್ನು ಕೊರೆದುಹಾಕಿದವಳು. ತಾನು ಹರಿಯುವ ದೇಶಗಳನ್ನೆಲ್ಲಾ ಪವಿತ್ರವನ್ನಾಗಿ ಮಾಡುವವಳು. ಹರಿಯುತ್ತಾ ಭೂಮಧ್ಯವನ್ನು ಸೇರುವವಳು. ಸೂರ್ಯಸುತೆಯು. ಪುಣ್ಯಸ್ವರೂಪಿಣಿಯು. ಕಲಿಂದಪರ್ವತದಲ್ಲಿ ಹುಟ್ಟಿದವಳು. ಗಿರಿನಂದಿನಿಯು.

೧೫-೧೬. ಯಮುನ ತಂಗಿಯು. ಮಧುರಹಾಸ್ಯವನ್ನುಳ್ಳವಳು. ಪ್ರಸಿದ್ಧವಾದ ಪಕ್ಷಿಗಳನ್ನೇ ಬಟ್ಟೆಯನ್ನಾಗಿ ಉಳ್ಳವಳು. ನಿಲಾಂಬರಧಾರಿಣಿಯು. ಪದ್ಮಮುಖಿಯು. ಯಾವಾಗಲೂ ಹರಿಯುತ್ತಿರುವವಳು. ಕಣ್ಗಳಿಗೆ ಆನಂದವನ್ನುಂಟುಮಾಡುವವಳು. ರಂಭೋರು. ಪದ್ಮಗಳಂತೆ ಕಣ್ಣುಳ್ಳವಳು. ಮಾಧವಿಯು. ಯುವತಿಯರಲ್ಲಿ ಶ್ರೇಷ್ಠಳು. ತಪಸ್ಸನ್ನು ಮಾಡುವವಳು. ಸುಶ್ರೋಣಿಯು. ಗೆಜ್ಜೆ ಡಾಬನ್ನೂ, ಕಾಲ್ಗಡಗಗಳನ್ನೂ ಧರಿಸಿರುವವಳು.

೧೭-೧೮. ಜಲದಲ್ಲಿರುವವಳು. ಶ್ಯಾಮವರ್ಣಳು. ಖಾಂಡವದಂತೆ ಕಾಂತಿಯುಳ್ಳವಳು. ವಿಹರಣಶೀಲಳು. ಅರ್ಜುನನೊಡನೆ ಸಲ್ಲಾಪಮಾಡಿದವಳು. ಅರಣ್ಯದಲ್ಲಿ ಹರಿಯುವವಳು. ಶ್ರೀಕೃಷ್ಣನನ್ನು ವರಬೇಡಿದವಳು. ದ್ವಾರಕೆಗೆ ಬಂದವಳು. ರಾಣಿಯಾದವಳು. ಅನಂತರ ಪಟ್ಟದರಾಣಿಯಾದವಳು. ಶ್ರೇಷ್ಠಳು. ಮಹಾರಾಣಿಯು. ರತ್ನಭೂಷಣಗಳಿಂದಲಂಕೃತಳು. ಗೋಮತೀನದಿಯ ತೀರಚಾರಣಿಯು.

ಸ್ವಕೀಯಾ ಚ ಸುಖಾ ಸ್ವಾರ್ಥಾ ಸ್ವಭಕ್ತಕಾರ್ಯಸಾಧಿನೀ ।
ನವಲಾಂಗಾಬಲಾ ಮುಗ್ಧಾ ವರಾಂಗಾ ವಾಮಲೋಚನಾ ॥ ೧೯ ॥

ಅಜ್ಞಾತಯೌವನಾ ದೀನಾ ಪ್ರಭಾಕಾಂತಿದ್ಯುತಿಚ್ಛವಿಃ ।
ಸುಶೋಭಾ ಪರಮಾಕೀರ್ತಿಃ ಕುಶಲಾ ಜ್ಞಾತಯೌವನಾ ॥ ೨೦ ॥

ನವೋಢಾ ಮಧ್ಯಗಾ ಮಧ್ಯಾ ಪ್ರೌಢಿಃ ಪ್ರೌಢಾ ಪ್ರಗಲ್ಭಗಾ ।
ಧೀರಾಽಧೀರಾ ಧೈರ್ಯಧರಾ ಜ್ಯೇಷ್ಠಾ ಶ್ರೇಷ್ಠಾಕುಲಾಂಗನಾ ॥ ೨೧ ॥

ಕ್ಷಣಪ್ರಭಾ ಚಂಚಲಾರ್ಚಾ ವಿದ್ಯುತ್ಸೌದಾಮಿನೀ ತಡಿತ್ ।
ಸ್ವಾಧೀನಯತಿಕಾ ಕಾಲಲಕ್ಷ್ಮೀಃ ಪುಷ್ಟಾ ಸ್ವಾಧೀನಭರ್ತೃಕಾ ॥ ೨೨ ॥

ಕಲಹಾಂತರಿತಾ ಭೀರುರಿಚ್ಛಾ ಪ್ರೋತ್ಕಂಠಿತಾಕುಲಾ ।
ಕಶಿಪುಸ್ಥಾ ದಿವ್ಯಶಯ್ಯಾ ಗೋವಿಂದಹೃತಮಾನಸಾ ॥ ೨೩ ॥

೧೯-೨೦. ಸ್ವತಂತ್ರಳು. ಸುಖಿಯು. ಸ್ವಾರ್ಥಳು. ತನ್ನ ಭಕ್ತರ ಇಷ್ಟಾರ್ಥವನ್ನು ನೆರವೇರಿಸುವವಳು. ನೂತನವಾದ ಮತ್ತು ಚಂಚಲವಾದ ಶರೀರವುಳ್ಳವಳು. ಮುಗ್ಧಳು. ಶ್ರೇಷ್ಠವಾದ ಅಂಗಗಳುಳ್ಳವಳು. ಸುಂದರವಾದ ಕಣ್ಣುಳ್ಳವಳು. ಇತರರಿಗೆ ಗೊತ್ತಾಗದಂತಹ ಯೌವನವುಳ್ಳವಳು. ದೀನಳು. ಕಾಂತಿಯುಳ್ಳವಳು. ಶುಭಕರಳು. ಕೀರ್ತಿಶಾಲಿನಿಯು. ಕುಶಲಳು. ತನಗೆ ಗೊತ್ತಾದ ಯೌವನವುಳ್ಳವಳು.

೨೧. ನವೋಢಾ ನಾಯಿಕೆಯು, ಮಧ್ಯಗಾ ನಾಯಿಕೆಯು, ಮಧ್ಯಾ, ಪ್ರೌಢಿ, ಪ್ರೌಢಾ, ಪ್ರಗಲ್ಭಾ, ಧೀರಾ, ಅಧೀರಾ, ಧೈರ್ಯಧರಾ, ಜ್ಯೇಷ್ಠಾ, ಶ್ರೇಷ್ಠಾ, ಕುಲಾಂಗನಾ. (ಇವೆಲ್ಲವೂ ಶೃಂಗಾರನಾಯಿಕೆಯರ ಹೆಸರುಗಳು.)

೨೨. ಕ್ಷಣಪ್ರಭಾ, ಚಂಚಲಾರ್ಚಾ, ವಿದ್ಯುತ್, ಸೌದಾಮಿನೀ, ತಡಿತ್ ಇವೆಲ್ಲವೂ ಯಮುನೆಯ ಹೆಸರುಗಳು. ಸ್ವಾಧೀನ ಯತಿಕಾ ಎಂಬ ನಾಯಿಕೆಯು, ಕಾಲಲಕ್ಷ್ಮಿಯು, ಪುಷ್ಟಾ, ಸ್ವಾಧೀನಭರ್ತೃಕಾ ಎಂಬ ನಾಯಿಕೆಯು.

೨೩. ಕಲಹಾಂತರಿತಾ ನಾಯಿಕೆಯು, ಭೀರುನಾಯಿಕೆಯು, ಇಚ್ಛಾನಾಯಿಕೆಯು, ಪ್ರೋತ್ಕಂಠಿತಾ, ಆಕುಲಾ, ಕಶಿಪ್ರಸ್ಥಾ, ದಿವ್ಯಶಯ್ಯಾ ಇಷ್ಟು ಭೇದದಿಂದ ಕೂಡಿರುವ ನಾಯಿಕೆಯು ಗೋವಿಂದನಿಗೆ ವಶಳಾಗಿರುವವಳು.

ಖಂಡಿತಾ ಖಂಡಶೋಭಾಢ್ಯಾ ವಿಪ್ರಲಬ್ಧಾಭಿಸಾರಿಕಾ ।
ವಿರಹಾರ್ತಾ ವಿರಹಿಣೀ ನಾರೀ ಪ್ರೋಷಿತಭರ್ತೃಕಾ ॥ ೨೪ ॥

ಮಾನಿನೀ ಮಾನದಾ ಪ್ರಾಜ್ಞಾ ಮಂದಾರವನವಾಸಿನೀ ।
ಝುಂಕಾರಿಣೀ ಝಣತ್ಕಾರೀ ರಣನ್ಮಂಜೀರನೂಪುರಾ ॥ ೨೫ ॥

ಮೇಖಲಾ ಮೇಖಲಾಕಾಂಚೀ ಕಾಂಚನೀ ಕಾಂಚನಮಯೀ ।
ಕಂಚುಕೀ ಕಂಚುಕಮಣಿಃ ಶ್ರೀಕಂಠಾಢ್ಯಾ ಮಹಾಮಣಿಃ ॥ ೨೬ ॥

ಶ್ರೀಹಾರಿಣೀ ಪದ್ಮಹಾರಾ ಮುಕ್ತಾ ಮುಕ್ತಾಫಲಾರ್ಚಿತಾ ।
ರತ್ನಕಂಕಣಕೇಯೂರಾ ಸ್ಫುರದಂಗುಲಿಭೂಷಣಾ ॥ ೨೭ ॥

---

೨೪. ಖಂಡಿತಾ, ಖಂಡಶೋಭಾಢ್ಯಾ, ವಿಪ್ರಲಬ್ಧಾ, ಅಭಿಸಾರಿಕಾ, ವಿರಹಾರ್ತಾ, ವಿರಹಿಣೀ, ನಾರೀ, ಪ್ರೋಷಿತಭರ್ತೃಕಾ ಈ ಹೆಸರುಗಳುಳ್ಳ ನಾಯಿಕೆಯು.

೨೫. ಮಾನಿನಿಯು, ಮಾನವನ್ನುಳಿಸುವವಳು, ಪ್ರಾಜ್ಞಳು, ಮಂದಾರ ಪುಷ್ಪದಂತೆ ಸುವಾಸನೆಯುಳ್ಳವಳು. ಝುಂಕಾರ ಶಬ್ದವುಳ್ಳವಳು. ಝಣತ್ ಎಂಬ ಶಬ್ದಮಾಡುವವಳು. ಧ್ವನಿಮಾಡುವ ಡಾಬು ಮತ್ತು ಕಾಲ್ಕಡಗಳನ್ನುಳ್ಳವಳು.

೨೬. ಮೇಖಲೆಯು, ಡಾಬನ್ನುಳ್ಳವಳು. ಕಾಂಚೀ, ಸುವರ್ಣಳು. ಸುವರ್ಣಮಯಿಯು. ಕಂಚುಕಿ, ಕಂಚುಕಮಣಿ, ಶ್ರೀಕಂಠಾಢ್ಯಾ, ಮಹಾಮಣಿ ಇವೆಲ್ಲಾ ಅವಳ ಹೆಸರುಗಳು.

೨೭. ಜನರ ಮನಸ್ಸನ್ನೆಳೆಯುವವಳು. ಪದ್ಮಗಳ ಹಾರಗಳನ್ನುಳ್ಳವಳು. ಸ್ವೇಚ್ಛೆಯಾಗಿರುವವಳು. ಮುತ್ತುಗಳಿಂದ ಪೂಜಿಸಿಕೊಳ್ಳುವವಳು. ರತ್ನಮಯವಾದ ಬಳೆ, ಕೈಬಂದಿಗಳಿಂದ ಪ್ರಕಾಶಿಸುತ್ತಿರುವವಳು. ರಂಜಿಸುತ್ತಿರುವ ಉಂಗುರವುಳ್ಳವಳು.

ದರ್ಪಣಾ ದರ್ಪಣೀಭೂತಾ ದುಷ್ಟದರ್ಪವಿನಾಶಿನೀ ।
ಕಂಬುಗ್ರೀವಾ ಕಂಬುಧರಾ ಗ್ರೈವೇಯಕವಿರಾಜಿತಾ　　|| ೨೮ ||

ತಾಟಂಕಿನೀ ದಂತಧರಾ ಹೇಮಕುಂಡಲಮಂಡಿತಾ ।
ಶಿಖಾಭೂಷಾ ಭಾಲಪುಷ್ಪಾ ನಾಸಾಮೌಕ್ತಿಕಶೋಭಿನೀ　　|| ೨೯ ||

ಮಣಿಭೂಮಿಗತಾ ದೇವೀ ದೈವತಾದ್ರಿವಿಹಾರಿಣೀ ।
ವೃಂದಾವನಗತಾ ವೃಂದಾ ವೃಂದಾರಣ್ಯನಿವಾಸಿನೀ　　|| ೩೦ ||

ವೃಂದಾವನಲತಾ ಮಾಧ್ವೀ ವೃಂದಾರಣ್ಯವಿಭೂಷಿತಾ ।
ಸೌಂದರ್ಯಲಹರೀ ಲಕ್ಷ್ಮೀರ್ಮಧುರಾತೀರ್ಥವಾಸಿನೀ　　|| ೩೧ ||

---

೨೮. ಕನ್ನಡಿಯೇ ಇವಳು. ದರ್ಪಣದಂತೆ ಸ್ವಚ್ಛಳಾಗಿರುವವಳು. ದುಷ್ಟರ ದರ್ಪವನ್ನು ನಾಶಮಾಡುವವಳು. ಕಂಬುಗ್ರೀವಳು. ಜಲಮಯಳು. ಕಂಠಾಭರಣದಿಂದ ವಿರಾಜಿಸುವವಳು.

೨೯. ಓಲೆಗಳನ್ನು ಧರಿಸಿರುವವಳು. ಸ್ವಚ್ಛವಾದ ಹಲ್ಲುಗಳನ್ನುಳ್ಳವಳು. ಸುವರ್ಣಕುಂಡಲಗಳಿಂದ ಮೆರೆಯುವವಳು. ಅಲಂಕಾರವಾಗಿ ಶಿಖೆಯನ್ನು ಹಾಕಿಕೊಳ್ಳುವಳು. ಫಾಲಪ್ರದೇಶದವರೆಗೂ ಹೂವುಗಳನ್ನುಳ್ಳವಳು. ನಾಸಾಮೌಕ್ತಿಕದಿಂದ ಪ್ರಕಾಶಿಸುವಳು.

೩೦. ಮಣಿಭೂಮಿಯಲ್ಲಿ ಹರಿಯುವವಳು. ರೈವತಾದ್ರಿಯಲ್ಲಿ ವಿಹರಿಸುವವಳು. ವೃಂದಾವನದಲ್ಲಿ ಹರಿಯುವವಳು. ವೃಂದೆಯು. ವೃಂದಾರಣ್ಯದಲ್ಲಿ ವಾಸಮಾಡುವವಳು.

೩೧. ವೃಂದಾವನಕ್ಕೆ ಲತೆಯಸ್ವರೂಪಳು. ಮಾಧ್ವಿಯು. ವೃಂದಾರಣ್ಯಕ್ಕೆ ಭೂಷಣಪ್ರಾಯಳು. ಸೌಂದರ್ಯವೆಂಬ ಅಲೆಗಳನುಳ್ಳವಳು. ಸಂಪದ್ಯುಕ್ತಳು. ಮಧುರಾತೀರ್ಥವಾಸಿನಿಯು.

ವಿಶ್ರಾಂತವಾಸಿನೀ ಕಾಮ್ಯಾ ರಮ್ಯಾ ಗೋಕುಲವಾಸಿನೀ ।
ರಮಣಸ್ಥಲಶೋಭಾಢ್ಯಾ ಮಹಾವನಮಹಾನದೀ ॥ ೩೨ ॥

ಪ್ರಣತಾ ಪ್ರೋನ್ನತಾ ಪ್ರಷ್ಟಾ ಭಾರತೀ ಭರತಾರ್ಚಿತಾ ।
ತೀರ್ಥರಾಜಗತಿರ್ಗೋತ್ರಾ ಗಂಗಾಸಾಗರಸಂಗಮಾ ॥ ೩೩ ॥

ಸಪ್ತಾಬ್ಧಿಭೇದಿನೀ ಲೋಲಾ ಸಪ್ತದ್ವೀಪಗತಾ ಬಲಾತ್ ।
ಲುಠಂತೀ ಶೈಲಭಿದ್ಯಂತೀ ಸ್ಫುರಂತೀ ವೇಗವತ್ತರಾ ॥ ೩೪ ॥

ಕಾಂಚನೀ ಕಾಂಚನೀಭೂಮಿಃ ಕಾಂಚನೀಭೂಮಿಭಾವಿತಾ ।
ಲೋಕದೃಷ್ಟಿರ್ಲೋಕಲೀಲಾ ಲೋಕಾಲೋಕಾಚಲಾರ್ಚಿತಾ ॥ ೩೫ ॥

---

೩೨. ವಿಶ್ರಾಂತವಾಸಿನಿಯು. ಇಚ್ಛೆಯುಳ್ಳವಳು. ಮನೋಹರಳು. ಗೋಕುಲವಾಸಿನಿಯು. ವಿಹಾರಸ್ಥಳಗಳಿಗೆ ಸೌಂದರ್ಯವನ್ನುಂಟುಮಾಡುವವಳು. ಮಹಾವನದಲ್ಲಿ ಹರಿಯುವ ಮಹಾನದಿಯು.

೩೩. ತಗ್ಗಿನಲ್ಲಿ ಹರಿಯುವವಳು. ಎತ್ತರದಲ್ಲಿ ಸಂಚರಿಸುವವಳು. ಭಾರತಿಯು. ಭರತನಿಂದ ಪೂಜಿತಳಾದವಳು. ಶ್ರೇಷ್ಠವಾದ ತೀರ್ಥಗಳಂತೆ ಗಮನವುಳ್ಳವಳು. ಗೋತ್ರಳು. ಗಂಗಾಸಾಗರಗಳನ್ನು ಸೇರುವವಳು.

೩೪. ಏಳು ಸಮುದ್ರಗಳನ್ನೂ ಭೇದಿಸುವವಳು. ಚಂಚಲೆಯು. ಸಪ್ತದ್ವೀಪಗಳಲ್ಲೂ ಸಂಚರಿಸುವವಳು. ಉರುಳಿ ಉರುಳಿ ಹರಿಯುವವಳು. ಶೈಲಗಳನ್ನು ಭೇದಿಸುವವಳು. ಪ್ರಕಾಶಿಸುವವಳು. ಅತಿವೇಗವುಳ್ಳವಳು.

೩೫. ಸುವರ್ಣಮಯಳು. ಸುವರ್ಣಭೂಮಿಯನ್ನುಳ್ಳವಳು. ಸುವರ್ಣಭೂಮಿಯನ್ನಪೇಕ್ಷಿಸುವವಳು. ಜನಗಳ ದೃಷ್ಟಿಯನ್ನಾಕರ್ಷಿಸುವವಳು. ಜನಗಳ ಲೀಲೆಯನ್ನುಳ್ಳವಳು. ಲೋಕಾಲೋಕಪರ್ವತದಿಂದ ಪೂಜಿತಳಾದವಳು.

ಶೈಲೋದ್ಗತಾ ಸ್ವರ್ಗಗತಾ ಸ್ವರ್ಗಾರ್ಚಾ ಸ್ವರ್ಗಪೂಜಿತಾ ।
ವೃಂದಾವನೀ ವನಾಧ್ಯಕ್ಷಾ ರಕ್ಷಾ ಕಕ್ಷಾತಟೀ ಪಟೀ ॥ ೩೬ ॥

ಅಸಿಕುಂಡಗತಾ ಕಚ್ಛಾ ಸ್ವಚ್ಛಂದೋಚ್ಛಲಿತಾದಿಜಾ ।
ಕುಹರಸ್ಥಾ ರಯಿಪ್ರಸ್ಥಾ ಪ್ರಸ್ಥಾ ಶಾಂತೇತರಾತುರಾ ॥ ೩೭ ॥

ಅಂಬುಚ್ಛಟಾ ಸೀಕರಾಭಾ ದರ್ದುರಾ ದರ್ದುರೀಧರಾ ।
ಪಾಪಾಂಕುಶಾ ಪಾಪಸಿಂಹೀ ಪಾಪದ್ರುಮಕುಠಾರಿಣೀ ॥ ೩೮ ॥

ಪುಣ್ಯಸಂಘಾ ಪುಣ್ಯಕೀರ್ತಿಃ ಪುಣ್ಯದಾ ಪುಣ್ಯವರ್ಧಿನೀ ।
ಮಧೋರ್ವನನದೀ ಮುಖ್ಯಾ ತುಲಾ ತಾಲವನಸ್ಥಿತಾ ॥ ೩೯ ॥

---

೩೬. ಪರ್ವತದಿಂದ ಹುಟ್ಟಿದವಳು. ಸ್ವರ್ಗದಿಂದ ಬಂದವಳು. ಸ್ವರ್ಗದವರಿಂದ ಪೂಜಿತಳಾದವಳು. ಸ್ವರ್ಗವನ್ನು ಪೂಜಿಸುವವಳು. ವೃಂದಾವನಿಯು. ವನಕ್ಕೆ ಪ್ರಧಾನಳು. ರಕ್ಷಣೆಮಾಡುವವಳು. ವನಭಾಗದಲ್ಲಿ ಹರಿಯುವವಳು. ಶ್ರೇಷ್ಠವಾದ ತಟವುಳ್ಳವಳು. ಸಮರ್ಥಳು.

೩೭. ಅಸಿಕುಂಡವೆಂಬುದರಿಂದ ಬಂದವಳು. ತೀರವುಳ್ಳವಳು. ಸ್ವಚ್ಛಂದವಾಗಿ ಸಂಚರಿಸುವವಳು. ಆದಿರೂಪಿಯು. ಕುಹರದಲ್ಲಿರುವವಳು. ವೇಗವಾದ ಸಂಚಾರವುಳ್ಳವಳು. ವಿಶಾಲವಾಗಿಯೂ ಸ್ವಚ್ಛವಾಗಿಯೂ ಇರುವ ಜಾಗದಲ್ಲಿರುವವಳು. ಭೋರ್ಗರೆಯುವವಳು. ಬೇಗಬೇಗನೆ ಓಡುವವಳು.

೩೮. ನೀರಿನ ಲಹರಿಗಳನ್ನುಳ್ಳವಳು. ತುಂತುರುಗಳಿಂದ ಪ್ರಕಾಶಿಸುವವಳು. ದುರ್ದರಳು. ದಾರ್ದುರಿಯು. ಧರಳು. ಪಾಪಗಳಿಗೆ ಅಂಕುಶರೂಪಿಯು. ಪಾಪಗಳಿಗೆ ಸಿಂಹರೂಪಿಣಿಯು. ಪಾಪಗಳೆಂಬ ಮರಗಳಿಗೆ ಕೊಡಲಿಯಂತಿರುವವಳು.

೩೯. ಪುಣ್ಯಸಮೂಹವುಳ್ಳವಳು. ಪುಣ್ಯಕೀರ್ತಿಯು. ಪುಣ್ಯವನ್ನು ಕೊಡುವವಳು. ಪುಣ್ಯವನ್ನು ಬೆಳಸುವವಳು. ಮಧುವನದಲ್ಲಿ ಹರಿಯುವ ನದಿಯು. ಪ್ರಧಾನಳು. ಗೌರವಶಾಲಿನಿಯು. ತಾಳವನದಲ್ಲಿ ಹರಿಯುವವಳು.

ಕುಮುದ್ವನನದೀ ಕುಬ್ಜಾ ಕುಮುದಾಂಭೋಜವರ್ಧಿನೀ ।
ಪ್ಲವರೂಪಾ ವೇಗವತೀ ಸಿಂಹಸರ್ಪಾದಿವಾಹಿನೀ ॥ ೪೦ ॥

ಬಹುಲೀ ಬಹುದಾ ಬಹ್ವೀ ಬಹುಲಾ ವನವಂದಿತಾ ।
ರಾಧಾಕುಂಡಕಲಾರಾಧ್ಯಾ ಕೃಷ್ಣಕುಂಡಜಲಾಶ್ರಿತಾ ॥ ೪೧ ॥

ಲಲಿತಾ ಕುಂಡಗಾ ಘಂಟಾ ವಿಶಾಖಾ ಕುಂಡಮಂಡಿತಾ ।
ಗೋವಿಂದಕುಂಡನಿಲಯಾ ಗೋಪಕುಂಡತರಂಗಿಣೀ ॥ ೪೨॥

ಶ್ರೀಗಂಗಾ ಮಾನಸೀಗಂಗಾ ಕುಸುಮಾಂಬರಭಾವಿನೀ ।
ಗೋವರ್ಧಿನೀ ಗೋಧನಾಢ್ಯಾ ಮಯೂರೀ ವರವರ್ಣಿನೀ ॥ ೪೩ ॥

---

೪೦. ಕುಮುದ್ವನದಲ್ಲಿ ಹರಿಯುವ ನದಿಯು. ಕುಬ್ಜಳು. ಕುಮುದತಾವರೆಗಳನ್ನು ಬೆಳಸುವವಳು. ತೇಲಿಹೋಗುವ ಸ್ವಭಾವವುಳ್ಳವಳು. ವೇಗಶಾಲಿನಿಯು. ಸಿಂಹ, ಸರ್ಪ ಮುಂತಾದವುಗಳನ್ನು ಕೊಚ್ಚಿಕೊಂಡು ಹೋಗುವವಳು.

೪೧. ಅನೇಕ ಪದಾರ್ಥಗಳನ್ನೊಳಗೊಂಡವಳು. ಅನೇಕ ಪದಾರ್ಥಗಳನ್ನು ಕೊಡುವವಳು. ಅನೇಕ ವನಗಳಿಂದ ನಮಸ್ಕೃತಳು. ರಾಧಾಕುಂಡಕಲೆಯಿಂದ ಪೂಜಿತಳು. ಕೃಷ್ಣಕುಂಡಜಲದಲ್ಲಿ ಆಶ್ರಯವನ್ನು ಹೊಂದಿದವಳು.

೪೨. ಮೃದುಸ್ವಭಾವದವಳು. ಕುಂಡಗಳನ್ನು ಪ್ರವೇಶಿಸುವವಳು. ಘಂಟಾ ವಿಶಾಖಾ ಎಂಬ ಹೆಸರುಳ್ಳವಳು. ಕುಂಡವನ್ನಲಂಕರಿಸುವವಳು. ಗೋವಿಂದಕುಂಡದಲ್ಲಿ ವಾಸಮಾಡುವವಳು. ಗೋಪಕುಂಡದ ನದಿಯು.

೪೩. ಶ್ರೀಗಂಗೆಯು. ಮಾನಸಗಂಗೆಯು. ಪುಷ್ಪಗಳನ್ನೇ ಬಟ್ಟೆಯನ್ನಾಗಿ ಧರಿಸಿರುವವಳು. ಹಸುಗಳ ಅಭಿವೃದ್ಧಿಗೆ ಕಾರಣಳು. ಹಸುಗಳೆಂಬ ಧನಗಳನ್ನುಳ್ಳವಳು. ಮಯೂರಿ, ವರವರ್ಣಿನಿ ಎಂಬ ಹೆಸರುಳ್ಳವಳು.

ಸಾರಸೀ ನೀಲಕಂಠಾಭಾ ಕೂಜತ್ಕೋಕಿಲಪೋತಕೀ ।
ಗಿರಿರಾಜಪ್ರಸೂರ್ಭೂರಿರಾತಪತ್ರಾತಪತ್ರಿಣೀ ॥ ೪೪ ॥

ಗೋವರ್ಧನಾಂಕಾ ಗೋದಂತೀ ದಿವ್ಯೌಷಧಿನಿಧಿಃ ಸ್ಮೃತಿಃ ।
ಪಾರದೀ ಪಾರದಮಯೀ ನಾರದೀ ಶಾರದೀ ಭೃತಿಃ ॥ ೪೫ ॥

ಶ್ರೀಕೃಷ್ಣಚರಣಾಂಕಸ್ಥಾ ಕಾಮಾ ಕಾಮವನಾಂಚಿತಾ ।
ಕಾಮಾಟವೀ ನಂದನೀ ಚ ನಂದಗ್ರಾಮಮಹೀಧರಾ ॥ ೪೬ ॥

ಬೃಹತ್ಸಾನುದ್ಯುತಿಃ ಪ್ರೋತಾ ನಂದೀಶ್ವರಸಮನ್ವಿತಾ ।
ಕಾಕಲೀ ಕೋಕಿಲಮಯೀ ಭಾಂಡೀರಕುಶಕೌಶಲಾ ॥ ೪೭ ॥

---

೪೪. ಸರಸಸ್ವಭಾವದವಳು. ಮಯೂರದಂತೆ ನೀಲವಾಗಿರುವವಳು. ಧ್ವನಿ ಮಾಡುತ್ತಿರುವ ಕೋಕಿಲದ ಮರಿಯಂತೆ ಇರುವವಳು. ಗಿರಿರಾಜನ ಮಗಳು. ದುಃಖದಿಂದ ರಕ್ಷಣೆಮಾಡುವವರಲ್ಲಿ ಶ್ರೇಷ್ಠಳು.

೪೫. ಗೋವರ್ಧನನ ಅಂಕದಲ್ಲಿ ಓಲಾಡುವವಳು. ಗೋದಂತಿಯು. ದಿವ್ಯವಾದ ಔಷಧಿಗಳಿಗೆ ಸ್ಥಾನಳು. ಸ್ಮೃತಿರೂಪಳು. ಪಾರದಿಯು. ಪಾರದಮಯಿಯು. ನಾರದೀ, ಶಾರದೀ ಎಂಬ ಹೆಸರುಳ್ಳವಳು. ರಕ್ಷಕಳು.

೪೬. ಶ್ರೀಕೃಷ್ಣನ ಚರಣಕಮಲದಲ್ಲಿರುವವಳು. ಇಷ್ಟಾರ್ಥದಾಯಿನಿಯು. ಕಾಮವನದಲ್ಲಿ ಇರುವವಳು. ಕಾಮಾರಣ್ಯವನ್ನುಳ್ಳವಳು. ಆನಂದದಾಯಿನಿಯು. ಗೋಕುಲದ ಭೂಮಿಯನ್ನು ರಕ್ಷಿಸುವವಳು.

೪೭. ದೊಡ್ಡದೊಡ್ಡದಾದ ಪರ್ವತಪ್ರಾಂತಗಳನ್ನುಳ್ಳವಳು. ಕಾಂತಿಮಯಳು. ನಂದೀಶ್ವರನೊಡಗೂಡಿದವಳು. ಕಲಾರೂಪಳು. ಕೋಕಿಲಮಯಿಯು. ಭಾಂಡೀರಕುಶವೆಂಬ ಸ್ಥಳಗಳಲ್ಲಿ ಹರಿಯುವವಳು.

ಲೋಹಾರ್ಗಲಪ್ರದಾಕಾರಾ ಕಾಶ್ಮೀರವಸನಾವೃತಾ ।
ಬರ್ಹಿಃಷದೀ ಶೋಣಪುರೀ ಶೂರಕ್ಷೇತ್ರಪುರಾಧಿಕಾ ॥ ೪೮ ॥

ನಾನಾಭರಣಶೋಭಾಢ್ಯಾ ನಾನಾವರ್ಣಸಮನ್ವಿತಾ ।
ನಾನಾನಾರೀಕದಂಬಾಢ್ಯಾ ರಂಗಾ ರಂಗಮಹೀರುಹಾ ॥ ೪೯ ॥

ನಾನಾಲೋಕಗತಾ ವರ್ಚಿರ್ನಾನಾಜಲಸಮನ್ವಿತಾ ।
ಸ್ತ್ರೀರತ್ನಂ ರತ್ನನಿಲಯಾ ಲಲನಾ ರತ್ನರಂಜಿನೀ ॥ ೫೦ ॥

ವಿಲೋಲಘಂಟಾ ಕೃಷ್ಣಾಂಗಾ ಕೃಷ್ಣದೇಹಸಮುದ್ಭವಾ ।
ನೀಲಪಂಕಜವರ್ಣಾಭಾ ನೀಲಪಂಕಜಹಾರಿಣೀ ॥ ೫೧ ॥

ನೀಲಾಭಾ ನೀಲಪದ್ಮಾಢ್ಯಾ ನೀಲಾಂಭೋರುಹವಾಸಿನೀ ।
ನಾಗವಲ್ಲೀ ನಾಗಪುರೀ ನಾಗವಲ್ಲೀದಳಾರ್ಚಿತಾ ॥ ೫೨ ॥

---

೪೮. ಲೋಹಾರ್ಗಲಪ್ರದಾಕಾರಳು. ಕಾಶ್ಮೀರವಸನದಿಂದ ಕೂಡಿರುವಳು. ಬರ್ಹಿಃಷದಿಯು. ಶೋಣಪುರೀ, ಶೂರಕ್ಷೇತ್ರಪುರಾ, ಅಧಿಕಾ ಎಂಬ ಹೆಸರುಳ್ಳವಳು.

೪೯. ನಾನಾಭರಣಗಳಿಂದ ಅಲಂಕೃತಳು. ನಾನಾಬಣ್ಣಗಳಿಂದ ರಂಜಿತಳು. ಅನೇಕ ನಾರಿಯರ ಸಮೂಹದಿಂದ ಕೂಡಿದವಳು. ವರ್ಣರಂಜಿತಳು. ಅನೇಕ ವರ್ಣಗಳ ಮರಗಳನ್ನುಳ್ಳವಳು.

೫೦. ಅನೇಕ ಲೋಕಗಳಲ್ಲಿ ಸಂಚರಿಸುವವಳು. ತೇಜೋರೂಪಿಯು. ಅನೇಕ ಜಲಗಳೊಡನೆ ಕೂಡುವವಳು. ಸ್ತ್ರೀರತ್ನವು. ರತ್ನಗಳಿಗೆ ವಾಸಸ್ಥಾನವು. ಲಲನೆಯು. ರತ್ನರಂಜನಿಯು.

೫೧. ವಿಲೋಲಘಂಟಾ, ಕೃಷ್ಣಾಂಗಾ ಎಂಬ ಹೆಸರುಳ್ಳವಳು. ಶ್ರೀಕೃಷ್ಣನ ದೇಹದಿಂದ ಹುಟ್ಟಿದವಳು. ನೀಲಕಮಲದಂತೆ ಕಾಂತಿಯುಕ್ತಳು. ನೀಲಕಮಲದ ಕಾಂತಿಯನ್ನು ವಿಾರಿಸಿರುವವಳು.

೫೨. ನೀಲವರ್ಣಳು. ನೀಲಕಮಲದಂತೆ ಶೋಭಿತಳು. ನೀಲಕಮಲದಲ್ಲಿ ವಾಸಿಸುವವಳು. ನಾಗವಲ್ಲೀ, ನಾಗಪುರೀ ಎಂಬ ಹೆಸರುಳ್ಳವಳು. ವೀಳೆಯದೆಲೆಗಳಿಂದ ಪೂಜಿತಳು.

ರಂಗಿಣೀ ರಂಗಭೂಮಾಢ್ಯಾ ರಂಗಾ ರಂಗಮಹೀರುಹಾ ।
ರಾಜವಿದ್ಯಾ ರಾಜಗುಹ್ಯಾ ಜಗತ್ಕೀರ್ತಿರ್ಘನಾಘನಾ ॥ ೫೩ ॥

ಕಜ್ಜಲಾಭಾ ಕಜ್ಜಲಾಕ್ತಾ ಕಜ್ಜಲೀಕಲಿತಾಂಜನಾ ।
ಅಲಕ್ತಚರಣಾ ತಾಮ್ರಾ ಲಾಲಾ ತಾಮ್ರೀಕೃತಾಂಬರಾ ॥ ೫೪ ॥

ಸಿಂಧೂರಿತಾ ಲಿಪ್ತವಾಣೀ ಸುಶ್ರೀಃ ಶ್ರೀಖಂಡಮಂಡಿತಾ ।
ಪಾಟೀರಪಂಕವಸನಾ ಜಟಾಮಾಂಸೀರುಗಂಬರಾ ॥ ೫೫ ॥

ಆಗರ್ಯ್ಯಗುರುಗಂಧಾಕ್ತಾ ತಗರಾಶ್ರಿತಮಾರುತಾ ।
ಸುಗಂಧಿತೈಲರುಚಿರಾ ಕುಂತಲಾಲಿಃ ಸುಕುಂತಲಾ ॥ ೫೬ ॥

---

೫೩. ರಂಗಿಣೀ, ರಂಗಭೂಮಾಢ್ಯಾ, ರಂಗಾ, ರಂಗಮಹೀರುಹಾ ಎಂಬ ಹೆಸರಿನವಳು. ರಾಜವಿದ್ಯೆಯು. ರಾಜಗುಹ್ಯಳು. ಜಗತ್ತಿನಲ್ಲಿ ಅತಿಕೀರ್ತಿವಂತಳು.

೫೪. ಕಾಡಿಗೆಯಂತೆ ಕಾಂತಿಯುಕ್ತಳು. ಕಾಡಿಗೆಯನ್ನು ಲೇಪಿಸಿಕೊಳ್ಳುವವಳು. ಕಾಡಿಗೆಯಿಂದ ಕೂಡಿದ ಅಂಜನವನ್ನು ಹಚ್ಚಿಕೊಳ್ಳುವವಳು. ಅರಗಿನ ರಸದಿಂದ ರಂಜಿತವಾದ ಪಾದವುಳ್ಳವಳು. ತಾಮ್ರದಂತಿರುವವಳು. ರಕ್ತವರ್ಣಳು. ಕೆಂಪಾದ ಬಟ್ಟೆಯುಳ್ಳವಳು.

೫೫. ಸಿಂಧೂರದಿಂದ ಕೂಡಿದವಳು. ಲಿಪ್ತವಾಣಿಯು. ಸುಯಶಸ್ವಿನವಳು. ಶ್ರೀಖಂಡದಿಂದ ಶೋಭಿತಳು. ಪಾಟೀರಪಂಕವೇ ಬಟ್ಟೆಯಾಗಿ ಉಳ್ಳವಳು. ಜಟಾಮಾಂಸೀರುಹವೇ ಅಂಬರವಾಗಿ ಉಳ್ಳವಳು.

೫೬. ಆಗರ್ಯ, ಅಗುರು ಇವುಗಳ ಪರಿಮಳದಿಂದ ಕೂಡಿದವಳು. ತಗರದಿಂದ ಕೂಡಿದ ವಾಯುವುಳ್ಳವಳು. ಸುಗಂಧವಾದ ತೈಲದಿಂದ ಮನೋಹರವಾದ ಕೂದಲುಳ್ಳವಳು. ಮುಂಗುರುಳು ಸುಂದರವಾದ ಕೂದಲುಗಳುಳ್ಳವಳು.

ಶಕುಂತಲಾಽಪಾಂಸುಲಾ ಚ ಪಾತಿವ್ರತ್ಯಪರಾಯಣಾ ।
ಸೂರ್ಯಪ್ರಭಾ ಸೂರ್ಯಕನ್ಯಾ ಸೂರ್ಯದೇಹಸಮುದ್ಭವಾ ॥ ೫೭ ॥

ಕೋಟಿಸೂರ್ಯಪ್ರತೀಕಾಶಾ ಸೂರ್ಯಜಾ ಸೂರ್ಯನಂದಿನೀ ।
ಸಂಜ್ಞಾ ಸಂಜ್ಞಾಸುತಾ ಸ್ವೇಚ್ಛಾ ಸಂಜ್ಞಾಮೋದಪ್ರದಾಯಿನೀ ॥ ೫೮ ॥

ಸಂಜ್ಞಾಪುತ್ರೀ ಸ್ಫುರಚ್ಛಾಯಾ ತಪತೀ ತಾಪಕಾರಿಣೀ ।
ಸಾವರ್ಣ್ಯಾನುಭವಾ ದೇವೀ ಬಡವಾ ಸೌಖ್ಯದಾಯಿನೀ ॥ ೫೯ ॥

ಶನೈಶ್ಚರಾನುಜಾ ಕೀಲಾ ಚಂದ್ರವಂಶವಿವರ್ಧಿನೀ ।
ಚಂದ್ರವಂಶವಧೂಶ್ಚಂದ್ರಾವಲಿ ಸಹಾಯಿನೀ ॥ ೬೦ ॥

---

೫೭. ಪಕ್ಷಿಗಳನ್ನಾಕರ್ಷಿಸುವವಳು. ನಿರ್ಮಲಳು. ಪಾತಿವ್ರತ್ಯಪರಾಯಣಳು. ಸೂರ್ಯನಂತೆ ತೇಜಸ್ವಿಯು. ಸೂರ್ಯನ ಮಗಳು. ಸೂರ್ಯನ ದೇಹದಿಂದ ಹುಟ್ಟಿದವಳು.

೫೮. ಕೋಟಿಸೂರ್ಯರಂತೆ ಪ್ರಕಾಶಿಸುವವಳು ಸೂರ್ಯಪುತ್ರಿಯು. ಸೂರ್ಯನಿಗೆ ಆನಂದವನ್ನುಂಟುಮಾಡುವವಳು. ಸಂಜ್ಞೆಯು. ಸಂಜ್ಞೆಯ ಮಗಳು. ಸ್ವತಂತ್ರಳು. ಸಂಜ್ಞೆಗೆ ಆನಂದವನ್ನು ಕೊಡುವವಳು.

೫೯. ಸಂಜ್ಞಾಪುತ್ರಿಯು. ಪ್ರಕಾಶಮಯವಾದ ಛಾಯೆಯುಳ್ಳವಳು. ತಪಸ್ಸುಮಾಡುವವಳು. ತಾಪಕಾರಿಣಿಯು. ಸಾವರ್ಣ್ಯಾನುಭವಳು. ದೇವಿಯು. ಬಡವಾ ಎಂಬ ಹೆಸರುಳ್ಳವಳು. ಸುಖವನ್ನುಂಟುಮಾಡುವವಳು.

೬೦. ಶನೈಶ್ಚರನ ತಂಗಿಯು. ಕೀಲ ಎಂಬ ಹೆಸರುಳ್ಳವಳು. ಚಂದ್ರವಂಶವನ್ನು ಅಭಿವೃದ್ಧಿಗೊಳಿಸುವವಳು. ಚಂದ್ರವಂಶದ ಕನ್ನಿಕೆಯು. ಚಂದ್ರಾವಳಿಗೆ ಸಹಾಯಕಳು.

ಚಂದ್ರಾವತೀ ಚಂದ್ರಲೇಖಾ ಚಂಪ್ರಕಾಂತಾನುಗಾಂಶುಕಾ ।
ಭೈರವೀ ಪಿಂಗಲಾಶಂಕೀ ಲೀಲಾವತ್ಯಾಗರೀಮುಯಿಖಾ ॥ ೬೧ ॥

ಧನಶ್ರೀ ದೇವಗಂಧಾರೀ ಸ್ವರ್ಮಣಿರ್ಗುಣವರ್ಧಿನೀ ।
ವ್ರಜಮಲ್ಲಾ ರ್ಯಂಧಕಾರೀ ವಿಚಿತ್ರಾ ಜಯಕಾರಿಣೀ ॥ ೬೨ ॥

ಗಾಂಧಾರೀ ಮಂಜರೀ ತೋಡೀ ಗುರ್ಜರ್ಯಾಸಾವರೀ ಜಯಾ ।
ಕರ್ಣಾಟೀ ರಾಗಿಣೀ ಗೌರೀ ವೈರಾಟೀ ಗೌರವಾಟಿಕಾ ॥ ೬೩ ॥

ಚತುಶ್ಚಂದ್ರಾಕಲಾ ಹೇರೀ ತೈಲಂಗೀ ವಿಜಯಾವತೀ ।
ತಾಲೀ ತಲಸ್ವರಾ ಗಾನಾ ಕ್ರಿಯಾಮಾತ್ರಪ್ರಕಾಶಿನೀ ॥ ೬೪ ॥

ವೈಶಾಖೀ ಚಾಚಲಾ ಚಾರುರ್ಮಾಚಾರೀ ಘೂಘುಟೀ ಘಟಾ ।
ವೈರಾಗರೀ ಸೋರಟೀಶಾ ಕೈದಾರೀ ಜಲಧಾರಿಕಾ ॥ ೬೫ ॥

---

೬೧. ಚಂದ್ರಾವತೀ, ಚಂದ್ರಲೇಖಾ ಎಂಬ ಹೆಸರುಳ್ಳವಳು. ಚಂಪ್ರಕಾಂತ ದಂತಿರುವ ಬಿಳುಪಾದ ವಸನವುಳ್ಳವಳು. ಭೈರವೀ, ಪಿಂಗಲಾ, ಶಂಕೀ, ಲೀಲಾವತೀ, ಅಗರೀಮುಯಿಖಾ ಎಂಬ ಹೆಸರುಳ್ಳವಳು.

೬೨. ಧನಶ್ರೀ, ದೇವಗಾಂಧಾರಿ ಎಂಬ ಹೆಸರುಳ್ಳವಳು. ಸ್ವರ್ಗದಲ್ಲಿ ರತ್ನ ಸ್ವರೂಪಳು. ಗುಣಗಳನ್ನು ಅಭಿವೃದ್ಧಿಗೊಳಿಸಿಕೊಳ್ಳುವವಳು. ವ್ರಜಮಲ್ಲಾರೀ, ಅಂಧಕಾರೀ ಎಂಬ ಹೆಸರುಳ್ಳವಳು. ವಿಚಿತ್ರಳು. ಜಯಕಾರಿಣಿಯು.

೬೩. ಗಾಂಧಾರೀ, ಮಂಜರೀ, ತೋಡೀ, ಗುರ್ಜರೀ, ಅಸಾವರೀ, ಜಯಾ, ಕರ್ಣಾಟೀ, ರಾಗಿಣೀ, ಗೌರೀ, ವೈರಾಟೀ, ಗೌರವಾಟಿಕಾ ಎಂಬ ಹೆಸರುಳ್ಳವಳು.

೬೪. ಚತುಶ್ಚಂದ್ರಾ, ಕಲಾ, ಹೇರೀ, ತೈಲಂಗೀ, ವಿಜಯಾವತೀ, ತಾಲೀ, ತಲಸ್ವರಾ, ಗಾನಾ, ಕ್ರಿಯಾಮಾತ್ರಪ್ರಕಾಶಿನೀ ಎಂಬ ಹೆಸರುಗಳುಳ್ಳವಳು.

೬೫. ವಿಶಾಖಾಸಂಬಂಧವುಳ್ಳವಳು. ದೃಢವಾಗಿರುವವಳು. ಸುಂದರಳು. ಮಾಚಾರೀ, ಘೂಘುಟೀ, ಘಟಾ, ವೈರಾಗರೀ, ಸೋರಟೀಶಾ, ಕೈದಾರೀ, ಜಲಧಾರಿಕಾ ಎಂಬ ಹೆಸರಿನವಳು

ಕಾಮಾಕರಶ್ರೀಃ ಕಲ್ಯಾಣೀ ಗೌಡಕಲ್ಯಾಣಮಿಶ್ರಿತಾ ।
ರಾಮಸಂಜೀವಿನೀ ಹೇಲಾ ಮಂದಾರೀ ಕಾಮರೂಪಿಣೀ ॥ ೧೬ ॥

ಸಾರಂಗೀ ಮಾರುತೀ ಹೋಢಾ ಸಾಗರೀ ಕಾಮವಾದಿನೀ ।
ವೈಭಾಸೀ ಮಂಗಲಾ ಚಾಂದ್ರೀ ರಾಸಮಂಡಲಮಂಡನಾ ॥ ೧೭ ॥

ಕಾಮಧೇನುಃ ಕಾಮಲತಾ ಕಾಮದಾ ಕಮನೀಯಕಾ ।
ಕಲ್ಪವೃಕ್ಷಸ್ಥಲೀ ಸ್ಥೂಲಾ ಕ್ಷುಧಾ ಸೌಧನಿವಾಸಿನೀ ॥ ೧೮ ॥

ಗೋಲೋಕವಾಸಿನೀ ಸುಭ್ರೂರ್ಯಷ್ಟಿಭೃದ್ದ್ವಾರಪಾಲಿಕಾ ।
ಶೃಂಗಾರಪ್ರಕರಾ ಶೃಂಗಾ ಸ್ವಚ್ಛಾ ಶಯ್ಯೋಪಕಾರಿಕಾ ॥ ೧೯ ॥

ಪಾರ್ಷದಾ ಸುಸಖೀ ಸೇವ್ಯಾ ಶ್ರೀವೃಂದಾವನಪಾಲಿಕಾ ।
ನಿಕುಂಜಭೃತ್ಕುಂಜಪುಂಜಾ ಗುಂಜಾಭರಣಭೂಷಿತಾ ॥ ೨೦ ॥

---

೧೬. ಕಾಮಾಕರಶ್ರೀ, ಕಲಾಣೀ, ಗೌಡಕಲ್ಯಾಣಮಿಶ್ರಿತಾ, ರಾಮಸಂಜೀವಿನೀ, ಹೇಲಾ, ಮಂದಾರೀ, ಕಾಮರೂಪಿಣೀ ಎಂಬ ಹೆಸರಿನವಳು.

೧೭. ಸಾರಂಗೀ, ಮಾರುತೀ, ಹೋಢಾ, ಸಾಗರೀ, ಕಾಮವಾದಿನೀ, ವೈಭಾಸೀ, ಮಂಗಲಾ, ಚಾಂದ್ರೀ ಎಂಬ ಹೆಸರುಳ್ಳವಳು. ರಾಸಮಂಡಲಕ್ಕೆ ಅಲಂಕಾರಳು.

೧೮. ಕಾಮಧೇನುವು. ಕಾಮಲತೆಯು. ಇಷ್ಟಾರ್ಥದಾಯಕಿಯು. ಸುಂದರಳು. ಕಲ್ಪವೃಕ್ಷವೇ ಜಾಗವಾಗಿ ಉಳ್ಳವಳು. ಸ್ಥೂಲಳು. ಕ್ಷುದಾ ಎಂಬ ಹೆಸರಿನವಳು. ಸೌಧಗಳಲ್ಲಿ ವಾಸಿಸುವಳು.

೧೯. ಗೋಲೋಕವಾಸಿನಿಯು. ಸುಂದರಳು. ದಂಡವನ್ನು ಹಿಡಿದು ನಿಂತಿರುವ ದ್ವಾರಪಾಲಕಳು. ಶೃಂಗಾರವನ್ನು ಅಭಿವೃದ್ಧಿಪಡಿಸುವಳು. ಮನ್ಮಥಸ್ವರೂಪಳು. ಸ್ವಚ್ಛಳು. ಶಯ್ಯೋಪಕಾರಿಕಾ ಎಂಬ ಹೆಸರಿನವಳು.

೨೦. ಪಾರ್ಷದಳು. ಒಳ್ಳೆಯ ಸಖಿಯು. ಸೇವೆಗೆ ಯೋಗ್ಯಳಾದವಳು. ಶ್ರೀವೃಂದಾವನದ ಪಾಲಕಳು. ನಿಕುಂಜವನ್ನು ಧರಿಸಿರುವವಳು. ಲತಾಮಂಟಪಗಳನ್ನುಳ್ಳವಳು. ಗುಲಗಂಜಿಯ ಆಭರಣಗಳನ್ನು ಧರಿಸಿರುವವಳು.

ನಿಕುಂಜವಾಸಿನೀ ಪ್ರೌಷ್ಯಾ ಗೋವರ್ಧನತಟೀಭವಾ ।
ವಿಶಾಖಾ ಲಲಿತಾ ರಾಮಾ ನೀರುಜಾ ಮಧುಮಾಧವೀ ॥ ೨೧ ॥

ಏಕಾನ್ಯೈಕಸಖೀ ಶುಕ್ಲಾ ಸಖೀ ಮಧ್ಯಾ ಮಹಾಮನಾಃ ।
ಶ್ರುತಿರೂಪಾ ಋಷಿರೂಪಾ ಮೈಥಿಲಾಃ ಕೌಶಲಾಃ ಸ್ತ್ರಿಯಃ ॥ ೨೨ ॥

ಅಯೋಧ್ಯಾಪುರವಾಸಿನ್ಯೋ ಯಜ್ಞಸೀತಾಃ ಪುಲಿಂದಕಾಃ ।
ರಮಾ ವೈಕುಂಠವಾಸಿನ್ಯಃ ಶ್ವೇತದ್ವೀಪಸಖೀಜನಾಃ ॥ ೨೩ ॥

ಊರ್ಧ್ವವೈಕುಂಠವಾಸಿನ್ಯೋ ದಿವ್ಯಾ ಜಿತಪದಾಶ್ರಿತಾಃ ।
ಶ್ರೀಲೋಕಾಚಲವಾಸಿನ್ಯಃ ಶ್ರೀಸಖ್ಯಃ ಸಾಗರೋದ್ಭವಾಃ ॥ ೨೪ ॥

---

೨೧. ನಿಕುಂಜವಾಸಿನಿಯು. ಪ್ರೌಷ್ಯಳು. ಗೋವರ್ಧನಪರ್ವತದ ದಡದಲ್ಲಿ ಹುಟ್ಟಿದವಳು. ವಿಶಾಖಾ, ಲಲಿತಾ, ರಾಮಾ, ನೀರುಜಾ ಎಂಬ ಹೆಸರಿನವಳು. ವಸಂತಮಲ್ಲಿಗೆಯಂತಿರುವವಳು.

೨೨. ಸ್ವತಂತ್ರಳು. ಅನೇಕ ಸಖಿಯರನ್ನುಳ್ಳವಳು. ಶುಭ್ರಳು. ಸಖಿಯು. ಮಧ್ಯಾಸ್ತ್ರೀಯು. ಮಹಾಮಹಿಮಳು. ಶ್ರುತಿಸ್ವರೂಪಳು. ಋಷಿರೂಪಳು. ಮೈಥಿಲಾ, ಕೌಶಲಾ ಎಂಬ ಸ್ತ್ರೀಸ್ವರೂಪಳು.

೨೩. ಅಯೋಧ್ಯಾಪುರವಾಸಿನಿಯರು. ಯಜ್ಞಸೀತಾಗೋಪಿಯರು. ಪುಲಿಂದಕಾ ಗೋಪಿಯರು. ರಮಾ ವೈಕುಂಠವಾಸಿನಿಯರು. ಶ್ವೇತದ್ವೀಪಸಖೀ ಜನರು ಇವರ ಸ್ವರೂಪಳು.

೨೪. ಊರ್ಧ್ವವೈಕುಂಠವಾಸಿನೀಗೋಪಿಯರು. ದಿವ್ಯಸ್ವರೂಪಳು. ಜಿತ ಪದಾಶ್ರೀತಗೋಪಿಯರು. ಶ್ರೀಲೋಕಾಚಲವಾಸಿನಿಯರು. ಶ್ರೀ ಸಖಿಯರು. ಸಾಗರೋದ್ಭವರು ಇವರ ಸ್ವರೂಪಳು.

ದಿವ್ಯಾ ಅದಿವ್ಯಾ ದಿವ್ಯಾಂಗಾ ವ್ಯಾಪ್ತಾಸ್ತ್ರಿಗುಣವೃತ್ತಯಃ ।
ಭೂಮಿಗೋಪ್ಯೋ ದೇವನಾರ್ಯೋ ಲತಾ ಔಷಧವೀರುಧಃ ॥ ೭೫ ॥

ಜಾಲಂಧರ್ಯಃ ಸಿಂಧುಸುತಾಃ ಪೃಥುಬರ್ಹಿಷ್ಮತೀಭವಾಃ ।
ದಿವ್ಯಾಂಬರಾ ಅಪ್ಸರಸಃ ಸೌತಲಾ ನಾಗಕನ್ಯಕಾಃ ॥ ೭೬ ॥

ಪರಂಧಾಮ ಪರಂಬ್ರಹ್ಮ ಪೌರುಷಾ ಪ್ರಕೃತಿಃ ಪರಾ ।
ತಟಸ್ಥಾ ಗುಣಭೂರ್ಗೀತಾ ಗುಣಾಗುಣಮಯೀ ಗುಣಾ ॥ ೭೭ ॥

ಚಿದ್ಘನಾ ಸದಸನ್ಮಾಲಾ ದೃಷ್ಟಿರ್ದೃಶ್ಯಾ ಗುಣಾಕರೀ ।
ಮಹತ್ತತ್ತ್ವಮಹಂಕಾರೋ ಮನೋ ಬುದ್ಧಿಃ ಪ್ರಚೇತನಾ ॥ ೭೮ ॥

---

೭೫. ದಿವ್ಯಾ, ಅದಿವ್ಯಾ, ದಿವ್ಯಾಂಗಾ ವ್ಯಾಪ್ತಳು. ಸತ್ವರಜಸ್ತಮೋಗುಣಗಳಿಂದ ಕೂಡಿದವಳು. ಭೂಮಿಗೋಪಿಯರು. ದೇವನಾರಿಯರು. ಲತೆಗಳು. ಔಷಧ ಲತೆಗಳು ಇವುಗಳ ಸ್ವರೂಪಳು.

೭೬. ಜಾಲಂಧರೀ ಗೋಪಿಯರು. ಸಿಂಧುಸುತೆಯರು. ಪೃಥುಬರ್ಹಿಷ್ಮತಿಯರು. ದಿವ್ಯಾಂಬರೆಯರಾದ ಅಪ್ಸರೆಯರು. ಸೌತಲರು. ನಾಗಕನ್ನಿಕೆಯರು. ಇವರ ಸ್ವರೂಪಳು.

೭೭. ಪರಂಧಾಮಳು. ಪರಂಬ್ರಹ್ಮಸ್ವರೂಪಳು. ಪೌರುಷಳು. ಉತ್ತಮ ಪ್ರಕೃತಿಯು. ಉದಾಸೀನಳು. ಗುಣಕ್ಕೆ ಆವಾಸಸ್ಥಾನಳು. ಗೀತಾಸ್ವರೂಪಳು. ಗುಣಾಗುಣಮಯಳು. ಗುಣಸ್ವರೂಪಳು.

೭೮. ಚಿದ್ಘನಸ್ವರೂಪಳು. ಸದಸನ್ಮಾಲಳು. ದೃಷ್ಟಿರ್ದೃಶ್ಯಾಸ್ವರೂಪಳು. ಗುಣಾಕರಳು. ಮಹತ್ತತ್ವ, ಅಹಂಕಾರ, ಮನಸ್ಸು, ಬುದ್ಧಿ. ಚೇತನಾ ಎಲ್ಲರೂ ಇವಳೇ.

ಚೇತೋ ವೃತ್ತಿಃ ಸ್ವಾಂತರಾತ್ಮಾ ಚತುರ್ಥಾ ಚತುರಾಕ್ಷರಾ ।
ಚತುರ್ವ್ಯೂಹಶ್ಚತುರ್ಮೂರ್ತಿರ್ವ್ಯೋಮವಾಯುರಥೋ ಜಲಂ ॥ ೭೯ ॥

ಮಹೀ ಶಬ್ದೋ ರಸೋ ಗಂಧಃ ಸ್ಪರ್ಶೋ ರೂಪಮನೇಕಧಾ ।
ಕರ್ಮೇಂದ್ರಿಯಂ ಕರ್ಮಮಯೀ ಜ್ಞಾನಂ ಜ್ಞಾನೇಂದ್ರಿಯಂ ದ್ವಿಧಾ॥ ೮೦ ॥

ತ್ರಿಧಾಧಿಭೂತಮಧ್ಯಾತ್ಮಮಧಿದೈವಮಧಿಸ್ಥಿತಂ ।
ಜ್ಞಾನಶಕ್ತಿಃ ಕ್ರಿಯಾಶಕ್ತಿಃ ಸರ್ವದೇವಾಧಿದೇವತಾ ॥ ೮೧ ॥

ತತ್ತ್ವಸಂಘಾ ವಿರಾಣ್ಮೂರ್ತಿರ್ಧಾರಣಾ ಧಾರಣಾಮಯೀ ।
ಶ್ರುತಿಃ ಸ್ಮೃತಿರ್ವೇದಮೂರ್ತಿಃ ಸಂಹಿತಾ ಗರ್ಗಸಂಹಿತಾ ॥ ೮೨ ॥

---

೭೯. ಚೇತಸ್ಸು, ವೃತ್ತಿಃ, ಸ್ವಾಂತರಾತ್ಮಾ ಎಂಬುವಳು. ಚತುರ್ಥಾ, ಚತುರಾಕ್ಷರಾ ಎಂಬುವಳು. ಚತುರ್ವ್ಯೂಹಳು. ಚತುರ್ಮೂರ್ತಿಯು. ಆಕಾಶ, ವಾಯು, ಜಲ ಮುಂತಾದವಳು.

೮೦. ಪೃಥಿವೀ, ಶಬ್ದ, ರಸ, ಗಂಧ, ಸ್ಪರ್ಶ, ರೂಪ, ಕರ್ಮೇಂದ್ರಿಯ ಇವೆಲ್ಲರೂ ಯಮುನೆಯೇ. ಕರ್ಮಮಯಳು. ಜ್ಞಾನವು. ಜ್ಞಾನೇಂದ್ರಿಯಸ್ವರೂಪಳು. ಎರಡುವಿಧವಾಗಿರುವವಳು.

೮೧. ಮೂರುಭಾಗವಾಗಿರುವವಳು. ಆಧಿಭೌತಿಕಳು. ಆಧ್ಯಾತ್ಮಿಕಳು. ಆಧಿದೈವತಳು. ಅಧಿಷ್ಠಾನರೂಪಳು. ಜ್ಞಾನಶಕ್ತಿಯು. ಕ್ರಿಯಾಶಕ್ತಳು. ಸರ್ವದೇವತೆಗಳಿಗೂ ದೇವತೆಯು.

೮೨. ತತ್ವಸಮೂಹಳು. ವಿರಾಟ್‌ಸ್ವರೂಪಳು. ಧರಿಸುವ ಶಕ್ತಿಯುಳ್ಳವಳು. ಧಾರಣಾಮಯಿಯು. ಶ್ರುತಿಯು. ಸ್ಮೃತಿಯು. ವೇದಮೂರ್ತಿಯು. ಸಂಹಿತೆಯು. ಗರ್ಗಸಂಹಿತೆಯು.

ಪಾರಾಶರೀ ಸೈವ ಸೃಷ್ಟಿಃ ಪಾರಹಂಸೀ ವಿಧಾತೃಕಾ ।
ಯಾಜ್ಞವಲ್ಕೀ ಭಾಗವತೀ ಶ್ರೀಮದ್ಭಾಗವತಾರ್ಚಿತಾ ॥ ೮೩ ॥

ರಾಮಾಯಣಮಯೀ ರಮ್ಯಾ ಪುರಾಣಪುರುಷಪ್ರಿಯಾ ।
ಪುರಾಣಮೂರ್ತಿಃ ಪುಣ್ಯಾಂಗಾ ಶಾಸ್ತ್ರಮೂರ್ತಿರ್ಮಹೋನ್ನತಾ ॥ ೮೪ ॥

ಮನೀಷಾ ಧಿಷಣಾ ಬುದ್ಧಿರ್ವಾಣೀ ಧೀಃ ಶೇಮುಷೀ ಮತಿಃ ।
ಗಾಯತ್ರೀ ವೇದಸಾವಿತ್ರೀ ಬ್ರಾಹ್ಮಣೀ ಬ್ರಹ್ಮಲಕ್ಷಣಾ ॥ ೮೫ ॥

ದುರ್ಗಾಪರ್ಣಾ ಸತೀ ಸತ್ಯಾ ಪಾರ್ವತೀ ಚಂಡಿಕಾಂಬಿಕಾ ।
ಆರ್ಯಾ ದಾಕ್ಷಾಯಿಣೀ ದಾಕ್ಷೀ ದಕ್ಷಯಜ್ಞವಿಘಾತಿನೀ ॥ ೮೬ ॥

ಪುಲೋಮಜಾ ಶಚೀಂದ್ರಾಣೀ ವೇದೀ ದೇವವರಾರ್ಪಿತಾ ।
ವಾಯುನಾಧಾರಿಣೀ ಧನ್ಯಾ ವಾಯವೀ ವಾಯುವೇಗಗಾ ॥ ೮೭ ॥

---

೮೩. ಪರಾಶರನ ಸಂಬಂಧದವಳು. ಸೃಷ್ಟಿಸ್ವರೂಪಳು. ಪಾರಹಂಸಿಯು. ವಿಧಾತೃಕಳು. ಯಾಜ್ಞವಲ್ಕಿಯು. ಭಗಂತನ ಸಂಬಂಧದವಳು. ಶ್ರೀಮದ್ಭಾಗವತದಿಂದ ಪೂಜಿತಳಾದವಳು.

೮೪. ರಾಮಾಯಣಮಯಳು. ಮನೋಹರಳು. ಪುರಾಣಪುರುಷನಾದ ಶ್ರೀ ಕೃಷ್ಣನ ಪ್ರೀತಿಪಾತ್ರಳು. ಪುರಾಣಮೂರ್ತಿಯು. ಪುಣ್ಯಶರೀರಿಣಿಯು. ಶಾಸ್ತ್ರಮೂರ್ತಿಯು. ಅತಿಗಂಭೀರಳು.

೮೫. ಮನೀಷಾ, ಧಿಷಣಾ, ಬುದ್ಧಿ, ವಾಣೀ, ಧೀಃ, ಶೇಮುಷೀ, ಮತಿ ಎಂಬ ಹೆಸರಿನವಳು. ಗಾಯತ್ರಿಯು. ವೇದಸಾವಿತ್ರಿಯು. ಬ್ರಾಹ್ಮಣಿಯು. ಬ್ರಹ್ಮಲಕ್ಷಣಗಳನ್ನುಳ್ಳವಳು.

೮೬. ದುರ್ಗಾ, ಅಪರ್ಣಾ, ಸತೀ, ಸತ್ಯಾ, ಪಾರ್ವತೀ, ಚಂಡಿಕಾ, ಆರ್ಯಾ, ದಾಕ್ಷಾಯಿಣೀ, ದಾಕ್ಷೀ, ದಕ್ಷಯಜ್ಞನಾಶನೀ ಎಲ್ಲವೂ ಯಮುನೆಯೇ.

೮೭. ಪುಲೋಮಜಾ, ಶಚಿ, ಇಂದ್ರಾಣೀ ಇವರೆಲ್ಲರಸ್ವರೂಪಳು. ವೇದಿಯು ದೇವನ ವರದಿಂದ ಅರ್ಪಿತಳಾದವಳು. ವಾಯುವಿನಿಂದ ಧೃತಳು. ಧನ್ಯಳು. ವಾಯುಸ್ವರೂಪಳು. ವಾಯುವೇಗದಂತೆ ವೇಗವುಳ್ಳವಳು.

ಯಮನಾನುಜಾ ಸಂಯಮಿನೀ ಸಂಜ್ಞಾ ಛಾಯಾ ಸ್ಫುರದ್ದ್ಯುತಿಃ ।
ರತ್ನದೇವೀ ರತ್ನವೃಂದಾ ತಾರಾ ತರಣಿಮಂಡಲಾ　　॥ ೮೮ ॥

ರುಚಿಃ ಶಾಂತಿಃ ಕ್ಷಮಾ ಶೋಭಾ ದಯಾ ದಕ್ಷಾ ದ್ಯುತಿಸ್ತ್ರಪಾ ।
ತಲತುಷ್ಟಿರ್ವಿಭಾ ಪುಷ್ಟಿಃ ಸಂತುಷ್ಟಿಃ ಪುಷ್ಟಭಾವನಾ　　॥ ೮೯ ॥

ಚತುರ್ಭುಜಾ ಚಾರುನೇತ್ರಾ ದ್ವಿಭುಜಾಷ್ಟಭುಜಾ ಬಲಾ ।
ಶಂಖಹಸ್ತಾ ಪದ್ಮಹಸ್ತಾ ಚಕ್ರಹಸ್ತಾ ಗದಾಧರಾ　　॥ ೯೦ ॥

ನಿಷಂಗಧಾರಿಣೀ ಚರ್ಮಖಡ್ಗಪಾಣಿರ್ಧನುರ್ಧರಾ ।
ಧನುಷ್ಟಂಕಾರಿಣೀ ಯೋದ್ಧ್ರೀ ದೈತ್ಯೋದ್ಭಟವಿನಾಶಿನೀ　　॥ ೯೧ ॥

ರಥಸ್ಥಾ ಗರುಡಾರೂಢಾ ಶ್ರೀಕೃಷ್ಣಹೃದಯಸ್ಥಿತಾ ।
ವಂಶೀಧರಾ ಕೃಷ್ಣವೇಷಾ ಸ್ರಗ್ವಿಣೀ ವನಮಾಲಿನೀ　　॥ ೯೨ ॥

---

೮೮. ಯಮುನ ಮಗಳು. ಜಿತೇಂದ್ರಿಯಳು. ಸಂಜ್ಞೆಯು. ಛಾಯೆಯು. ಪ್ರಕಾಶಿಸುತ್ತಿರುವವಳು. ರತ್ನದೇವಿಯು. ರತ್ನವೃಂದೆಯು. ನಕ್ಷತ್ರಸ್ವರೂಪಳು. ಸೂರ್ಯಮಂಡಲಸ್ವರೂಪಳು.

೮೯. ರುಚಿ, ಶಾಂತಿ, ಕ್ಷಮಾ, ಶೋಭಾ, ದಯ, ದಕ್ಷಾ, ದ್ಯುತಿ, ನಾಚಿಕೆ, ತಲತುಷ್ಟಿ, ವಿಭಾ, ಪುಷ್ಟಿ, ಸಂತುಷ್ಟಿ, ಪುಷ್ಟಭಾವನಾ ಎಲ್ಲವೂ ಇವಳೇ.

೯೦. ನಾಲ್ಕು ಭುಜಗಳುಳ್ಳವಳು. ಮನೋಹರವಾದ ನೇತ್ರಗಳುಳ್ಳವಳು. ಎರಡು ಭುಜಗಳುಳ್ಳವಳು. ಬಲಶಾಲಿಯು. ಶಂಖವನ್ನು ಕೈಯಲ್ಲಿ ಧರಿಸಿರುವವಳು. ಪದ್ಮವನ್ನು ಹಿಡಿದುಕೊಂಡಿರುವವಳು. ಚಕ್ರವನ್ನೂ ಗದೆಯನ್ನೂ ಧರಿಸಿರುವವಳು.

೯೧. ಬತ್ತಳಿಕೆ, ಚರ್ಮ, ಖಡ್ಗ, ಧನುಸ್ಸು ಮುಂತಾದ ಆಯುಧಗಳನ್ನು ಧರಿಸಿರುವವಳು. ಧನುಸ್ಸಿನ ಹೆದೆಯನ್ನು ಶಬ್ದಮಾಡುವವಳು. ಯುದ್ಧಸನ್ನದ್ಧಳು. ಕ್ರೂರರಾದ ರಾಕ್ಷಸರನ್ನು ನಾಶಮಾಡುವವಳು.

೯೨. ರಥಾರೂಢಳು. ಗರುಡಾರೂಢಳು. ಶ್ರೀಕೃಷ್ಣನ ಹೃದಯದಲ್ಲಿರುವವಳು. ಕೊಳಲನ್ನು ಹಿಡಿದಿರುವವಳು. ಕೃಷ್ಣನಂತೆ ವೇಷವನ್ನು ಧರಿಸಿರುವವಳು. ತುಳಸೀಹಾರದಿಂದ ಶೋಭಿಸುವವಳು.

ಕಿರೀಟಧಾರಿಣೀ ಯಾನಾ ಮಂದಮಂದಗತಿರ್ಗತಿಃ ।
ಚಂದ್ರಕೋಟಿಪ್ರತೀಕಾಶಾ ತನ್ವೀ ಕೋಮಲವಿಗ್ರಹಾ ॥ ೯೩ ॥

ಭೈಷ್ಮೀ ಭೀಷ್ಮಸುತಾ ಭೀಮಾ ರುಕ್ಮಿಣೀ ರುಕ್ಮರೂಪಿಣೀ ।
ಸತ್ಯಭಾಮಾ ಜಾಂಬವತೀ ಸತ್ಯಾ ಭದ್ರಾ ಸುದಕ್ಷಿಣಾ ॥ ೯೪ ॥

ಮಿತ್ರವೃಂದಾ ಸಖೀವೃಂದಾ ವೃಂದಾರಣ್ಯಧ್ವಜೋರ್ಧ್ವಗಾ ।
ಶೃಂಗಾರಕಾರಿಣೀ ಶೃಂಗಾ ಶೃಂಗಭೂಃ ಶೃಂಗದಾ ಖಗಾ ॥ ೯೫ ॥

ತಿತಿಕ್ಷೇಕ್ಷಾ ಸ್ಮೃತಿಃ ಸ್ಪರ್ಧಾ ಸ್ಪೃಹಾ ಶ್ರದ್ಧಾ ಸ್ವನಿರ್ವೃತಿಃ ।
ಈಶಾ ತೃಷ್ಣಾಭಿಧಾ:ಪ್ರೀತಿರ್ಹಿಂಸಾಯಾಂಚಾಕ್ಲಮಾ ಕೃಷಿಃ ॥ ೯೬ ॥

ಆಶಾ ನಿದ್ರಾ ಯೋಗನಿದ್ರಾ ಯೋಗಿನೀ ಯೋಗದಾ ಯುಗಾ ।
ನಿಷ್ಠಾ ಪ್ರತಿಷ್ಠಾ ಶಮಿತಿಃ ಸತ್ತ್ವಪ್ರಕೃತಿರುತ್ತಮಾ ॥ ೯೭ ॥

---

೯೩. ಕಿರೀಟವನ್ನು ಧರಿಸಿರುವವಳು. ವಾಹನಸ್ಥಳು. ನಿಧಾನವಾದ ನಡಿಗೆಯುಳ್ಳವಳು. ಕೋಟಿಚಂದ್ರಕಲಾವತಿಯು. ತನ್ವಿಯು. ಕೋಮಲವಾದ ಶರೀರವುಳ್ಳವಳು.

೯೪. ಭೈಷ್ಮಿಯು. ಭೀಷ್ಮಸುತೆಯು. ಭೀಮಳು. ರುಕ್ಮಿಣಿಯು. ರುಕ್ಮರೂಪಿಯು. ಸತ್ಯಭಾಮಾ. ಜಾಂಬವತಿಯು. ಸತ್ಯಾ, ಭದ್ರಾ, ಸುದಕ್ಷಿಣೆಯು.

೯೫. ಮಿತ್ರವೃಂದೆಯು. ಸಖಿಯರ ಸಮೂಹವುಳ್ಳವಳು. ವೃಂದಾರಣ್ಯಕ್ಕೆ ಧ್ವಜದಂತಿರುವವಳು. ಮುಂದೆ ಮುಂದೆ ಹೋಗುವವಳು. ಶೃಂಗಾರವನ್ನುಂಟುಮಾಡುವವಳು. ಶೃಂಗಳು. ಪರ್ವತಶೃಂಗದಲ್ಲಿ ಹುಟ್ಟಿದವಳು. ಶೃಂಗದಾ, ಖಗಾ ಎಂಬ ಹೆಸರಿನವಳು.

೯೬. ತಿತಿಕ್ಷಾ, ಸ್ಮೃತಿ, ಸ್ಪರ್ಧಾ, ಸ್ಪೃಹಾ, ಶ್ರದ್ಧಾ, ನಿರ್ವೃತಿ, ಈಶು, ಅಭಿದು, ಪ್ರೀತಿ, ಹಿಂಸಾ, ಯಾಂಚು, ಅಕ್ಲಮಾ, ಕೃಷಿ ಎಲ್ಲವೂ ಇವಳೇ.

೯೭. ಆಶೆಯು. ನಿದ್ರೆಯು. ಯೋಗನಿದ್ರೆಯು. ಯೋಗಿನಿಯು. ಯೋಗವನ್ನುಂಟುಮಾಡುವವಳು. ಯುಗಸ್ವರೂಪಳು. ನಿಷ್ಠೆಯು. ಪ್ರತಿಷ್ಠೆಯು. ಸತ್ವಪ್ರಕೃತಿಯು. ಉತ್ತಮಳು.

ತಮಃ ಪ್ರಕೃತಿರ್ದುರ್ಮರ್ಷಿ ರಜಃ ಪ್ರಕೃತಿರಾನತಿಃ ।
ಕ್ರಿಯಾಽಕ್ರಿಯಾಕೃತಿರ್ಗ್ಲಾನಿಃ ಸಾತ್ವಿಕ್ಯಾಧ್ಯಾತ್ಮಿಕೀ ವೃಷಾಃ ॥ ೯೮ ॥

ಸೇವಾ ಶಿಖಾಮಣಿರ್ವೃದ್ಧಿರಾಹೂತಿಃ ಪಿಂಗಲೋದ್ಭವಾ ।
ನಾಗಭಾಷಾ ನಾಗಭೂಷಾ ನಾಗರೀ ನಗರೀ ನಗಾ ॥ ೯೯ ॥

ನೌರ್ನೌಕಾ ಭವನೌರ್ಭಾವ್ಯಾ ಭವಸಾಗರಸೇತುಕಾ ।
ಮನೋಮಯೀ ದಾರುಮಯೀ ಸೈಕತೀ ಸಿಕತಾಮಯೀ ॥ ೧೦೦ ॥

ಲೇಖ್ಯಾ ಲೇಪ್ಯಾ ಮಣಿಮಯೀ ಪ್ರತಿಹೇಮವಿನಿರ್ಮಿತಾ ।
ಶೈಲೀ ಶೈಲಭವಾ ಶೀಲಾ ಶೀಕರಾಭಾ ಚಲಾಚಲಾ ॥ ೧೦೧ ॥

---

೯೮. ತಮಃಪ್ರಕೃತಿಯು. ದುರ್ಮರ್ಷಿಯು. ರಜಃಪ್ರಕೃತಿಯು. ಆನತಿಯು. ಕ್ರಿಯಾಸ್ವರೂಪಳು. ಅಕ್ರಿಯೆಯು. ಆಕೃತಿಯು. ಗ್ಲಾನಿಯು. ಸಾತ್ವಿಕಿಯು. ಆಧ್ಯಾತ್ಮಿಕೆಯು. ವೃಷಳು.

೯೯. ಸೇವಾಸ್ವರೂಪಳು. ಶಿಖಾಮಣಿಯು. ವೃದ್ಧಿಯು. ಆಹೂತಿಯು. ಪಿಂಗಲೋದ್ಭವಳು. ನಾಗಭಾಷೆಯುಳ್ಳವಳು. ನಾಗಾಭರಣಳು. ನಾಗರಿಯು. ನಗರಿಯು. ನಗ ಎಂಬ ಹೆಸರುಳ್ಳವಳು.

೧೦೦. ನೌಕೆಯು. ಸಂಸಾರಕ್ಕೆ ನೌಕೆಯಂತಿರುವವಳು. ಭಾವನೆಯು. ಸಂಸಾರ ಸಾಗರವನ್ನು ದಾಟಲು ಸೇತುವೆಯಂತಿರುವಳು. ಮನೋಮಯಳು. ದಾರಮಯಳು. ಸೈಕತಳು. ಸಿಕತಾಮಯಳು.

೧೦೧. ಲೇಖನಕ್ಕೆ ಯೋಗ್ಯಳು. ಲೇಪಿಸಲು ಯೋಗ್ಯಳು. ರತ್ನಮಯಳು. ಸುವರ್ಣನಿರ್ಮಿತಳು. ಶಿಲಾಮಯಳು. ಪರ್ವತದಲ್ಲಿ ಹುಟ್ಟಿದವಳು. ಶಿಲೆಯು. ತುಂತುರುಗಳಿಂದ ಪ್ರಕಾಶಿಸುವವಳು. ಚಲಳು. ಅಚಲಳು.

ಅಸ್ಥಿತಾ ಸ್ವಸ್ಥಿತಾ ತೂಲೀ ವೈದಿಕೀ ತಾಂತ್ರಿಕೀ ವಿಧಿಃ ।
ಸಂಧ್ಯಾ ಸಂಧ್ಯಾಭ್ರವಸನಾ ವೇದಸಂಧಿಃ ಸುಧಾಮಯೀ ॥ ೧೦೨ ॥

ಸಾಯಂತಿನೀ ಶಿಖಾ ವೇಧ್ಯಾ ಸೂಕ್ಷ್ಮಾ ಜೀವಕಲಾಕೃತಿಃ ।
ಆತ್ಮಭೂತಾ ಭಾವಿತಾಽಣ್ವೀ ಪ್ರಹ್ವೀ ಕಮಲಕರ್ಣಿಕಾ ॥ ೧೦೩ ॥

ನಿರಾಜನೀ ಮಹಾವಿದ್ಯಾ ಕಂದಲೀ ಕಾರ್ಯಸಾಧನೀ ।
ಪೂಜಾ ಪ್ರತಿಷ್ಠಾ ವಿಪುಲಾ ಪುನಂತೀ ಪಾರಲೌಕಿಕೀ ॥ ೧೦೪ ॥

ಶುಕ್ಲಶುಕ್ತಿರ್ಮೌಕ್ತಿಕಾ ಚ ಪ್ರತೀತಿಃ ಪರಮೇಶ್ವರೀ ।
ವಿರಾಜೋಷ್ಣಿಗ್ವಿರಾಡ್ವೇಣೀ ವೇಣುಕಾ ವೇಣುನಾದಿನೀ ॥ ೧೦೫ ॥

---

೧೦೨. ಅಸ್ಥಿತಳು. ಸ್ವಸ್ಥಿತಳು. ತೂಲಿಯು. ವೈದಿಕಿಯು. ಶಾಂತಿಕಿಯು. ವಿಧಿಸ್ವರೂಪಳು. ಸಂಧ್ಯೆಯು. ಸಂಧ್ಯಾಕಾಲದ ಆಕಾಶವನ್ನೇ ವಸನವನ್ನಾಗಿ ಉಳ್ಳವಳು. ವೇದಸಂಧಿಯು. ಸುಧಾಮಯಳು.

೧೦೩. ಸಾಯಂತನಳು. ಶಿಖೆಯು. ವಂದಿಸಲು ಅರ್ಹಳಾದವಳು. ಸೂಕ್ಷ್ಮಸ್ವರೂಪಳು. ಜೀವಕಲೆಗಳ ಆಕೃತಿಯು. ಆತ್ಮಸ್ವರೂಪಳು. ಭಾವಿತಳು. ಅತಿ ಸೂಕ್ಷ್ಮಳು. ಅತಿ ಚಿಕ್ಕವಳು. ಕಮಲದ ಕರ್ಣಿಕೆಯು.

೧೦೪. ನೀರಾಜನಿಯು. ಮಹಾವಿದ್ಯೆಯು. ಕಂದಳಿಯು. ಕಾರ್ಯವನ್ನು ಸಾಧಿಸುವವಳು. ಪೂಜಾಸ್ವರೂಪಳು. ಪ್ರತಿಷ್ಠೆಯು. ವಿಸ್ತೃತಳು. ಉದ್ಧರಿಸುವವಳು. ಮೋಕ್ಷಸ್ವರೂಪಳು.

೧೦೫. ಬಿಳುಪಾದ ಶುಕ್ತಿಯು. ಮುತ್ತಿನಂತೆ ಶ್ರೇಷ್ಠಳು. ಗೋಚರಳು. ಪರಮೇಶ್ವರಿಯು. ವಿರಾಜೋಷ್ಣಿಷಳು. ವಿರಾಟ್ಸ್ವರೂಪಳು. ವೇಣಿಯು. ವೇಣುಕೆಯು. ಕೊಳಲನ್ನು ಬಾರಿಸುವವಳು.

ಆವರ್ತಿನೀ ವಾರ್ತಿಕದಾ ವಾರ್ತಾ ವೃತ್ತಿರ್ವಿಮಾನಗಾ ।
ರಾಸಾಢ್ಯಾ ರಾಸಿನೀ ರಾಸೀ ರಾಸಮಂಡಲಮಂಡಲೀ ॥ ೧೦೬ ॥

ಗೋಪಗೋಪೀಶ್ವರೀ ಗೋಪೀ ಗೋಪೀಗೋಪಾಲವಂದಿತಾ ।
ಗೋಚಾರಿಣೀ ಗೋಪನದೀ ಗೋಪಾನಂದಪ್ರದಾಯಿನೀ ॥ ೧೦೭ ॥

ಪಶವ್ಯದಾ ಗೋಪಸೇವ್ಯಾ ಕೋಟಿಶೋ ಗೋಗಣಾವೃತಾ ।
ಗೋಪಾನುಗಾ ಗೋಪವತೀ ಗೋವಿಂದಪದಪಾದುಕಾ ॥ ೧೦೮ ॥

ವೃಷಭಾನುಸುತಾ ರಾಧಾ ಶ್ರೀಕೃಷ್ಣವಶಕಾರಿಣೀ ।
ಕೃಷ್ಣಪ್ರಾಣಾಧಿಕಾ ಶಶ್ವದ್ರಸಿಕಾ ರಾಸಿಕೇಶ್ವರೀ ॥ ೧೦೯ ॥

ಅವಟೋದಾ ತಾಮ್ರಪರ್ಣೀ ಕೃತಮಾಲಾ ವಿಹಾಯಿನೀ ।
ಕೃಷ್ಣಾ ವೇಣೀ ಭೀಮರಥೀ ತಾಪೀ ರೇವಾ ಮಹಾಪಗಾ ॥ ೧೧೦ ॥

---

೧೦೬. ಆವರ್ತಸ್ವರೂಪಳು. ವಾರ್ತಿಕವನ್ನು ಕೊಡುವವಳು. ವಾರ್ತಾಸ್ವರೂಪಳು. ವಿಮಾನದಲ್ಲಿ ಹೋಗುವವಳು. ರಾಸಕ್ರೀಡೆಯಲ್ಲಿ ಶೋಭಿಸುವವಳು. ರಾಸಿನಿಯು. ರಾಸಸ್ವರೂಪಳು. ರಾಸಮಂಡಲದಲ್ಲಿ ಮಂಡಲಸ್ವರೂಪಳು.

೧೦೭. ಗೋಪಗೋಪಿಯರಿಗೆಲ್ಲಾ ಒಡೆಯಳು. ಗೋಪಿಯು. ಗೋಪೀ ಗೋಪಾಲರಿಂದ ನಮಸ್ಕೃತಳು. ಗೋವುಗಳನ್ನು ಮೇಯಿಸುವವಳು. ಗೋಪನದಿಯು. ಗೋಪರಿಗೆ ಆನಂದವನ್ನುಂಟುಮಾಡುವವಳು.

೧೦೮. ಪಶುಗಳನ್ನು ಅಭಿವೃದ್ಧಿಗೊಳಿಸಿಕೊಡುವವಳು. ಗೋಪರಿಂದ ಸೇವಿತಳು, ಕೋಟ್ಯಾನುಕೋಟಿ ಗೋಗಣಗಳಿಂದ ಆವೃತಳು. ಗೋಪರನ್ನನುಸರಿಸಿ ಹೋಗುವವಳು. ಗೋಪವತಿಯು. ಗೋವಿಂದನ ಪಾದಗಳಿಗೆ ಪಾದುಕೆಯು.

೧೦೯. ವೃಷಭಾನುಸುತೆ ರಾಧೆಯನ್ನು ಶ್ರೀಕೃಷ್ಣನ ವಶಪಡಿಸಿದವಳು. ಶ್ರೀಕೃಷ್ಣಪ್ರಾಣಾಧಿಕೆಯು. ರಸಿಕಳು. ರಾಸೇಶ್ವರಿಯು.

೧೧೦. ಅವಟೋದಾ, ತಾಮ್ರಪರ್ಣೀ, ಕೃತಮಾಲಾ, ವಿಹಾಯಿನೀ, ಕೃಷ್ಣಾವೇಣೀ, ಭೀಮರಥೀ, ರೇವಾ, ವಾತಾಪೀ ಈ ನದಿಗಳ ಸ್ವರೂಪಳು. ದೊಡ್ಡ ನದಿಯು.

ವೈಯಾಸಕೀ ಚ ಕಾವೇರೀ ತುಂಗಭದ್ರಾ ಸರಸ್ವತೀ ।
ಚಂದ್ರಭಾಗಾ ವೇತ್ರವತೀ ಋಷಿಕುಲ್ಯಾ ಕಕುದ್ಮತೀ ॥ ೧೧೧ ॥

ಗೌತಮೀ ಕೌಶಿಕೀ ಸಿಂಧುರ್ಬಾಣಗಂಗಾತಿಸಿದ್ಧಿದಾ ।
ಗೋದಾವರೀ ರತ್ನಮಾಲಾ ಗಂಗಾ ಮಂದಾಕಿನೀ ಬಲಾ ॥ ೧೧೨ ॥

ಸ್ವರ್ನದೀ ಜಾಹ್ನವೀ ವೇಲಾ ವೈಷ್ಣವೀ ಮಂಗಲಾಲಯಾ ।
ಬಾಲವಿಷ್ಣುಪದೀ ಪ್ರೋಕ್ತಾ ಸಿಂಧುಸಾಗರಸಂಗತಾ ॥ ೧೧೩ ॥

ಗಂಗಾಸಾಗರಶೋಭಾಢ್ಯಾ ಸಾಮುದ್ರೀ ರತ್ನದಾ ಧುನೀ ।
ಭಾಗೀರಥೀ ಸ್ವರ್ಧುನೀ ಭೂಃ ಶ್ರೀವಾಮನಪದಚ್ಯುತಾ ॥ ೧೧೪ ॥

---

೧೧೧. ವೈಯಾಸಕೀ, ಕಾವೇರೀ, ತುಂಗಭದ್ರಾ, ಸರಸ್ವತೀ, ಚಂದ್ರಭಾಗಾ, ವೇತ್ರವತೀ, ಋಷಿಕುಲ್ಯಾ, ಕಕುದ್ಮತೀ ಈ ನದಿಗಳ ಸ್ವರೂಪಳು.

೧೧೨. ಗೌತಮೀ, ಕೌಶಿಕೀ, ಸಿಂಧು, ಬಾಣಗಂಗಾ ಈ ನದಿಗಳ ಸ್ವರೂಪಳು. ಸರ್ವಸಿದ್ಧಿಪ್ರದಳು. ಗೋದಾವರಿಯು. ರತ್ನಮಾಲಾ, ಗಂಗಾ, ಮಂದಾಕಿನೀ ನದಿಗಳ ಸ್ವರೂಪಳು. ಬಲಿಷ್ಠಳು.

೧೧೩. ಸ್ವರ್ಗನದಿಯು. ಜಾಹ್ನವಿಯು. ವೇಲಾನದಿಯು. ವಿಷ್ಣುವಿನ ಸಂಬಂಧದವಳು. ಮಂಗಳಕ್ಕೆ ಆವಾಸಸ್ಥಾನಳು. ಬಾಲವಿಷ್ಣುಪದವಿಯು. ನದೀ ಮತ್ತು ಸಾಗರಗಳನ್ನು ಸೇರುವವಳು.

೧೧೪. ಗಂಗಾ ಮತ್ತು ಸಾಗರಗಳಿಗೆ ಸೌಂದರ್ಯವನ್ನುಂಟುಮಾಡುವವಳು. ಸಮುದ್ರಸಂಬಂಧದವಳು. ರತ್ನಗಳನ್ನು ಕೊಡುವವಳು. ರತ್ನಗಳಿಗೆ ಆವಾಸ ಸ್ಥಾನಳು. ಭಾಗೀರಥಿಯು. ಸ್ವರ್ಗನದಿಯು. ಭೂಮಿಯು. ಶ್ರೀವಾಮನನ ಪಾದದಿಂದ ಹುಟ್ಟಿದವಳು.

ಲಕ್ಷ್ಮೀ ರಮಾ ರಾಮಣೀಯಾ ಭಾರ್ಗವೀ ವಿಷ್ಣುವಲ್ಲಭಾ ।
ಸೀತಾರ್ಚಿರ್ಜಾನಕೀ ಮಾತಾ ಕಲಂಕರಹಿತಾ ಕಲಾ　　॥ ೧೧೫ ॥

ಕೃಷ್ಣಪಾದಾಬ್ಜಸಂಭೂತಾ ಸರ್ವಾ ತ್ರಿಪಥಗಾಮಿನೀ ।
ಧರಾ ವಿಶ್ವಂಭರಾನಂತಾ ಭೂಮಿರ್ಧಾತ್ರೀ ಕ್ಷಮಾಮಯೀ　　॥ ೧೧೬ ॥

ಸ್ಥಿತಾ ಧರಿತ್ರೀ ಧರಣೀ ಉರ್ವೀಶೇಷಫಣಸ್ಥಿತಾ ।
ಅಯೋಧ್ಯಾ ರಾಘವಪುರೀ ಕೌಶಿಕೀ ರಘುವಂಶಜಾ　　॥ ೧೧೭ ॥

ಮಥುರಾ ಮಾಥುರೀ ಪಂಥಾ ಯಾದವೀ ಧ್ರುವಪೂಜಿತಾ ।
ಮಯಾಯುರ್ಬಿಲ್ವನೀಲಾದ್ವಾ ಗಂಗಾದ್ವಾರವಿನಿರ್ಗತಾ　　॥ ೧೧೮ ॥

---

೧೧೫. ಲಕ್ಷ್ಮಿಯು. ರಮೆಯು. ಸುಂದರಳು. ಭಾರ್ಗವಿಯು. ವಿಷ್ಣುವಿನ ವಲ್ಲಭಳು. ಸೀತೆಯಿಂದ ಪೂಜಿತಳಾದವಳು. ಜಾನಕಿಯು. ಮಾತೆಯು. ಕಳಂಕರಹಿತಳು. ಕಲಾಸ್ವರೂಪಳು.

೧೧೬. ಶ್ರೀಕೃಷ್ಣನ ಪಾದಾರವಿಂದಗಳಿಂದ ಹುಟ್ಟಿದವಳು. ಸರ್ವವ್ಯಾಪಿಯು. ತ್ರಿಪಥಗಾಮಿನಿಯು. ಧರೆಯು. ಪ್ರಪಂಚವನ್ನು ಧರಿಸಿರುವವಳು. ಭೂಮಿಯು. ಧಾತ್ರಿಯು. ಕ್ಷಮಾಮಯಳು.

೧೧೭. ಸ್ಥಿರಳು. ಧರಿತ್ರಿಯು. ಉರ್ವಿಯು. ಶೇಷನ ಹೆಡೆಗಳ ಮೇಲಿರುವವಳು. ಅಯೋಧ್ಯೆಯು. ರಾಘವನ ಪುರಿಯು. ಕೌಶಿಕಿಯು. ರಘುವಂಶಸಂಭೂತಳು.

೧೧೮. ಮಥುರೆಯು. ಮಾಥುರಿಯು. ಮಾರ್ಗಸ್ವರೂಪಳು. ಯದುವಂಶಸಂಭೂತಳು. ಧ್ರುವನಿಂದ ಪೂಜಿತಳು. ಮಾಯಾಯುವು. ಗಂಗಾಮಾರ್ಗದಿಂದ ಬಂದವಳು.

ಕುಶಾವರ್ತಮಯೀ ಧ್ರೌವ್ಯಾ ಧ್ರುವಮಂಡಲಮಧ್ಯಗಾ ।
ಕಾಶೀ ಶಿವಪುರೀ ಶೇಷಾ ವಿಂಧ್ಯಾ ವಾರಾಣಸೀ ಶಿವಾ ॥ ೧೧೯ ॥

ಅವಂತಿಕಾ ದೇವಪುರೀ ಪ್ರೋಜ್ಜ್ವಲೋಜ್ಜಯಿನೀ ಜಿತಾ ।
ದ್ವಾರಾವತೀ ದ್ವಾರಕಾಮಾ ಕುಶಭೂತಾ ಕುಶಸ್ಥಲೀ ॥ ೧೨೦ ॥

ಮಹಾಪುರೀ ಸಪ್ತಪುರೀ ನಂದಿಗ್ರಾಮಸ್ಥಲಸ್ಥಿತಾ ।
ಶಾಲಗ್ರಾಮಶಿಲಾದಿತ್ಯಶಂಭಲಗ್ರಾಮಮಧ್ಯಗಾ ॥ ೧೨೧ ॥

ವಂಶಗೋಪಾಲಿನೀ ಕ್ಷಿಪ್ತಾ ಹರಿಮಂದಿರವರ್ತಿನೀ ।
ಬರ್ಹಿಷ್ಮತೀ ಹಸ್ತಿಪುರೀ ಶಕ್ರಪ್ರಸ್ಥನಿವಾಸಿನೀ ॥ ೧೨೨ ॥

ದಾಡಿಮೀ ಸೈಂಧವೀ ಜಂಬೂಃ ಪೌಷ್ಕರೀ ಪುಷ್ಕರಪ್ರಸೂಃ ।
ಉತ್ಪಲಾವರ್ತಗಮನಾ ನೈಮಿಷೀ ನೈಮಿಷಾವೃತಾ ॥ ೧೨೩ ॥

---

೧೧೯. ಕುಶಾವರ್ತಮಯಳು. ಧ್ರುವಸಂಬಂಧಿಯು. ಧ್ರುವಮಂಡಲದ ಮಧ್ಯದಲ್ಲಿರುವವಳು. ಕಾಶಿಯು. ಶಿವಪುರಿಯು. ಶೇಷಳು. ವಿಂಧ್ಯೆಯು. ವಾರಾಣಸಿಯು. ಶಿವೆಯು.

೧೨೦. ಅವಂತಿಕೆಯು. ದೇವಪುರಿಯು. ಪ್ರಕಾಶಮಾನಳು. ಉಜ್ಜಯನಿಯು. ಜಯಶಾಲಿನಿಯು. ದ್ವಾರಾವತಿಯು. ದ್ವಾರಕೆಯು. ಕುಶಭೂತಳು. ಕುಶಸ್ಥಲಿಯು.

೧೨೧. ಮಹಾಪುರೀ, ಸಪ್ತಪುರಿಯು, ನಂದಿಗ್ರಾಮಸ್ಥಳದಲ್ಲಿ ಇರುವವಳು. ಶಾಲಗ್ರಾಮಶಿಲೆಯು. ಆದಿತ್ಯಶಂಭಲಗ್ರಾಮದ ಮಧ್ಯದಲ್ಲಿ ಹರಿಯುವವಳು.

೧೨೨. ಗೋವುಗಳನ್ನು ರಕ್ಷಿಸುವವಳು. ಅತ್ತಿತ್ತ ಚಲಿಸುವವಳು. ಹರಿಯ ಮಂದಿರದಲ್ಲಿರುವವಳು. ಬರ್ಹಿಷ್ಮತಿಯು. ಹಸ್ತಿಪುರಿಯು. ಶಕ್ರಪ್ರಸ್ಥದಲ್ಲಿ ನಿವಾಸಿಸುವಳು.

೧೨೩. ದಾಡಿಮಿಯು. ಸೈಂಧವಿಯು. ಜಂಬೂ. ಪೌಷ್ಕರಿಯು. ಪುಷ್ಕರದಿಂದ ಹುಟ್ಟಿದವಳು. ಉತ್ಪಲಾಸ್ವರೂಪಳು. ಸುತ್ತಿ ಸುತ್ತಿ ಹರಿಯುವವಳು. ನೈಮಿಷಿಯು. ನೈಮಿಷಾರಣ್ಯದಲ್ಲಿ ಸಂಚರಿಸುವವಳು.

ಕುರುಜಾಂಗಲಭೂಃ ಕಾಲೀ ಹೈಮವತ್ಯಾರ್ಬುದೀ ಬುಧಾ ।
ಶೂಕರಕ್ಷೇತ್ರವಿದಿತಾ ಶ್ವೇತವಾರಾಹಧಾರಿತಾ ॥ ೧೨೪ ॥

ಸರ್ವತೀರ್ಥಮಯೀ ತೀರ್ಥಾತೀರ್ಥಾನಾಂ ತೀರ್ಥಕಾರಿಣೀ
ಹಾರಿಣೀ ಸರ್ವದೋಷಾಣಾಂ ದಾಯಿನೀ ಸರ್ವಸಂಪದಾಂ ॥ ೧೨೫ ॥

ವರ್ಧಿನೀ ತೇಜಸಾಂ ಸಾಕ್ಷಾದ್ಗರ್ಭವಾಸನಿಕೃಂತನೀ ।
ಗೋಲೋಕಧಾಮಧನಿನೀ ನಿಕುಂಜನಿಜಮಂಜರೀ ॥ ೧೨೬ ॥

ಸರ್ವೋತ್ತಮಾ ಸರ್ವಪುಣ್ಯಾ ಸರ್ವಸೌಂದರ್ಯಶೃಂಖಲಾ ।
ಸರ್ವತೀರ್ಥೋಪರಿಗತಾ ಸರ್ವತೀರ್ಥಾಧಿದೇವತಾ ॥ ೧೨೭ ॥

ನಾಮ್ನಾಂ ಸಹಸ್ರಂ ಕಾಲಿಂದ್ಯಾಃ ಕೀರ್ತಿದಂ ಕಾಮದಂ ಪರಂ ।
ಮಹಾಪಾಪಹರಂ ಪುಣ್ಯಮಾಯುರ್ವರ್ಧನಮುತ್ತಮಂ ॥ ೧೨೮ ॥

---

೧೨೪. ಕುರುಜಾಂಗಲದಲ್ಲಿ ಹುಟ್ಟಿದವಳು. ಶ್ಯಾಮವರ್ಣಳು. ಸುವರ್ಣಮಯಳು. ಅರ್ಬುದಿಯು. ಪಂಡಿತಳು. ಶೂಕರಕ್ಷೇತ್ರದಲ್ಲಿ ಹರಿಯುವವಳು. ಶ್ವೇತವಾರಾಹಕ್ಷೇತ್ರದಲ್ಲಿ ಹರಿಯುವವಳು.

೧೨೫. ಸರ್ವತೀರ್ಥಸ್ವರೂಪಳು. ಪವಿತ್ರಳು. ತೀರ್ಥಗಳಿಗೆ ಪಾವಿತ್ರ್ಯವನ್ನುಂಟುಮಾಡುವವಳು. ಮನೋಹಾರಿಣಿಯು. ಸರ್ವದೋಷಗಳನ್ನೂ ನಾಶಮಾಡುವವಳು. ಸರ್ವಸಂಪತ್ಪ್ರದಾತ್ರಳು.

೧೨೬. ತೇಜಸ್ಸನ್ನು ಅಭಿವೃದ್ಧಿಗೊಳಿಸುವವಳು. ಅಜ್ಞಾನವನ್ನು ನಾಶಮಾಡುವವಳು. ಗೋಲೋಕಧಾಮವೆಂಬ ಧನವನ್ನುಳ್ಳವಳು.

೧೨೭. ಸರ್ವೋತ್ತಮಳು. ಸಮಸ್ತ ಪುಣ್ಯವತಿಯು. ಸರ್ವಸೌಂದರ್ಯನಿಧಿಯು. ಸರ್ವತೀರ್ಥಗಳಲ್ಲಿಯೂ ಶ್ರೇಷ್ಠಳು. ಸರ್ವತೀರ್ಥಗಳಿಗೂ ಅಧಿದೇವತೆಯು.

೧೨೮. ಕಾಲಿಂದಿಯ ಈ ಸಹಸ್ರನಾಮವು ಕೀರ್ತಿಯನ್ನು ಹೆಚ್ಚಿಸುವುದು. ಇಷ್ಟಾರ್ಥದಾಯಕವು. ಶ್ರೇಷ್ಠವಾದುದು. ಮಹಾ ಪಾತಕಗಳನ್ನು ನಾಶಮಾಡುವುದು. ಪುಣ್ಯತಮವಾದುದು. ಆಯುಸ್ಸನ್ನು ಹೆಚ್ಚಿಸುವುದು. ಉತ್ತಮವಾದುದು.

ಏಕವಾರಂ ಪಠೇದ್ರಾತ್ರೌ ಚೌರೇಭ್ಯೋ ನ ಭಯಂ ಭವೇತ್ ।
ದ್ವಿವಾರಂ ಪ್ರಪಠೇನ್ಮಾರ್ಗೇ ದಸ್ಯುಭ್ಯೋ ನ ಭಯಂ ಕ್ವಚಿತ್ ॥ ೧೨೯ ॥

ದ್ವಿತೀಯಾಂ ತು ಸಮಾರಭ್ಯ ಪಠೇತ್ಪೂರ್ಣಾವಧಿಂ ದ್ವಿಜಃ ।
ದಶವಾರಮಿದಂ ಭಕ್ತ್ಯಾ ಧ್ಯಾತ್ವಾ ದೇವೀಂ ಕಲಿಂದಜಾಂ ॥ ೧೩೦ ॥

ರೋಗೀ ರೋಗಾತ್ಪ್ರಮುಚ್ಯೇತ ಬದ್ಧೋ ಮುಚ್ಯೇತ ಬಂಧನಾತ್ ।
ಗುರ್ವಿಣೀ ಜನಯೇತ್ಪುತ್ರಂ ವಿದ್ಯಾರ್ಥೀ ಪಂಡಿತೋ ಭವೇತ್ ॥ ೧೩೧ ॥

ಮೋಹನಂ ಸ್ತಂಭನಂ ಶಶ್ವದ್ವಶೀಕರಣಮೇವ ಚ ।
ಉಚ್ಚಾಟನಂ ಘಾತನಂ ಚ ಶೋಷಣಂ ದೀಪನಂ ತಥಾ । ॥ ೧೩೨ ॥

ಉನ್ಮಾದನಂ ತಾಪನಂ ಚ ನಿಧಿದರ್ಶನಮೇವ ಚ ।
ಯದ್ಯದ್ವಾಂಛತಿ ಚಿತ್ತೇನ ತತ್ತತ್ಪ್ರಾಪ್ನೋತಿ ಮಾನವಃ ॥ ೧೩೩ ॥

---

೧೨೯. ರಾತ್ರಿಯಲ್ಲಿ ಒಂದುಸಾರಿ ಪಾರಾಯಣ ಮಾಡಿದರೆ ಎಂದಿಗೂ ಕಳ್ಳರ ಭಯವುಂಟಾಗುವುದಿಲ್ಲ. ಎರಡುಸಾರೆ ಪಠಿಸಿದರೆ ಮಾರ್ಗದಲ್ಲಿ ಚೋರರ ಭಯವು ಎಂದಿಗೂ ಇರುವುದಿಲ್ಲ.

೧೩೦-೧೩೧. ಬಿದಿಗೆಯ ತಿಥಿಯಿಂದ ಪ್ರಾರಂಭಿಸಿ ಪೂರ್ಣಿಮೆಯವರೆಗೂ ಹತ್ತುಸಾರಿಯಾದರೂ, ಕಾಲಿಂದಿಯನ್ನು ಧ್ಯಾನಿಸಿ ಇದನ್ನು ಪಠಿಸಿದರೆ ರೋಗಿಯಾದವನು ರೋಗದಿಂದ ಬಿಡಲ್ಪಡುವನು. ಸಂಸಾರದಿಂದ ಬಂಧಿತನಾದವನಿಗೆ ಮುಕ್ತಿಯುಂಟಾಗುವುದು. ಗರ್ಭಿಣಿಯು ಗಂಡುಮಗುವನ್ನು ಪಡೆಯುವಳು. ವಿದ್ಯಾರ್ಥಿಯು ಪಂಡಿತನಾಗುವನು.

೧೩೨-೧೩೩. ಅಲ್ಲದೆ ಮೋಹನ, ಸ್ತಂಭನ, ವಶೀಕರಣ, ಉಚ್ಚಾಟನ, ಘಾತನ, ಶೋಷಣ, ದೀಪನ, ಉನ್ಮಾದನ, ತಾಪನ, ನಿಧಿದರ್ಶನ, ಇವೇ ಮುಂತಾದ ತನಗಿಷ್ಟವಾದುದೆಲ್ಲವೂ ಸಿದ್ಧಿಸುವುದು.

ಬ್ರಾಹ್ಮಣೋ ಬ್ರಹ್ಮವರ್ಚಸ್ವೀ ರಾಜನ್ಯೋ ಜಗತೀಪತಿಃ ।
ವೈಶ್ಯೋ ನಿಧಿಪತಿರ್ಭೂಯಾಚ್ಛೂದ್ರಃ ಶ್ರುತ್ವಾ ತು ನಿರ್ಮಲಃ ॥ ೧೩೪ ॥

ಪೂಜಾಕಾಲೇ ತು ಯೋ ನಿತ್ಯಂ ಪಠತೇ ಭಕ್ತಿಭಾವತಃ ।
ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ ॥ ೧೩೫ ॥

ಶತವಾರಂ ಪಠೇನ್ನಿತ್ಯಂ ವರ್ಷಾವಧಿಮತಃಪರಂ ।
ಪಟಲಂ ಪದ್ಧತಿಂ ಕೃತ್ವಾ ಸ್ತವಂ ಚ ಕವಚಂ ತಥಾ ॥ ೧೩೬ ॥

ಸಪ್ತದ್ವೀಪಮಹೀರಾಜ್ಯಂ ಪ್ರಾಪ್ನುಯಾನ್ನಾತ್ರ ಸಂಶಯಃ ॥ ೧೩೭ ॥

ನಿಷ್ಕಾರಣಂ ಪಠೇದ್ಯಸ್ತು ಯಮುನಾಭಕ್ತಿಸಂಯುತಃ ।
ತ್ರೈವರ್ಗ್ಯಮೇತ್ಯ ಸುಕೃತೀ ಜೀವನ್ಮುಕ್ತೋ ಭವೇದಿಹ ॥ ೧೩೮ ॥

---

೧೩೪. ಬ್ರಾಹ್ಮಣನು ಬ್ರಹ್ಮವರ್ಚಸ್ವಿಯಾಗುವನು. ರಾಜನು ಜಗತ್ತಿಗೆ ಒಡೆಯನಾಗುವನು. ವೈಶ್ಯನು ನಿಧಿಪತಿಯಾಗುವನು. ಶೂದ್ರನು ಶುದ್ಧನಾಗುವನು.

೧೩೫. ಪ್ರತಿದಿನವೂ ಪೂಜೆಯ ಸಮಯದಲ್ಲಿ ಈ ಯಮುನಾಸಹಸ್ರನಾಮವನ್ನು ಭಕ್ತಿಯಿಂದ ಪಠಿಸಿದರೆ ಪದ್ಮದ ಎಲೆಯ ಮೇಲಿನ ನೀರಿನಂತೆ ಅಂಥವನಿಗೆ ಯಾವ ಪಾಪಗಳ ಸಂಪರ್ಕವೂ ಆಗುವುದಿಲ್ಲ.

೧೩೬-೧೩೭. ಒಂದು ದಿನಕ್ಕೆ ನೂರುಸಾರಿಯಂತೆ ಒಂದು ವರ್ಷದವರೆಗೂ ಪಠಿಸಿ ಅನಂತರ ಯಮುನಾಪಟಲಪದ್ಧತಿಯನ್ನುಮಾಡಿ ಯಮುನಾಸ್ತವವನ್ನೂ ಕವಚವನ್ನೂ ಪಠಿಸಿದರೆ ಸಪ್ತದ್ವೀಪಗಳಿಂದೊಡಗೂಡಿದ ಭೂಮಂಡಲಕ್ಕೆ ರಾಜನಾಗುವನು.

೧೩೮. ಯಾವ ವಿಧವಾದ ಆಸೆಯೂ ಇಲ್ಲದೆ ಯಮುನೆಯಲ್ಲಿ ಭಕ್ತಿಯನ್ನಿಟ್ಟು ಸಹಸ್ರನಾಮವನ್ನು ಪಠಿಸಿದರೆ ಧರ್ಮಾರ್ಥಕಾಮಮೋಕ್ಷಗಳನ್ನು ಪಡೆದು ಜೀವನ್ಮುಕ್ತನಾಗುವನು.

ನಿಕುಂಜಲೀಲಾಲಲಿತಂ ಮನೋಹರಂ
ಕಲಿಂದಜಾಕೂಲಲತಾಕದಂಬಕಂ।
ವೃಂದಾವನೋನ್ಮತ್ತಮಿಲಿಂದಶಬ್ದಿತಂ
ವ್ರಜೇತ್ಸ ಗೋಲೋಕಮಿದಂ ಪಠೇಚ್ಚ ಯಃ ॥ ೧೩೯ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಮಾಧುರ್ಯಖಂಡೇ ಯಮುನಾ ಸಹಸ್ರನಾಮಕಥನಂ ನಾಮ ಏಕೋಽನವಿಂಶೋಽಧ್ಯಾಯಃ

---

೧೩೯. ದಿನವೂ ಯಮುನಾಸಹಸ್ರನಾಮವನ್ನು ಪಠಿಸುವವನಿಗೆ, ಲತಾ ಕುಂಜಗಳಿಂದ ಮನೋಹರವೂ, ಯಮುನಾನದಿಯ ದಡದಲ್ಲಿ ಬೆಳೆದಿರುವ ಅನೇಕ ಲತಾಸಮೂಹಗಳಿಂದಲೂ, ವೃಂದಾವನದ ಹೂಗಳ ಮಧುವಿಗೆ ಮತ್ತವಾದ ಭೃಂಗಗಳ ಶಬ್ದಗಳಿಂದಲೂ ಕೂಡಿರುವ ಗೋಲೋಕವು ಲಭಿಸುವುದು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತೆಯ ಮಾಧುರ್ಯಖಂಡದಲ್ಲಿ
ಯಮುನಾಸಹಸ್ರನಾಮವೆಂಬ ಹತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

—|| ಶ್ರೀಃ ||—

ಅಥ ಶ್ರೀಯಮುನಾಸಹಸ್ರನಾಮಾವಳೀ

ಓಂ ಕಾಲಿಂದ್ಯೈ ನಮಃ
ಓಂ ಯಮುನಾಯೈ ನಮಃ
ಓಂ ಕೃಷ್ಣಾಯೈ ನಮಃ
ಓಂ ಕೃಷ್ಣರೂಪಾಯೈ ನಮಃ
ಓಂ ಸನಾತನ್ಯೈ ನಮಃ
ಓಂ ಕೃಷ್ಣವಾಮಾಂಸಸಂಭೂತಾಯೈ ನಮಃ
ಓಂ ಪರಮಾನಂದರೂಪಿಣ್ಯೈ ನಮಃ
ಓಂ ಗೋಲೋಕವಾಸಿನ್ಯೈ ನಮಃ
ಓಂ ಶ್ಯಾಮಾಯೈ ನಮಃ
ಓಂ ವೃಂದಾವನವಿನೋದಿನ್ಯೈ ನಮಃ
ಓಂ ರಾಧಾಸಖ್ಯೈ ನಮಃ
ಓಂ ರಾಸಲೀಲಾಯೈ ನಮಃ
ಓಂ ರಾಸಮಂಡಲಮಂಡನ್ಯೈ ನಮಃ
ಓಂ ನಿಕುಂಜಮಾಧವ್ಯೈ ನಮಃ
ಓಂ ವಲ್ಲ್ಯೈ ನಮಃ
ಓಂ ರಂಗವಲ್ಲ್ಯೈ ನಮಃ
ಓಂ ಮನೋಹರಾಯೈ ನಮಃ
ಓಂ ರಾಸಮಂಡಲೀಭೂತಾಯೈ ನಮಃ
ಓಂ ಯೂಥೀಭೂತಾಯೈ ನಮಃ
ಓಂ ಹರಿಪ್ರಿಯಾಯೈ ನಮಃ
ಓಂ ಗೋಲೋಕತಟಿನ್ಯೈ ನಮಃ

ಓಂ ದಿವ್ಯಾಯೈ ನಮಃ
ಓಂ ನಿಕುಂಜತಲವಾಸಿನ್ಯೈ ನಮಃ
ಓಂ ದೀರ್ಘೋರ್ಮಿವೇಗಗಂಭೀರಾಯೈ ನಮಃ
ಓಂ ಪುಷ್ಪಪಲ್ಲವವಾಹಿನ್ಯೈ ನಮಃ
ಓಂ ಘನಶ್ಯಾಮಾಯೈ ನಮಃ
ಓಂ ಮೇಘಮಾಲಾಯೈ ನಮಃ
ಓಂ ಬಲಾಕಾಪದ್ಮಮಾಲಿನ್ಯೈ ನಮಃ
ಓಂ ಪರಿಪೂರ್ಣತಮಾಯೈ ನಮಃ
ಓಂ ಪೂರ್ಣಾಯೈ ನಮಃ
ಓಂ ಪೂರ್ಣಬ್ರಹ್ಮಪ್ರಿಯಾಯೈ ನಮಃ
ಓಂ ವರಾಯೈ ನಮಃ
ಓಂ ಮಹಾವೇಗವತ್ಯೈ ನಮಃ
ಓಂ ಸಾಕ್ಷಾನ್ನಿಕುಂಜದ್ವಾರನಿರ್ಗತಾಯೈ ನಮಃ
ಓಂ ಮಹಾನದ್ಯೈ ನಮಃ
ಓಂ ಮಂದಗತ್ಯೈ ನಮಃ
ಓಂ ವಿರಜಾವೇಗಭೇದಿನ್ಯೈ ನಮಃ
ಓಂ ಅನೇಕಬ್ರಹ್ಮಾಂಡಗತಾಯೈ ನಮಃ
ಓಂ ಬ್ರಹ್ಮದ್ರವಸಮಾಕುಲಾಯೈ ನಮಃ
ಓಂ ಗಂಗಾಮಿಶ್ರಾಯೈ ನಮಃ
ಓಂ ನಿರ್ಜಲಾಭಾಯೈ ನಮಃ
ಓಂ ನಿರ್ಮಲಾಯೈ ನಮಃ
ಓಂ ಸರಿತಾಂ ವರಾಯೈ ನಮಃ
ಓಂ ರತ್ನಬದ್ಧೋಭಯತಟ್ಯೈ ನಮಃ
ಓಂ ಹಂಸಪದ್ಮಾದಿಸಂಕುಲಾಯೈ ನಮಃ
ಓಂ ನದ್ಯೈ ನಮಃ

ಓಂ ನಿರ್ಮಲಪಾನೀಯಾಯೈ ನಮಃ
ಓಂ ಸರ್ವಬ್ರಹ್ಮಾಂಡಪಾವಿನ್ಯೈ ನಮಃ
ಓಂ ವೈಕುಂಠಪರಿಖೀಭೂತಾಯೈ ನಮಃ
ಓಂ ಪರಿಖಾಯೈ ನಮಃ
ಓಂ ಪಾಪಹಾರಿಣ್ಯೈ ನಮಃ
ಓಂ ಬ್ರಹ್ಮಲೋಕಗತಾಯೈ ನಮಃ
ಓಂ ಬ್ರಾಹ್ಮೈ ನಮಃ
ಓಂ ಸ್ವರ್ಗಾಸ್ವರ್ಗನಿವಾಸಿನ್ಯೈ ನಮಃ
ಓಂ ಉಲ್ಲಸಂತ್ಯೈ ನಮಃ
ಓಂ ಪ್ರೋತ್ಪತಂತ್ಯೈ ನಮಃ
ಓಂ ಮೇರುಮಾಲಾಯೈ ನಮಃ
ಓಂ ಮಹೋಜ್ಜ್ವಲಾಯೈ ನಮಃ
ಓಂ ಶ್ರೀ ಗಂಗಾಭಾಯೈ ನಮಃ
ಓಂ ಶಿಖರಿಣ್ಯೈ ನಮಃ
ಓಂ ಗಂಡಶೈಲವಿಭೇದಿನ್ಯೈ ನಮಃ
ಓಂ ದೇಶಾನ್ಪುನಂತ್ಯೈ ಗಚ್ಛಂತ್ಯೈ ನಮಃ
ಓಂ ವಹಂತ್ಯೈ ನಮಃ
ಓಂ ಭೂಮಿಮಧ್ಯಗಾಯೈ ನಮಃ
ಓಂ ಮಾರ್ತಾಂಡತನುಜಾಯೈ ನಮಃ
ಓಂ ಪುಣ್ಯಾಯೈ ನಮಃ
ಓಂ ಕಾಲಿಂದ್ಯೈ ನಮಃ
ಓಂ ಗಿರಿನಂದಿನ್ಯೈ ನಮಃ
ಓಂ ಯಮಸ್ವಸ್ರೇ ನಮಃ
ಓಂ ಮಂದಹಾಸಾಯೈ ನಮಃ
ಓಂ ಸುದ್ವಿಜಾರಚಿತಾಂಬರಾಯೈ ನಮಃ

ಓಂ ನೀಲಾಂಬರಾಯೈ ನಮಃ

ಓಂ ಪದ್ಮಮುಖ್ಯೈ ನಮಃ

ಓಂ ಚರಂತ್ಯೈ ನಮಃ

ಓಂ ಚಾರುದರ್ಶನಾಯೈ ನಮಃ

ಓಂ ರಂಭೋರವೇ ನಮಃ

ಓಂ ಪದ್ಮನಯನಾಯೈ ನಮಃ

ಓಂ ಮಾಧವ್ಯೈ ನಮಃ

ಓಂ ಪ್ರಮದೋತ್ತಮಾಯೈ ನಮಃ

ಓಂ ತಪಶ್ಚರಂತ್ಯೈ ನಮಃ

ಓಂ ಸುಶ್ರೋಣ್ಯೈ ನಮಃ

ಓಂ ಕೂಜನ್ನೂಪುರಮೇಖಲಾಯೈ ನಮಃ

ಓಂ ಜಲಸ್ಥಿತಾಯೈ ನಮಃ

ಓಂ ಶ್ಯಾಮಲಾಂಗ್ಯೈ ನಮಃ

ಓಂ ಖಾಂಡವಾಭಾಯೈ ನಮಃ

ಓಂ ವಿಹಾರಿಣ್ಯೈ ನಮಃ

ಓಂ ಗಾಂಡೀವಿಭಾಷಿಣ್ಯೈ ನಮಃ

ಓಂ ವನ್ಯಾಯೈ ನಮಃ

ಓಂ ಶ್ರೀಕೃಷ್ಣಂ ವರಮಿಚ್ಛತ್ಯೈ ನಮಃ

ಓಂ ದ್ವಾರಕಾಗಮನಾಯೈ ನಮಃ

ಓಂ ರಾಜ್ಞ್ಯೈ ನಮಃ

ಓಂ ಪಟ್ಟರಾಜ್ಞ್ಯೈ ನಮಃ

ಓಂ ಪರಂಗತಾಯೈ ನಮಃ

ಓಂ ಮಹಾರಾಜ್ಞ್ಯೈ ನಮಃ

ಓಂ ರತ್ನಭೂಷಾಯೈ ನಮಃ

ಓಂ ಗೋಮತೀತೀರಚಾರಿಣ್ಯೈ ನಮಃ

ಓಂ ಸ್ವಕೀಯಾಯೈ ನಮಃ
ಓಂ ಸುಖ್ಯೈ ನಮಃ
ಓಂ ಸ್ವಾರ್ಥಾಯೈ ನಮಃ
ಓಂ ಸ್ವಭಕ್ತಕಾರ್ಯಸಾಧಿನ್ಯೈ ನಮಃ
ಓಂ ನವಲಾಂಗಾಬಲಾಯೈ ನಮಃ
ಓಂ ಮುಗ್ಧಾಯೈ ನಮಃ
ಓಂ ವರಾಂಗಾಯೈ ನಮಃ
ಓಂ ವಾಮಲೋಚನಾಯೈ ನಮಃ
ಓಂ ಅಜ್ಞಾತಯೌವನಾಯೈ ನಮಃ
ಓಂ ದೀನಾಯೈ ನಮಃ
ಓಂ ಪ್ರಭಾಕಾಂತಿದ್ಯುತಿಚ್ಛವ್ಯೈ ನಮಃ
ಓಂ ಸುಶೋಭಾಯೈ ನಮಃ
ಓಂ ಪರಮಾಕೀರ್ತಯೇ ನಮಃ
ಓಂ ಕುಶಲಾಯೈ ನಮಃ
ಓಂ ಜ್ಞಾತಯೌವನಾಯೈ ನಮಃ
ಓಂ ನವೋಢಾಯೈ ನಮಃ
ಓಂ ಮಧ್ಯಗಾಯೈ ನಮಃ
ಓಂ ಮಧ್ಯಾಯೈ ನಮಃ
ಓಂ ಪ್ರೌಢ್ಯೈ ನಮಃ
ಓಂ ಪ್ರಾಢಾಯೈ ನಮಃ
ಓಂ ಪ್ರಗಲ್ಭಾಯೈ ನಮಃ
ಓಂ ಧೀರಾಯೈ ನಮಃ
ಓಂ ಅಧೀರಾಯೈ ನಮಃ
ಓಂ ಧೈರ್ಯಧರಾಯೈ ನಮಃ
ಓಂ ಜ್ಯೇಷ್ಠಾಯೈ ನಮಃ

ಓಂ ಶ್ರೇಷ್ಠಾಯೈ ನಮಃ
ಓಂ ಕುಲಾಂಗನಾಯೈ ನಮಃ
ಓಂ ಕ್ಷಣಪ್ರಭಾಯೈ ನಮಃ
ಓಂ ಚಂಚಲಾರ್ಚಾಯೈ ನಮಃ
ಓಂ ವಿದ್ಯುತ್ಸೌದಾಮಿನ್ಯೈ ನಮಃ
ಓಂ ತಡಿತೇ ನಮಃ
ಓಂ ಸ್ವಾಧೀನಯತಿಕಾಯೈ ನಮಃ
ಓಂ ಕಾಲಲಕ್ಷ್ಮ್ಯೈ ನಮಃ
